ಬುಧವಾರ, ಸೆಪ್ಟೆಂಬರ್ 24, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ




ಸಂಭ್ರಮದ ಸಲಾಮು

ಶ್ರೇಷ್ಠ ನಟ ರಾಷ್ಟ್ರ ಪ್ರಶಸ್ತಿ ಸ್ವೀಕರಿಸಲು ರಾಷ್ಟ್ರಪತಿ ಭವನಕ್ಕೆ ಮಂಗಳವಾರ ಬಂದಿದ್ದ ನಟ ಶಾರುಕ್ ಖಾನ್ ಅವರು ಸಲಾಮು ಮಾಡಿದ ಕ್ಷಣ



ಮಂದಾನಗೆ ಅಗ್ರಸ್ಥಾನ

ಭಾರತದ ಸ್ಮೃತಿ ಮಂದಾನ ಅವರು ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ರ್‍ಯಾಂಕಿಂಗ್‌ನಲ್ಲಿ ಜೀವನ ಶ್ರೇಷ್ಠ ರೇಟಿಂಗ್‌ನೊಂದಿಗೆ (818) ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ




ರಾಜ್ಯ ಒಕ್ಕಲಿಗರ ಸಂಘ

ಕೃಷ್ಣರಾಜೇಂದ್ರ ರಸ್ತೆ, ವಿಶ್ವೇಶ್ವರಪುರ, ಬೆಂಗಳೂರು–560 004.




–: ಸಮಸ್ತ ಒಕ್ಕಲಿಗ ಕುಲಬಾಂಧವರಲ್ಲಿ ಆದರದ ಮನವಿ :–

ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ದಿನಾಂಕ: 22–09–2025 ರಿಂದ 07–10–2025 ರವರೆಗೆ ನಡೆಸಲಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಸಮಸ್ತ ಒಕ್ಕಲಿಗ ಕುಲಬಾಂಧವರು ಪಾಲ್ಗೊಳ್ಳಬೇಕು ಹಾಗೂ ಈ ಕೆಳಕಂಡ ದಾಖಲಾತಿಗಳನ್ನು ತಮ್ಮ ಬಳಿ ಇಟ್ಟುಕೊಂಡು ಸಮೀಕ್ಷೆ ಸಲುವಾಗಿ ಮನೆ ಮನೆಗೆ ಬರುವ ಸಮೀಕ್ಷಾ ಸಿಬ್ಬಂದಿಗಳಿಗೆ ಅವರು ಕೇಳುವ ಮಾಹಿತಿಯನ್ನು ಒದಗಿಸಿ, ಸಮೀಕ್ಷೆಯನ್ನು ಯಶಸ್ವಿಗೊಳಿಸುವಂತೆ ತಮ್ಮಲ್ಲಿ ಮನವಿ ಮಾಡಿದೆ.

'ಒಕ್ಕಲಿಗ [Vokkaliga]'

ಎಂದೇ ನಮೂದಿಸಲು ಮನವಿ

ಕೋಡ್/Code	ಧರ್ಮ/Religion	ಜಾತಿ/Caste	ಉಪ ಜಾತಿ/Sub Caste
A-1541	ಹಿಂದೂ	ಒಕ್ಕಲಿಗ	ಒಕ್ಕಲಿಗ

- ಗಂಡಾಗಲಿ, ಹೆಣ್ಣಾಗಲಿ 6 ವರ್ಷ ಮತ್ತು ಮೇಲ್ಪಟ್ಟ ಪ್ರತಿಯೊಬ್ಬರೂ ಆಧಾರ್ ಕಾರ್ಡ್ ಹೊಂದಿರಬೇಕು.
- ಆಧಾರ್ ಹೊಂದಿಲ್ಲದಿದ್ದಲ್ಲಿ ಕೂಡಲೇ ಆಧಾರ್ ಎನ್‌ರೋಲ್‌ಮೆಂಟ್ ಸೆಂಟರ್‌ಗೆ ಭೇಟಿ ನೀಡಿ, ಆಧಾರ್ ನೋಂದಣಿ ಮಾಡಿಸಿ, ನೋಂದಣಿ ಸಂಖ್ಯೆ ಹೊಂದಿರಲೇಬೇಕು.
- ಸಮೀಕ್ಷೆಗೆ ಬರುವ ಸಿಬ್ಬಂದಿಗಳು, ಆಧಾರ್ ಮತ್ತು ಜಿಯೋ ಟ್ಯಾಗಿಂಗ್ ಮಾಡುವುದರಿಂದ, ಕುಟುಂಬದ ಎಲ್ಲಾ ಸದಸ್ಯರು ಮನೆಯಲ್ಲಿ ಇರುವ ಪ್ರತಿ ಸದಸ್ಯರ ಆಧಾರ್ ಕಾರ್ಡ್ ಅಧಿಕೃತವಾಗಿ ಕುಟುಂಬದಲ್ಲಿ ಚಾಲನೆಯಲ್ಲಿರುವ ಮೊಬೈಲ್ ಸಂಖ್ಯೆಗೆ ಲಿಂಕ್ ಹೊಂದಿರಬೇಕು. ಲಿಂಕ್ ಹೊಂದಿರುವ ದೂರವಾಣಿ ಸಂಖ್ಯೆ ಕಾರ್ಯನಿರ್ವಹಿಸದಿದ್ದಲ್ಲಿ, ಕೂಡಲೇ ಚಾಲನೆಯಲ್ಲಿರುವ ಮೊಬೈಲ್ ಸಂಖ್ಯೆಗೆ ಆಧಾರ್ ಕಾರ್ಡನ್ನು ಲಿಂಕ್ ಮಾಡಿಸಿಕೊಂಡಿರಬೇಕು.
- ಸಮೀಕ್ಷೆ ಸಮಯದಲ್ಲಿ ಆಧಾರ್ ಸಂಖ್ಯೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆಗೆ ಬರುವ ಓ.ಟಿ.ಪಿ. ಸಂಖ್ಯೆಯನ್ನು ಸಮೀಕ್ಷಾ ಸಿಬ್ಬಂದಿಗಳಿಗೆ ತಿಳಿಸಿ ಸಹಕರಿಸಬೇಕಾಗುತ್ತದೆ.
- ಸಮೀಕ್ಷಾ ಸಿಬ್ಬಂದಿಗಳಿಗೆ ಸಮೀಕ್ಷೆಯ ಸಂದರ್ಭದಲ್ಲಿ ಆಧಾರ್ ಕಾರ್ಡ್, ರೇಷನ್‌ಕಾರ್ಡ್, ಕಡ್ಡಾಯವಾಗಿ ಹಾಜರು ಪಡಿಸುವುದು ಹಾಗೂ ಮನೆಯಲ್ಲಿ ಅಂಗವಿಕಲರಿದ್ದಲ್ಲಿ ಸರ್ಕಾರದಿಂದ ವಿತರಿಸಿರುವ ಯು.ಡಿ.ಐ.ಡಿ (UDID) ಕಾರ್ಡನ್ನು ಹಾಜರುಪಡಿಸಬೇಕು. ಯು.ಡಿ.ಐ.ಡಿ ಕಾರ್ಡ್ ಇಲ್ಲದಿದ್ದಲ್ಲಿ ಸಂಬಂಧಪಟ್ಟ ವೈದ್ಯಾಧಿಕಾರಿಗಳು ನೀಡಿರುವ ಪ್ರಪತ್ರವನ್ನು ಹಾಜರುಪಡಿಸಬೇಕು.

- ಕುಟುಂಬದ ಎಲ್ಲಾ ಸದಸ್ಯರು ಬ್ಯಾಂಕ್ ಮತ್ತು ಇತರೆ ಹಣಕಾಸು ಸಂಸ್ಥೆಗಳಿಂದ ಪಡೆದುಕೊಂಡಿರುವ ಸಾಲಗಳ ಮಾಹಿತಿಯನ್ನು ಕಡ್ಡಾಯವಾಗಿ ದಾಖಲೆಗಳ ಸಮೇತ ಸಮೀಕ್ಷಾ ಸಿಬ್ಬಂದಿಗಳಿಗೆ ಒದಗಿಸಿ ಸಹಕರಿಸುವುದು.
- ಬ್ಯಾಂಕಿಂಗೇತರ ಮೂಲಗಳಿಂದ ಪಡೆದಿರುವ ಸಾಲಗಳ ಮಾಹಿತಿಯನ್ನು ನಿಖರವಾಗಿ ವಾಸ್ತವ ಅಂಶಗಳನ್ನು ಬರೆಸಬೇಕು.
- ಕುಟುಂಬದಲ್ಲಿ ಯಾರ ಹೆಸರಿಗೆ ಚರಾಸ್ತಿ ಮತ್ತು ಸ್ಥಿರಾಸ್ತಿ ದಾಖಲಾತಿಗಳು ಇವೆಯೋ ಅವರ ಹೆಸರಿಗೆ ಮಾತ್ರ ಬರೆಸಬೇಕು.
- ಒಟ್ಟು ಕುಟುಂಬದ ಆಸ್ತಿಯನ್ನು ಎಲ್ಲರೂ ಪದೇ ಪದೇ ಅದೇ ಆಸ್ತಿಯನ್ನು ಕುಟುಂಬದ ಎಲ್ಲಾ ಸದಸ್ಯರ ಹೆಸರಿಗೆ ಬರೆಸಬಾರದು.
- ಕುಟುಂಬದ ಸದಸ್ಯರು ಸರ್ಕಾರಿ/ಖಾಸಗಿ ಸಂಸ್ಥೆಗಳ ಮೂಲಕ ಕನ್ನಡ/ಆಂಗ್ಲ ಮಾಧ್ಯಮದಲ್ಲಿ ಉತ್ತೀರ್ಣವಾಗಿರುವ ವಿದ್ಯಾಭ್ಯಾಸದ ಬಗ್ಗೆ ಮಾತ್ರ ನಮೂದಿಸಬೇಕು ಹಾಗೂ ಮಾಹಿತಿಯನ್ನು ಸರಿಯಾಗಿ ನೀಡಲು ಕೋರಿದೆ.
- ಸಮೀಕ್ಷೆಯಲ್ಲಿ ಒಟ್ಟು 60 ಪ್ರಶ್ನಾವಳಿ ಇರಲಿದ್ದು, ಎಲ್ಲಾ ಪ್ರಶ್ನೆಗಳಿಗೂ ಕುಟುಂಬ ಸದಸ್ಯರು ಮಾಹಿತಿ ನೀಡುವುದು. ಪ್ರವರ್ಗ '3ಎ' ಅಡಿಯಲ್ಲಿ ಬರುವ ಎಲ್ಲಾ ಒಕ್ಕಲಿಗರು **'ಒಕ್ಕಲಿಗ'** ಎಂದೇ ನಮೂದಿಸಲು ಹಾಗೂ ಉಪಜಾತಿ ಸಹ ಒಕ್ಕಲಿಗ ಎಂದು ಬರೆಸಲು ಮನವಿ ಮಾಡಲಾಗಿದೆ.



ಶ್ರೀ ಬಿ.ಕೆಂಚಪ್ಪಗೌಡ
ಅಧ್ಯಕ್ಷರು

ಜಾಗೃತರಾಗಿ - ಜಾಗೃತಿ ಮೂಡಿಸಿ ಒಕ್ಕಲಿಗ ಎಂದು ಬರೆಸುವ ಮೂಲಕ ನಮ್ಮೆಲ್ಲರ ಒಗ್ಗಟ್ಟನ್ನು ಪ್ರದರ್ಶನ ಮಾಡುವ ಸಮಯ ಬಂದಿದೆ.
ನಮ್ಮ ಸಮುದಾಯದ ಮಕ್ಕಳ ಶಿಕ್ಷಣ, ಉದ್ಯೋಗ ಹಾಗೂ ಸಮುದಾಯದ ರಾಜಕೀಯ ಮತ್ತಿತರೆ ಉಜ್ವಲ ಭವಿಷ್ಯಕ್ಕಾಗಿ ಯೋಚಿಸಿ.

ಒಂದಾಗಿ – ಒಗ್ಗಟ್ಟಾಗಿ – 'ಒಕ್ಕಲಿಗ' ಎಂದು ಸಮೀಕ್ಷೆಯಲ್ಲಿ ತಿಳಿಸಿ..



ಶ್ರೀ ಡಿ.ಹನುಮಂತಯ್ಯ | ಶ್ರೀ ಎಲುವಳ್ಳಿ ಎನ್. ರಮೇಶ್ | ಶ್ರೀ ಎಲ್.ಶ್ರೀನಿವಾಸ್ | ಡಾ|| ಕೆ.ವಿ.ರೇಣುಕಾಪ್ರಸಾದ್ | ಶ್ರೀ ಟಿ.ಕೋನಪ್ಪರೆಡ್ಡಿ | ಶ್ರೀ ಆರ್.ಹನುಮಂತರಾಯಪ್ಪ | ಶ್ರೀ ಎನ್.ಬಾಲಕೃಷ್ಣ (ನೆಲ್ಲಿಗೆರೆ ಬಾಲು) | ಶ್ರೀ ಬಿ.ಪಿ.ಮಂಜೇಗೌಡ | ಶ್ರೀ ಸಿ.ಜಿ.ಗಂಗಾಧರ್ | ಶ್ರೀ ವೆಂಕಟರಾಮೇಗೌಡ



ಶ್ರೀ ಅಶೋಕ್.ಎಸ್.ಡಿ ಜಯರಾಂ | ಶ್ರೀ ಅಶೋಹ.ಹೆಚ್.ಎನ್ (ತಮ್ಮಾಜಿ) | ಶ್ರೀ ಕೆ.ಎಸ್.ಸುರೇಶ್ | ಶ್ರೀ ಸಿ.ಎಂ.ಮಾರೇಗೌಡ | ಶ್ರೀ ಎಸ್.ಕೆ.ಧರ್ಮೇಶ್ ಸಿರಿಬೈಲ್ | ಡಾ|| ಟಿ.ಹೆಚ್.ಆಂಜನಪ್ಪ | ಶ್ರೀ ಬಿ.ವಿ.ರಾಜಶೇಖರಗೌಡ | ಡಾ|| ವಿ.ನಾರಾಯಣಸ್ವಾಮಿ | ಶ್ರೀ ಚಂದ್ರಶೇಖರ್ (ಮೂಡ್ಯ ಚಂದ್ರು) | ಶ್ರೀ ಎಂ.ಎಸ್.ಉಮಾಪತಿ | ಶ್ರೀ ಎ.ಪೂರ್ಣೇಶ್ | ಶ್ರೀ ಜೆ.ರಾಜು



ಶ್ರೀ ಸಿ.ಎನ್.ಬಾಲಕೃಷ್ಣ | ಶ್ರೀ ಹೆಚ್.ಸಿ.ಜಯಮುತ್ತು | ಶ್ರೀ ಆರ್.ಪ್ರಕಾಶ್ | ಶ್ರೀ ಸಿ.ದೇವರಾಜು (ಹಾಪ್‌ಕಾಮ್ಸ್) | ಶ್ರೀ ಎಂ.ಪುಟ್ಟಸ್ವಾಮಿ | ಶ್ರೀ ಕೆ.ವಿ.ಶ್ರೀಧರ್ | ಶ್ರೀ ರಾಘವೇಂದ್ರ | ಶ್ರೀ ರಘುಗೌಡ ಎಸ್.ಎಸ್ | ಶ್ರೀ ಲೋಕೇಶ್ ಬಿ. ನಾಗರಾಜಯ್ಯ | ಡಾ|| ಡಿ.ಕೆ.ರಮೇಶ್ | ಶ್ರೀ ರವೀಂದ್ರ ಹೆಚ್.ಎನ್ | ಡಾ. ಎಂ.ಬಿ.ಮಂಜೇಗೌಡ

ಪ್ರಕಟಣೆ : ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು ಮತ್ತು ಕುಲಬಾಂಧವರು

ಬುಧವಾರ, ಸೆಪ್ಟೆಂಬರ್ 24, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 265 | ಪುಟ 18

prajavani.net prajavani ● www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನವರಾತ್ರಿ ಸಂಭ್ರಮ



ನವರಾತ್ರಿ ಅಂಗವಾಗಿ ಸೂರತ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ 'ಗರ್ಬಾ' ನೃತ್ಯ ಮಾಡಲು ವಿದ್ಯಾರ್ಥಿನಿಯೊಬ್ಬರು ಸಾಂಪ್ರದಾಯಿಕ ಉಡುಗೆ ಧರಿಸಿದ್ದರು

ಕೇಕ್‌ನಲ್ಲಿ ಕರಡಿ



ಮೈಸೂರಿನ ಅರಸು ಮಂಡಳಿ ಶಾಲೆಯ ಆವರಣದಲ್ಲಿ ದಸರಾ ಮಹೋತ್ಸವ ಕೇಕ್ ಶೋನಲ್ಲಿ ಪ್ರದರ್ಶನಕ್ಕೆ ಇರಿಸಿರುವ ಕರಡಿ ಮಾದರಿಯ ಕೇಕ್

ಸೆನ್ಸೆಕ್ಸ್ 82,102 | ನಿಫ್ಟಿ 25,169 | $/₹ 88.73 | ಚಿನ್ನ (Std. 10g) ₹1,18,700 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,42,200 (ಬೆಂಗಳೂರು)

ನೌಕರರ ಆರೋಗ್ಯಕ್ಕೆ 'ಸಂಜೀವಿನಿ'

ನಗದುರಹಿತ ಉಚಿತ ಚಿಕಿತ್ಸೆ

• ಅಕ್ಟೋಬರ್ 1ರಿಂದ ಯೋಜನೆ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ನಗದುರಹಿತ ಚಿಕಿತ್ಸೆ ಒದಗಿಸುವ 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ' (ಕೆಎಎಸ್‌ಎಸ್) ಅ.1ರಿಂದ ಅಧಿಕೃತವಾಗಿ ಜಾರಿಯಾಗಲಿದೆ.

ಹಲವು ವರ್ಷಗಳ ಹಿಂದೆಯೇ ಯೋಜನೆ ರೂಪಿಸಲಾಗಿತ್ತಾದರೂ ಕೆಲ ತಾಂತ್ರಿಕ ಕಾರಣಗಳಿಂದ ಅನುಷ್ಠಾನ ವಿಳಂಬವಾಗಿತ್ತು. ಅಂತಿಮವಾಗಿ ಅನುಷ್ಠಾನದ ದಿನಾಂಕ ನಿಗದಿಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯದ ಸುಮಾರು 5.20 ಲಕ್ಷ ಸರ್ಕಾರಿ ನೌಕರರು, ನಿಗಮ, ಮಂಡಳಿ, ಅನುದಾನಿತ ಸಂಸ್ಥೆಗಳ 3 ಲಕ್ಷ ಸಿಬ್ಬಂದಿ ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ಪ್ರಯೋಜನ ಸಿಗಲಿದೆ. ಜ್ಯೋತಿ ಸಂಜೀವಿನಿ ಯೋಜನೆಯಲ್ಲಿ ಪುರುಷ ನೌಕರರ ತಂದೆ–ತಾಯಿಗೆ ಮಾತ್ರ ಸಿಗುತ್ತಿದ್ದ ಆರೋಗ್ಯ ಸೌಲಭ್ಯವನ್ನು ಈ ಬಾರಿ ಮಹಿಳಾ ನೌಕರರ ತಂದೆ–ತಾಯಿಗೂ ವಿಸ್ತರಿಸಲಾಗಿದೆ.

ಸುವರ್ಣ ಕರ್ನಾಟಕ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಯೋಜನೆಯ ಅನುಷ್ಠಾನದ ಸಂಸ್ಥೆಯಾಗಿ ಹೊಣೆ ನಿರ್ವಹಿಸಲಿದ್ದು, ಎಲ್ಲ ವರ್ಗದ ನೌಕರರು ಪ್ರತಿ ತಿಂಗಳು ತಮ್ಮ ಪಾಲಿನ ಕಂತು ಪಾವತಿಸಬೇಕಿದೆ. ಯೋಜನೆ ವ್ಯಾಪ್ತಿಗೆ ಒಳಪಡಿಸಲು ಇಚ್ಛಿಸದವರು ಅ.18ರ ಒಳಗೆ ತಮ್ಮ ಮೇಲಧಿಕಾರಿಗಳ ಮೂಲಕ ಲಿಖಿತ ಆಕ್ಷೇಪ ಸಲ್ಲಿಸಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

▶ 9

> **ಎಲ್ಲ ಸರ್ಕಾರಿ ನೌಕರರು, ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ರಾಜ್ಯ ಸರ್ಕಾರ ಆರೋಗ್ಯ ಸುರಕ್ಷತೆಯ ಖಾತ್ರಿ ನೀಡಿದೆ**
>
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

> **ಮಹಿಳಾ ನೌಕರರ ಪೋಷಕರನ್ನೂ ಯೋಜನೆ ವ್ಯಾಪ್ತಿಗೆ ತರಲಾಗಿದೆ. ಅವರ ಆದಾಯದ ಮಿತಿಯನ್ನು ತಿಂಗಳಿಗೆ ₹27 ಸಾವಿರಕ್ಕೆ ನಿಗದಿ ಮಾಡಲಾಗಿದೆ**
>
> **ಸಿ.ಎಸ್.ಷಡಾಕ್ಷರಿ**
> ಅಧ್ಯಕ್ಷ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

ಮರುಪಾವತಿ ಸೌಲಭ್ಯ 6 ತಿಂಗಳು ವಿಸ್ತರಣೆ

ಸರ್ಕಾರಿ ನೌಕರರು ಯಾವುದೇ ಸಾರ್ವಜನಿಕ ಆಸ್ಪತ್ರೆಗಳು, ಬೋಧನಾ ಆಸ್ಪತ್ರೆಗಳು, ಸ್ಥಳೀಯ ಸಂಸ್ಥೆಗಳ ಆಸ್ಪತ್ರೆಗಳು ಹಾಗೂ ಯೋಜನೆಗೆ ನೋಂದಾಯಿಸಿಕೊಂಡ ಖಾಸಗಿ ಆಸ್ಪತ್ರೆಗಳಲ್ಲಿ ನಗದು ರಹಿತ ಚಿಕಿತ್ಸಾ ಸೌಲಭ್ಯ ಪಡೆಯಬಹುದು.

ಇನ್ನಷ್ಟು ಖಾಸಗಿ ಆಸ್ಪತ್ರೆಗಳನ್ನು ಯೋಜನೆ ಅಡಿ ನೋಂದಣಿ ಮಾಡಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದ್ದು, ಅಲ್ಲಿಯವರೆಗೆ ನೌಕರರ ಚಿಕಿತ್ಸಾ ಕಾರ್ಯಗಳಿಗೆ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯವನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ. ಮುಂಗಡ ಪಾವತಿಸಿ, ಚಿಕಿತ್ಸೆ ಪಡೆದ ನೌಕರರು ಈ ಸೌಲಭ್ಯ ಪಡೆಯಬಹುದು.

1,200 ಕಾಯಿಲೆಗಳಿಗೆ ಚಿಕಿತ್ಸೆ

ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ ಅಡಿ 1,200 ಪ್ರಕಾರದ ಕಾಯಿಲೆಗಳಿಗೆ ನಗದು ರಹಿತ ಉಚಿತ ಚಿಕಿತ್ಸೆ ಸಿಗಲಿದೆ. ಈಗಾಗಲೇ 500 ಖಾಸಗಿ ಆಸ್ಪತ್ರೆಗಳ ಜತೆಗೆ ಆರೋಗ್ಯ ಸುರಕ್ಷಾ ಟ್ರಸ್ಟ್ ಒಪ್ಪಂದ ಮಾಡಿಕೊಂಡಿದ್ದು, ಆರು ತಿಂಗಳ ಒಳಗೆ ಒಂದು ಸಾವಿರ ಆಸ್ಪತ್ರೆಗಳನ್ನು ಯೋಜನೆ ವ್ಯಾಪ್ತಿಗೆ ತರಲು ಪ್ರಕ್ರಿಯೆ ಮುಂದುವರಿದಿದೆ.

ನೌಕರರ ಶ್ರೇಣಿ ಮತ್ತು ಪಾವತಿ ಕಂತು ಯಾರಿಗೆ ಎಷ್ಟು? (ತಿಂಗಳಿಗೆ)

ಗ್ರೂಪ್–ಎ	₹1,000
ಗ್ರೂಪ್–ಬಿ	₹500
ಗ್ರೂಪ್–ಸಿ	₹350
ಗ್ರೂಪ್–ಡಿ	₹250

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಪರ – ವಿರುದ್ಧ ಪ್ರಬಲ ವಾದ ಮಂಡನೆ

ಸಮೀಕ್ಷೆಗೆ ಆಕ್ಷೇಪ: ಇಂದು ಮತ್ತೆ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ನಡೆಸಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪ್ರಶ್ನಿಸಲಾದ ಅರ್ಜಿಗಳ ಕುರಿತ ಸುದೀರ್ಘ ವಿಚಾರಣೆ ಮಂಗಳವಾರ ಮೊಟಕುಗೊಂಡಿದ್ದು, ಬುಧವಾರ ಮತ್ತೆ ನಡೆಯಲಿದೆ.

ಸರ್ಕಾರದ ನಡೆಯನ್ನು ಪ್ರಶ್ನಿಸಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್. ರಘುನಾಥ್, ಅಖಿಲ ಭಾರತ ವೀರಶೈವ ಮಹಾಸಭೆಯ ಬಿ.ಆರ್.ಉದಯಶಂಕರ್ ಸೇರಿದಂತೆ 9 ಜನರು, ರಾಜ್ಯ ಒಕ್ಕಲಿಗರ ಸಂಘದ ಕಾರ್ಯದರ್ಶಿ ಕೆ.ಎನ್.ಸುಬ್ಬಾರೆಡ್ಡಿ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲರಾದ ಪ್ರಭುಲಿಂಗ ಕೆ.ನಾವದಗಿ, ಅಶೋಕ ಹಾರನಹಳ್ಳಿ, ಜಯಕುಮಾರ್ ಎಸ್.ಪಾಟೀಲ್, ವಿವೇಕ್ ರೆಡ್ಡಿ, ಎಸ್.ಶ್ರೀರಂಗ ಮತ್ತು ಎಸ್.ಎಂ.ಚಂದ್ರಶೇಖರ್ ಮಂಡಿಸಿದ ವಿಸ್ತೃತ ವಾದವನ್ನು ನ್ಯಾಯಪೀಠ ಆಲಿಸಿತು. ಪ್ರತಿಯಾಗಿ ರಾಜ್ಯ ಸರ್ಕಾರದ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ತಮ್ಮ ವಾದ ಪೂರ್ಣಗೊಳಿಸಲು ಸಮಯದ ಕೊರತೆಯಾದ ಕಾರಣ ನ್ಯಾಯಪೀಠ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

ಜಾತಿ ಗಣತಿಗೂ, ಸಮೀಕ್ಷೆಗೂ ವ್ಯತ್ಯಾಸವೇನು?

ಬೆಂಗಳೂರು: ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯನ್ನು ಪ್ರಶ್ನಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಯಲ್ಲಿ ಮಂಗಳವಾರ ಅರ್ಜಿದಾರರ ಪರ ವಕೀಲರು ಮತ್ತು ಸರ್ಕಾರದ ಪರ ವಕೀಲರು ತಮ್ಮ ವಾದವನ್ನು ಮಂಡಿಸಿದರು. ವಾದದ ತಿರುಳೇನು?

ಸುದ್ದಿ ▶ 3A

ಎಂಜಿನಿಯರಿಂಗ್ ಪ್ರವೇಶ 15,353 ಸೀಟುಗಳು ಉಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಇಟಿ ಮೂಲಕ ವೃತ್ತಿ ಶಿಕ್ಷಣ ಕೋರ್ಸ್‌ಗಳ ಸೀಟು ಹಂಚಿಕೆ ಮುಕ್ತಾಯವಾಗಿದ್ದು, 15,353 ಎಂಜಿನಿಯರಿಂಗ್ ಸೀಟು ಉಳಿದಿವೆ.

ಮೂರನೇ ಸುತ್ತಿನ ಸೀಟು ಹಂಚಿಕೆಯ ನಂತರವೂ ಪ್ರವೇಶ ಪಡೆಯದ ವಿದ್ಯಾರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೋಟಿಸ್ ನೀಡಿದ್ದು, ಸೀಟ್ ಬ್ಲಾಕಿಂಗ್ ದಂಧೆಗೆ ಕಡಿವಾಣ ಹಾಕಲು ಇಂಥ ವಿದ್ಯಾರ್ಥಿಗಳ ಮೇಲೆ ನಿಗಾ ವಹಿಸುವಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿಗೆ (ವಿಟಿಯು) ಪತ್ರ ಬರೆದಿದೆ.

ವಿಟಿಯು ಸಂಯೋಜನೆ ಹೊಂದಿರುವ ಸರ್ಕಾರಿ ಕಾಲೇಜುಗಳಲ್ಲಿ 1,421, ಖಾಸಗಿ ಕಾಲೇಜುಗಳಲ್ಲಿ 12,065, ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ 1,289 ಸೀಟುಗಳು ಸೇರಿದಂತೆ 15,353 ಸೀಟುಗಳು ಉಳಿದಿವೆ. ನರ್ಸಿಂಗ್ ಕೋರ್ಸ್‌ಗಳ 19,832 ಸೀಟುಗಳು ಸೇರಿ ಎಲ್ಲ ವೃತ್ತಿಪರ ಕೋರ್ಸ್‌ಗಳಿಂದ ಒಟ್ಟು 41,146 ಸೀಟುಗಳು ಭರ್ತಿಯಾಗಿಲ್ಲ.

ವೈದ್ಯಕೀಯ: 18,867 ಸೀಟು ಹಂಚಿಕೆ

ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಎರಡನೇ ಹಾಗೂ ಆಯುಷ್ ಕೋರ್ಸ್‌ಗಳ ಮೂರನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟವಾಗಿದ್ದು, ಇದುವರೆಗೂ 18,867 ಸೀಟು ಹಂಚಿಕೆ ಮಾಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಸೀಟು ಹಂಚಿಕೆಯಾದವರಿಗೆ ಶುಲ್ಕ ಪಾವತಿಸಲು ಸೆ.26, ಕಾಲೇಜಿಗೆ ಪ್ರವೇಶ ಪಡೆಯಲು ಸೆ.28ರವರೆಗೆ ಅವಕಾಶ ನೀಡಲಾಗಿದೆ.

ಸೀಟು ಹಂಚಿಕೆ ನಂತರ ವೈದ್ಯಕೀಯ 158, ದಂತ ವೈದ್ಯಕೀಯ 50 ಹಾಗೂ ಆಯುಷ್ ಕೋರ್ಸ್‌ನಲ್ಲಿ 6,251 ಸೀಟುಗಳು ಉಳಿದಿವೆ. ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟುಗಳಿಗೆ ಪ್ರವೇಶ ಪಡೆಯದೇ ಉಳಿಯುವ ಸೀಟುಗಳನ್ನು ಮಾಪ್‌ಅಪ್ ಸುತ್ತಿನ ಸೀಟು ಹಂಚಿಕೆಗೆ ಪರಿಗಣಿಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಕೋರ್ಟ್‌ಗಳು ವಸೂಲಾತಿ ಏಜೆಂಟ್‌ಗಳಲ್ಲ: 'ಸುಪ್ರೀಂ'

ನವದೆಹಲಿ (ಪಿಟಿಐ): 'ಸಾಲ ಮರುಪಾವತಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ನ್ಯಾಯಾಲಯಗಳು ವಸೂಲಾತಿ ಏಜೆಂಟರಂತೆ ವರ್ತಿಸಲಾಗದು' ಎಂದು ಸುಪ್ರೀಂ ಕೋರ್ಟ್ ಕಟುವಾಗಿ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್.ಕೋಟೀಶ್ವರ ಸಿಂಗ್ ಅವರ ನೇತೃತ್ವದ ನ್ಯಾಯಪೀಠವು, ವ್ಯಕ್ತಿಯೊಬ್ಬರು ಬಾಕಿ ಹಣ ಪಾವತಿಸದಿದ್ದರೆ ಅವರಿಗೆ ಬಂಧನದ ಬೆದರಿಕೆ ಒಡ್ಡುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟಿತು.

'ಹಣ ವಸೂಲಿಗಾಗಿ ಸಿವಿಲ್ ವ್ಯಾಜ್ಯಗಳನ್ನು ಕ್ರಿಮಿನಲ್ ಪ್ರಕರಣಗಳಾಗಿ ಪರಿವರ್ತಿಸುವ ಪ್ರವೃತ್ತಿ ಆರಂಭವಾಗಿದೆ' ಎಂದು ಬೇಸರ ವ್ಯಕ್ತಪಡಿಸಿತು.

ಉತ್ತರ ಪ್ರದೇಶದಲ್ಲಿನ ಕ್ರಿಮಿನಲ್ ಆರೋಪ ಪ್ರಕರಣವೊಂದರ ವಿಚಾರಣೆ ವೇಳೆ ನ್ಯಾಯಾಲಯವು ಸೋಮವಾರ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಉತ್ತರ ಪ್ರದೇಶ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್ ಅವರು, 'ಇಂಥ ದೂರುಗಳು ಹೆಚ್ಚುತ್ತಿವೆ. ಇಂಥ ಸಂದರ್ಭದಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಳ್ಳದಿದ್ದರೆ ನ್ಯಾಯಾಲಯವು ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತದೆ. ಒಂದು ವೇಳೆ ಪ್ರಕರಣ ದಾಖಲಿಸಿದರೆ, ಪೊಲೀಸರು ಪಕ್ಷಪಾತಿಯಾಗಿದ್ದಾರೆ, ಕಾನೂನು ಪ್ರಕ್ರಿಯೆ ಪಾಲಿಸುತ್ತಿಲ್ಲ ಎಂದು ದೂರಲಾಗುತ್ತದೆ' ಎಂದು ನ್ಯಾಯಾಲಯದ ಗಮನಕ್ಕೆ ತಂದರು.

'ಪೊಲೀಸರ ಸಂದಿಗ್ಧ ಸ್ಥಿತಿ ಅರ್ಥವಾಗುತ್ತದೆ. ಗಂಭೀರ ಅಪರಾಧ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸದಿದ್ದರೆ, ಸುಪ್ರೀಂ ಕೋರ್ಟ್ 2013ರಲ್ಲಿ ಲಲಿತ ಕುಮಾರ್ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಅನುಸರಿಸದ ಕಾರಣ ಪೊಲೀಸರು ಕ್ರಮ ಎದುರಿಸಬೇಕಾಗುತ್ತದೆ' ಎಂದು ನ್ಯಾ.ಸೂರ್ಯ ಕಾಂತ್ ಹೇಳಿದರು.

ಇಂಥ ಸಂದರ್ಭದಲ್ಲಿ, ಪೊಲೀಸರು ವ್ಯಕ್ತಿಯೊಬ್ಬರ ಬಂಧನಕ್ಕೂ ಮೊದಲು ಇದೊಂದು ಸಿವಿಲ್ ಪ್ರಕರಣವೇ ಅಥವಾ ಕ್ರಿಮಿನಲ್ ಪ್ರಕರಣವೇ ಎಂಬುದನ್ನು ಸ್ವಯಂವಿವೇಚನೆಯಿಂದ ನಿರ್ಧರಿಸಬೇಕು ಎಂದು ಪೀಠ ಸಲಹೆ ನೀಡಿತು.

ಕರ್ನಾಟಕದ ಗುಂಡಿಗಳನ್ನು ಮಾತ್ರ ದೊಡ್ಡದಾಗಿ ಬಿಂಬಿಸಲಾಗುತ್ತಿದೆ: ಡಿಕೆಶಿ

'ಪ್ರಧಾನಿ ನಿವಾಸದ ರಸ್ತೆಯಲ್ಲೂ ಗುಂಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆ ಗುಂಡಿಗಳ ವಿಚಾರದಲ್ಲಿ ಕರ್ನಾಟಕದ ಬಗ್ಗೆ ಮಾತ್ರ ದೊಡ್ಡದಾಗಿ ಬಿಂಬಿಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ನಿವಾಸ ಇರುವ ರಸ್ತೆಯಲ್ಲಿ ಎಷ್ಟು ರಸ್ತೆಗುಂಡಿಗಳಿವೆ ಎಂಬುದನ್ನು ಮಾಧ್ಯಮದವರು ಪರಿಶೀಲಿಸಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ದೆಹಲಿಗೆ ಹೋಗಿದ್ದ ನಾನು ಅಲ್ಲಿ ಒಂದು ಸುತ್ತು ಹಾಕಿ ಬಂದೆ. ದೆಹಲಿಯಲ್ಲಿ ಎಷ್ಟು ರಸ್ತೆಗುಂಡಿಗಳಿವೆ ಎಂಬುದನ್ನು ನೀವೆಲ್ಲ ಪರಿಶೀಲಿಸಬೇಕು' ಎಂದು ಹೇಳಿದರು.

'ರಸ್ತೆ ಗುಂಡಿ ಇಡೀ ದೇಶದಾದ್ಯಂತ ಇರುವ ಸಮಸ್ಯೆ. ಕೇವಲ ಕರ್ನಾಟಕದ ಬಗ್ಗೆ ಮಾಧ್ಯಮಗಳಲ್ಲಿ ದೊಡ್ಡದಾಗಿ ಬಿಂಬಿಸಲಾಗುತ್ತಿದೆ' ಎಂದ ಶಿವಕುಮಾರ್, 'ಎಲ್ಲ ಕಡೆಯೂ ಈ ಸಮಸ್ಯೆಯಿದೆ ಎಂದು ದೊಡ್ಡ ದೊಡ್ಡ ಐಟಿ ಕಂಪನಿಗಳು ಸೇರಿದಂತೆ ಎಲ್ಲರಿಗೂ ಹೇಳುತ್ತಿದ್ದೇನೆ. ರಸ್ತೆಗುಂಡಿ ಮುಚ್ಚುವ ವಿಚಾರವಾಗಿ ನಾವು ನಮ್ಮ ಕೆಲಸ ಮಾಡುತ್ತಿದ್ದೇವೆ' ಎಂದು ಹೇಳಿದರು.

'ಬಿಜೆಪಿ ಕಾಲದಿಂದಲೂ ರಸ್ತೆಗಳನ್ನು ಚೆನ್ನಾಗಿ ಮಾಡಿಕೊಂಡು ಬಂದಿದ್ದರೆ ಇಂತಹ ಪರಿಸ್ಥಿತಿ ಏಕೆ ಬರುತ್ತಿತ್ತು? ಅವರು ಯಾರೂ ಮಾಡಲಿಲ್ಲ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಚುನಾವಣೆ ಹತ್ತಿರ ಬರುತ್ತಿದೆ ಎಂಬ ಕಾರಣಕ್ಕೆ ಅವರು ಆರೋಪಗಳನ್ನು ಮಾಡುತ್ತಿದ್ದಾರೆ' ಎಂದರು.

'ಜಿಬಿಎ ವ್ಯಾಪ್ತಿಯಲ್ಲಿ ಪಾಲಿಕೆವಾರು 200 ಗುಂಡಿಗಳಂತೆ ಪ್ರತಿದಿನ 1 ಸಾವಿರ ರಸ್ತೆಗುಂಡಿಗಳನ್ನು ಮುಚ್ಚಲಾಗುತ್ತಿದೆ. ಮಳೆಯ ನಡುವೆಯೂ ನಾವು ಕೆಲಸದಲ್ಲಿ ತೊಡಗಿದ್ದೇವೆ' ಎಂದೂ ಅವರು ಹೇಳಿದರು.



ಡಿ.ಕೆ.ಶಿವಕುಮಾರ್ ಪೋಸ್ಟ್

'ಮೂಲಸೌಕರ್ಯ ಕೇಳಬಾರದೇ?'

'ಮೂಲಸೌಕರ್ಯ ಒದಗಿಸಿ ಎಂದು ಜನರು ಅವರು ಆಯ್ಕೆ ಮಾಡಿದ ಸರ್ಕಾರವನ್ನು ಕೇಳಬಾರದೇ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದ್ದಾರೆ.

ಪ್ರಧಾನಿ ಮೋದಿ ಅವರ ನಿವಾಸದ ಮುಂದಿನ ರಸ್ತೆಯಲ್ಲೂ ಗುಂಡಿಗಳಿವೆ ಎಂದ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಯಾಗಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ರಸ್ತೆಗುಂಡಿಗಳ ಬಗ್ಗೆ ಕೇಳಿದಾಗಲೆಲ್ಲಾ ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಸಿಡಿಮಿಡಿಗೊಂಡು, ಬೆದರಿಕೆ ಹಾಕುತ್ತಾರೆ ಇಲ್ಲವೇ ಬೇರೆ ನಗರಗಳಿಗೆ ಹೋಲಿಸಿ ಪಲಾಯನ ಮಾಡುತ್ತಾರೆ' ಎಂದು ಟೀಕಿಸಿದ್ದಾರೆ.

> **ಏನು ಕೇಳಿದ್ರೂ ಮೋದಿ ಮಾಡಿಲ್ಲ, ನೀವು (ಬಿಜೆಪಿ) ಇದ್ದಾಗ ಮಾಡಿಲ್ಲ ಎಂದು ಹೇಳುವ ಚಾಳಿ ಬೆಳೆಸಿಕೊಂಡಿದ್ದಾರೆ. ನಾವು ಇದ್ದಾಗ ಮಾಡಿಲ್ಲ ಎಂದು ಹೇಳುವುದಕ್ಕೆ ನೀವು ಅಧಿಕಾರಕ್ಕೆ ಬಂದಿದ್ದೀರಾ?**
>
> **ಸಿ.ಸಿ.ಪಾಟೀಲ,** ಬಿಜೆಪಿ ಶಾಸಕ

ಮರೆವು ಕಾಯಿಲೆ: ಜಾಗೃತಿ ವಾಕಥಾನ್ 27ಕ್ಕೆ

ಬೆಂಗಳೂರು: ವಿಶ್ವ ಅಲ್ಜೈಮರ್ (ಮರೆವು ಕಾಯಿಲೆ) ಮಾಸಾಚರಣೆ ಪ್ರಯುಕ್ತ ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಎಫ್ ಇದೇ 27ರಂದು ಬೆಳಿಗ್ಗೆ 6.45ರಿಂದ ವಾಕಥಾನ್ ಹಮ್ಮಿಕೊಂಡಿದ್ದು, ಮರೆವು ಕಾಯಿಲೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಿಲ್ಲಾ ಸಂಯೋಜಕಿ (ಮಾನಸಿಕ ಆರೋಗ್ಯ) ಜಿ. ಅನುಪಮಾ, 'ಈ ವಾಕಥಾನ್ ಸ್ವಾತಂತ್ರ್ಯ ಉದ್ಯಾನದಿಂದ ವಿಧಾನಸೌಧದವರೆಗೆ ನಡೆಯಲಿದೆ. ವೃದ್ಧಾಪ್ಯ ಹಾಗೂ ಶಿಕ್ಷಣ ತಜ್ಞರು ವಾಕಥಾನ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ರೋಗದ ಬಗ್ಗೆ ಜಾಗೃತಿ ಮೂಡಿಸಿ, ತಪ್ಪು ಕಲ್ಪನೆಯನ್ನು ಹೋಗಲಾಡಿಸಬೇಕು. ಈ ಕಾಯಿಲೆ ಎದುರಿಸುತ್ತಿರುವವರಿಗೆ ಸಹಾನುಭೂತಿಯ ಅಗತ್ಯ ಇದೆ' ಎಂದು ಹೇಳಿದರು.

'ಆರೋಗ್ಯಕರ ಆಹಾರ ಪದ್ಧತಿ ಸೇರಿ ವಿವಿಧ ಕ್ರಮಗಳಿಂದ ರೋಗದ ಅಪಾಯ ಕಡಿಮೆ ಮಾಡಬಹುದು' ಎಂದರು.

BEFORE THE NATIONAL COMPANY LAW TRIBUNAL, BENGALURU BENCH, AT BENGALURU

COMPANY APPLICATION C.P. NO. 95/BB/2024

IN THE MATTER OF

Section 66 of the Companies Act, 2013 read with Rule 2 of the National Company Law Tribunal (Procedure for Reduction of Share Capital) Rules, 2016

AND

In the matter of **Amazon Development Centre (India) Private Limited** a company incorporated under the provisions of Companies Act, 1956 Having its registered office at No. 26/1, Brigade World Trade Centre, 10th Floor, Dr. Raj Kumar Road, Malleshwaram (W), Bengaluru, Karnataka - 560055.

Represented by its Authorised Signatory, Ms. Priyanka Ramchandran

...**Petitioner Company**

NOTICE OF CONFIRMATION OF REDUCTION OF SHARE CAPITAL

Amazon Development Centre (India) Private Limited filed the above captioned Company Petition before the Hon'ble National Company Law Tribunal, Bengaluru Bench ("**Tribunal**") on September 14, 2024, for confirming the reduction of the issued, subscribed and paid-up share capital of the Petitioner Company from INR 2,25,880 to INR 1,71,280.

The Tribunal vide its order dated August 22, 2025, as rectified by the order dated September 15, 2025, has approved the Minutes of the Extraordinary General Meeting dated September 04, 2024 of the Petitioner Company and confirmed the reduction of the issued, subscribed and paid-up share capital of the Petitioner Company from INR 2,25,880, divided into 22,588 equity shares of INR 10 each to INR 1,71,280 divided into 17,128 equity shares of INR 10 each by cancelling and extinguishing 5,460 equity shares having face value of INR 10 each.

For Amazon Development Centre (India) Private Limited,

Represented by their Advocates,

AZB & Partners

37 Cunningham, 5th Floor,

Cunningham Road, Bengaluru - 560052.

9ನೇ ವರ್ಷದ ಸವಿನೆನಪು

ನಮ್ಮೆಲ್ಲರ ಒಲವೆಯ



ಕುಮಾರಿ ಭಾವನಾ ಗಂಗಾಧರ್ ಬಿ.ಇ.

ದುಃಖತಪ್ತ ತಾಯಿ: ಡಿ. ಗಿರಿಜಾ ಗಂಗಾಧರ್

ಮೊ: 96114 62601

ಭೂಮಿ ನೀಡಲು ಶೇ 10ರಷ್ಟು ರೈತರ ಒಪ್ಪಿಗೆ

ಬಿಬಿಸಿ ಯೋಜನೆ: ಕೇಂದ್ರ ಕಾಯ್ದೆ ಅಡಿ ಪರಿಹಾರ ನೀಡಿ, ಇಲ್ಲವೇ ಅಧಿಸೂಚನೆ ರದ್ದುಪಡಿಸಿ: ರೈತರ ಆಗ್ರಹ

● ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ- 1) ಯೋಜನೆಗೆ ಭೂಮಿ ನೀಡಲು ಬಹುತೇಕ ರೈತರು ವಿರೋಧ ವ್ಯಕ್ತಪಡಿಸಿದ್ದು, ಶೇಕಡ 10ರಷ್ಟು ರೈತರು ಮಾತ್ರ ಒಪ್ಪಿಗೆ ಸೂಚಿಸಿದ್ದಾರೆ. ಬಿಬಿಸಿ ಯೋಜನೆಗೆ ಅಧಿಸೂಚನೆ ಹೊರಡಿಸಿ ಎರಡು ದಶಕವಾದರೂ ಸ್ವಾಧೀನ ಪಡಿಸಿಕೊಳ್ಳಲು ನಿರ್ಧರಿಸಿರುವ ಭೂಮಿಗೆ ಪರಿಹಾರ ನಿಗದಿ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಸಾಧ್ಯವಾಗಿಲ್ಲ.

ಭೂ ಸ್ವಾಧೀನ ಕಾಯ್ದೆ 1894ರ ಅನ್ವಯ ಸಂಧಾನ ಸೂತ್ರದಡಿ ಪರಿಹಾರ ನೀಡುವುದಾಗಿ ಬಿಡಿಎ ಹೇಳಿದರೆ, ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನಿಗದಿ ಮಾಡಬೇಕು ಹಾಗೂ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸುವಂತೆ ರೈತರು ಪಟ್ಟು ಹಿಡಿದಿದ್ದಾರೆ. ಭೂಮಿಗೆ ಯೋಗ್ಯ ದರ ನೀಡಲು ಸಾಧ್ಯವಾಗದಿದ್ದರೆ ಅಧಿಸೂಚನೆ ರದ್ದುಗೊಳಿಸಿ, ಹೊಸದಾಗಿ ಅಧಿಸೂಚನೆ ಹೊರಡಿಸಬೇಕು ಎಂದೂ ಒತ್ತಾಯಿಸಿದ್ದಾರೆ.

ಯೋಜನೆಗಾಗಿ ಸ್ವಾಧೀನ ಮಾಡಿಕೊಳ್ಳುವ ಜಮೀನಿಗೆ ರೈತರೊಂದಿಗೆ ಚರ್ಚಿಸಿ ದರ ನಿಗದಿ ಮಾಡಲು ಎಂಟು ಮಂದಿ ವಿಶೇಷ ಭೂಸ್ವಾಧೀನಾಧಿಕಾರಿಗಳ ತಂಡವನ್ನು ಪ್ರಾಧಿಕಾರ ರಚಿಸಿತ್ತು. 66 ಗ್ರಾಮಗಳ ವ್ಯಾಪ್ತಿಯ ಜಮೀನು ಮಾಲೀಕರ ಅಹವಾಲುಗಳನ್ನು ಆಲಿಸಿದ್ದು, ಹುಸ್ಕೂರು ಸೇರಿ ಎರಡು ಗ್ರಾಮಗಳ ರೈತರು ಬಿಡಿಎ ಸಂಧಾನ ಸೂತ್ರ ಪ್ರಸ್ತಾವಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಒಂದು, ಎರಡು ಹಾಗೂ ಐದು ಗುಂಟೆ ಭೂಮಿ ಹೊಂದಿರುವವರು ಮಾತ್ರ ಸಂಧಾನ ಸೂತ್ರಕ್ಕೆ ಒಪ್ಪಿಕೊಂಡಿದ್ದಾರೆ ಎಂಬುದು ಗೊತ್ತಾಗಿದೆ.



'ಬೈರತಿ ಗ್ರಾಮ ಸಮೀಪದ ಜಾರಕಬಂಡೆ ಕಾವಲ್ ಬಳಿ ಮರ ತೆರವಿಗೆ ಅಧಿಕಾರಿಗಳು ಮುಂದಾದಾಗ ಅಡ್ಡಿಪಡಿಸಿ, ವಾಪಸ್ ಕಳುಹಿಸಲಾಗಿತ್ತು. ಆದಾದ ಬಳಿಕ ಯೋಜನೆಗೆ ಸಂಬಂಧಿಸಿ ಕಾಮಗಾರಿಗಳು ಆರಂಭಗೊಂಡಿಲ್ಲ. ಯೋಜನೆ ವ್ಯಾಪ್ತಿಯ ಹಳ್ಳಿಗಳ ರೈತರ ಮನವೊಲಿಸಲು ಹಲವು ಬಾರಿ ಅಧಿಕಾರಿಗಳು ಸಂಧಾನ ಸಭೆ ನಡೆಸಿದರೂ ಪ್ರಯೋಜನವಾಗಿಲ್ಲ' ಎಂದು ತೋಟದ ಗುಡ್ಡದ ಹಳ್ಳಿ, ಕುದುರೆಗೆರೆ, ಹನುಮಸಾಗರ, ಮಾವಳ್ಳಿಪುರ ರೈತರು ಹೇಳಿದರು.

'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ) ಯೋಜನೆಗೆ ಜಮೀನು ನೀಡುವವರಿಗೆ ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯ್ದೆ ಅಡಿ ಪರಿಹಾರ ನಿಗದಿ ಮಾಡಬೇಕು. ಈ ಕಾಯ್ದೆ ಪ್ರಕಾರ ಮಾರುಕಟ್ಟೆ ಬೆಲೆಗಿಂತ ಎರಡು ಪಟ್ಟು ಪರಿಹಾರ ನೀಡುವುದರ ಜತೆಗೆ ಪುನರ್ವಸತಿ ಕಲ್ಪಿಸಬೇಕು. ಈ ವಿಚಾರವನ್ನು ಸ್ಪಷ್ಟವಾಗಿ ಬಿಡಿಎ ಅಧಿಕಾರಿಗಳಿಗೆ ತಿಳಿಸಲಾಗಿದೆ. ಈ ಭಾಗದಲ್ಲಿ ಎಕರೆ ಜಮೀನಿಗೆ ₹10 ಕೋಟಿವರೆಗೂ ಬೆಲೆ ಇದೆ' ಎಂದು ಸೂಲಿಕುಂಟೆ ರೈತ ಶ್ರೀಧರ್ ಹೇಳಿದರು.

'ಬಿಡಿಎ ನೀಡುವ ಅಲ್ಪ ಪರಿಹಾರ ತೆಗೆದುಕೊಂಡು ಎಲ್ಲಿಗೆ ಹೋಗುವುದು? ಬಿಡಿಎ ಕಾಯ್ದೆ ಪ್ರಕಾರ ಐದು ವರ್ಷವಾದರೂ ಯೋಜನೆ ಆರಂಭವಾಗದಿದ್ದರೆ ಅಧಿಸೂಚನೆ ರದ್ದುಗೊಳಿಸಿ, ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಬೇಕು. ಯೋಜನೆಗೆ ಹುಡ್ಕೊ ಸಾಲ ನೀಡಲಿದೆ ಎಂದಿದ್ದರು. ಆದರೆ, ಈವರೆಗೂ ಸಾಲ ನೀಡಿಲ್ಲ ಹಾಗೂ ಅಂತಿಮ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಹ ತಯಾರಾಗಿಲ್ಲ' ಎಂದು ಚೊಕ್ಕಸಂದ್ರ ರೈತ ಗೋಪಾಲರೆಡ್ಡಿ, ಮುಲ್ಲೂರು ಕೃಷ್ಣ ಬೇಸರ ವ್ಯಕ್ತಪಡಿಸಿದರು.

'ಭೂ ಸ್ವಾಧೀನ ಪಡಿಸಿಕೊಳ್ಳಲು ಗುರುತಿಸಿರುವ 66 ಗ್ರಾಮಗಳ ವ್ಯಾಪ್ತಿಯ ಜಮೀನು ಮಾಲೀಕರ ಅಹವಾಲು ಆಲಿಸಲಾಗಿದೆ. ಒಂದೆರೆಡು ಗ್ರಾಮಗಳ ರೈತರು (ಶೇಕಡ 10ರಷ್ಟು) ಸಂಧಾನ ಸೂತ್ರಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಬಹುತೇಕ ಮಂದಿ ಕೇಂದ್ರ ಸರ್ಕಾರದ ಕಾಯ್ದೆ ಪ್ರಕಾರ ಪರಿಹಾರ ನೀಡಬೇಕು. ಯೋಜನೆ ವಿಳಂಬ ಆಗಿರುವ ಕಾರಣ ಅಧಿಸೂಚನೆ ರದ್ದುಪಡಿಸಬೇಕು ಎಂದು ಒತ್ತಾಯಿಸಿದ್ದಾರೆ. ಸಭೆಯ ಮಾಹಿತಿಯನ್ನು ಅಧ್ಯಕ್ಷರ ಗಮನಕ್ಕೆ ತರಲಾಗಿದೆ ' ಎಂದು ಬಿಡಿಎ ವಿಶೇಷ ಭೂ ಸ್ವಾಧೀನಾಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ರಸ್ತೆ ನಿರ್ಮಾಣಕ್ಕೆ ಅಡ್ಡಿ ಪಡಿಸುವುದಿಲ್ಲ. ಆದರೆ, ದೇಶದ ಕಾನೂನು ಪ್ರಕಾರ ಸ್ವಾಧೀನ ಪಡಿಸಿಕೊಳ್ಳುವ ಭೂಮಿಗೆ ಯೋಗ್ಯ ಬೆಲೆ ನೀಡಬೇಕು. ಬ್ರಿಟಿಷ್ ಕಾಲದ ಕಾಯ್ದೆ ಅಡಿಯ ಪರಿಹಾರ ಯಾರಿಗೆ ಬೇಕು?. ಯೋಜನೆಗೆ ಅಧಿಸೂಚನೆ ಹೊರಡಿಸಿ ಸೆಪ್ಟೆಂಬರ್ 23ಕ್ಕೆ ಎರಡು ದಶಕ ಆಗಲಿದೆ. ಬಿಡಿಎ ನಿರ್ಮಿಸಿರುವ ಶಿವರಾಮ ಕಾರಂತ ಬಡಾವಣೆಯಲ್ಲಿ 30X40 ಚದರ ಅಡಿ ಅಳತೆಯ ನಿವೇಶನದ ದರ ಅಂದಾಜು ₹60 ರಿಂದ ₹70 ಲಕ್ಷ. ವೆಂಕಟಾಲ ಗ್ರಾಮದಲ್ಲಿ ಎಕರೆ ಜಮೀನು ₹56 ಕೋಟಿಗೆ ಮಾರಾಟವಾಗಿದೆ. ಇದು ಉದಾಹರಣೆ ಯಷ್ಟೇ. ರೈತರ ಜಮೀನಿಗೆ ಬೆಲೆ ಇಲ್ಲವೇ? ಜಮೀನು ಕೊಟ್ಟು ಎಲ್ಲಿಗೆ ಹೋಗಬೇಕು' ಎಂದು ಪಿಆರ್‌ಆರ್ ರೈತ ಹಾಗೂ ನಿವೇಶನದಾರರ ಸಂಘದ ಅಧ್ಯಕ್ಷ ಮಾವಳ್ಳಿಪುರ ಶ್ರೀನಿವಾಸ್ ಪ್ರಶ್ನಿಸಿದರು.

'ಯೋಜನೆಗೆ ಭೂಮಿ ನೀಡಲು ಶೇಕಡ 90ರಷ್ಟು ರೈತರ ವಿರೋಧ ಇದೆ. ಒಂದು, ಎರಡು, ಐದು ಗುಂಟೆ ಇರುವವರು ಭೂಮಿ ನೀಡಲು ಒಪ್ಪಿಕೊಂಡಿದ್ದಾರೆ. ರಿಯಲ್ ಎಸ್ಟೇಟ್ ಏಜೆಂಟ್‌ಗಳು ಹಾಗೂ ಮಧ್ಯವರ್ತಿಗಳು ಹಣದ ಆಸೆ ತೋರಿಸಿ ಒಪ್ಪಿಸಿದ್ದಾರೆ. ಸರ್ಕಾರದ ಮೇಲೆ ನಂಬಿಕೆ ಇಲ್ಲ. ಹಾಗಾಗಿ ಕಾನೂನು ಹೋರಾಟ ಮಾಡುತ್ತಿದ್ದೇವೆ' ಎಂದು ತಿಳಿಸಿದರು.

ರೈತರ ಸಭೆ ಕರೆದ ಬಿಡಿಎ

ಪಿಆರ್‌ಆರ್-1 ಯೋಜನೆಗೆ ಸಂಬಂಧಿಸಿದಂತೆ ಈವರೆಗೂ ಆಗಿರುವ ಪ್ರಗತಿ ಕುರಿತು ಮಾಹಿತಿ ನೀಡಲು ಸೆಪ್ಟೆಂಬರ್ 25ರಂದು ಕಚೇರಿ ಸಭಾಂಗಣದಲ್ಲಿ ಪಿಆರ್‌ಆರ್ ರೈತ ಸಂಘ ಹಾಗೂ ಭೂ ಮಾಲೀಕರ ಸಭೆಯನ್ನು ಬಿಡಿಎ ಕರೆದಿದೆ. ಅಧ್ಯಕ್ಷ ಎನ್.ಎ. ಹ್ಯಾರಿಸ್ ಹಾಗೂ ಆಯುಕ್ತ ಪಿ.ಮಣಿವಣ್ಣನ್ ಅವರು ರೈತರು, ನಿವೇಶನದಾರರ ಸಂಘದ ಪದಾಧಿಕಾರಿಗಳು ಹಾಗೂ ಭೂಮಾಲೀಕರಿಗೆ ಮಾಹಿತಿ ನೀಡಲಿದ್ದಾರೆ.

ಬ್ಯುಸಿನೆಸ್ ಕಾರಿಡಾರ್ ಮಾರ್ಗ

ತುಮಕೂರು ರಸ್ತೆಯ ಮಾದನಾಯಕಹಳ್ಳಿ ಬಳಿಯ ನೈಸ್ ಜಂಕ್ಷನ್ ಸಮೀಪದಿಂದ ಆರಂಭವಾಗುವ ಬ್ಯುಸಿನೆಸ್ ಕಾರಿಡಾರ್ ಹೆಸರಘಟ್ಟ ರಸ್ತೆ, ದೊಡ್ಡಬಳ್ಳಾಪುರ ರಸ್ತೆ, ಬಳ್ಳಾರಿ ರಸ್ತೆ, ಹೆಣ್ಣೂರು, ಹಳೇ ಮದ್ರಾಸ್ ರಸ್ತೆ, ವೈಟ್‌ಫೀಲ್ಡ್, ಚನ್ನಸಂದ್ರ, ಸರ್ಜಾಪುರ ರಸ್ತೆ ಮಾರ್ಗವಾಗಿ ಹೊಸೂರು ರಸ್ತೆ ತಲುಪಲಿದೆ.

ಹೆಸರಘಟ್ಟ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ವೈಟ್‌ಫೀಲ್ಡ್, ಹೊಸೂರು ರಸ್ತೆಗಳಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಹಾಗೂ 395 ಸಣ್ಣ ಜಂಕ್ಷನ್‌ಗಳ ಮೇಲೆ ಪಿಆರ್‌ಆರ್ ಹಾದು ಹೋಗಲಿದೆ. ಜಾರಕಬಂಡೆ ಕೆರೆ, ತಿರುಮೇನಹಳ್ಳಿ ಕೆರೆ, ಚಿನ್ನಗಾನಹಳ್ಳಿ ಕೆರೆ, ಗುಂಜೂರು ಕೆರೆ, ಚಿಕ್ಕತೋಗೂರು ಕೆರೆಗಳ ಮೇಲೆ ಸೇರಿದಂತೆ ಒಟ್ಟು 16 ಮೇಲ್ಸೇತುವೆಗಳನ್ನು ನಿರ್ಮಿಸುವ ಯೋಜನೆ ಇದಾಗಿದೆ.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101 ದೂರವಾಣಿ ಸಂಖ್ಯೆ: ಕಛೇರಿ: 08156-295427 ಫ್ಯಾಕ್ಸ್: 08156-295427

ಇಮೇಲ್ : eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಬ/ತಾಂಶಾ/ತಾಂಸ/ ಟೆಂಡರ್ ಪ್ರಕಟಣೆ ಸಂಖ್ಯೆ: 10/2025-26 ದಿನಾಂಕ : 19/09/2025

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರರವರಿಂದ, ಗೌರಿಬಿದನೂರು ಶಿಡ್ಲಘಟ್ಟ ಮತ್ತು ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 **ವಿಶೇಷ ಘಟಕ ಯೋಜನೆ ಮತ್ತು** 4702 **ಗಿರಿಜನ ಉಪ ಯೋಜನೆ, ಅಡಿಯಲ್ಲಿ** ಅನುಮೋದನೆಯಾಗಿರುವ ಕಾಮಗಾರಿಗೆ ಕೆ.ಡಬ್ಲ್ಯೂ 1 ಮತ್ತು 2ರ ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಕೆ.ಪಿ.ಪಿ ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 03/10/2025 ಸಾಯಂಕಾಲ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ 04/10/2025 ರಂದು (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ - 08156-295427 ಮತ್ತು ಕೆ.ಪಿ.ಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆ: 91-8068948777 ಮತ್ತು 91-8046010000 ರಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಪಿ ಎಂ ಶ್ರೀ ಕೇಂದ್ರೀಯ ವಿದ್ಯಾಲಯ

ನಂ. 1 ಜಾಲಹಳ್ಳಿ ಪಶ್ಚಿಮ ಬೆಂಗಳೂರು -560015

पीएम श्री केन्द्रीय विद्यालय नंबर 1 जालहल्ली पश्चिम, बैंगलोर -560015

PM SHRI KENDRIYA VIDYALAYA No. 1 JALAHALLI WEST, BENGALURU - 560015

(An Autonomous body under the Ministry of Education, Govt of India)

KV CODE: 1051 CBSE AFFILIATION NO: 800004 CBSE SCHOOL CODE: 49003

UDISE: 29280229803 EMAIL: kv1jalahalli@gmail.com

Contact No: 080-28388422 web: https://no1jalahalli.kvs.ac.in

ಉಲ್ಲೇಖ: ಎಫ್‌ಸಂಖ್ಯೆ13-44/ಕೆ.ವಿ.1/ಜಾಲಹಳ್ಳಿ/2025-26 ದಿನಾಂಕ: 23-09-2025

ಪಿ ಎಂ ಶ್ರೀ ಕೇಂದ್ರೀಯ ವಿದ್ಯಾಲಯ ನಂ. 1 ಜಾಲಹಳ್ಳಿ ಸ್ಫೂರ್ತಿದಾಯಕ ಚಲನಚಿತ್ರ ಪ್ರದರ್ಶನ ಮತ್ತು ಅಭಿನಂದನಾ ಕಾರ್ಯಕ್ರಮವನ್ನು ಆಯೋಜಿಸುತ್ತದೆ.

ಪಿ ಎಂ ಶ್ರೀ ಕೇಂದ್ರೀಯ ವಿದ್ಯಾಲಯ ನಂ. 1, ಜಾಲಹಳ್ಳಿಯು ಪ್ರೇರಣಾ ಕಾರ್ಯಕ್ರಮದ ಅಡಿಯಲ್ಲಿ 9 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ **ಗುರುವಾರ, 25 ಸೆಪ್ಟೆಂಬರ್ 2025 ರಂದು** ಚಲೋ ಜೀತೇ ಹೇ ಚಲನಚಿತ್ರದ ವಿಶೇಷ ಪ್ರದರ್ಶನವನ್ನು ನಡೆಸಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಬಾಲ್ಯದ ಜೀವನಾಧಾರಿತ ಚಿತ್ರವು ಸೇವೆ ಮತ್ತು ನಿಸ್ವಾರ್ಥತೆಯ ಮೌಲ್ಯಗಳನ್ನು ಎತ್ತಿ ತೋರಿಸುತ್ತದೆ. ಈ ಕಾರ್ಯಕ್ರಮವು ವಿದ್ಯಾರ್ಥಿಗಳನ್ನು "ಸ್ವಯಂ ಸೇವೆ" ಅನ್ನು ಅನುಸರಿಸಲು ಮತ್ತು ಯುವ ನಾಯಕನ ಜೀವನದಿಂದ ಸ್ಫೂರ್ತಿ ಪಡೆಯಲು ಪ್ರೇರೇಪಿಸುವ ಉದ್ದೇಶವನ್ನು ಹೊಂದಿದೆ ಎಂದು ಶಾಲಾ ಅಧಿಕಾರಿಗಳು ತಿಳಿಸಿದ್ದಾರೆ.

ಕೃತಜ್ಞತೆಯ ಸಂಕೇತವಾಗಿ, ನಡೆಯುತ್ತಿರುವ ಸ್ವಚ್ಛತಾ ಪಖ್ವಾಡಾ ಅಭಿಯಾನದ ಭಾಗವಾಗಿ ಅದೇ ದಿನ ಶಾಲೆಯು ತನ್ನ ನೈರ್ಮಲ್ಯ ಕಾರ್ಯಕರ್ತರನ್ನು ಗೌರವಿಸುತ್ತದೆ. ಇಡೀ ವಿದ್ಯಾಲಯ ಸಮುದಾಯಕ್ಕೆ ಕ್ಯಾಂಪಸ್ ಅನ್ನು ಸ್ವಚ್ಛ, ನೈರ್ಮಲ್ಯ ಮತ್ತು ಸುರಕ್ಷಿತವಾಗಿರುವಲ್ಲಿ ಸಮರ್ಪಿತ ಪ್ರಯತ್ನಗಳ ಮಾಡುವ ಬ್ಲೂ ಕಾಲರ್ ಸಿಬ್ಬಂದಿಯನ್ನು ಸನ್ಮಾನಿಸಲು ಗುರುತಿಸಲಾಗಿದೆ.

ಪ್ರೇರಣೆ ಮತ್ತು ಮೆಚ್ಚುಗೆಯ ಸಂಯೋಜಿತ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಜವಾಬ್ದಾರಿ, ಸೇವೆಯ ಗೌರವ ಮತ್ತು ನಾಗರಿಕ ಹೆಮ್ಮೆಯನ್ನು ಉಂಟುಮಾಡುತ್ತದೆ ಎಂದು ಪ್ರಾಂಶುಪಾಲರು ಮತ್ತು ಸಿಬ್ಬಂದಿಗಳು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಾಂಶುಪಾಲರು

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412

E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉನಿ/05/2025-26 ದಿನಾಂಕ: 23-09-2025

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕೋರಿರುವ ಬಗ್ಗೆ.

ಜಿಪಿಎದಾರರಾದ **ಶ್ರೀ ರಮೇಶ್ ನಾಯ್ಡು ಮತ್ತು ಶ್ರೀ ಶೇಕರ್ ಜಿ, ನಿರ್ದೇಶಕರು, ಮೆ॥ ಸಿದ್ವಿನ್ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್** ಇವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹುಲ್ಲೂರು ಅಮಾನಿಕೆರೆ ಗ್ರಾಮದ ಸ.ನಂ. 45/12 ರಲ್ಲಿನ 13 1/2 ಗುಂಟೆ ವಿಸ್ತೀರ್ಣದ ಜಮೀನನ್ನು **"ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ಉದ್ದೇಶದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 69 (2) ಮತ್ತು (3) ರಡಿಯಲ್ಲಿ ಭೂ ಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ **ಸಾರ್ವಜನಿಕ ಮತ್ತು ಅರೆ-ಸಾರ್ವಜನಿಕ ವಲಯಕ್ಕೆ ಕಾಯ್ದಿರಿಸಲಾಗಿರುವ** ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ನಿಗದಿಪಡಿಸುವ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/2943/ಅಡ್ವಟೈಸ್/2025-26

'ಹಿಂದೂ, ಕ್ರೈಸ್ತ ಸಮುದಾಯಗಳ ನಡುವೆ ಗೊಂದಲ ಮೂಡಿಸಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಹಿಂದೂ ಹಾಗೂ ಕ್ರೈಸ್ತ ಸಮುದಾಯಗಳ ಹೆಸರಿನಲ್ಲಿ ಸೃಷ್ಟಿಸುತ್ತಿರುವ ಗೊಂದಲವನ್ನು ಕೂಡಲೇ ನಿಲ್ಲಿಸಬೇಕು ಎಂದು ಆಗ್ರಹಿಸಿ ಹಿಂದೂ ಹಿತರಕ್ಷಣಾ ಸಮಿತಿ ಮಂಗಳವಾರ ಮನವಿ ಸಲ್ಲಿಸಿತು.

ಕಾಂಗ್ರೆಸ್ ಸರ್ಕಾರ ಸಮೀಕ್ಷೆಯ ಹೆಸರಲ್ಲಿ ಹೊಸ ಕ್ರೈಸ್ತ ಜಾತಿಗಳನ್ನು ಸೃಷ್ಟಿಸುತ್ತಿರುವುದು ಜಾತಿ ಪಟ್ಟಿ ಗಮನಿಸಿದಾಗ ತಿಳಿಯಲಿದೆ. ಕ್ರೈಸ್ತರನ್ನು ಹಿಂದೂ ಜಾತಿಗಳ ನಡುವೆ ಎಳೆದು ತಂದು ಸಮಾಜವನ್ನು ದಿಕ್ಕು ತಪ್ಪಿಸುತ್ತಿದೆ. ಇದನ್ನು ಸಂಪೂರ್ಣವಾಗಿ ಕೈಬಿಡಬೇಕು ಎಂದು ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿಯ ಚುನಾವಣಾ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಕುರುಬ ಕ್ರೈಸ್ತ, ಮಡಿವಾಳ ಕ್ರೈಸ್ತ, ಮಾದಿಗ ಕ್ರೈಸ್ತ, ಹೊಲೆಯ ಕ್ರೈಸ್ತ, ಲಿಂಗಾಯತ ಕ್ರೈಸ್ತ, ಒಕ್ಕಲಿಗ ಕ್ರೈಸ್ತ ಸೇರಿದಂತೆ 48 ಹೊಸ ಕ್ರೈಸ್ತ ಜಾತಿಗಳನ್ನು ಸಮೀಕ್ಷೆಯ ಹೆಸರಿನಲ್ಲಿ ಹುಟ್ಟುಹಾಕಿ ಕ್ರೈಸ್ತರ ಮೂಲ ಪಂಗಡಗಳನ್ನು ಕೈಬಿಟ್ಟಿದೆ. ಕರ್ನಾಟಕದಲ್ಲಿ ಜಾರಿಯಲ್ಲಿರುವ ಮತಾಂತರ ನಿರ್ಬಂಧ ಕಾಯ್ದೆಯನ್ನು ಸರ್ಕಾರವೇ ದುರ್ಬಲಗೊಳಿಸುವಂತೆ ಕಾಣುತ್ತಿದೆ ಎಂದು ಸಮಿತಿಯ ಪ್ರಮುಖರು ಆರೋಪಿಸಿದರು.

ಸಮಿತಿಯ ಸಂಯೋಜಕ ಗೋವರ್ಧನ್, ಸಹ ಸಂಯೋಜಕ ಶ್ರೀನಿವಾಸ್ ಹಾಜರಿದ್ದರು.

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ. 21/SBC/25, ದಿನಾಂಕ: 15.09.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	**ಬೆಂಗಳೂರು - ಜೋಲಾರ್‌ಪೇಟೆ ವಿಭಾಗ: ಉಪ ಕಾಮಗಾರಿ-1:** ಎಸ್‌ಎಸ್‌ಇ/ಪಿ.ವೇ./ ಬೆಂಗಳೂರು ವಿಭಾಗದಲ್ಲಿ ಬೆಂಗಳೂರು ಕಂಟೋನ್ಮೆಂಟ್ (ಎಸ್‌ಬಿಸಿ) ಯಾರ್ಡ್‌ನ ರೋಡ್ ನಂ. 5, 6, 7, 14, 15 ಮತ್ತು 16 ರಲ್ಲಿ ಕಿ.ಮೀ. 8.042 ಉದ್ದದ ದೂರಕ್ಕೆ ಸ್ಲೀಪರ್‌ಗಳ ಸಾಂದ್ರತೆಯನ್ನು 1310 ರಿಂದ 1540 ಗೆ ಹೆಚ್ಚಿಸುವುದು. **ಉಪ ಕಾಮಗಾರಿ-2: ಬೆಂಗಳೂರು - ಜೋಲಾರ್‌ಪೇಟೆ ವಿಭಾಗ:** ಕಿಮೀ. 303/200-304/900 ರ ಡೌನ್ ಲೇನಿನಲ್ಲಿ 1.7 ಕಿಮೀ. ಉದ್ದದ ದೂರಕ್ಕೆ ಈಗಿರುವ 60 ಕೆಜಿ. ರೈಲ್‌ಗಳನ್ನು 60ಕೆಜಿ/110 ಯುಟಿಎಸ್ ಕ್ಲಾಸ್ 1 ರೈಲ್‌ಗಳನ್ನಾಗಿ ಥ್ರೂ ರೈಲ್ ರಿನ್ಯೂವಲ್ (ಪಿ) ಕಾಮಗಾರಿ. **ಉಪ ಕಾಮಗಾರಿ-3: ಬೆಂಗಳೂರು - ಜೋಲಾರ್‌ಪೇಟೆ ವಿಭಾಗ:** ಎಸ್‌ಎಸ್‌ಇ/ಪಿ.ವೇ/ಕೋಲಾರ ವಿಭಾಗದಲ್ಲಿ ಕಿಮೀ. 311/500-295/500 ರ ಡೌನ್ ಲೈನಿನಲ್ಲಿ 15 ಕಿಮೀ. ದೂರಕ್ಕೆ ಥ್ರೂ ಫಿಟಿಂಗ್ ರಿನ್ಯೂವಲ್ (ಟಿಎಫ್‌ಆರ್) ಕಾಮಗಾರಿ. **ಉಪ ಕಾಮಗಾರಿ-4: ಬೆಂಗಳೂರು ವಿಭಾಗ:** ಯಲಹಂಕ - ಬಂಗಾರಪೇಟೆ ವಿಭಾಗದಲ್ಲಿ ತುರಂಡಹಳ್ಳಿ (ಟಿಯುಹೆಚ್‌ಡಿ) ಯಲ್ಲಿ ಹೊಸ ಕ್ರಾಸಿಂಗ್ ಸ್ಟೇಷನ್ ಕಾಮಗಾರಿ.	ರೂ. 1,20,64,689/-
2	**ಬೆಂಗಳೂರು - ಜೋಲಾರ್‌ಪೇಟೆ ವಿಭಾಗ:** ಹೂಡಿ ಹಾಲ್ಟ್ (ಹೆಚ್‌ಡಿಐಹೆಚ್) - ಕೃಷ್ಣರಾಜಪುರಂ (ಕೆಜೆಎಂ) ನಿಲ್ದಾಣಗಳ ನಡುವೆ ಕಿಮೀ. 339/300-400 ರಲ್ಲಿರುವ ಅತಿಕ್ರಮಣ ಪ್ರದೇಶದಲ್ಲಿ ಆರ್‌ಯುಬಿಯ ನಿರ್ಮಾಣ. ಅಳತೆ 1.0 x 6.0 x 3.6 - ಏರ್ ಪುಶಿಂಗ್ ಮಾದರಿಯಲ್ಲಿ. ನಿರ್ವಹಣೆಯ ಅವಧಿ 6 ತಿಂಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 4,02,26,845/-
3	**ಬೆಂಗಳೂರು - ಜೋಲಾರ್‌ಪೇಟೆ ವಿಭಾಗ:** ವಿಭಾಗೀಯ ವೇಗವನ್ನು ಪ್ರತಿ ಗಂಟೆಗೆ 110 ಕಿಮೀ. ನಿಂದ 130 ಕಿಮೀ. ವರೆಗೆ ಹೆಚ್ಚಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ 35.60 ಕಿಮೀ. (ಸಹಾಯಕ ವಿಭಾಗೀಯ ಇಂಜಿನಿಯರ್/ಬೆಂಗಳೂರು ಕಂಟೋನ್ಮೆಂಟ್ ವಿಭಾಗ) ದೂರಕ್ಕೆ ಡಬ್ಲ್ಯೂ-ಬೀಮ್ ಮೆಟಲ್ ಬ್ಯಾರಿಯರ್‌ನೊಂದಿಗೆ ಸುರಕ್ಷತಾ ಫೆನ್ಸಿಂಗ್‌ನ ವ್ಯವಸ್ಥೆ. ನಿರ್ವಹಣೆಯ ಅವಧಿ 12 ತಿಂಗಳುಗಳು (ಎರಡು ಪ್ಯಾಕೆಟ್)	ರೂ.14,45,94,105/-
4	**ಸಹಾಯಕ ವಿಭಾಗೀಯ ಇಂಜಿನಿಯರ್/ಮಂಡ್ಯ ಉಪ ವಿಭಾಗ:** ಕೆಂಗೇರಿಯಲ್ಲಿ (ಕೆಜಿಐ) ಪ್ಲಾಟ್‌ಫಾರ್ಮ್ 4 ರಲ್ಲಿ ಪ್ರಸ್ತಾವಿತ ಎಸ್ಕಲೇಟರ್‌ನ ವ್ಯವಸ್ಥೆ. ನಿರ್ವಹಣೆಯ ಅವಧಿ 6 ತಿಂಗಳು ಅಥವಾ ಒಂದು ಮಾನ್ಸೂನ್ ಅವಧಿಯಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 56,06,514/-
5	**ಉಪ ಕಾಮಗಾರಿ-1: ಬೆಂಗಳೂರು ಕಂಟೋನ್ಮೆಂಟ್ (ಬಿಎನ್‌ಸಿ): ಬೆಂಗಳೂರು** ಕಂಟೋನ್ಮೆಂಟ್ (ಬಿಎನ್‌ಸಿ) ನಲ್ಲಿ ಪ್ರಸ್ತಾವಿತ ಟೈಪ್-3 ಕ್ವಾರ್ಟರುಗಳ ನಿರ್ಮಾಣ (4 ಘಟಕಗಳು) (ಸ್ಟಿಲ್ಟ್ + ನೆಲಮಹಡಿ). **ಉಪ ಕಾಮಗಾರಿ-2: ಬೆಂಗಳೂರು ಕಂಟೋನ್ಮೆಂಟ್ (ಬಿಎನ್‌ಸಿ):** ಬೆಂಗಳೂರು ಕಂಟೋನ್ಮೆಂಟ್ (ಬಿಎನ್‌ಸಿ) ನಲ್ಲಿ ಪ್ರಸ್ತಾವಿತ ಟೈಪ್-3 ಕ್ವಾರ್ಟರುಗಳ (8 ಘಟಕಗಳು) ನಿರ್ಮಾಣ - ಈಗಿರುವ ಕ್ವಾರ್ಟರಿನಲ್ಲಿ ಮೊದಲನೇ ಮತ್ತು ಎರಡನೇ ಮಹಡಿಗಳು. ನಿರ್ವಹಣೆಯ ಅವಧಿ 12 ತಿಂಗಳುಗಳು (ಸಂಯುಕ್ತ ಟೆಂಡರು).	ರೂ. 4,22,07,361/-
6	**ಬೆಂಗಳೂರು - ಸಂಪಿಗೆ ರೋಡ್ ವಿಭಾಗ:** ವಿಭಾಗೀಯ ವೇಗವನ್ನು ಪ್ರತಿ ಗಂಟೆಗೆ 110 ರಿಂದ 130 ಕಿಮೀ. ವರೆಗೆ ಹೆಚ್ಚಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ 14 ಕಿಮೀ. ಉದ್ದಕ್ಕೆ ಬೌಂಡರಿ ಗೋಡೆಯ ನಿರ್ಮಾಣ. ನಿರ್ವಹಣೆಯ ಅವಧಿ 12 ತಿಂಗಳುಗಳು (ಎರಡು ಪ್ಯಾಕೆಟ್).	ರೂ.11,51,97,379/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **14.10.2025, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು

PUB/492/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಅನ್ಯಾಯ ಸರಿಪಡಿಸಲು ಅತಿಥಿ ಉಪನ್ಯಾಸಕರ ಒತ್ತಾಯ

ನಕಲಿ ಪ್ರಮಾಣ ಪತ್ರ: ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಪ್ರಮಾಣ ಪತ್ರ ಸಲ್ಲಿಸಿರುವ ಅಭ್ಯರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ, ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಒಕ್ಕೂಟದ ನೇತೃತ್ವದಲ್ಲಿ ಅತಿಥಿ ಉಪನ್ಯಾಸಕರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಯುಜಿಸಿಯ ಅರ್ಹ ಮಾನದಂಡ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಆಗುತ್ತಿರುವ ಅನ್ಯಾಯವನ್ನು ತಕ್ಷಣವೇ ಸರಿಪಡಿಸಲು ಶಿಕ್ಷಣ ಇಲಾಖೆ ಕ್ರಮ ತೆಗೆದು ಕೊಳ್ಳಬೇಕು ಎಂದೂ ಪ್ರತಿಭಟನಕಾರರು ಆಗ್ರಹಿಸಿದರು.

2025-26ನೇ ಶೈಕ್ಷಣಿಕ ಸಾಲಿನಿಂದಲೇ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ಯುಜಿಸಿಯ ಮಾನದಂಡ ಹೊಂದಿರುವ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಬೇಕಾಗಿ ಹೈಕೋರ್ಟ್ ಆದೇಶ ನೀಡಿದೆ. ಆದರೆ, ಇದುವರೆಗೂ ಶಿಕ್ಷಣ ಇಲಾಖೆಯಿಂದ ಆಯ್ಕೆ ಪ್ರಕ್ರಿಯೆ ಆರಂಭವಾಗಿಲ್ಲ. ಎಂ.ಫಿಲ್, ಪಿಎಚ್.ಡಿಯ ನಕಲಿ ಸೇವಾ ಪ್ರಮಾಣಪತ್ರ ಪಡೆದು ಕಾರ್ಯನಿರ್ವಹಿಸುತ್ತಿರುವ ಸಾಕಷ್ಟು ಅಭ್ಯರ್ಥಿಗಳಿದ್ದಾರೆ. ಈ ಸಂಗತಿಯು ಇಲಾಖೆಯ ಗಮನಕ್ಕೂ ಬಂದಿದೆ. ಅಂತಹವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ನಕಲಿ ಪಿಎಚ್.ಡಿ ಪ್ರಮಾಣಪತ್ರಗಳನ್ನು ಪಡೆದು ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳನ್ನು ಈ ಬಾರಿ ಆಯ್ಕೆ ಪ್ರಕ್ರಿಯೆ ಹಂತದಲ್ಲೇ ಕೈಬಿಡಬೇಕು ಎಂದು ಆಗ್ರಹಿಸಿದರು.

ಒಕ್ಕೂಟದ ಅಧ್ಯಕ್ಷ ಕಾಂತಕುಮಾರ್, ಉಪಾಧ್ಯಕ್ಷ ಎಂ.ಎಸ್.ಶ್ರೇಯಸ್, ಪ್ರಧಾನ ಕಾರ್ಯದರ್ಶಿ ಜೆ.ಸಂಜಯ್‌ಕುಮಾರ್ ಮೊದಲಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ನಕಲಿ ಪ್ರಮಾಣಪತ್ರ ಸಲ್ಲಿಸಿರುವ ಅಭ್ಯರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಒಕ್ಕೂಟದ ನೇತೃತ್ವದಲ್ಲಿ ಅತಿಥಿ ಉಪನ್ಯಾಸಕರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಮೈಸೂರು ಸಕ್ಕರೆ ಕಂಪನಿ ನಿಯಮಿತ,

(ಕರ್ನಾಟಕ ಸರ್ಕಾರದ ಒಳಸ್ವಾಮ್ಯಕ್ಕೆ ಒಳಪಟ್ಟಿದೆ)

ಸಕ್ಕರೆ ನಗರ, ಮಂಡ್ಯ-571 402.

ಎಂಎಸ್‌ಕೋ/ಎಂಎಂ/53/2025-26 ದಿ:23-09-2025

ಇ-ಟೆಂಡರ್ ಪ್ರಕಟಣೆ ಸಂಖ್ಯೆ:MSCO/2025-26/SE0011

ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯ, ಕಾರ್ಖಾನೆಯ ದೈನಂದಿನ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಕಂಪನಿಯ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎರಡು ವರ್ಷದ ಅವಧಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲವನ್ನು ಸರಬರಾಜು ಮಾಡಲು ಇ-ಪ್ರಕ್ಯೂರ್‌ಮೆಂಟ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

(1) ಇ- ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ನ್ನು (https://Kppp.karnataka.gov.in) ತುಂಬುವುದು. (2) ಟೆಂಡರ್ ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿದ್ದರೆ ದಿನಾಂಕ: 03.10.2025 ರ ಬೆಳಿಗ್ಗೆ 11.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. (3) ಟೆಂಡರ್ ತುಂಬಲು ಕೊನೆಯ ದಿನಾಂಕ: 03.10.2025 ರ ಸಂಜೆ 4.00 ಗಂಟೆ ಆಗಿರುತ್ತದೆ. (4). ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.10.2025 ರ ಸಂಜೆ 4.30 ರ ನಂತರ ಆಗಿರುತ್ತದೆ.

ಟೆಂಡರನ್ನು ಸ್ವೀಕರಿಸುವ/ ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ಈ ವಿಚಾರದಲ್ಲಿ ಅಂತಿಮ ನಿರ್ಧಾರವನ್ನು ವ್ಯವಸ್ಥಾಪಕ ನಿರ್ದೇಶಕರು ತೆಗೆದುಕೊಳ್ಳುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಸೆಲ್ 080-25501216/ 25501227 ಅಥವಾ 9900559353/9886470666 ರವರನ್ನು ಸಂಪರ್ಕಿಸುವುದು.

ಸಹಿ/-ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/459/2024-25



ಜೆಸಿಬಿ ಬಳಸಿ ಅಕ್ರಮ ಶೆಡ್‌ಗಳನ್ನು ನೆಲಸಮಗೊಳಿಸಲಾಯಿತು

₹10 ಕೋಟಿ ಮೌಲ್ಯದ ಆಸ್ತಿ ವಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮಂಗಳವಾರ ಕಾರ್ಯಾಚರಣೆ ನಡೆಸಿ, ಎಚ್.ಬಿ.ಆರ್. 1ನೇ ಹಂತ, 4ನೇ ಬ್ಲಾಕ್‌ನಲ್ಲಿ ಅನಧಿಕೃತ ಕಟ್ಟಡಗಳನ್ನು ನೆಲಸಮಗೊಳಿಸಿ, ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಕಸಬಾ ಹೋಬಳಿಯ ಹೆಣ್ಣೂರು ಗ್ರಾಮದ ಸರ್ವೆ ನಂ. 56/2ರ 8.5 ಗುಂಟೆ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಶೆಡ್ ಮತ್ತು ಕಾಂಪೌಂಡ್‌ಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಿ, ಸುಮಾರು ₹10 ಕೋಟಿ ಬೆಲೆ ಬಾಳುವ ಜಾಗವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು.

ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಅಭಿಯಂತರ ಅಧಿಕಾರಿ-3, ಕಾರ್ಯಪಾಲಕ ಎಂಜಿನಿಯರ್ , ಉತ್ತರ ವಿಭಾಗ ಹಾಗೂ ನಾಡಪ್ರಭು ಕೆಂಪೇಗೌಡ ಬಡಾವಣೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ಹಾಗೂ ಸ್ಥಳೀಯ ಪೊಲೀಸರು ಕಾರ್ಯಾಚರಣೆ ವೇಳೆ ಹಾಜರಿದ್ದರು.

ಸಮಗ್ರ ಭೂಸ್ವಾಧೀನ ನೀತಿ ಜಾರಿಗೊಳಿಸಿ: ಸಿ.ಎಂ.ಗೆ ಪತ್ರ

ಬೆಂಗಳೂರು: 'ಕರ್ನಾಟಕದ ಸಮತೋಲಿತ ಅಭಿವೃದ್ಧಿಗೆ ಸಮಗ್ರ ಭೂಸ್ವಾಧೀನ ನೀತಿಯನ್ನು ಶೀಘ್ರವೇ ರೂಪಿಸಬೇಕು' ಎಂದು ಒತ್ತಾಯಿಸಿ 'ದಿ ವೇ ಫಾರ್ವರ್ಡ್' ವೇದಿಕೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿ ಪತ್ರ ಬರೆದಿದೆ.

'ಈ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿಯವರು ಸಮಯ ನೀಡಬೇಕು' ಎಂದು ಕೋರಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಕೆ.ನಾರಾಯಣಗೌಡ, ರಾಜ್ಯ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಅವರು ಪತ್ರ ಬರೆದಿದ್ದಾರೆ. 'ರಾಜ್ಯದಲ್ಲಿ ಕೃಷಿ ಭೂಮಿಯನ್ನು ವಿವಿಧ ಉದ್ದೇಶಕ್ಕೆ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಮತ್ತು ಅದರ ವಿರುದ್ಧ ಹೋರಾಟ ನಡೆಯುವುದು ನಡೆಯುತ್ತಲೇ ಇದೆ. ಇದರಿಂದ ಕೃಷಿ ಚಟುವಟಿಕೆಗಳಿಗೆ ತಡೆಯಾಗಿದ್ದರೆ, ಕೈಗಾರಿಕೆಗಳ ಅಭಿವೃದ್ಧಿಗೂ ತೊಡಕಾಗಿದೆ. ಇಂತಹ ಸಮಸ್ಯೆಗಳು ಎದುರಾಗದ ರೀತಿಯಲ್ಲಿ ಏನೆಲ್ಲಾ ಕ್ರಮ ತೆಗೆದುಕೊಳ್ಳಬಹುದು ಎಂಬುದರ ಬಗ್ಗೆ ಈಚೆಗೆ ಒಂದು ದಿನದ ಚರ್ಚೆ ನಡೆಸಲಾಗಿದೆ' ಎಂದು ವೇದಿಕೆಯು ಪತ್ರದಲ್ಲಿ ತಿಳಿಸಿದೆ.

'ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ನಡೆದ ಸಭೆಯಲ್ಲಿ ಈ ರೈತ ಸಂಘಟನೆಗಳ ಮುಖಂಡರು, ಉದ್ಯಮ ಸಂಘಟನೆಗಳ ಪ್ರತಿನಿಧಿಗಳು, ಕೃಷಿ ತಂತ್ರಜ್ಞರು ಭಾಗಿಯಾಗಿದ್ದರು. ರಾಜ್ಯದಲ್ಲಿ ಈವರೆಗೆ ಸ್ವಾಧೀನಕ್ಕೆ ತೆಗೆದುಕೊಳ್ಳಲಾದ ಜಮೀನುಗಳು ಮತ್ತು ಅವುಗಳ ಬಳಕೆಗೆ ಸಂಬಂಧಿಸಿದ ಶ್ವೇತಪತ್ರವನ್ನು ಹೊರಡಿಸಬೇಕು. ಅಲ್ಲಿಯವರೆಗೆ ಯಾವುದೇ ಭೂಸ್ವಾಧೀನ ಪ್ರಕ್ರಿಯೆ ನಡೆಸಬಾರದು. ಭೂಸುಧಾರಣಾ ಕಾಯ್ದೆಗೆ ಹಿಂದಿನ ಸರ್ಕಾರ ತಂದಿದ್ದ ತಿದ್ದುಪಡಿಗಳನ್ನು ವಾಪಸ್ ಪಡೆಯಬೇಕು. ಕೈಗಾರಿಕೆಗಳಿಗೆ ಬಂಜರು ಭೂಮಿ ನೀಡಬೇಕು ಹಾಗೂ ವಸತಿ ರಹಿತರಿಗೆ ಭೂಮಿ ಒದಗಿಸಬೇಕು ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ' ಎಂದು ಹೇಳಿದ್ದಾರೆ.

ಪಿಂಕ್ ಆಟೊ: ಮಹಿಳೆಯರೇ ‘ಸಾರಥಿಗಳು’

‘ನಮ್ಮ ಸಾರಥಿ ಟ್ರಸ್ಟ್’ನಿಂದ ಮಹಿಳೆಯರಿಗೆ ತರಬೇತಿ • ಸಾರಥಿ ಯೋಜನೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ರಿಕ್ಷಾ ಚಾಲನೆಗೆ ಸಂಬಂಧಿಸಿದಂತೆ ‘ನಮ್ಮ ಸಾರಥಿ ಟ್ರಸ್ಟ್’ ಮಹಿಳೆಯರಿಗೆ ರೂಪಿಸಿರುವ ‘ಸಾರಥಿ’ ಯೋಜನೆಗೆ ನಗರದಲ್ಲಿ ಮಂಗಳವಾರ ಚಾಲನೆ ದೊರೆತಿದ್ದು, ತರಬೇತಿ ಪಡೆದ ಮಹಿಳೆಯರು ‘ಪಿಂಕ್ ಆಟೊ ರಿಕ್ಷಾ’ ಚಾಲನೆ ಮಾಡಿ ಸಂಭ್ರಮಿಸಿದರು.

ಟ್ರಸ್ಟ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಯೋಜನೆ ಬಗ್ಗೆ ವಿವರಿಸಿದ ಟ್ರಸ್ಟ್‌ನ ಅಧ್ಯಕ್ಷ ಸಿ. ಸಂಪತ್, ‘ಮಹಿಳೆಯರ ಜತೆಗೆ ಲಿಂಗತ್ವ ಅಲ್ಪಸಂಖ್ಯಾತರೂ ಈ ಯೋಜನೆಯ ಭಾಗವಾಗಬಹುದು. ವೃತ್ತಿಪರ ಆಟೊ ರಿಕ್ಷಾ ಚಾಲಕರಾಗಲು ಅಗತ್ಯವಿರುವ ತರಬೇತಿ ಮತ್ತು ಬೆಂಬಲವನ್ನು ಟ್ರಸ್ಟ್ ವತಿಯಿಂದ ನೀಡಲಾಗುತ್ತದೆ. ಚಾಲನಾ ಪರವಾನಗಿ ಪಡೆಯುವಲ್ಲಿಯೂ ನೆರವಾಗುತ್ತೇವೆ. ಮಾರ್ಚ್ 2026ರ ವೇಳೆಗೆ ಸಾವಿರ ಮಹಿಳಾ ಚಾಲಕರನ್ನು ತರಬೇತಿಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ. 2030ರ ವೇಳೆಗೆ ಈ ಸಂಖ್ಯೆ 10 ಸಾವಿರಕ್ಕೆ ವಿಸ್ತರಿಸಲು ಯೋಜನೆ ರೂಪಿಸಿದ್ದೇವೆ’ ಎಂದರು.

‘ಈ ಯೋಜನೆಯ ಅನುಷ್ಠಾನದ ಭಾಗವಾಗಿ ಬೆಂಗಳೂರಿನಾದ್ಯಂತ ಐದು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಚಾಲನಾ ಕೌಶಲ, ಸಂಚಾರ ನಿಯಮಗಳು, ವಾಹನ ನಿರ್ವಹಣೆ, ಡಿಜಿಟಲ್ ಮತ್ತು ಆರ್ಥಿಕ ಸಾಕ್ಷರತೆ, ಗ್ರಾಹಕ ಸೇವೆ ಮತ್ತು ಸುರಕ್ಷತೆಗಳನ್ನು ಒಳಗೊಂಡ ಮೂರು ತಿಂಗಳ ರಚನಾತ್ಮಕ ಕಾರ್ಯಕ್ರಮ ನಡೆಸುತ್ತೇವೆ. ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ) ಸಹಭಾಗಿತ್ವದಲ್ಲಿ ಚಾಲನಾ ಪರವಾನಗಿ ವಿತರಣೆ ಮತ್ತು ಹಣಕಾಸು ಸಂಸ್ಥೆಗಳಿಂದ ವಾಹನ ಸಾಲ ಪಡೆಯಲು ಸಹಾಯ ಮಾಡಲಾಗುತ್ತದೆ’ ಎಂದರು.

ಬದಲಾವಣೆಗೆ ಸಹಕಾರಿ: ಟ್ರಸ್ಟ್‌ನ ಉಪಾಧ್ಯಕ್ಷ ರುದ್ರಮೂರ್ತಿ, ‘ಈ ಯೋಜನೆಯು ಮಹಿಳಾ ಸಬಲೀಕರಣಕ್ಕೆ ಸಹಕಾರಿಯಾಗಿದೆ. ಆಟೊ ರಿಕ್ಷಾ ಚಾಲನಾ ಕ್ಷೇತ್ರದಲ್ಲಿ ಪುರುಷರ ಪ್ರಾಬಲ್ಯವಿದ್ದು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಆಟೊ ರಿಕ್ಷಾ ಚಾಲನಾ ತರಬೇತಿಗೆ ಮುಂದೆ ಬರುತ್ತಿರುವುದು ಉತ್ತಮ ಬೆಳವಣಿಗೆ. ನಗರದ ರಸ್ತೆಗೆ ಇಳಿಯುವ ಪಿಂಕ್ ಆಟೊ ರಿಕ್ಷಾಗಳು ಧೈರ್ಯ ಮತ್ತು ಬದಲಾವಣೆಯ ಕಥೆಗಳನ್ನು ಹೊತ್ತೊಯ್ಯಲಿವೆ’ ಎಂದು ಹೇಳಿದರು.

ಖಜಾಂಚಿ ದೇವಿಕಾ ರಾಜ್, ‘ನಮ್ಮ ಸಾರಥಿ ಮಹಿಳೆಯರಿಗೆ ತಿಂಗಳಿಗೆ ₹15 ಸಾವಿರದಿಂದ ₹25 ಸಾವಿರದವರೆಗೆ ಆದಾಯ ದೊರೆಯಲಿದೆ. ಜನರಿಗೆ ವಿಶ್ವಾಸಾರ್ಹ, ಸುರಕ್ಷಿತ ಸಾರಿಗೆ ಆಯ್ಕೆಯನ್ನು ಈ ಯೋಜನೆ ಒದಗಿಸುತ್ತದೆ’ ಎಂದರು.

ಈಗಾಗಲೇ ಆಟೊ ರಿಕ್ಷಾ ಚಾಲನೆ ಮಾಡುತ್ತಿರುವ ಐವರು ಮಹಿಳಾ ಚಾಲಕರು ಸಂತಸ ವ್ಯಕ್ತಪಡಿಸಿ, ‘ಜನರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ನಾವು ಮೀಟರ್ ಪ್ರಕಾರ ದರ ಪಡೆಯುತ್ತಿರುವುದಕ್ಕೆ ಪ್ರಯಾಣಿಕರಿಗೂ ಖುಷಿಯಿದೆ’ ಎಂದು ಹೇಳಿದರು.



ಮಹಿಳಾ ಚಾಲಕರು ಪಿಂಕ್ ಆಟೊ ರಿಕ್ಷಾ ಚಾಲನೆ ಮಾಡುವ ಮೂಲಕ ಸಾರಥಿ ಯೋಜನೆಗೆ ಚಾಲನೆ ನೀಡಿದರು —ಪ್ರಜಾವಾಣಿ ಚಿತ್ರ

ಜಾತಿವಾರು ಸಮೀಕ್ಷೆ: 2 ದಿನದಲ್ಲಿ 71,004 ಜನರ ದತ್ತಾಂಶ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಸಮೀಕ್ಷೆ) ಸೋಮವಾರ (ಸೆ.22) ಆರಂಭವಾಗಿದ್ದು, ಎರಡು ದಿನಗಳಲ್ಲಿ ಒಟ್ಟು 71,004 ಜನರಿಂದ ದತ್ತಾಂಶ ಸಂಗ್ರಹಿಸಲಾಗಿದೆ.

ಸಮೀಕ್ಷೆಯ ಎರಡನೇ ದಿನವಾದ ಮಂಗಳವಾರದ ಅಂತ್ಯಕ್ಕೆ 18,487 ಮನೆಗಳ ಸಮೀಕ್ಷೆ ಪೂರ್ಣಗೊಂಡಿದೆ.

ಈ ಎರಡು ದಿನಗಳಲ್ಲಿ ಹಾವೇರಿ ಜಿಲ್ಲೆಯಲ್ಲಿ ಅತೀ ಹೆಚ್ಚು 2,783 ಮನೆಗಳಿಂದ ಒಟ್ಟು 10,820 ಜನರ ಹಾಗೂ ತುಮಕೂರು ಜಿಲ್ಲೆಯಲ್ಲಿ ಅತೀ ಕಡಿಮೆ ಏಳು ಮನೆಗಳಿಂದ 21 ಜನರ ದತ್ತಾಂಶವನ್ನು ಮೊಬೈಲ್ ಆ್ಯಪ್‌ನಲ್ಲಿ ದಾಖಲಿಸಿಕೊಳ್ಳಲಾಗಿದೆ.

ಈವರೆಗೆ ಬಾಗಲಕೋಟೆ, ಬೆಳಗಾವಿ, ಚಿತ್ರದುರ್ಗ, ದಾವಣಗೆರೆ, ಗದಗ, ಮಂಡ್ಯ ಜಿಲ್ಲೆಯಲ್ಲಿ ತಲಾ 1,000ಕ್ಕಿಂತ ಹೆಚ್ಚು ಮನೆಗಳಿಂದ ಹಾಗೂ ಬೆಂಗಳೂರು ಗ್ರಾಮೀಣ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ಉಡುಪಿ ಜಿಲ್ಲೆಗಳಲ್ಲಿ ತಲಾ 100ಕ್ಕಿಂತಲೂ ಕಡಿಮೆ ಮನೆಗಳಿಂದ ದತ್ತಾಂಶ ಸಂಗ್ರಹಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಆಯೋಗ ತಿಳಿಸಿದೆ.

‘ವಿಶ್ವಮಾನವ ಧರ್ಮ ಬರೆಯಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಆರಂಭಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಒಕ್ಕಲಿಗರು ಸೇರಿದಂತೆ ಎಲ್ಲ ತಳಸಮುದಾಯದವರು ಧರ್ಮದ ಕಾಲಂನಲ್ಲಿ ‘ವಿಶ್ವಮಾನವ ಧರ್ಮ’ ಎಂದು ನಮೂದಿಸುವಂತೆ ವಿಶ್ವಮಾನವ ಧರ್ಮ ಆಂದೋಲನ ಸಮಿತಿ ತಿಳಿಸಿದೆ.

‘ಒಕ್ಕಲಿಗರು ಇತರೆ ಕೆಳ ಸಮುದಾಯಗಳು ಮೂಲತಃ ಹಿಂದೂಗಳಲ್ಲ. ಮೂಲ ನಿವಾಸಿಗಳು. ಒಕ್ಕಲಿಗರನ್ನು 11ನೇ ಶತಮಾನದಿಂದ ಈಚೆಗೆ ಅಂದರೆ ರಾಮಾನುಜಾಚಾರ್ಯರು ವೈಷ್ಣವ ಧರ್ಮ ದೀಕ್ಷೆ ನೀಡಿ, ಬಿಟ್ಟಿದೇವನೆಂಬ ನಮ್ಮ ಸಮುದಾಯದ ರಾಜನನ್ನು ವಿಷ್ಣುವರ್ಧನ ಎಂದು ಹೆಸರಿಸಿ, ಅವನ ಪ್ರಜೆಗಳಾಗಿದ್ದ ನಮ್ಮ ಪೂರ್ವಜರನ್ನು ಹಿಂದೂಗಳೆಂದು ನಂಬಿಸಲಾಗಿದೆ’ ಎಂದು ವಿಶ್ವಮಾನವ ಧರ್ಮ ಜಾಗೃತಿ ವೇದಿಕೆಯ ಸಮನ್ವಯ ಸಮಿತಿ ಸದಸ್ಯರಾದ ನಾದಾನಂದನಾಥ ಸ್ವಾಮೀಜಿ, ತಲಕಾಡು ಚಿಕ್ಕರಂಗೇಗೌಡ, ಮುಕುಂದರಾಜ್, ಹನುಮೇಗೌಡ ನಂಜಪ್ಪ, ಅರಳುಕುಪ್ಪೆ ನಾಗೇಶ್, ಭೈರೇಗೌಡ ಎಸ್., ನೀಲಕಂಠಗೌಡ, ನಾಡಪ್ರಭು ನಾಗರಾಜು, ರವೀಂದ್ರಗೌಡ, ಮಂಜುನಾಥ ಅದ್ದೆ, ಜಯರಾಮ ಸಿ.ವಿ., ವ.ನಂ. ಶಿವರಾಮು, ಪ್ರಭಾಕರ ರೆಡ್ಡಿ ತಿಳಿಸಿದ್ದಾರೆ.

‘ಮಹಾಕವಿ ಕುವೆಂಪು ವಿಶ್ವಮಾನವ ಧರ್ಮವನ್ನು ಪ್ರತಿಪಾದಿಸಿಕೊಟ್ಟಿದ್ದಾರೆ. ಮುಂದಿನ ಪೀಳಿಗೆ ಹೇಗೆ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎನ್ನುವ ಕನಸನ್ನು ಕುವೆಂಪು ಕಂಡಿದ್ದರು. ಪುರೋಹಿತಶಾಹಿ ವೈದಿಕರ ಕಪಿಮುಷ್ಟಿಗೆ ಸಿಲುಕಿದರೆ ಒಕ್ಕಲಿಗ ಜನಾಂಗದ ಭವಿಷ್ಯ ನಾಶವಾಗುವುದೆಂಬ ಅರಿವು ಅವರಿಗಿತ್ತು. ಕುವೆಂಪು ತೋರಿಸಿಕೊಟ್ಟ ವಿಶ್ವಮಾನವ ಧರ್ಮವನ್ನು ಅನುಸರಿಸಬೇಕಾದ ಅಗತ್ಯವಿದೆ’ ಎಂದು ಹೇಳಿದ್ದಾರೆ.

‘ಧರ್ಮದ ಹೆಸರು ಬರೆಯುವ 8ನೇ ಕಾಲಂನಲ್ಲಿ ಮೇಲಿನ ಏಳು ಧರ್ಮಗಳಲ್ಲದವರು ಅಥವಾ ಯಾವುದೇ ಧರ್ಮಕ್ಕೆ ಸೇರಲು ಇಷ್ಟಪಡದವರು ತಾವು ಇತರೆ ಎಂದು ಬರೆಯಬಹುದು. ಇದರ ಬದಲಿಗೆ ವಿಶ್ವಮಾನವ ಧರ್ಮ ಎಂದು ಬರೆಸಬೇಕು’ ಎಂದು ಕೋರಿದ್ದಾರೆ.

ಚಿತ್ರಾವಳಿ



ಅರಸು ಅಹಿಂದ ವಕೀಲರ ವೇದಿಕೆ ನೇತೃತ್ವದಲ್ಲಿ ವಕೀಲರು ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ಬೆಂಬಲಿಸಿ ನಗರದಲ್ಲಿ ಸೋಮವಾರ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು. ವೇದಿಕೆ ಸಂಚಾಲಕ ಕೆ.ಆರ್. ಸುಭಾಷ್, ವಕೀಲರಾದ ಗೋಪಾಲ್, ಗಣಪತಿ ನಾಯ್ಕ್, ಶೋಭಾ, ಮಹೇಶ್, ಚಂದ್ರು, ಬಾಲನ್, ಹನುಮೇಶ್ ಗುಂಡೂರ್, ಅಂದಲಿ, ಶ್ರೀನಿವಾಸ್, ನಾಗಪ್ಪ ಕುರಿ, ಲಕ್ಷ್ಮೀನಾರಾಯಣ, ಮಂಜುನಾಥ್ ಪಾಲ್ಗೊಂಡಿದ್ದರು



ನಗರದ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಅಂತರರಾಷ್ಟ್ರೀಯ ತಾಂತ್ರಿಕ ವಿಚಾರ ಸಂಕಿರಣದಲ್ಲಿ ಆಲ್ಫಾ ಡಿಸೈನ್ ಟೆಕ್ನಾಲಜೀಸ್‌ನ ಅಧ್ಯಕ್ಷ ಕರ್ನಲ್(ನಿ) ಎಚ್.ಎಸ್.ಶಂಕರ್, ಝುಸ್ಕೇಲರ್ ಎಂಜಿನಿಯರಿಂಗ್ ಮತ್ತು ಸೈಟ್ ಉಪಾಧ್ಯಕ್ಷ ವಿಶಾಲ್ ಗೌತಮ್, ಬಯೋಎಂಜೈಮ್ ಎಂಟರ್‌ಪ್ರೆನ್ಯೂರರ್ಸ್ ಅಕಾಡೆಮಿ ಆಫ್ ಇಂಡಿಯಾದ ಅಧ್ಯಕ್ಷೆ ಪ್ರೀತಿ ರಾವ್, ಬಿಎಂಎಸ್‌ಇಟಿಯ ಟ್ರಸ್ಟಿ ಅವಿರಾಮ್ ಶರ್ಮಾ ಪಾಲ್ಗೊಂಡಿದ್ದರು

ನಿಧನ ವಾರ್ತೆ

ಶಾಸಕ ಸುರೇಶ್ ಕುಮಾರ್‌ಗೆ ಮಾತೃ ವಿಯೋಗ

ಬೆಂಗಳೂರು: ಬಸವೇಶ್ವರ ನಗರದ ನಿವಾಸಿ, ನಿವೃತ್ತ ಮುಖ್ಯಶಿಕ್ಷಕಿ ಪಿ.ಸುಶೀಲಮ್ಮ (96) ಅವರು ಮಂಗಳವಾರ ನಿಧನರಾದರು.



ಸುಶೀಲಮ್ಮ

ಅವರಿಗೆ ಪುತ್ರರಾದ, ಶಾಸಕ ಎಸ್.ಸುರೇಶ್ ಕುಮಾರ್ ಹಾಗೂ ಸೊಸೆ, ಪತ್ರಕರ್ತೆ ಕೆ.ಎಚ್.ಸಾವಿತ್ರಿ ಇದ್ದಾರೆ.

ದಾವಣಗೆರೆ ಜಿಲ್ಲೆಯ ಹರಿಹರದವರಾದ ಸುಶೀಲಮ್ಮ ಅವರು ನಗರದಲ್ಲಿ 35 ವರ್ಷ ಶಿಕ್ಷಕಿಯಾಗಿದ್ದರು. ಶ್ರೀರಾಂಪುರ ಸರ್ಕಾರಿ ಶಾಲೆಯಲ್ಲಿಯೇ ಬಹುಕಾಲ ಕೆಲಸ ಮಾಡಿದ್ದರು. ಗೊರಗುಂಟೆಪಾಳ್ಯ ಸರ್ಕಾರಿ ಶಾಲೆ ಮುಖ್ಯಶಿಕ್ಷಕಿಯಾಗಿ ನಿವೃತ್ತರಾಗಿದ್ದರು.

‘ಶಿಕ್ಷಣ ಬಯಸಿ ಬಂದ ಮಕ್ಕಳಿಗೆ ಸುಶೀಲಮ್ಮ ಪ್ರೀತಿಯ ಟೀಚರ್ ಆಗಿದ್ದರು. ಹಲವಾರು ಮಕ್ಕಳಿಗೆ ಮನೆಯಲ್ಲಿಯೇ ಊಟ ಹಾಕಿ, ಶಿಕ್ಷಣ ಮುಂದುವರಿಸಲು ಆರ್ಥಿಕ ನೆರವನ್ನು ನೀಡಿದ್ದರು’ ಎಂದು ವಿದ್ಯಾರ್ಥಿಗಳು ಸ್ಮರಿಸಿದ್ದಾರೆ.

ಸುಶೀಲಮ್ಮ ಅವರ ಬಯಕೆಯಂತೆ ನಾರಾಯಣ ನೇತ್ರಾಲಯಕ್ಕೆ ಕಣ್ಣುಗಳನ್ನು ಹಾಗೂ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ದೇಹವನ್ನು ದಾನ ಮಾಡಲಾಯಿತು.

ಚಟಕೆ ಸುದ್ದಿ

ಮನೆ ಪತ್ತೆ ಮಾಡುವುದೇ ಸವಾಲು

ದಾವಣಗೆರೆ: ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಳೆ 'ವಿಶಿಷ್ಟ ಮನೆ ಸಂಖ್ಯೆ' (ಯುಎಚ್ಐಡಿ) ಆಧರಿಸಿ ಪತ್ತೆಯೇ ಸವಾಲಾಗಿದೆ. 'ಜಿಯೊ ಟ್ಯಾಗಿಂಗ್' ಆದ ವಿದ್ಯುತ್ ಮೀಟರ್‌ನ ಆರ್.ಆರ್. ಸಂಖ್ಯೆ, ಮನೆಗಳ ನಡುವೆ ಸಾಮ್ಯತೆ ಕಾಣದೇ ಸಮೀಕ್ಷಕರು ಪರದಾಡುತ್ತಿದ್ದಾರೆ.

ಸಮೀಕ್ಷೆಗೂ ಮುನ್ನ 'ವಿಶಿಷ್ಟ ಮನೆ ಸಂಖ್ಯೆ' (ಯುಎಚ್ಐಡಿ) ಸೃಜಿಸಿ ಚೀಟಿ ಅಂಟಿಸುವ ಕಾರ್ಯ ಪೂರ್ಣಗೊಳಿಸಲಾಗಿತ್ತು. ಇದನ್ನು ಆಧರಿಸಿ ಸಮೀಕ್ಷಕರಿಗೆ 150 ಮನೆಗಳ ಬ್ಲಾಕ್ ರೂಪಿಸಲಾಗಿತ್ತು. ಸಮೀಕ್ಷಕರಿಗೆ ಮನೆಗಳಿರುವ ಸ್ಥಳಗಳು ಬೇರೆಡೆ ತೋರಿಸಿವೆ.

'ಯುಎಚ್ಐಡಿ ಪತ್ತೆಗೆ ಪ್ರತ್ಯೇಕ ಆ್ಯಪ್ ಬಳಸಲಾಗುತ್ತಿದೆ. ನಿಗದಿತ ಬ್ಲಾಕ್‌ಗೆ ತೆರಳಿ ಯುಎಚ್ಐಡಿ ನೀಡಿದರೆ ಅದರ ಸ್ಥಳ ಮತ್ತೊಂದು ಬಡಾವಣೆ ಅಥವಾ ಹಳ್ಳಿಯಲ್ಲಿ ತೋರಿಸುತ್ತಿದೆ' ಎಂದು ಸಮೀಕ್ಷಕರೊಬ್ಬರು 'ಪ್ರಜಾವಾಣಿ'ಗೆ ಸಮಸ್ಯೆ ವಿವರಿಸಿದರು.

ತಾಂತ್ರಿಕ ತೊಂದರೆ; ಸಮೀಕ್ಷೆಗೆ ಹಿನ್ನಡೆ

ಕಲಬುರಗಿ: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಎರಡನೇ ದಿನವಾದ ಮಂಗಳವಾರವೂ ಸಮಸ್ಯೆಗಳು ಕಾಡಿದವು. ಇದರಿಂದ ಅಲ್ಲಲ್ಲಿ ಸಮೀಕ್ಷೆ ಮಂದಗತಿ ನಡೆದರೂ, ಪೂರ್ಣ ಪ್ರಮಾಣದಲ್ಲಿ ನಡೆಯಲಿಲ್ಲ.

ಸೋಮವಾರ ನೀಡಿದ್ದ ಸಮೀಕ್ಷಾ ಆ್ಯಪ್ ಅನ್ನು ಮಂಗಳವಾರ ಬೆಳಿಗ್ಗೆ ಪರಿಷ್ಕರಿಸಿ (ಅಪ್‌ಡೇಟ್ ವರ್ಷನ್) ನೀಡಿದ್ದರೂ ಹಲವೆಡೆ ಸಮೀಕ್ಷೆಯೇ ಸಾಧ್ಯವಾಗಿಲ್ಲ.

ಕಲಬುರಗಿ, ಬೀದರ್‌ನಲ್ಲಿ ಕೆಲ ಸಿಬ್ಬಂದಿಗೆ ಒಂದು ಮನೆ ಸಮೀಕ್ಷೆಯೂ ಸಾಧ್ಯವಾಗಿಲ್ಲ. ಯಾದಗಿರಿ ಜಿಲ್ಲೆಯಲ್ಲಿ ಆ್ಯಪ್ ಸಮಸ್ಯೆ ಕಾಡಿತು. ಯಾದಗಿರಿ ತಾಲ್ಲೂಕಿನಲ್ಲಿ ಮಧ್ಯಾಹ್ನದ ಬಳಿಕ ಸಮೀಕ್ಷೆ ಕಿಟ್ ನೀಡಲಾಯಿತು.

ಕೊಪ್ಪಳ ಗ್ರಾಮೀಣ ಪ್ರದೇಶದಲ್ಲಿ ಅನೇಕ ಶಿಕ್ಷಕರಿಗೆ ಎರಡನೇ ದಿನವೂ ಪರಿಕರಗಳೇ ತಲುಪಿರಲಿಲ್ಲ. ಹೆಚ್ಚಿನ ಕಡೆ ಎರಡನೇ ದಿನವೂ ಗಣತಿ ಮಂದಗತಿಯಲ್ಲಿ ಸಾಗಿತು.

ಸಿನಿಮಾ ಟಿಕೆಟ್‌ಗೆ ಮಿತಿ: ಹೈಕೋರ್ಟ್ ಮಧ್ಯಂತರ ತಡೆ

ಬೆಂಗಳೂರು: 'ಮಲ್ಟಿಪ್ಲೆಕ್ಸ್ ಸೇರಿದಂತೆ ರಾಜ್ಯದ ಎಲ್ಲ ಚಿತ್ರಮಂದಿರಗಳಲ್ಲಿ ಗರಿಷ್ಠ ₹200 ಮೊತ್ತದ ಏಕರೂಪ ದರ ನಿಗದಿಪಡಿಸಲು ರಾಜ್ಯ ಸರ್ಕಾರ ಜಾರಿಗೆ ತಂದಿರುವ ನಿಯಮಗಳಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತಾದ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಮಧ್ಯಂತರ ಆದೇಶವನ್ನು ನ್ಯಾಯಮೂರ್ತಿ ರವಿ ವಿ.ಹೊಸಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಪ್ರಕಟಿಸಿದೆ.

ಟಿಕೆಟ್ ದರ ನಿಗದಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಜಾರಿಗೆ ತಂದಿರುವ 'ಕರ್ನಾಟಕ ಸಿನಿಮಾ, ನಿಯಂತ್ರಣ ಮತ್ತು ತಿದ್ದುಪಡಿ ನಿಯಮಗಳು-2025' ಅನ್ನು ಪ್ರಶ್ನಿಸಿ, ಚಿತ್ರ ನಿರ್ಮಾಣ ಸಂಸ್ಥೆಯಾದ ಹೊಂಬಾಳೆ ಫಿಲ್ಮ್ಸ್, ಮಲ್ಟಿಪ್ಲೆಕ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಪ್ರತಿನಿಧಿ ಶುಭಂ ಠಾಕೂರ್, ಪಿವಿಆರ್ ಐನಾಕ್ಸ್ ಲಿಮಿಟೆಡ್‌ನ ಷೇರುದಾರ ಶಂತನು ಪೈ, ಕೀಸ್ಟೋನ್ ಎಂಟರ್‌ಟೈನ್‌ಮೆಂಟ್ ಹಾಗೂ ವಿ.ಕೆ.ಫಿಲ್ಮ್ಸ್ ರಿಟ್ ಅರ್ಜಿಗಳನ್ನು ಸಲ್ಲಿಸಿವೆ.

ಗೋಮಾಂಸ ಸಾಗಣೆ ಲಾರಿಗೆ ಬೆಂಕಿ

ಬೆಳಗಾವಿ/ಕಾಗವಾಡ: ಕಾಗವಾಡ ತಾಲ್ಲೂಕಿನ ಐನಾಪುರದಲ್ಲಿ ಸೋಮವಾರ ರಾತ್ರಿ 3 ಟನ್ ಗೋಮಾಂಸ ಸಾಗಿಸುತ್ತಿದ್ದ ಲಾರಿಗೆ ಸ್ಥಳೀಯರು ಬೆಂಕಿ ಹಚ್ಚಿದ ಘಟನೆ ಪಟ್ಟಣದಲ್ಲಿ ಕೋಮು ಉದ್ವಿಗ್ನತೆಗೆ ಕಾರಣವಾಯಿತು.

ಮಾಂಸ ಸಾಗಿಸುತ್ತಿದ್ದವರು ಮತ್ತು ವಾಹನಕ್ಕೆ ಬೆಂಕಿ ಹಚ್ಚಿದವರು ಸೇರಿ ಏಳು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಎರಡು ಪ್ರತ್ಯೇಕ ಪ್ರಕರಣ ದಾಖಲಾಗಿವೆ. ರಾಯಬಾಗ ತಾಲ್ಲೂಕಿನ ಕುಡಚಿ ಪಟ್ಟಣದಿಂದ ಹೈದರಾಬಾದ್‌ಗೆ ಐಸ್ ಸ್ಲ್ಯಾಬ್‌ಗಳಿಂದ ಮುಚ್ಚಿ ಮಾಂಸವನ್ನು ಸಾಗಿಸಲಾಗುತಿತ್ತು.

ಐನಾಪುರ ದಾಟುವಾಗ ಹಿಂದುತ್ವ ಪರ ಸಂಘಟನೆಯ ಕಾರ್ಯಕರ್ತರು ತಡೆದು, ಲಾರಿಗೆ ಬೆಂಕಿ ಹಚ್ಚಿದರು. ಪೊಲೀಸರು ಬರುವಷ್ಟರಲ್ಲಿ ವಾಹನ ಸುಟ್ಟು ಕರಕಲಾಗಿತ್ತು. ಜತೆಗೆ, ಹಲ್ಲೆ ಮಾಡಿದ್ದರಿಂದ ಚಾಲಕ ಮತ್ತು ಕ್ಲೀನರ್‌ಗೆ ಗಾಯಗಳಾಗಿವೆ.

'ಮಾಂಸ ಸಾಗಿಸುತ್ತಿದ್ದ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಅಷ್ಟಾದ ವಿಕಾಸ ವಾರೆ, ಸುಧೀರ ಗಸ್ತಿ, ಕುಡಚಿಯ ಸಾಹೇಬಲಾಲ್ ಮುತವಾಲೆ ಅವರನ್ನು ಬಂಧಿಸಿದ್ದೇವೆ. ಕಲಬುರಗಿಯಲ್ಲಿ ಒಬ್ಬನನ್ನು ವಶಕ್ಕೆ ಪಡೆದಿದ್ದೇವೆ' ಎಂದು ಜಿಲ್ಲಾ ಎಸ್‌ಪಿ ಭೀಮಾಶಂಕರ ಗುಳೇದ ತಿಳಿಸಿದರು.

'ಲಾರಿಗೆ ಬೆಂಕಿ ಹಚ್ಚಿದ ವಿಡಿಯೊದಲ್ಲಿ ಕಂಡುಬಂದ ಐನಾಪುರದ ಆವೇಶ ಜಿರಗಾಳೆ, ಸುಹಾಸ ಲೋಂಡೆ, ಅನಿಲ ಸಾವಳೆ, ಸದಾಶಿವ ಕುರಂದವಾಡೆ ಎಂಬುವರನ್ನು ಬಂಧಿಸಲಾಗಿದೆ.

ಕ್ರಿಶ್ಚಿಯನ್ ಪದ ತೆಗೆಯಲು ಆಗ್ರಹ

ಬಿಜೆಪಿಯಿಂದ ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಜಾತಿ ಪಟ್ಟಿಯಲ್ಲಿ ಪರಿಶಿಷ್ಟ ಜಾತಿಗಳ ಅಡಿ ಬರುವ 14 ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಅಡಿ ಬರುವ 1 ಜಾತಿಯ ಜತೆ 'ಕ್ರಿಶ್ಚಿಯನ್' ಪದ ಸೇರಿಸಿರುವುದನ್ನು ಕೈಬಿಡಬೇಕು ಎಂದು ಬಿಜೆಪಿ ನಿಯೋಗ ಒತ್ತಾಯಿಸಿದೆ.

ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್ ಕುಮಾರ್ ಮತ್ತು ಇತರರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ನಾಯ್ಕ್ ಅವರನ್ನು ಭೇಟಿ ಮಾಡಿ ಮನವಿಪತ್ರ ಸಲ್ಲಿಸಿದರು.

'ಜಾತಿಪಟ್ಟಿಯಲ್ಲಿ 48 ಹಿಂದೂ ಜಾತಿಗಳ ಮುಂದೆ ಕ್ರಿಶ್ಚಿಯನ್ ಪದ ಇತ್ತು. ಈ ಪಟ್ಟಿಯಲ್ಲಿ 14 ಪರಿಶಿಷ್ಟ ಜಾತಿಗಳು ಮತ್ತು 1 ಪರಿಶಿಷ್ಟ ಪಂಗಡದ (ವಾಲ್ಮೀಕಿ) ಜಾತಿಗಳೂ ಇದ್ದವು. ಇದಕ್ಕೆ ತೀವ್ರ ಪ್ರತಿಭಟನೆ ವ್ಯಕ್ತವಾದ ಸಂದರ್ಭದಲ್ಲಿ ಆಯೋಗಕ್ಕೆ ಆಕ್ಷೇಪಣೆ ಸಲ್ಲಿಸಲಾಗಿತ್ತು. ಇದೇ 21ರಂದು ಆಯೋಗದ ಅಧ್ಯಕ್ಷರು ಸುದ್ದಿಗೋಷ್ಠಿಯಲ್ಲಿ 33 ಹಿಂದೂ ಜಾತಿಗಳನ್ನು ಕ್ರೈಸ್ತ ಪಟ್ಟಿಯಿಂದ ಸಮೀಕ್ಷೆಗೆ ಬಳಸುವ ಆ್ಯಪ್‌ನಲ್ಲಿ ಕಾಣದಂತೆ ಮಾಡಿರುವುದಾಗಿ ಹೇಳಿದ್ದರು. ಆದರೆ, ಅಧಿಕೃತವಾಗಿ ತೆಗೆಯದೇ ಉಳಿದಿರುವ ಜಾತಿಗಳೆಲ್ಲವೂ ಪರಿಶಿಷ್ಟ ಜಾತಿಗಳೇ ಆಗಿರುವುದು ಆತಂಕದ ಬೆಳವಣಿಗೆ' ಎಂದು ನಿಯೋಗ ತಿಳಿಸಿದೆ.

ಆದಿ ಆಂಧ್ರ, ಆದಿ ಕರ್ನಾಟಕ, ಆದಿ ದ್ರಾವಿಡ, ಬಂಜಾರ, ಬುಡುಗ ಜಂಗಮ, ಹೊಲೆಯ, ಲಮಾಣಿ, ಲಂಬಾಣಿ, ಮಾದಿಗ, ಮಹಾರ್, ಮಾಲಾ, ಪರಯ, ವಡ್ಡ, ವಾಲ್ಮೀಕಿ ಈ ಜಾತಿಗಳ ಜತೆಗಿನ ಕ್ರಿಶ್ಚಿಯನ್ ಪದಗಳನ್ನು ತೆಗೆದಿಲ್ಲ. ಸಮೀಕ್ಷೆ ಆ್ಯಪ್‌ನಲ್ಲಿ ಅವುಗಳ ಕಾಣದಂತೆ ಮಾಡುವ ಕುರಿತು ತಕ್ಷಣವೇ ಪ್ರಕಟಣೆ ಹೊರಡಿಸಬೇಕು ಎಂದು ಆಗ್ರಹಿಸಿದೆ.

> 'ಈಗ ಮಾಡುತ್ತಿರುವುದು ಜಾತಿ ಗಣತಿಯಲ್ಲ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ. ಎಲ್ಲಿಯೂ ಸಮಸ್ಯೆ ಉಂಟಾಗಿಲ್ಲ. ಬಿಜೆಪಿ ಗೊಂದಲ ಸೃಷ್ಟಿಸುತ್ತಿದೆ
> **ಮಧು ಬಂಗಾರಪ್ಪ** ಸಚಿವ

ಆ್ಯಪ್‌ನಲ್ಲೂ ಸೇರಿಸಿಲ್ಲ: ಸ್ಪಷ್ಟನೆ

'ಸಲಹೆ ಮತ್ತು ಚರ್ಚೆಯ ನಂತರ ಹಲವು ಜಾತಿಗಳ ಹೆಸರುಗಳನ್ನು ಅಂತಿಮಪಟ್ಟಿಯಲ್ಲಿ ಕೈಬಿಡಲಾಗಿದೆ. ಆ್ಯಪ್‌ನಲ್ಲೂ ಸೇರಿಸಿಲ್ಲ' ಎಂದು ಹಿಂದುಳಿದ ವರ್ಗಗಳ ಆಯೋಗ ಹೇಳಿದೆ.

ಬಿಜೆಪಿ ನಿಯೋಗದ ಭೇಟಿಯ ಬಳಿಕ ಆಯೋಗದ ಸದಸ್ಯ ಕಾರ್ಯದರ್ಶಿ, ಈ ಕುರಿತು ಸ್ಪಷ್ಟನೆ ನೀಡಿದ್ದಾರೆ. ಸಮೀಕ್ಷಾ ಕೈಪಿಡಿ–2025ರ ಪುಟ ಸಂಖ್ಯೆ 57ರಿಂದ 89ರವರೆಗಿನ 1,561 ಜಾತಿಗಳ ಪಟ್ಟಿಯಲ್ಲಿ ಹಾಗೂ ಇಡಿಸಿಎಸ್ ಸಂಸ್ಥೆಯು ಸಿದ್ಧಪಡಿಸಿರುವ ಸಮೀಕ್ಷಾ ಆ್ಯಪ್‌ನಲ್ಲಿ ಅಳವಡಿಸಿರುವ ಜಾತಿ ಪಟ್ಟಿಯ ಡ್ರಾಪ್ ಡೌನ್‌ನಲ್ಲಿಯೂ 'ಕ್ರಿಶ್ಚಿಯನ್' ಪದ ಸೇರಿದ್ದ ಆದಿ ಆಂಧ್ರ, ಆದಿ ಕರ್ನಾಟಕ, ಆದಿ ದ್ರಾವಿಡ, ಬಂಜಾರ, ಬುಡುಗ ಜಂಗಮ, ಹೊಲೆಯ, ಲಮಾಣಿ, ಲಂಬಾಣಿ, ಮಾದಿಗ, ಮಹಾರ್, ಮಾಲಾ, ಪರಯ, ವಡ್ಡ, ವಾಲ್ಮೀಕಿ ಜಾತಿಗಳನ್ನು ಕೈಬಿಡಲಾಗಿದೆ ಎಂಬ ಅಂಶ ಖಚಿತಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.



ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ನಾಯ್ಕ್ ಅವರನ್ನು ಭೇಟಿ ಮಾಡಿದ ಛಲವಾದಿ ನಾರಾಯಣಸ್ವಾಮಿ, ವಿ.ಸುನಿಲ್‌ಕುಮಾರ್, ಎ. ನಾರಾಯಣಸ್ವಾಮಿ, ಎನ್‌.ರವಿಕುಮಾರ್, ಎನ್‌.ಮಹೇಶ ಮನವಿ ಸಲ್ಲಿಸಿದರು

'3ಗಳ ಸಮೂಹದಡಿ 45 ಉಪ ಜಾತಿ ಪರಿಗಣಿಸಿ'

ಪ್ರಜಾವಾಣಿ ವಾರ್ತೆ




ಪಿ.ಆರ್. ರಮೇಶ್

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ 'ತಿಗಳ ಸಮೂಹ'ದ ಅಡಿಯಲ್ಲಿ ಒಟ್ಟು 45 ಉಪ ಜಾತಿಗಳನ್ನ ಪರಿಗಣಿಸಬೇಕು' ಎಂದು ಆ ಸಮುದಾಯದ ಮುಖಂಡರೂ ಆಗಿರುವ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಪಿ.ಆರ್.ರಮೇಶ್ ಆಗ್ರಹಿಸಿದ್ದಾರೆ. ಹಿಂದುಳಿದ ವರ್ಗಗಳ ಆಯೋಗಕ್ಕೆ ಈ ಬಗ್ಗೆ ಅವರು ಮನವಿ ಸಲ್ಲಿಸಿದ್ದಾರೆ.

'ಮೈಸೂರು ಸರ್ಕಾರದ 1901ರ ಜಾತಿ ಜನಗಣತಿಯಂತೆ ತಿಗಳ ಅಡಿಯಲ್ಲಿ ಅಗ್ನಿ, ಅಗ್ರವಣ್ಣಿಯಾರ್, ಅರವ, ಬ್ರಹ್ಮರಿಷಿ, ಧರ್ಮರಾಜು ಕಾಪು, ಯನ್ನೇರಿ, ಗೌಡ, ಗುಡನೋರು, ಹಳೇ ತಿಗಳ, ಹಳ್ಳಿ, ಕಂದಪಳ್ಳಿ, ಕನ್ನಡ, ಮಲಮರ್ಚತ್ರಿ, ಪಳ್ಳಿ, ಪಾಂಡ್ಯ, ರಾಜ, ರೆಡ್ಡಿ, ಸಾಂಬ, ತಿಗಳ, ತೋಟ, ಉಳ್ಳಿ, ವಣ್ಣೆ, ವಣ್ಣಿಕುಲ, ಯಾನಾದಿ ಹೀಗೆ ಒಟ್ಟು 24 ಉಪ ಜಾತಿಗಳನ್ನು ಗುರುತಿಸಲಾಗಿದೆ. 2002ರ ಕರ್ನಾಟಕ ಸರ್ಕಾರದ ಅಧಿಸೂಚನೆಯಲ್ಲಿ ತಿಗಲ, ಅಗ್ನಿವಂಶ, ಅಗ್ನಿವನ್ನಿ, ಅಗ್ನಿಕುಲ ಕ್ಷತ್ರಿಯ, ಧರ್ಮರಾಜ ಕಾಪು, ಪಳ್ಳಿ, ಶಂಭುಕುಲ ಕ್ಷತ್ರಿಯ, ತಿಗಳ, ವನ್ನಿಯಾರ್, ವನ್ನಿಕುಲ ಕ್ಷತ್ರಿಯ, ತಿಗ್ಲರ್, ಕುರೋವನ್ ಹೀಗೆ 12 ಉಪ ಜಾತಿಗಳನ್ನು ನಮೂದಿಸಲಾಗಿದೆ' ಎಂದು ಅವರು ವಿವರಿಸಿದ್ದಾರೆ.

'ವಿರೋಧಿಸುವವರ ಹೆಸರು ಬಹಿರಂಗಪಡಿಸಿ'



ಹರಿಪ್ರಸಾದ್

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಯಾರು ವಿರೋಧಿಸುತ್ತಿದ್ದಾರೊ ಅವರ ಹೆಸರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಹಿರಂಗಪಡಿಸಬೇಕು' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, '75 ವರ್ಷಗಳಿಂದ ಕೆಲವರು ಮಾತ್ರ ತುಪ್ಪ-ಬೆಣ್ಣೆ ತಿಂದಿದ್ದಾರೆ. ಈಗ ತಮ್ಮ ಪಾಲು ಎಲ್ಲಿ ತಪ್ಪಿ ಹೋಗುವುದೋ ಎಂಬ ಭಯದಿಂದ ಕೆಲವರು ಇದನ್ನು ವಿರೋಧಿಸುತ್ತಿದ್ದಾರೆ' ಎಂದರು.

'ಜಾತಿಯ ಹೆಸರಿನಲ್ಲಿ ಸಾಮ್ರಾಜ್ಯ ಕಟ್ಟಿಕೊಂಡವರಿಗೆ ಈಗ ತೊಂದರೆಯಾಗುತ್ತದೆ ಎಂದು ರಾಜಕೀಯ ಮಾಡುತ್ತಿದ್ದಾರೆ. ನಮ್ಮ ಪಕ್ಷದ ಪ್ರಣಾಳಿಕೆಯಲ್ಲೇ ಈ ಸಮೀಕ್ಷೆ ಬಗ್ಗೆ ಘೋಷಿಸಿದ್ದೆವು. ಆಗ ವಿರೋಧಿಸಿದವರು ಈಗೇಕೆ ವಿರೋಧಿಸುತ್ತಿದ್ದಾರೆ' ಎಂದು ಪ್ರಶ್ನಿಸಿದರು. 'ನಮ್ಮ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವವಿದೆ, ಯಾರು ಬೇಕಾದರೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು. ನಾವು ನಾಗಪುರದವರಲ್ಲ' ಎಂದು ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ಪರೋಕ್ಷವಾಗಿ ಟೀಕಿಸಿದರು.


ಪ್ರಧಾನಿಯಿಂದ ಬೊಗಳೆ: 'ಪ್ರಧಾನಿ ಮೋದಿಯವರು ಜಿಎಸ್‌ಟಿ ಬಗ್ಗೆ ಬೊಗಳೆ ಬಿಡುತ್ತಿದ್ದಾರೆ ಎಂದರು.

ಸುದ್ದಿ 2 ನಿಮಿಷ

'ಬಿಜೆಪಿಯಿಂದ ಗೊಂದಲ ಸೃಷ್ಟಿ'

ಮಡಿಕೇರಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಿಂದೂ ವಿರೋಧಿ ಎಂದು ತೋರಿಸಲೆಂದೇ ಬಿಜೆಪಿಯು, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ಕುರಿತು ಗೊಂದಲ ಸೃಷ್ಟಿಸಿದೆ' ಎಂದು ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ಆರೋಪಿಸಿದರು.

'ಬ್ರಾಹ್ಮಣ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್, ಗೌಡ ಕ್ರಿಶ್ಚಿಯನ್ ಎಂಬುದನ್ನು ನಾವು ಸಮೀಕ್ಷೆಯಲ್ಲಿ ರಿಸಿದ್ದಲ್ಲ. ಇದಕ್ಕೂ ಸಿದ್ದರಾಮಯ್ಯ ಅವರಿಗೂ ಸಂಬಂಧವಿಲ್ಲ. ಹಿಂದಿನ ಸಮೀಕ್ಷೆಯ ವೇಳೆ ಸುಮಾರು 1 ಲಕ್ಷ ಮಂದಿ ಈ ರೀತಿ ಹೇಳಿಕೊಂಡಿದ್ದರು. ಆ ವರದಿಯನ್ನು ಆರ್.ಅಶೋಕ್ ಸಚಿವರಾಗಿದ್ದಾಗ ಒಪ್ಪಿಕೊಂಡಿದ್ದರು' ಎಂದು ಅವರು ಕೊಡಗು ಜಿಲ್ಲೆಯ ಪೊನ್ನಂಪೇಟೆಯಲ್ಲಿ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.



'ಸಮೀಕ್ಷೆ ವಿರೋಧಿಸುತ್ತಿರುವ ವಿಜಯೇಂದ್ರ ಅವರಿಗೆ ಎಷ್ಟು ಜ್ಞಾನವಿದೆಯೋ ಗೊತ್ತಿಲ್ಲ. ಮಾಹಿತಿ ಕೊರತೆ ಇರಬಹುದು. ಹಿಂದೆ ಕಾಂತರಾಜ ಆಯೋಗದ ಸಮೀಕ್ಷಾ ವರದಿಯನ್ನು ಇವರ ಸರ್ಕಾರವೇ ಒಪ್ಪಿಕೊಂಡು, ಜಯಪ್ರಕಾಶ್ ಹೆಗ್ಡೆ ಅವರನ್ನು ನೇಮಿಸಿ, ಆ ವರದಿಯ ಆಧಾರದಲ್ಲಿ ಕ್ರಮ ಕೈಗೊಳ್ಳಲಿಲ್ಲವೇ' ಎಂದು ಪ್ರಶ್ನಿಸಿದರು.

'ಜಾತಿ ಕಾಲಂನಲ್ಲಿ ಸವಿತಾ ಎಂದು ಸಮೂದಿಸಿ'

ಬೆಂಗಳೂರು: 'ಸಾಮಾಜಿಕ –ಶೈಕ್ಷಣಿಕ ಸಮೀಕ್ಷೆಯಲ್ಲಿ ಸವಿತಾ ಸಮಾಜದವರು ಜಾತಿ ಕಾಲಂನಲ್ಲಿ 'ಸವಿತಾ' ಎಂದೇ ನಮೂದಿಸಬೇಕು' ಎಂದು ಕೊಂಚೂರು ಸವಿತಾ ಪೀಠದ ಸವಿತಾನಂದನಾಥ ಸ್ವಾಮೀಜಿ ಹೇಳಿದರು.

ಕರ್ನಾಟಕ ರಾಜ್ಯ ಸವಿತಾ ಸಮಾಜ ನೌಕರರ ಸಂಘ ಮಂಗಳವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸವಿತಾ ಸಮಾಜದವರ ನಿಖರ ಸಂಖ್ಯೆ ತಿಳಿಯಲು ಧರ್ಮದ ಕಾಲಂನಲ್ಲಿ ಹಿಂದೂ ಎಂದು, ಜಾತಿಯ ಕಾಲಂನಲ್ಲಿ ಸವಿತಾ ಎಂದು ನಮೂದಿಸಬೇಕು. ಉಪಜಾತಿಗಳನ್ನು ಜಾತಿ ಕಾಲಂನಲ್ಲಿ ನಮೂದಿಸಿದರೆ, ಸಮಾಜದ ಜನಸಂಖ್ಯೆ ಕಡಿಮೆ ಆಗಲಿದೆ. ಸಮೀಕ್ಷೆ ವೇಳೆ ಉಪಜಾತಿ ಕಾಲಂನಲ್ಲಿ ಮೂಲ ಜಾತಿಯ ಹೆಸರನ್ನು ನಮೂದಿಸಬಹುದು' ಎಂದರು.

'ನಯನಜ ಕ್ಷತ್ರಿಯ, ಭಂಡಾರಿ, ಭಜಂತ್ರಿ, ನಾವಿ, ಹಡಪದ, ಕ್ಷೌರಿಕ, ನಾಪಿತ, ಮಹಲೆ, ಮೇಲಗಾರ, ನಾವಿ ಸೇರಿದಂತೆ ಸಮಾಜದಲ್ಲಿ 27 ಉಪಜಾತಿಗಳಿವೆ. ಎಲ್ಲರೂ ಜಾತಿಯನ್ನು ಸವಿತಾ ಎಂದೇ ನಮೂದಿಸಬೇಕು ಎಂದರು.

ಕರ್ನಾಟಕ ರಾಜ್ಯ ಸವಿತಾ ಸಮಾಜ ನೌಕರರ ಸಂಘದ ರಾಜ್ಯಾಧ್ಯಕ್ಷ ರಾಜಣ್ಣ ಕೆ.ವಿ. ಉಪಸ್ಥಿತರಿದ್ದರು.

ಜಾತಿಗಣತಿ, ಸಮೀಕ್ಷೆಗೂ ವ್ಯತ್ಯಾಸವೇನು?



ಬೆಂಗಳೂರು: ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯನ್ನು ಪ್ರಶ್ನಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಯಲ್ಲಿ ಮಂಗಳವಾರ ಅರ್ಜಿದಾರರ ಪರ ವಕೀಲರು ಮತ್ತು ಸರ್ಕಾರದ ಪರ ವಕೀಲರು ತಮ್ಮ ವಾದವನ್ನು ಮಂಡಿಸಿದರು. ವಾದದ ತಿರುಳೇನು?

> ಸಮೀಕ್ಷೆ ನಡೆಸಲು ಸರ್ಕಾರ ಅತಿಯಾದ ಅತುರದಿಂದ ವರ್ತಿಸುತ್ತಿದೆ. ಕೆಲವು ವಿಚಾರಗಳು ನಿರ್ಧಾರವಾಗುವತನಕ ಸರ್ಕಾರ ಮತ್ತು ಆಯೋಗಕ್ಕೆ ಸಮೀಕ್ಷೆ ಮುಂದುವರಿಸುವಂತೆ ನಿರ್ದೇಶಿಸುವುದು ಅಗತ್ಯ
> **ಎಸ್.ಶ್ರೀರಂಗ**

> ಸಂಗ್ರಹಿಸಿದ ದತ್ತಾಂಶಗಳನ್ನು ರಾಜಕೀಯ ಲಾಭಕ್ಕಾಗಿ ಪರಿವರ್ತಿಸಿಕೊಳ್ಳುವ ಉದ್ದೇಶ ಸಮೀಕ್ಷೆಯ ಹಿಂದೆ ಅಡಗಿದೆ. ಸಮೀಕ್ಷೆಯ ಕಸರತ್ತು ರಾಜಕೀಯ ಗುರಾಣಿಯಾಗುವುದರಲ್ಲಿ ಸಂಶಯವಿಲ್ಲ
> **ವಿವೇಕ್ ಸುಬ್ಬಾರೆಡ್ಡಿ**

> ಸಮೀಕ್ಷೆಯಡಿ ಪ್ರತಿಯೊಬ್ಬ ನಾಗರಿಕರಿಂದ ಸಮಗ್ರ ವಿವರ ಕಲೆ ಹಾಕಲಾಗುತ್ತಿದೆ ಮತ್ತು ಜಾತಿಯನ್ನೂ ನಿರ್ಧರಿಸಲಾಗುತ್ತಿದೆ ಎಂಬುದು ಅರ್ಜಿದಾರರ ವಾದ. ಹೀಗಿರುವಾಗ ಜಾತಿ ಗಣತಿಗೂ ಸಮೀಕ್ಷೆಗೂ ಇರುವ ವ್ಯತ್ಯಾಸವೇನು..?
> **ನ್ಯಾ.ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ**

ಪ್ರತಿವಾದಿಗಳ ತಕರಾರು ಏನು?

ಮನಸ್ಸಿಗೆ ತೋಚಿದಂತೆ ಜಾತಿಗಳನ್ನು ಗುರುತಿಸಲಾಗಿದೆ. ಜಾತಿ ಗುರುತಿಸುವುದಕ್ಕೆ ಪೂರಕವಾಗಿ ಯಾವುದೇ ಪೂರ್ವಭಾವಿ ಅಧ್ಯಯನ ನಡೆಸಲಾಗಿಲ್ಲ. ಇದರಿಂದ ನಕಲಿ ಸಾಧ್ಯತೆಗಳು ಹೆಚ್ಚಾಗಲಿದ್ದು, ಜನರು ತಪ್ಪು ದತ್ತಾಂಶ ನೀಡುವ ಸಾಧ್ಯತೆ ಇದೆ. ಮಾಹಿತಿಯ ಖಾಸಗಿತನದ ಪ್ರಶ್ನೆಯೂ ಇದರಲ್ಲಿ ಅಡಕವಾಗಿದ್ದು, ಡಿಜಿಟಲ್ ರೂಪದಲ್ಲಿ ದಾಖಲಿಸಿದ ದತ್ತಾಂಶ ಸೋರಿಕೆಯಾಗುವುದನ್ನು ಅಲ್ಲಗಳೆಯಲಾಗದು.

2002ರ ಅಧಿಸೂಚನೆ ಪ್ರಕಾರ ರಾಜ್ಯದಲ್ಲಿ 207 ಜಾತಿಗಳನ್ನು ಗುರುತಿಸಲಾಗಿತ್ತು. 2015ರಲ್ಲಿ 1,351 ಜಾತಿಗಳನ್ನು ಗುರುತಿಸಲಾಯಿತು. 2025ರಲ್ಲಿ 1,561 ಜಾತಿಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಕೆಲವು ಜಾತಿಗಳನ್ನು ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ಛಿದ್ರಗೊಳಿಸಲಾಗಿದೆ.

ಅಶೋಕ ಹಾರನಹಳ್ಳಿ, ಅರ್ಜಿದಾರರ ಪರ ವಕೀಲ

ಸಮೀಕ್ಷೆಗಾಗಿ ಸರ್ಕಾರ ಮತ್ತು ಆಯೋಗ ನೀಡಿರುವ ಹ್ಯಾಂಡ್ ಬುಕ್‌ನಲ್ಲಿ ಆಧಾರ್ ಮತ್ತು ಮೊಬೈಲ್ ಸಂಖ್ಯೆ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ. ಸಂವಿಧಾನದ 342ನೇ ವಿಧಿಯಡಿ ನಿರ್ಬಂಧ ಇರುವುದರಿಂದ ಸಮೀಕ್ಷೆ ನಡೆಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ.

ಪ್ರಭುಲಿಂಗ ಕೆ.ನಾವದಗಿ, ಅರ್ಜಿದಾರರ ಪರ ವಕೀಲ

ಸರ್ಕಾರದ ಸಮರ್ಥನೆ ಏನು?

ಸರ್ಕಾರ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅಂಕಿ ಅಂಶಗಳ ದತ್ತಾಂಶ ಅಗತ್ಯ. ರಾಜ್ಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಅರ್ಜಿದಾರರು 'ಜಾತಿ ಗಣತಿ' ಎಂದು ತಪ್ಪಾಗಿ ಬಿಂಬಿಸುತ್ತಿದ್ದಾರೆ. ರಾಜ್ಯ ಸರ್ಕಾರ ಯಾವುದೇ ರೀತಿಯ ಜಾತಿ ಗಣತಿ ನಡೆಸುತ್ತಿಲ್ಲ. ಹಿಂದುಳಿದ ವರ್ಗಗಳ ಸ್ಥಿತಿಗತಿ ಅಧ್ಯಯನಕ್ಕಾಗಿ ಸಮೀಕ್ಷೆ ನಡೆಸಲು ಕಾನೂನಿನಲ್ಲಿ ಅವಕಾಶವಿದ್ದು, ಅದರ ಕಾನೂನು ಬದ್ಧತೆಯನ್ನು ಪ್ರಶ್ನಿಸಲು ಆಗದು. ಈ ಹಿಂದೆ ಹಾವನೂರು, ವೆಂಕಟರೆಡ್ಡಿ ಮತ್ತು ಚಿನ್ನಪ್ಪರೆಡ್ಡಿ ಆಯೋಗಗಳು ಇದೇ ರೀತಿಯ ಸಮೀಕ್ಷೆ ನಡೆಸಿವೆ. ಪ್ರತಿ 10 ವರ್ಷಗಳಿಗೆ ಒಮ್ಮೆ ಇಂತಹ ಸಮೀಕ್ಷೆ ನಡೆಸುವ ಅಧಿಕಾರ ರಾಜ್ಯ ಸರ್ಕಾರಕ್ಕಿದೆ. ಮಾಹಿತಿಯುಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ದತ್ತಾಂಶವನ್ನು ಸಂಗ್ರಹಿಸುವ ಜವಾಬ್ದಾರಿಯನ್ನು ಆಯೋಗ ಹೊಂದಿದೆ.

ಅಭಿಷೇಕ್ ಮನು ಸಿಂಘ್ವಿ, ರಾಜ್ಯ ಸರ್ಕಾರದ ಪರ ವಕೀಲ

ಸಮೀಕ್ಷೆ ವೇಳೆ ನಾಗರಿಕರನ್ನು ಗುರುತಿಸುವುದಕ್ಕಾಗಿ ಮಾತ್ರವೇ ಆಧಾರ್ ಕಾರ್ಡ್ ವಿವರ ಪಡೆಯಲಾಗುತ್ತದೆ. ಯಾವುದೇ ದತ್ತಾಂಶವನ್ನು ಸಂಗ್ರಹಿಸಲು ಮುಂದಾಗುವುದಿಲ್ಲ. ವಿವರಣೆ ನೀಡುವಂತೆ ಒತ್ತಾಯಿಸುವುದೂ ಇಲ್ಲ. ಇದು ನಾಗರಿಕರ ಸ್ವ–ಇಚ್ಛೆಗೆ ಬಿಟ್ಟ ವಿಚಾರ.

ಕೆ.ರವಿವರ್ಮ ಕುಮಾರ್, ಹಿಂದುಳಿದ ವರ್ಗಗಳ ಆಯೋಗದ ಪರ ವಕೀಲ



ಮೈಸೂರು ದಸರಾ ಕವಿಗೋಷ್ಠಿಯ ಉದ್ಘಾಟನಾ ಸಮಾರಂಭದಲ್ಲಿ ಆಯೋಜಿಸಿದ್ದ 'ನಾಡಗೀತೆಗೆ ನೂರರ ಸಂಭ್ರಮ, ಸಾವಿರ ಸ್ವರಗಳ ಸಂಗಮ' ಕಾರ್ಯಕ್ರಮದಲ್ಲಿ ಸಾವಿರಾರು ವಿದ್ಯಾರ್ಥಿಗಳು ನಾಡಗೀತೆ ಹಾಡಿದರು –ಚಿತ್ರ: ಅನೂಪ್ ರಾಘ. ಟಿ

ಸಾವಿರ ಕಂಠಗಳಲ್ಲಿ 'ಜಯಭಾರತ'

ಕುವೆಂಪು ರಚಿತ ನಾಡಗೀತೆಗೆ 100 ವರ್ಷ: ಮೈಸೂರಿನಲ್ಲಿ ಸ್ಮರಣೆ

• ಶಿವಪ್ರಸಾದ್ ರೈ

ಮೈಸೂರು: ತಂಗಾಳಿ, ಸೂರ್ಯನ ಹೊಂಬಣ್ಣದ ಕಿರಣಗಳ ಮೆರುಗಿನ ನಡುವೆ ಸಾವಿರ ಕಂಠಗಳಿಂದ ಕುವೆಂಪು ಅವರ 'ಜಯಭಾರತ ಜನನಿಯ ತನುಜಾತೆ' ನಾಡಗೀತೆಯು ಇಲ್ಲಿನ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಮಂಗಳವಾರ ಮಾರ್ದನಿಸಿತು.

ಅದು, ನಾಡಗೀತೆ ರಚನೆಯಾಗಿ ನೂರು ವರ್ಷ ತುಂಬಿದ ಸಂಭ್ರಮದ ಸಲುವಾಗಿಯೆ ದಸರಾ ಕವಿಗೋಷ್ಠಿ ಉಪ ಸಮಿತಿಯು ಕವಿಗೋಷ್ಠಿ ಉದ್ಘಾಟನೆಗೂ ಮುನ್ನ ಆಯೋಜಿಸಿದ್ದ 'ನಾಡಗೀತೆಗೆ ನೂರರ ಸಂಭ್ರಮ, ಸಾವಿರ ಸ್ವರಗಳ ಸಂಗಮ' ಕಾರ್ಯಕ್ರಮ.

ಮಕ್ಕಳು, ವಿದ್ಯಾರ್ಥಿಗಳು, ಯುವಜನರು, ಹಿರಿಯ ನಾಗರಿಕರು ಧ್ವನಿಯಾಗಿ ಐತಿಹಾಸಿಕ ಗಳಿಗೆಗೆ ಸಾಕ್ಷಿಯಾದರು. 'ಕುವೆಂಪು' ಹೆಸರಿನಡಿ ನಡೆದ ಕಾರ್ಯಕ್ರಮವು 15 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿತು.

ಕುವೆಂಪು ಕುರಿತ ಆಪ್ತ ಭಾವ, ನಾಡಗೀತೆಯ ಮೇಲಿನ ಗೌರವ, ಕನ್ನಡಿಗರೆಂಬ ಹೆಮ್ಮೆ ಎಲ್ಲರ ಮೊಗದಲ್ಲಿ ನಳನಳಿಸಿತು. ಕುವೆಂಪು ಅವರೇ ರೂಪ ನೀಡಿದ ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿ ಸಾವಿರಾರು ಮಂದಿ ನಾಡಗೀತೆ ಹಾಡಿ ಸಂಭ್ರಮಿಸಿದ ಅನನ್ಯ ಸನ್ನಿವೇಶವು ಇತಿಹಾಸದ ಪುಟದಲ್ಲಿ ಸೇರಿತು.

ಕುವೆಂಪು ಅವರು 1924-25ರಲ್ಲಿ 'ಕನ್ನಡ ರಾಷ್ಟ್ರಗೀತೆ' ಎಂದು ನಾಡಗೀತೆಯನ್ನು ಬರೆದಿದ್ದರು. ನೂರನೇ ವರ್ಷದ ಸಂಭ್ರಮದಲ್ಲಿ ಭಾಗಿಯಾಗಲು ವಿಶ್ವ ವಿದ್ಯಾಲಯ ವ್ಯಾಪ್ತಿಯ ವಿವಿಧ ಕಾಲೇಜು ವಿದ್ಯಾರ್ಥಿಗಳು ತಂಡೋಪತಂಡವಾಗಿ ವೇದಿಕೆಯತ್ತ ಬಂದರು. ಕೆಂಪು, ಹಳದಿ ಬಣ್ಣದ ಉಡುಗೆ ತೊಟ್ಟ ಯುವಕ, ಯುವತಿಯರು ಕನ್ನಡದ ಜಯಘೋಷ ಹಾಕಿದರು.

ಕುವೆಂಪು ರಚಿಸಿದ 'ಎಂತಾದರು ಇರು, ಏನಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು', 'ಓ ನನ್ನ ಚೇತನ ಆಗು ನೀ ಅನಿಕೇತನ' ಹಾಡುಗಳಿಗೆ ಮೊದಲು ದೇವಾನಂದ ವರಪ್ರಸಾದ್ ಧ್ವನಿಗೂಡಿಸಿದರು. 'ಕನ್ನಡವೇ ಸತ್ಯ, ಕನ್ನಡವೇ ನಿತ್ಯ' ಎಂಬ ಕೂಗು ಮುಗಿಲು ಮುಟ್ಟಿತ್ತು.

ರಾಜ್ಯ ಸುಗಮ ಸಂಗೀತ ಪರಿಷತ್ತಿನ ಸದಸ್ಯರು, ನಗರದ ಜಾನಪದ ಗಾಯಕರು, ಹಾಡುಗಾರರ ಸಹಿತ ಸಾವಿರಾರು ಗಾಯಕರು ಸುಶ್ರಾವ್ಯವಾಗಿ ನಾಡಗೀತೆ ಹಾಡಿದರು.

'ಬೌದ್ಧರುದ್ಯಾನ ಸೇರಿಸಿ'

'ನಾಡಗೀತೆಯಲ್ಲಿ ಇದ್ದ 'ಬೌದ್ಧರುದ್ಯಾನ' ಎಂಬ ಪದವು 70ರ ದಶಕದಲ್ಲಿ ತಪ್ಪಿಹೋಗಿದ್ದು, ಅದನ್ನು ರಾಜ್ಯ ಸರ್ಕಾರ ಸೇರಿಸಬೇಕು' ಎಂದು ಲೇಖಕ ಅರವಿಂದ ಮಾಲಗತ್ತಿ ಕೋರಿದರು. 'ಕುವೆಂಪು ಅವರು ಜೈನರುದ್ಯಾನ ಎಂಬುದನ್ನು ಬಳಸುವ ಮುನ್ನ ಬೌದ್ಧರುದ್ಯಾನ ಎಂದು ಬರೆದಿದ್ದರು. ಅದನ್ನು ಯಾವ ಕಾರಣಕ್ಕಾಗಿ ಯಾರು ತೆಗೆದು ಹಾಕಿದರೋ ಕಾಣೆ. ಅದನ್ನು ಜೋಡಿಸುವುದರಿಂದ ನಾಡಿಗೂ ಗೌರವವಾಗುತ್ತದೆ. ಹಾಡುವುದಕ್ಕೂ ತೊಂದರೆ ಆಗದು' ಎಂದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ಜಾತಿ ತಾರತಮ್ಯ': ನೆಲದಲ್ಲಿ ಕುಳಿತೇ ಕೆಲಸ

ಪ್ರಜಾವಾಣಿ ವಾರ್ತೆ

ತುಮಕೂರು: ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ತುಮುಲ್) ಹಣಕಾಸು ವಿಭಾಗದ ಆಡಳಿತ ಅಧೀಕ್ಷಕ ಆರ್.ಎಸ್.ವಿನಯ್ ಕೆಲವು ದಿನಗಳಿಂದ ಕಚೇರಿಯಲ್ಲಿ ನೆಲದ ಮೇಲೆ ಕುಳಿತು ಕೆಲಸ ಮಾಡುತ್ತಿದ್ದಾರೆ.

'ನಾನು ದಲಿತ ಎಂಬ ಕಾರಣಕ್ಕೆ ಕಚೇರಿಯಲ್ಲಿ ಕುರ್ಚಿ, ಟೇಬಲ್ ಕೊಡುತ್ತಿಲ್ಲ. ಡೇರಿ ಮೇಲ್ವಿಚಾರಕ ಎಸ್.ಉಮೇಶ್, ಆಡಳಿತ ವಿಭಾಗದ ವ್ಯವಸ್ಥಾಪಕ ಮಂಜುನಾಥ್ ನಾಯಕ ಎಂಬುವರು ಕಿರುಕುಳ ನೀಡುತ್ತಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

'ತಿಂಗಳ ಹಿಂದೆ ಆಡಳಿತ ವಿಭಾಗದಿಂದ ಹಣಕಾಸು ವಿಭಾಗಕ್ಕೆ ವರ್ಗಾವಣೆಯಾಗಿದ್ದು, ವಿಭಾಗದಲ್ಲಿ ಕೂಡಲು ಸ್ಥಳ ಕೊಡದೆ ಅವಮಾನಿಸಿದ್ದರು. ಬಳಿಕ ಹಣಕಾಸು ವಿಭಾಗದ ವ್ಯವಸ್ಥಾಪಕರು ಕಚೇರಿ ಮೂಲೆಯಲ್ಲಿದ್ದ ಕಿರಿದಾದ ಕಂಪ್ಯೂಟರ್, ಫೈಲ್ ತುಂಬಿದ್ದ ಕೊಠಡಿಯಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸಿದ್ದರು' ಎಂದಿದ್ದಾರೆ.

'ಕಿರಿದಾದ ಕೊಠಡಿ ಸ್ವಚ್ಛಗೊಳಿಸಿ ಕೆಲಸ ಮಾಡುತ್ತಿದ್ದೆ. ಬಳಿಕ ಕೊಠಡಿ ಖಾಲಿ ಮಾಡಿಸಿದರು. ಇದರಿಂದ ಬೇಸತ್ತು ನೆಲದ ಮೇಲೆ ಕುಳಿತು ಕೆಲಸ ಮಾಡುತ್ತಿದ್ದೇನೆ. ಪರಿಶಿಷ್ಟ ಜಾತಿಗೆ ಸೇರಿದವನು ಎಂಬ ಕಾರಣಕ್ಕೆ ಈ ರೀತಿ ಕಿರುಕುಳ ನೀಡುತ್ತಿದ್ದಾರೆ' ಎಂದು ಹೇಳಿದ್ದಾರೆ.



ತುಮುಲ್ ಕಚೇರಿಯಲ್ಲಿ ನೆಲದ ಮೇಲೆ ಕುಳಿತು ಕೆಲಸ ಮಾಡುತ್ತಿರುವ ವಿನಯ್

ಕಿರುಕುಳ ನೀಡುತ್ತಿರುವ ಎಸ್. ಉಮೇಶ್ ವಿರುದ್ಧ ಪರಿಶಿಷ್ಟ ಜಾತಿ, ಪಂಗಡದ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಕ್ರಮಕೈಗೊಳ್ಳುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಅವರು ದೂರು ಸಲ್ಲಿಸಿದ್ದಾರೆ.

'8 ವರ್ಷಗಳಿಂದ ಒಕ್ಕೂಟದಲ್ಲಿ ಕೆಲಸ ಮಾಡುತ್ತಿದ್ದೇನೆ. ಉಮೇಶ್ ವಿರುದ್ಧ ಗ್ರಾಮಾಂತರ ಠಾಣೆಗೆ ದೂರು ನೀಡಿದರೂ ಗಂಭೀರವಾಗಿ ಪರಿಗಣಿಸಿಲ್ಲ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಧರ್ಮಸ್ಥಳ ಬೆಳವಣಿಗೆ: ನ್ಯಾಯಾಲಯದಲ್ಲಿ ಐದು ತಾಸು ಇದ್ದ ಬಂಧಿತ

ಸಾಕ್ಷಿ ದೂರುದಾರನ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧಗಳಲ್ಲಿನ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ಸಾಕ್ಷಿದೂರುದಾರನ್ನು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಪೊಲೀಸರು ಹಾಜರುಪಡಿಸಿದರು.

ಪ್ರಕರಣದ ಕುರಿತಾಗಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್) ಸೆಕ್ಷನ್ 183ರ ಅಡಿ ನ್ಯಾಯಾಲಯದಲ್ಲಿ ಸ್ವಯಂಪ್ರೇರಿತವಾಗಿ ತಪ್ಪೊಪ್ಪಿಗೆ ಹೇಳಿಕೆ ದಾಖಲಿಸಲು ಆತನನ್ನು ಶಿವಮೊಗ್ಗ ಜೈಲಿನಿಂದ ಬೆಳ್ತಂಗಡಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಕರೆತರಲಾಗಿದೆ. ಹೇಳಿಕೆ ದಾಖಲಿಸುವ ಪ್ರಕ್ರಿಯೆಯನ್ನು ಆರಂಭಿಸಲಾಗಿದ್ದು, ಅದು ಇನ್ನೂ ಪೂರ್ಣಗೊಂಡಿಲ್ಲ. ಇದೇ 25ರಂದು ಆತನನ್ನು ಮತ್ತೆ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗುತ್ತದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಸಾಕ್ಷಿ ದೂರುದಾರ ಸುಮಾರು ಐದು ಗಂಟೆ ಕಾಲ ನ್ಯಾಯಾಲಯದಲ್ಲಿದ್ದ. ನ್ಯಾಯಾಲಯದಿಂದ ಹೊರಗೆ ಬರುವಾಗ ಸಂಜೆ 7 ಗಂಟೆ ದಾಟಿತ್ತು. ನ್ಯಾಯಾಲಯಕ್ಕೆ ಕರೆದೊಯ್ಯುವಾಗ ಹಾಗೂ ಅಲ್ಲಿಂದ ಕರೆ ತರುವಾಗ ಆತನ ಮುಖಕ್ಕೆ ಮುಸುಕು ಹಾಕಿರಲಿಲ್ಲ.

ಪ್ರಕರಣ ಸಂಬಂಧ ಧರ್ಮಸ್ಥಳ ಠಾಣೆಗೆ ದೂರು ನೀಡಿದ್ದ ಸಾಕ್ಷಿ ದೂರುದಾರ, 'ತಾನು ಹೂತು ಹಾಕಿದ್ದ ಮೃತದೇಹವೊಂದನ್ನು ಹೊರತೆಗೆದ ಅವಶೇಷವಿದು' ಎಂದು ಹೇಳಿ ತಲೆಬುರುಡೆಯನ್ನೂ ಒಪ್ಪಿಸಿದ್ದ. ವಿಶೇಷ ತನಿಖಾ ತಂಡವು (ಎಸ್‌ಐಟಿ) ಈ ಬಗ್ಗೆ ವಿಚಾರಣೆ ನಡೆಸಿದಾಗ ತಲೆಬುರುಡೆಯನ್ನು ನೆಲದಿಂದ ಹೊರತೆಗೆದ ಜಾಗ ತೋರಿಸಲು ಮೀನಮೇಷ ಎಣಿಸಿದ್ದ. ಬಳಿಕ ಅದನ್ನು ತಾನು ಹೊರತೆಗೆದಿಲ್ಲ ಎಂದು ಒಪ್ಪಿಕೊಂಡಿದ್ದ. ಹಾಗಾಗಿ ಎಸ್‌ಐಟಿಯವರು ಆತನನ್ನು ಬಂಧಿಸಿ ಆ. 23ರಂದು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ನ್ಯಾಯಾಲಯವು ಆತನನ್ನು ಹೆಚ್ಚಿನ ವಿಚಾರಣೆಗಾಗಿ ಸೆ.3ರವರೆಗೆ ಎಸ್‌ಐಟಿ ವಶಕ್ಕೆ ಒಪ್ಪಿಸಿತ್ತು. ಎಸ್‌ಐಟಿ ಕಸ್ಟಡಿಯ ಅವಧಿಯನ್ನು ನಂತರ ಸೆ. 6ರವರೆಗೆ ವಿಸ್ತರಿಸಿತ್ತು. ಸೆ.6ರ ಬಳಿಕ ಆತನಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಆತನನ್ನು ಶಿವಮೊಗ್ಗ ಜಿಲ್ಲೆಯ ಕಾರಾಗೃಹದಲ್ಲಿ ಇರಿಸಲಾಗಿದೆ.


ಸಾಕ್ಷಿ ದೂರುದಾರನನ್ನು ಸೆ.18ರಂದು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಆದರೆ, ಅಂದು ಆತನ ಹೇಳಿಕೆ ದಾಖಲಿಸಿಕೊಳ್ಳುವ ಪ್ರಕ್ರಿಯೆ ನಡೆದಿರಲಿಲ್ಲ.

'ನ್ಯಾಯ ಸಮಾವೇಶ' ನಾಳೆ

ಬೆಂಗಳೂರು: ಧರ್ಮಸ್ಥಳ ದೌರ್ಜನ್ಯ ವಿರೋಧಿ ವೇದಿಕೆಯು ಸೆ.25ರಂದು ಬೆಳಿಗ್ಗೆ 10.30ಕ್ಕೆ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ 'ನ್ಯಾಯ ಸಮಾವೇಶ' ಹಮ್ಮಿಕೊಂಡಿದೆ. ಜನಪರ ಸಂಘಟನೆಗಳು, ಎಡ, ದಲಿತ, ಹಿಂದುಳಿದ ಸಂಘಟನೆಗಳು, ವಿದ್ಯಾರ್ಥಿ, ಯುವಜನ, ಲೈಂಗಿಕ ಅಲ್ಪಸಂಖ್ಯಾತ, ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಸುಭಾಷ್ ಚಂದ್ರ ಬೋಸ್ ಅವರ ನಿಕಟವರ್ತಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಅವರ ಪುತ್ರಿ ಸುಭಾಷಿಣಿ ಅಲಿ ಭಾಗವಹಿಸಲಿದ್ದಾರೆ.

ಮಹೇಶ್ ಶೆಟ್ಟಿ ತಿಮರೋಡಿ ಗಡಿಪಾರು

ಪ್ರಜಾವಾಣಿ ವಾರ್ತೆ



ಮಹೇಶ್ ಶೆಟ್ಟಿ

ಮಂಗಳೂರು: ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆ ಅಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಗೆ ಒಂದು ವರ್ಷ ಗಡಿಪಾರು ಮಾಡಿ ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಆದೇಶ ಮಾಡಿದ್ದಾರೆ.

ಪೊಲೀಸರು ಅಥವಾ ನ್ಯಾಯಾಲಯ ನೋಟಿಸ್ ಜಾರಿ ಮಾಡಿದಾಗ ವಿಚಾರಣೆಗೆ ಬರಲು ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವೇಶಿಸಲು ತಿಮರೋಡಿ ಅವರಿಗೆ ಅವಕಾಶ ನೀಡಲಾಗಿದೆ.

ಗಡಿಪಾರು ಪ್ರಕ್ರಿಯೆ ಆರಂಭಿಸುವುದಕ್ಕೂ ಮುನ್ನ ಮಹೇಶ್ ಶೆಟ್ಟಿ ತಿಮರೋಡಿ ಅವರ ವಿರುದ್ಧ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಠಾಣೆಯಲ್ಲಿ ಒಟ್ಟು 21 ಪ್ರಕರಣಗಳು ದಾಖಲಾಗಿದ್ದವು. ಗಡಿಪಾರು ಪ್ರಕ್ರಿಯೆ ಆರಂಭಿಸಿದ ಬಳಿಕ ಬೆಳ್ತಂಗಡಿ ಠಾಣೆಯಲ್ಲಿ ಐದು ಪ್ರಕರಣಗಳು ದಾಖಲಾಗಿವೆ. ಅಕ್ರಮ ಕೂಟ ರಚನೆ, ಗಲಭೆಗೆ ಕುಮ್ಮಕ್ಕು, ಹಲ್ಲೆ, ಕ್ರಿಮಿನಲ್ ಬೆದರಿಕೆ, ಉದ್ದೇಶ ಪೂರ್ವಕವಾಗಿ ಅವಹೇಳನ ಮಾಡುವುದು, ಗುಂಪುಗೂಡದಂತೆ ಪೊಲೀಸರು ನೀಡಿದ ಆದೇಶ ಪಾಲಿಸದಿರುವುದು, ಸುಳ್ಳು ಮಾಹಿತಿ ಹಂಚಿಕೊಳ್ಳುವುದು, ನಿಷೇಧಿತ ಶಸ್ತ್ರವನ್ನು ಹೊಂದಿರುವುದು ಮೊದಲಾದ ಆರೋಪಗಳ ಅಡಿ ದಾಖಲಾದ ಪ್ರಕರಣಗಳು ಇವು. ಬ್ರಹ್ಮಾವರ ಠಾಣೆಯ ಪೊಲೀಸರು ತಿಮರೋಡಿ ಅವರನ್ನು ಬಂಧಿಸಲು ಬಂದಾಗ ಕರ್ತವ್ಯಕ್ಕೆ ಅಡ್ಡಿಪಡಿಸಿದ ಕುರಿತು ದಾಖಲಾದ ಪ್ರಕರಣವೂ ಇದರಲ್ಲಿ ಸೇರಿದೆ.

ಚಟಿಕೆ ಸುದ್ದಿ

‘ಬಾಕಿ ಬಿಲ್ ಆದ್ಯತೆ ಮೇರೆಗೆ ಪಾವತಿ’

ಬೆಂಗಳೂರು: ‘ತ್ಯಾಜ್ಯ ಗುತ್ತಿಗೆದಾರರ ಬಾಕಿ ಬಿಲ್‌ಗಳನ್ನು ಆದ್ಯತೆ ಮೇರೆಗೆ ಪಾವತಿಸಲಾಗುವುದು’ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಸಿಇಒ ಕರೀಗೌಡ ಮಂಗಳವಾರ ಹೇಳಿದರು.

ತ್ಯಾಜ್ಯ ಗುತ್ತಿಗೆದಾರರೊಂದಿಗೆ ನಡೆದ ಸಂಧಾನ ಸಭೆಯ ನಂತರ ಮಾತನಾಡಿ, ‘ತಿಂಗಳಿಗೊಮ್ಮೆ ಎಲ್ಲಾ ಸೇವಾ ಪೂರೈಕೆದಾರರೊಂದಿಗೆ ಸಭೆ ನಡೆಸಲಾಗುವುದು. ಇತರೆ ಎಲ್ಲ ಬೇಡಿಕೆ ಪರಿಶೀಲಿಸಿ, ಈಡೇರಿಸಲಾಗುವುದು. ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಣೆಗೆ ಸಂಬಂಧಿಸಿದಂತೆ ಬಿಲ್‌ಗಳ ಪಾವತಿಯನ್ನು ಸರಳೀಕರಿಸುವುದು, ಇಎಸ್‌ಐ ಮತ್ತು ಪಿಎಫ್ ಬಾಕಿಯಿದ್ದಲ್ಲಿ, ಕೂಡಲೇ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ವಾಹನ ಸಂಚಾರಕ್ಕೆ ಅವಕಾಶ ಕೊಡಿ’

ವಿಪ್ರೊ ಸಂಸ್ಥಾಪಕ ಅಜೀಂ ಪ್ರೇಮ್‌ಜಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹೊರ ವರ್ತುಲ ರಸ್ತೆಯಲ್ಲಿ ದಟ್ಟಣೆ ಅವಧಿಯಲ್ಲಿ ಸಂಚಾರಕ್ಕೆ ತೊಂದರೆ
- ವಿಪ್ರೊ ಕ್ಯಾಂಪಸ್ ಮೂಲಕ ಸೀಮಿತ ಸಂಚಾರಕ್ಕೆ ಮನವಿ

ಬೆಂಗಳೂರು: ನಗರದ ಹೊರ ವರ್ತುಲ ರಸ್ತೆಯಲ್ಲಿ (ಒಆರ್‌ಆರ್) ವಿಪರೀತ ದಟ್ಟಣೆ ಇರುವ ಕಾರಣ ವಿಪ್ರೊ ಕ್ಯಾಂಪಸ್ ಮೂಲಕ ಸೀಮಿತ ಪ್ರಮಾಣದಲ್ಲಿ ಸಾರ್ವಜನಿಕ ವಾಹನಗಳ ಸಂಚಾರಕ್ಕೆ ಅವಕಾಶ ನೀಡುವಂತೆ ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಪ್ರೊ ಸಂಸ್ಥಾಪಕ ಅಜೀಂ ಪ್ರೇಮ್‌ಜಿ ಅವರಿಗೆ ಪತ್ರ ಬರೆದಿದ್ದಾರೆ.

ಹೊರ ವರ್ತುಲ ರಸ್ತೆಯಲ್ಲಿ ದಟ್ಟಣೆ ಅವಧಿಯಲ್ಲಿ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಅದರಲ್ಲೂ ಇಬ್ಬಲೂರು ಜಂಕ್ಷನ್‌ನಲ್ಲಿ ಸಮಸ್ಯೆ ತೀವ್ರವಾಗಿದೆ. ಇದು ಉತ್ಪಾದನಾ ವಲಯ ಹಾಗೂ ಸ್ಥಳೀಯ ಜನರ ಜೀವನದ ಗುಣಮಟ್ಟದ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಹಾಗಾಗಿ ಪರಸ್ಪರ ಒಪ್ಪಿತ ಷರತ್ತು ಮತ್ತು ಅಗತ್ಯ ಭದ್ರತೆಯೊಂದಿಗೆ ವಿಪ್ರೊ ಕ್ಯಾಂಪಸ್ ಮೂಲಕ ವಾಹನ ಸಂಚಾರಕ್ಕೆ ಅವಕಾಶ ನೀಡಬೇಕು ಎಂದು ಕೋರಿದ್ದಾರೆ.

‘ನಗರ ಸಂಚಾರ ತಜ್ಞರು ನಡೆಸಿದ ಪ್ರಾಥಮಿಕ ಮೌಲ್ಯಮಾಪನ ಪ್ರಕಾರ, ಈ ಕ್ರಮವು ಹೊರ ವರ್ತುಲ ರಸ್ತೆಯಲ್ಲಿನ ದಟ್ಟಣೆಯನ್ನು, ವಿಶೇಷವಾಗಿ ದಟ್ಟಣೆ ಅವಧಿಯಲ್ಲಿ ಶೇಕಡ 30ರಷ್ಟು ತಗ್ಗಿಸಲಿದೆ. ಈ ವಿಚಾರದಲ್ಲಿ ನೀವು ನೀಡುವ ಸಹಕಾರವು ದೂರಗಾಮಿ ಪರಿಣಾಮ ಬೀರಲಿದ್ದು, ಸಂಚಾರ ಸಮಸ್ಯೆ ಬಗೆಹರಿಸುವ ಜತೆಗೆ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ’ ಎಂದಿದ್ದಾರೆ.

‘ಬೆಂಗಳೂರು ವಾಸ ಯೋಗ್ಯ ನಗರವಾಗಲು ಇದು ಸಹಕಾರಿ ಆಗಲಿದೆ. ನಿಮ್ಮ ತಂಡ ನಮ್ಮ ಅಧಿಕಾರಿಗಳ ಜತೆ ಮಾತುಕತೆ ನಡೆಸಿ, ಪರಸ್ಪರ ಸ್ವೀಕಾರಾರ್ಹವಾದ ಯೋಜನೆ ಶೀಘ್ರ ರೂಪಿಸಬೇಕು’ ಎಂದು ಇತ್ತೀಚೆಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಶೇ 10ರಿಂದ 15ರಷ್ಟು ದಟ್ಟಣೆ ಹೆಚ್ಚಳ ಸಾಧ್ಯತೆ

ಕೋವಿಡ್ ಸಮಯದಲ್ಲಿ ಚಾಲ್ತಿಗೆ ಬಂದ ಮನೆಯಿಂದ ಕೆಲಸ (ವರ್ಕ್ ಫ್ರಂ ಹೋಮ್) ವ್ಯವಸ್ಥೆ ಹಾಗೂ ಹೈಬ್ರೀಡ್ ಮಾದರಿಗೆ ಕೊನೆ ಹಾಡಲು ಕಂಪನಿಗಳು ಮುಂದಾಗಿರುವುದರಿಂದಾಗಿ ಅಕ್ಟೋಬರ್‌ನಿಂದ ಹೊರ ವರ್ತುಲ ರಸ್ತೆಯಲ್ಲಿ (ಒಆರ್‌ಆರ್) ಶೇಕಡ 10ರಿಂದ 15ರಷ್ಟು ವಾಹನ ದಟ್ಟಣೆ ಹೆಚ್ಚಾಗಲಿದೆ.

ಸಂಚಾರ ದಟ್ಟಣೆಯ ಕಾರಣಕ್ಕೆ ಸುದ್ದಿಯಲ್ಲಿರುವ ಒಆರ್‌ಆರ್ ಪ್ರದೇಶದ ವ್ಯಾಪ್ತಿಯಲ್ಲಿರುವ ಸಾಫ್ಟ್‌ವೇರ್ ಕಂಪನಿಗಳಲ್ಲಿ ಅಂದಾಜು 8 ಲಕ್ಷ ಉದ್ಯೋಗಿಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಕೆಲವು ಕಂಪನಿಗಳು ಹೈಬ್ರೀಡ್ ಮಾದರಿ ಅಳವಡಿಸಿಕೊಂಡಿವೆ. ಅಂದರೆ ವಾರದಲ್ಲಿ ಎರಡು ದಿನ ಮನೆಯಿಂದ ಮತ್ತು ಮೂರು ದಿನ ಕಚೇರಿಯಿಂದ ಕೆಲಸ ನಿರ್ವಹಿಸುವುದು. ಸಾಮಾನ್ಯವಾಗಿ ಬುಧವಾರ ಮತ್ತು ಗುರುವಾರ ಅತಿ ಹೆಚ್ಚು ವಾಹನ ದಟ್ಟಣೆ ಇರುತ್ತದೆ.

ಕಂಪನಿಯ ಪ್ರಗತಿಯ ದೃಷ್ಟಿಯಿಂದ ಸೆಪ್ಟೆಂಬರ್‌ನಿಂದಲೇ ಕಚೇರಿಗೆ ಬರುವಂತೆ ಹಾಗೂ ಕೆಲ ಕಂಪನಿಗಳು ಅಕ್ಟೋಬರ್‌ನಿಂದ ಬರುವಂತೆ ಉದ್ಯೋಗಿಗಳಿಗೆ ಸೂಚನೆ ನೀಡಿವೆ. ಕೆಲ ವಾರಗಳಿಂದ ಈ ಬಗ್ಗೆ ಚರ್ಚೆ ನಡೆದಿದ್ದು, ಉದ್ಯೋಗಿಗಳಿಗೆ ಇ–ಮೇಲ್ ಮೂಲಕ ತಿಳಿಸಲಾಗಿದೆ

ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಎಸ್.ಟಿ. ಸೋಮಶೇಖರ್ ಹಾಗೂ ಆಯುಕ್ತ ರಾಜೇಂದ್ರ ಕೆ.ವಿ. ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ‘ಯಶವಂತಪುರ ವ್ಯಾಪ್ತಿಯಲ್ಲಿ ಒಣಗಿದ ಮರ ಹಾಗೂ ಅಪಾಯದ ಹಂತದಲ್ಲಿರುವ ಮರಗಳಿಂದ ಸಾರ್ವಜನಿಕರಿಗೆ ಯಾವುದೇ ಸಮಸ್ಯೆ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ಹೇಳಿದರು.

‘ಯಶವಂತಪುರ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ವ್ಯವಸ್ಥಿತವಾಗಿ ಘನ ತ್ಯಾಜ್ಯ ನಿರ್ವಹಣೆ ಮಾಡಬೇಕು. ಕಸ ಹಾಕುವ ಬ್ಲ್ಯಾಕ್‌ಸ್ಪಾಟ್‌ಗಳ ನಿರ್ಮೂಲನೆಗಾಗಿ ಅಗತ್ಯ ಕ್ರಮ ಕೈಗೊಳ್ಳಬೇಕು. ರಸ್ತೆ ಪಕ್ಕದಲ್ಲಿ ಕಸ ಎಸೆಯುವವರನ್ನು ಗುರುತಿಸಿ, ದಂಡ ವಿಧಿಸಬೇಕು’ ಎಂದು ಸೂಚಿಸಿದರು.

‘ಈ ಭಾಗದ ರಾಜಕಾಲುವೆಗಳಲ್ಲಿ ಹೂಳು ತೆರವುಗೊಳಿಸಬೇಕು. ಕೆರೆಗಳ ಸುಧಾರಣೆ ಮಾಡಿ ಅಭಿವೃದ್ಧಿಗೊಳಿಸಬೇಕು. ಉದ್ಯಾನಗಳನ್ನು ಸರಿಯಾಗಿ ನಿರ್ವಹಣೆ ಮಾಡುವುದು, ಸಮುದಾಯ ಭವನಗಳು ಪೂರ್ಣಗೊಂಡಿದ್ದರೂ ಅವುಗಳು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ, ಅವುಗಳು ಸರಿಯಾಗಿ ಬಳಕೆ ಆಗುವಂತೆ ಕ್ರಮ ಕೈಗೊಳ್ಳಬೇಕು. ನಿಗದಿತ ಆಸ್ತಿ ತೆರಿಗೆ ಸಂಗ್ರಹಿಸಬೇಕು. ಇ-ಖಾತಾಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಬರುವ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಬೇಕು’ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್‌.ರಮೇಶ್ ಸೂಚನೆ

‘ಪಾದಚಾರಿ ಮಾರ್ಗ ಅತಿಕ್ರಮಿಸಿದರೆ ದಂಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಇಬ್ಬಲೂರು ಜಂಕ್ಷನ್‌ನಿಂದ ಟಿನ್ ಫ್ಯಾಕ್ಟರಿವರೆಗಿನ ಪಾದಚಾರಿ ಮಾರ್ಗವನ್ನು ಅತಿಕ್ರಮಣ ಮಾಡಿದವರಿಗೆ ನೋಟಿಸ್ ನೀಡಿ, ದಂಡ ವಿಧಿಸುವುದರ ಜೊತೆಗೆ ಒತ್ತುವರಿ ತೆರವುಗೊಳಿಸಬೇಕು ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು.

‘ಇಬ್ಬಲೂರು ಜಂಕ್ಷನ್‌ನಿಂದ ಟಿನ್ ಫ್ಯಾಕ್ಟರಿವರೆಗಿನ ರಸ್ತೆ, ಚರಂಡಿ, ಪಾದಚಾರಿ ಮಾರ್ಗಕ್ಕೆ ಅಳವಡಿಸಿರುವ ಕಾಂಕ್ರೀಟ್ ಸ್ಲ್ಯಾಬ್‌ಗಳನ್ನು ಸರಿಪಡಿಸಬೇಕು. ಖಾಲಿ ನಿವೇಶನಗಳಲ್ಲಿ ಕಸದ ರಾಶಿ ಬಿದ್ದಿದ್ದು, ಸಂಬಂಧಪಟ್ಟ ನಿವೇಶನದಾರರಿಗೆ ನೋಟಿಸ್ ನೀಡಿ, ಸ್ವಚ್ಛತೆ ಕಾಪಾಡುವಂತೆ ತಿಳಿಸಬೇಕು. ಇಲ್ಲದಿದ್ದರೆ ನಗರ ಪಾಲಿಕೆ ಸ್ವಚ್ಛಗೊಳಿಸಿ, ನಿವೇಶನದಾರರಿಂದ ದಂಡ ವಸೂಲಿ ಮಾಡಬೇಕು’ ಎಂದು ಸೂಚಿಸಿದರು.

‘ಮೆಟ್ರೊ ಪಿಲ್ಲರ್ ಮತ್ತು ರೈಲ್ವೆ ಲೈನ್‌ನ ಉದ್ದಕ್ಕೂ ಸಂಗ್ರಹವಾಗಿರುವ ಕಟ್ಟಡ ತ್ಯಾಜ್ಯ ಮತ್ತು ಕಸ ತೆರವುಗೊಳಿಸಬೇಕು ಸ್ಥಳೀಯ ಸಮಸ್ಯೆಗಳನ್ನು ಆದ್ಯತೆ ಮೇಲೆ ಬಗೆಹರಿಸಬೇಕು. ವಾರ್ಡ್‌ಮಟ್ಟದಲ್ಲಿ ತಯಾರಿ ಮಾಡಿಕೊಂಡು, ಕಾರ್ಯನಿರ್ವಹಿಸಿದರೆ ಫಲಿತಾಂಶ ಸಿಗುತ್ತದೆ’ ಎಂದು ತಿಳಿಸಿದರು.



ಪಾದಚಾರಿ ಮಾರ್ಗವನ್ನು ಅತಿಕ್ರಮಣ ಮಾಡಿರುವ ಅಂಗಡಿಯ ಮಾಲೀಕನಿಗೆ ತೆರವುಗೊಳಿಸುವಂತೆ ಡಿ.ಎಸ್ ರಮೇಶ್ ಸೂಚಿಸಿದರು

‘ವೈಟ್ ಟಾಪಿಂಗ್‌ಗೆ ವೇಗ ನೀಡಿ’

ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಗಳಿಗೆ ವೇಗ ನೀಡಬೇಕು ಎಂದು ಆಯುಕ್ತ ರಾಜೇಂದ್ರ ಚೋಳನ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಸ್ಥಳಗಳಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ ಮಾತನಾಡಿದ ಅವರು, ‘ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿರುವ ಕಡೆ ಎಲ್ಲ ಇಲಾಖೆಗಳೊಂದಿಗೆ ಸಮನ್ವಯದೊಂದಿಗೆ ಕೆಲಸ ಮಾಡಬೇಕು. ವಾಹನ ಸಂಚಾರಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು’ ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.


‘ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿರುವ ರಸ್ತೆಗಳಲ್ಲಿ ಗುಂಡಿಗಳು ಹಾಗೂ ಪ್ಯಾಚ್‌ವರ್ಕ್ ಇದ್ದರೆ ಅದನ್ನು ಗುತ್ತಿಗೆ ಪಡೆದ ಸಂಸ್ಥೆಗಳಿಂದಲೇ ಮುಚ್ಚಿಸಲು ಕ್ರಮ ಕೈಗೊಳ್ಳಬೇಕು. ಇತರೆ ರಸ್ತೆಗಳ ಗುಂಡಿಗಳನ್ನು ನಗರ ಪಾಲಿಕೆಯ ವಿಭಾಗದ ಎಂಜಿನಿಯರ್‌ಗಳು ಮುಚ್ಚುವ ಕೆಲಸ ಮಾಡಬೇಕು’ ಎಂದು ಹೇಳಿದರು.

ರಾಜಕಾಲುವೆ ಹೂಳು ತೆಗೆಯಲು ಸೂಚನೆ

ಉತ್ತರ ನಗರ ಪಾಲಿಕೆಯ ವೀರಣ್ಣಪಾಳ್ಯದಲ್ಲಿ ಇರುವ ರಾಜಕಾಲುವೆಯಲ್ಲಿ ಹೂಳು ಎತ್ತುವ ಕಾರ್ಯ ಕೈಗೊಳ್ಳಬೇಕು ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ಸ್ಥಳೀಯರೊಂದಿಗೆ ಸಮಾಲೋಚನೆ ನಡೆಸಿದ ಅವರು, ‘ಈ ಭಾಗದಲ್ಲಿ ಪ್ರತಿದಿನ ಕಸದ ಸಂಗ್ರಹಣೆ ಸಮರ್ಪಕವಾಗಿ ಆಗುತ್ತಿಲ್ಲ ಎಂಬ ದೂರು ಬಂದಿದೆ. ನಿತ್ಯ ಮನೆ ಮನೆಗೆ ತೆರಳಿ ಕಸ ಸಂಗ್ರಹಿಸಬೇಕು. ಪಾದಚಾರಿ ಮಾರ್ಗದಲ್ಲಿ ಕಸ ಹಾಕುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇದನ್ನು ನಿಯಂತ್ರಿಸಲು ರಾತ್ರಿ ಗಸ್ತು ಪ್ರಾರಂಭಿಸಬೇಕು. ಕಸ ಹಾಕುವವರನ್ನು ಗುರುತಿಸಿ, ಸ್ಥಳದಲ್ಲಿಯೇ ದಂಡ ವಿಧಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಎಲ್ಲೆಲ್ಲೂ ಗುಂಡಿ



ಪದ್ಮನಾಭ ನಗರದ ವಿಧಾನಸಭಾ ಕ್ಷೇತ್ರದ ಬಾಬುಕೋಡಿ, ಬಿ.ವಿ. ಕಾರಂತ ರಸ್ತೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿವೆ

ಕೌಶಿಕ್, ಪದ್ಮನಾಭನಗರ



ನಾಗರಬಾವಿ ಎರಡನೇ ಹಂತದ 11ನೇ ಬ್ಲಾಕ್‌ನ ಎರಡನೇ ಮುಖ್ಯರಸ್ತೆ (ಪಾಪರೆಡ್ಡಿ ಪಾಳ್ಯ ವೃತ್ತದ ಬಳಿ) ಗುಂಡಿಮಯವಾಗಿದ್ದು, ವಾಹನ ಸಂಚಾರಕ್ಕೆ ಸಂಚಕಾರ ಬಂದಿದೆ

ಅನಿಕೇತನ ಸುವ್ವಿ, ನಾಗರಬಾವಿ ಎರಡನೇ ಹಂತ



ಮೈಸೂರು ರಸ್ತೆಯ ಬಿಎಚ್‌ಇಎಲ್ ಮುಂಭಾಗದ ಟೊಯೋಟಾ ಷೋ ರೂಂ ಪ್ರವೇಶದ್ವಾರ ರಸ್ತೆಯ ತಿರುವಿನಲ್ಲಿ ಗುಂಡಿ ಬಿದ್ದಿದೆ

ಎನ್. ಗೋಪಾಲಕೃಷ್ಣ, ಕೆ.ಎಚ್.ರಂಗನಾಥ ಬಡಾವಣೆ

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು ‘ಪ್ರಜಾವಾಣಿ’ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ.

ವಾಟ್ಸ್‌ಆ್ಯಪ್
9606038256

ನಗರದಲ್ಲಿ ಇಂದು

‘ವಿಕಸಿತ ಭಾರತ @ 2047’ ಚಿತ್ರಕಲೆ ಸ್ಪರ್ಧೆ: ಆಯೋಜನೆ ಹಾಗೂ ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರದ (ಐಜಿಎನ್‌ಸಿಎ) ಬೆಂಗಳೂರು ಪ್ರಾದೇಶಿಕ ಕೇಂದ್ರ, ಮಲ್ಲತ್ತಹಳ್ಳಿ, ಬೆಳಿಗ್ಗೆ 9ರಿಂದ

‘ಉತ್ತಮ ಶಿಕ್ಷಕ’ ಪ್ರಶಸ್ತಿ ಪ್ರದಾನ ಮತ್ತು ನಿವೃತ್ತ ಶಿಕ್ಷಕರಿಗೆ ಅಭಿನಂದನಾ ಸಮಾರಂಭ: ಉದ್ಘಾಟನೆ: ಬಸವರಾಜ ಹೊರಟ್ಟಿ, ಅಧ್ಯಕ್ಷತೆ: ಪಿ.ಜಿ.ಆರ್. ಸಿಂಧ್ಯ, ಪ್ರಶಸ್ತಿ ಪ್ರದಾನ: ಮಧು ಬಂಗಾರಪ್ಪ, ಶಿಕ್ಷಕರಿಗೆ ಅಭಿನಂದನೆ: ಎಚ್.ಎಂ. ರೇವಣ್ಣ, ಆಯೋಜನೆ: ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕರ ಕೇಂದ್ರ ಸಂಘ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30

‘ಕನ್ನಡ ಗಜಲ್ ಗಾಯನ ಯಾತ್ರೆ 100...’ ಸಂಗೀತ ಕಾರ್ಯಕ್ರಮ: ಅತಿಥಿಗಳು: ಆರ್. ದೇವದಾಸ್, ರಾಜೇಶ್ ರೈ.ಕೆ., ಗಾಯನ: ಅನುರಾಗ್ ಗದ್ದಿ ಮತ್ತು ಅಪರ್ಣ ನರೇಂದ್ರ, ಕೀಬೋರ್ಡ್: ಶ್ರೀನಿವಾಸ್, ತಬಲಾ: ಶರಣು ಗೋಗಿ, ಪಿಟೀಲು: ಗಿರೀಶ್ ಕೊಳಾಲು, ಕೊಳಲು: ನಾಗರಾಜ್ ಶ್ಯಾವಿ, ಆಯೋಜನೆ: ವಕೀಲರ ಸಂಘ, ಸ್ಥಳ: ಮ್ಯಾಜಿಸ್ಟ್ರೇಟ್ ಕೋರ್ಟ್ ವಿಭಾಗ, ಬೆಳಿಗ್ಗೆ 11

ಶಿಕ್ಷಕರ ದಿನಾಚರಣೆ: ಮುಖ್ಯ ಅತಿಥಿ: ಶರಣಪ್ರಕಾಶ್ ಪಾಟೀಲ, ಅತಿಥಿ: ಜಿ.ಕೆ. ವೆಂಕಟೇಶ್, ಅಧ್ಯಕ್ಷತೆ: ಭಗವಾನ್ ಬಿ.ಸಿ., ಆಯೋಜನೆ ಹಾಗೂ ಸ್ಥಳ: ಧನ್ವಂತರಿ ಸಭಾಂಗಣ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, ಬೆಳಿಗ್ಗೆ 11.30

‘ಪ್ರಸ್ತುತ ದಲಿತ ರಾಜಕಾರಣದ ದಿಕ್ಕು–ದೆಸೆ’ ದುಂಡು ಮೇಜಿನ ಸಭೆ: ಉದ್ಘಾಟನೆ: ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ಎನ್. ಮೂರ್ತಿ, ಪ್ರಾಸ್ತಾವಿಕ ನುಡಿ: ಸುರೇಶ್ ಗೌತಮ್, ಆಯೋಜನೆ: ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ: ಶಾಸಕರ ಭವನ 1, ಬೆಳಿಗ್ಗೆ 11.30

ಭರತನಾಟ್ಯ ಪ್ರದರ್ಶನ: ಕಾಳಿಕಾಂಬ ಫೈನ್ ಆರ್ಟ್ಸ್ ವಿದ್ಯಾರ್ಥಿಗಳು, ಸ್ಥಳ: ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ಅತ್ತಿಗುಪ್ಪೆ, ವಿಜಯನಗರ 2ನೇ ಹಂತ, ಸಂಜೆ 5.30

ಒಂದು ಸಿನಿಮಾ ಸಂಜೆ: ಗಿರೀಶ್ ಕಾಸರವಳ್ಳಿ ಅವರೊಂದಿಗೆ ಸಂವಾದ, ಉಪಸ್ಥಿತಿ: ಕೆ.ಆರ್. ನಿರ್ಮಲ್ ಕುಮಾರ್, ಎನ್.ಎಸ್. ವಿಜಯ, ಬಿ.ಎನ್. ನಂದಿನಿ, ಅಧ್ಯಕ್ಷತೆ: ಎ.ಜಿ. ನಟರಾಜ್, ಆಯೋಜನೆ ಹಾಗೂ ಸ್ಥಳ: ಬಿ.ಇ.ಎಸ್. ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಜಯನಗರ 4ನೇ ಬಡಾವಣೆ, ಸಂಜೆ 6



ಗಿರೀಶ್ ಕಾಸರವಳ್ಳಿ

42ನೇ ಅಂತರ ವಿಭಾಗ ನಾಟಕ ಸ್ಪರ್ಧೆ: ‘ಕಾಕನ ಕೋಟೆ’ ನಾಟಕ ಪ್ರದರ್ಶನ: ನಿರ್ದೇಶನ: ಸುಜಿತ್ ಕುಮಾರ್ ಎಚ್.ಎಂ., ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಊಂಜಲ್ ಸಂಗೀತೋತ್ಸವ: ಗುಣವರ್ಧನ್ ಆನಂದ ರಾಮ್ ಮತ್ತು ಸಂಗಡಿಗರು, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ಟಿಟಿಡಿ), ವೈಯಾಲಿಕಾವಲ್, ಸಂಜೆ 6

ಕಪ್ಪಣ್ಣ ಅಂಗಳ ದಶಮಾನೋತ್ಸವ: ‘ಫ್ಲೋರ್ ವಾಲ್ಸ್ ಆ್ಯಂಡ್ ಟೂ ನೈಟೀಸ್’ ಚಲನಚಿತ್ರ ಪ್ರದರ್ಶನ, ಸ್ಥಳ: ಕಪ್ಪಣ್ಣ ಅಂಗಳ, ಐದನೇ ಮುಖ್ಯರಸ್ತೆ, ಐಟಿಐ ಕಾಲೊನಿ, ಜೆ.ಪಿ. ನಗರ ಮೊದಲ ಹಂತ, ಸಂಜೆ 6.30

ಅಮೃತೋಪದೇಶ: ಸತ್ಯಾತ್ಮತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಬೆಮೆಲ್ ಲೇಔಟ್, ರಾಜರಾಜೇಶ್ವರಿನಗರ, ಸಂಜೆ 7



ನವರಾತ್ರಿ ವಿಶೇಷ

ನವರಾತ್ರಿ ಮಹೋತ್ಸವದ ಅಂಗವಾಗಿ ‘ಧಾತು’ ಗೊಂಬೆಗಳ ಪ್ರದರ್ಶನ: ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: ದಸರಾ ಗೊಂಬೆಗಳ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11ರಿಂದ

ವಚನ ದಸರಾ: ವಚನ ಗಾಯನ: ಸುಲೋಚನ ಮತ್ತು ತಂಡ, ಶಾಂತ ಬಸವರಾಜು ಮತ್ತು ತಂಡ, ಅತಿಥಿಗಳು: ದಿಬ್ಬೂರು ಗಿರೀಶ್, ಸುಧಾ ನಾಗರಾಜ್, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, # 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಯುವ ದಸರಾ: ತಬಲಾ ವಾದನ: ಗುರುಮೂರ್ತಿ ವೈದ್ಯ, ಆಯೋಜನೆ: ಯುವಕ ಸಂಘ, ಸ್ಥಳ: ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 5.45

ತ್ರಿಮೂರ್ತಿ ದೇವಸ್ಥಾನದಲ್ಲಿ ಅಕ್ಷತೆ ಅಲಂಕಾರ: ಆಯೋಜನೆ ಹಾಗೂ ಸ್ಥಳ: ಶಿವಬಾಲಯೋಗಿ ಮಹಾರಾಜ್ ಟ್ರಸ್ಟ್, ಜೆ.ಪಿ.ನಗರ 3ನೇ ಹಂತ, ಸಂಜೆ 6

ದೇವಿಗೆ ಕುಂಕುಮ ಅಲಂಕಾರ: ಆಯೋಜನೆ, ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ವಿಭೂತಿ ಅಲಂಕಾರ: ನೃತ್ಯ: ಶ್ವೇತಾ ಬಾಬು, ತಂಡ, ಆಯೋಜನೆ, ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೆ.ಆರ್. ಪುರ, ಸಂಜೆ 6

ದುರ್ಗಾ ಪರಮೇಶ್ವರಿ ದೇವಿಗೆ ಅಲಂಕಾರ: ತರಕಾರಿ, ಕರ್ನಾಟಕ ಶಾಸ್ತ್ರೀಯ ಸಂಗೀತ: ದಿವ್ಯಾ ಗಿರಿಧರ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ದೇವಿಯರಿಗೆ ವಿಶೇಷ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೇವಿ ಸಲ್ಲಾಪುರಮ್ಮ, ದೇವಿ ರೇಣುಕಾಯಲ್ಲಮ್ಮ ದೇವಸ್ಥಾನ, ಮಾರೇನಹಳ್ಳಿ ಗ್ರಾಮ, ಜೆ.ಪಿ. ನಗರ, ಸಂಜೆ 6.30

ದೇವಿಗೆ ಅಲಂಕಾರ: ಕೌಮಾರಿ, ಭಕ್ತಿಗೀತೆಗಳು: ದೇವಸ್ಥಾನದ ಲಲಿತಕಲಾ ಕೇಂದ್ರದ ಮಕ್ಕಳಿಂದ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ದಸರಾ ಉತ್ಸವ: ಭರತನಾಟ್ಯ ಪ್ರದರ್ಶನ: ಶಾಂತಲಾ ತಂಡ, ಪ್ರಿಯಾಂಕಾ ತರುಣ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶಾಂತಲಾ ಆರ್ಟ್ಸ್ ಟ್ರಸ್ಟ್, ಯಶವಂತಪುರ, ಸಂಜೆ 6.30

ದೇವಿಗೆ ಅಲಂಕಾರ ಮತ್ತು ವಿಶೇಷ ಪೂಜೆ: ಆಯೋಜನೆ ಹಾಗೂ ಸ್ಥಳ: ಅಕ್ಕಯ್ಯಮ್ಮ ದೇವಾಲಯ ಟ್ರಸ್ಟ್, 1ನೇ ಅಡ್ಡರಸ್ತೆ, ಲಕ್ಕಸಂದ್ರ, ಸಂಜೆ 7

ದೇವಿಗೆ ಅಲಂಕಾರ: ನಾಣ್ಯ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್.ಪುರ, ಸಂಜೆ 7.30

ಶ್ರವಣ ಸಾಧನ ಉಚಿತ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಾದ್ ವಾಕ್ ಶ್ರವಣ ಸಂಸ್ಥೆ ಮತ್ತು ಬೆಂಗಳೂರಿನ ಅಲಿಮ್ಕೋ ಸಹಯೋಗದೊಂದಿಗೆ ಹಿಂದುಳಿದವರಿಗೆ ಉಚಿತ ಶ್ರವಣ ಸಾಧನ ವಿತರಣಾ ಶಿಬಿರವನ್ನು ಅ.3ರಿಂದ ಹಮ್ಮಿಕೊಂಡಿದೆ.

ಶ್ರವಣದೋಷವುಳ್ಳ ಸಮುದಾಯ ಸಬಲೀಕರಣಗೊಳಿಸುವ, ಶ್ರವಣ ಮತ್ತು ಮಾತಿನ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಸಂಸ್ಥೆಯ ಟ್ರಸ್ಟಿ ರಾಧಿಕಾ ಪೂವಯ್ಯ ತಿಳಿಸಿದ್ದಾರೆ

ನೋಂದಣಿ ಮತ್ತು ಹೆಚ್ಚಿನ ಮಾಹಿತಿಗೆ #18, 1ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಆನಂದಗಿರಿ ಎಕ್ಸ್‌ಟೆನ್ಶನ್, ಹೆಬ್ಬಾಳ ಪೊಲೀಸ್ ಠಾಣೆ ಹತ್ತಿರ, ಬೆಂಗಳೂರು-560024 ಸಂಪರ್ಕಿಸುವಂತೆ (ಮೊ:9663388623) ಕೋರಿದ್ದಾರೆ.

ವಿರೋಧದ ನಡುವೆ ಸೆ.26ರಿಂದ ‘ಕಾವೇರಿ ಆರತಿ’

ಪ್ರಜಾವಾಣಿ ವಾರ್ತೆ

ಮಂಡ್ಯ: ರೈತಸಂಘದ ಪ್ರಬಲ ವಿರೋಧದ ನಡುವೆಯೂ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆ ಬಳಿ ಸೆ.26ರಿಂದ 30ರವರೆಗೆ ‘ಕಾವೇರಿ ಆರತಿ’ ಕಾರ್ಯಕ್ರಮ ಆಯೋಜಿಸಲಾಗಿದೆ.

ಶಾಸಕ ರಮೇಶ ಬಂಡಿಸಿದ್ದೇಗೌಡ ಅವರು ಶ್ರೀರಂಗಪಟ್ಟಣದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿಯನ್ನು ಖಚಿತಪಡಿಸಿದ್ದಾರೆ.

‘ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ 5 ದಿನ ಕಾವೇರಿ ಆರತಿ ಸಮಾರಂಭವನ್ನು ವಿಜೃಂಭಣೆಯಿಂದ ಸಾಂಕೇತಿಕವಾಗಿ ಆಚರಿಸಲಾಗುವುದು. 26ರಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸಮಾರಂಭಕ್ಕೆ ಚಾಲನೆ ನೀಡಲಿದ್ದಾರೆ’ ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಂಪ್ಯೂಟರ್ ತರಬೇತಿ

ಬೆಂಗಳೂರು: ಕೆನರಾ ಬ್ಯಾಂಕ್ ವತಿಯಿಂದ ಉಚಿತ ಕಂಪ್ಯೂಟರ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕಂಪ್ಯೂಟರ್ ಆಫೀಸ್ ಅಡ್ಮಿನಿಸ್ಟ್ರೇಶನ್, ಟ್ಯಾಲಿ, ಡೆಸ್ಕ್‌ಟಾಪ್ ಪಬ್ಲಿಷಿಂಗ್ ಹಾಗೂ ಹಾರ್ಡ್‌ವೇರ್ ಮತ್ತು ನೆಟ್‌ವರ್ಕ್ ಅಡ್ಮಿನಿಸ್ಟ್ರೇಶನ್‌ನಲ್ಲಿ ಮೂರು ತಿಂಗಳ ಕಂಪ್ಯೂಟರ್ ಶಿಕ್ಷಣ ನೀಡಲಾಗುತ್ತದೆ. ತರಗತಿಗಳು ಅಕ್ಟೋಬರ್ 3ರಂದು ಪ್ರಾರಂಭವಾಗಲಿದ್ದು, 18 ರಿಂದ 30 ವರ್ಷ ವಯಸ್ಸಿನ ಸಾಮಾನ್ಯ ವರ್ಗದವರು ಹಾಗೂ 35 ವರ್ಷದೊಳಗಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ ವಿಳಾಸ: ನಿರ್ದೇಶಕರು, ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಚಿತ್ರಾಪುರ ಭವನ, ಮಲ್ಲೇಶ್ವರ, ಬೆಂಗಳೂರು, ಮಾಹಿತಿಗೆ: 080–23440036/ 94485 38107

ಸಾತನೂರು ಗ್ರಾ.ಪಂ ಉಪಾಧ್ಯಕ್ಷರ ಆಯ್ಕೆ


ಯಲಹಂಕ: ಜಾಲ ಹೋಬಳಿ ಸಾತನೂರು ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾಗಿ ಮಾಲ.ಎಂ ಸುಬ್ರಮಣಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಮಾಲ.ಎಂ ಸುಬ್ರಮಣಿ

ಜಾಹೇರ ತಸ್ನೀಂ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಮಂಗಳವಾರ ಚುನಾವಣಾ ಪ್ರಕ್ರಿಯೆ ನಡೆಯಿತು. ಒಟ್ಟು 11 ಸದಸ್ಯ ಬಲದ ಪಂಚಾಯಿತಿಯಲ್ಲಿ ಮಾಲ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಕೃಷ್ಣಪ್ಪ. ಎಂ, ಸದಸ್ಯರಾದ ಶಿವಣ್ಣ, ಮಾನಸ ಕೃಷ್ಣಪ್ಪ, ಸುಜಾತ ಆನಂದ್, ಅಶ್ವಿನಿ ನವೀನ್, ಮುನಿತಿಮ್ಮರಾಯಪ್ಪ ಇದ್ದರು.



ಸುಭಾಷಿತ

ಶರೀರವೇ ನಮ್ಮ ತೋಟ; ಮನಸ್ಸೇ ತೋಟಗಾರ.
–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿ ರಾಜಕೀಯ ಕಂದಕ ಹೆಚ್ಚಿಸಬೇಡಿ

ಬೆಂಗಳೂರಿನ ರಸ್ತೆಗಳ ದುರಸ್ತಿಗೆ ₹1,100 ಕೋಟಿ ಬಿಡುಗಡೆ ಮಾಡುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿರುವುದು, ರಸ್ತೆ ಗುಂಡಿಗಳಿಂದಾಗಿ ಹಾಗೂ ಸಂಚಾರ ದಟ್ಟಣೆಯಿಂದಾಗಿ ಹೈರಾಣಾಗಿರುವ ಬೆಂಗಳೂರಿನ ಜನರಲ್ಲಿ ಸಮಾಧಾನ ಮೂಡಿಸಬೇಕಿತ್ತು. ಆದರೆ, ಅನುದಾನ ಹಂಚಿಕೆಯಲ್ಲಿ ತಾರತಮ್ಯ ಆಗಿದೆ ಎಂದು ಬಿಜೆಪಿ ಆರೋಪಿಸುವುದರೊಂದಿಗೆ ಶಿವಕುಮಾರ್ ಅವರ ಈ ಘೋಷಣೆಯು ಇನ್ನೊಂದು ರಾಜಕೀಯ ವಿವಾದಕ್ಕೆ ಕಾರಣವಾಗಿದೆ. ಕಾಂಗ್ರೆಸ್ ಶಾಸಕರು ಇರುವ ಕ್ಷೇತ್ರಗಳಿಗೆ ತಲಾ ₹50 ಕೋಟಿ ಸಿಗಲಿದೆ, ಬಿಜೆಪಿಯ ಶಾಸಕರು ಇರುವ ಕ್ಷೇತ್ರಗಳಿಗೆ ತಲಾ ₹25 ಕೋಟಿ ಸಿಗಲಿದೆ ಎಂದು ವರದಿಯಾಗಿದೆ. ಇದು ಮಲತಾಯಿ ಧೋರಣೆ ಎಂದು ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ. ಆ ಪಕ್ಷದ ಆಕ್ರೋಶದಲ್ಲಿ ಹುರುಳಿಲ್ಲದಿಲ್ಲ. ರಸ್ತೆಗಳು ಮತ್ತು ಅವುಗಳಲ್ಲಿನ ಗುಂಡಿಗಳು ರಾಜಕೀಯ ಪಕ್ಷಗಳ ನಡುವೆ ತಾರತಮ್ಯ ಎಸಗುವುದಿಲ್ಲ. ತಮ್ಮ ಕ್ಷೇತ್ರವನ್ನು ಯಾವ ಪಕ್ಷದ ಮುಖಂಡ ಪ್ರತಿನಿಧಿಸುತ್ತಿದ್ದಾರೆ ಎನ್ನುವುದರ ಹೊರತಾಗಿ, ರಸ್ತೆಗುಂಡಿಗಳು ಬೆಂಗಳೂರಿಗರೆಲ್ಲರ ಸಂಕಷ್ಟ. ವ್ಯಂಗ್ಯವೆಂದರೆ, ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿದ್ದಾಗ ಕಾಂಗ್ರೆಸ್ ಪಕ್ಷವು ಅಂದು ಸರ್ಕಾರದ ಚುಕ್ಕಾಣಿ ಹಿಡಿದಿದ್ದ ಬಿಜೆಪಿಯ ಮೇಲೆ ಇದೇ ಬಗೆಯ ಆರೋಪವನ್ನು ಹೊರಿಸಿತ್ತು.



ಬೆಂಗಳೂರಿನ ರಸ್ತೆ ಗುಂಡಿಗಳು ರಾಜ್ಯ ರಾಜಕಾರಣದ ಸ್ಥಿತಿಗತಿಯ ಸಂಕೇತಗಳೂ ಹೌದು. ರಸ್ತೆ ಗುಂಡಿಗಳನ್ನು ಮುಚ್ಚುವ ವಿಷಯವೂ ರಾಜಕೀಯದ ಹಗ್ಗಜಗ್ಗಾಟ ಆಗಬಾರದು.

ಅನುದಾನದ ಹಂಚಿಕೆಯಲ್ಲಿ ಈ ಬಗೆಯ ವ್ಯತ್ಯಾಸಗಳು ಇರುವುದು ಕಳವಳಕಾರಿ ಬೆಳವಣಿಗೆಯೊಂದನ್ನು ಹೇಳುತ್ತಿವೆ: ಅದು ಚುನಾವಣೆಗಳಲ್ಲಿ ಲಾಭ ಪಡೆದುಕೊಳ್ಳುವ ಉದ್ದೇಶದಿಂದ ಅಭಿವೃದ್ಧಿ ಕೆಲಸಗಳನ್ನು ಅಸ್ತ್ರವನ್ನಾಗಿ ಬಳಕೆ ಮಾಡಿಕೊಳ್ಳುವುದು. 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ಕ್ಕೆ (ಜಿಬಿಎ) ಚುನಾವಣೆ ನಡೆಯಬೇಕಿದೆ. ಈ ಸಂದರ್ಭದಲ್ಲಿ ನಗರದ ಮೂಲಸೌಕರ್ಯ ಅಗತ್ಯಗಳಿಗೆ ಸಂಬಂಧಿಸಿದಂತೆ ಹಣ್ಣಾಗಿ ಬಿಜೆಪಿಯನ್ನು ದುರ್ಬಲಗೊಳಿಸುವ ಉದ್ದೇಶವನ್ನು ಕಾಂಗ್ರೆಸ್ ಪಕ್ಷವು ಹೊಂದಿರುವಂತೆ ಕಾಣುತ್ತಿದೆ. ಹೀಗೆ ಮಾಡಿದಾಗ ಆಡಳಿತದ ಮೂಲ ಪರಿಕಲ್ಪನೆಗೇ ಪೆಟ್ಟು ಕೊಟ್ಟಂತಾಗುತ್ತದೆ. ಕರ್ನಾಟಕದ ಆರ್ಥಿಕ ಚಟುವಟಿಕೆಗಳ ಹೃದಯದಂತೆ ಇರುವ ಬೆಂಗಳೂರು, ರಾಜ್ಯದ ತೆರಿಗೆ ವರಮಾನಕ್ಕೆ, ಇಲ್ಲಿನ ಉದ್ಯೋಗ ಮಾರುಕಟ್ಟೆಗೆ ಅಪಾರ ಕೊಡುಗೆಯನ್ನು ನೀಡುತ್ತಿದೆ. ಈ ನಗರಕ್ಕೆ ಬೇಕಿರುವುದು ಸಮಾನ ಅಭಿವೃದ್ಧಿ. ರಾಜಕೀಯ ಅಗತ್ಯಗಳಿಗೆ ತಕ್ಕಂತೆ ನಡೆಯುವ ಅಸಮಾನ ಅಭಿವೃದ್ಧಿ ಕಾರ್ಯಗಳು ಇಲ್ಲಿಗೆ ಬೇಕಿಲ್ಲ. 2023ರಲ್ಲಿ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದ್ದಾಗ ಅಂದು ಆಡಳಿತದ ಚುಕ್ಕಾಣಿ ಹಿಡಿದಿದ್ದ ಬಿಜೆಪಿಯು ಬೆಂಗಳೂರಿನ ರಸ್ತೆಗಳಿಗಾಗಿ ₹6,000 ಕೋಟಿ ಅನುದಾನ ನೀಡಿತ್ತು. ಆ ಹಣದಲ್ಲಿ ಹೆಚ್ಚಿನ ಪಾಲು ಗುಂಡಿಗಳನ್ನು ಮುಚ್ಚಲು ವಿನಿಯೋಗ ಆಯಿತು. ಹಿಂದೆಯೂ ಈಗ ಬೆಂಗಳೂರಿನ ಎಲ್ಲೆಡೆ ರಸ್ತೆಯಲ್ಲಿ ಗುಂಡಿಗಳಿವೆ. ಬೆಂಗಳೂರಿನ ರಸ್ತೆಗಳನ್ನು ಗುಂಡಿಮುಕ್ತ ಆಗಿಸಲಾಗುತ್ತದೆ ಎಂಬ ಆಶ್ವಾಸನೆಗಳನ್ನು ಇಲ್ಲಿನ ಜನ ಕೇಳುತ್ತಲೇ ಇದ್ದಾರೆ. ಆದರೆ ಆಶ್ವಾಸನೆ ಈಡೇರಿಸುವ ಸಾಮರ್ಥ್ಯವು ರಾಜಕೀಯ ಪಕ್ಷಗಳಿಗೆ ಇದೆ ಎಂಬ ನಂಬಿಕೆಯು ಅವರಲ್ಲಿ ಈಗ ಉಳಿದಿಲ್ಲ.

'ಪ್ರತಿ ಕ್ಷೇತ್ರಕ್ಕೂ ಅನುಕೂಲ ಆಗುತ್ತದೆ' ಎಂದು ಶಿವಕುಮಾರ್ ಭರವಸೆ ಇತ್ತಿದ್ದಾರೆ. ಆದರೆ ಅನುದಾನ ಹಂಚಿಕೆಯು ಸಮಾನವಾಗಿ ಇಲ್ಲದಿದ್ದರೆ ಈ ಭರವಸೆ ಟೊಳ್ಳಾಗಿ ಕಾಣುತ್ತದೆ. ಅನುದಾನ ಹಂಚಿಕೆಯಲ್ಲಿನ ಅಸಮಾನತೆಯು ಅಭಿವೃದ್ಧಿ ಕಾರ್ಯಗಳು ಅಸಮಾನ ಆಗುವಂತೆ ಮಾಡುತ್ತದೆ. ನಗರದ ಕೆಲವು ಪ್ರದೇಶಗಳಲ್ಲಿ ಕಾಮಗಾರಿಗಳು ಚೆನ್ನಾಗಿ ಆಗುತ್ತವೆ, ಇನ್ನು ಕೆಲವು ಪ್ರದೇಶಗಳಲ್ಲಿ ಕಾಮಗಾರಿಗಳು ನಿರ್ಲಕ್ಷ್ಯಕ್ಕೆ ಗುರಿಯಾಗುತ್ತವೆ. ಜಾಗತಿಕ ಮಟ್ಟದಲ್ಲಿ ಹೆಸರು ಸಂಪಾದಿಸಿರುವ ನಗರವೊಂದರ ಆಡಳಿತ ನಡೆಸುವ ಬಗೆ ಇದಲ್ಲ. ತಂತ್ರಜ್ಞಾನ ಮತ್ತು ಹೊಸ ಆವಿಷ್ಕಾರಗಳ ಕೇಂದ್ರ ಬೆಂಗಳೂರು. ಆದರೆ ಈ ನಗರದ ಮಹತ್ವಾಕಾಂಕ್ಷೆಗಳನ್ನು ಮೂಲಸೌಕರ್ಯದ ಕೊರತೆ ಹಾಗೂ ಕ್ಷುಲ್ಲಕ ರಾಜಕೀಯವು ತಿಂದುಹಾಕುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಶಿವಕುಮಾರ್ ಅವರು ರಾಜಕೀಯ ಗಡಿಗಳನ್ನು ಮೀರಿ, ಮುತ್ಸದ್ದಿಗಳಂತೆ ಕೆಲಸ ಮಾಡಲು ಇದು ಸುಸಮಯ. ನ್ಯಾಯಸಮ್ಮತವಾದ ಹಾಗೂ ಸಮಾನವಾದ ಸಮಾಜವನ್ನು ನಿರ್ಮಿಸುವ ಬಗ್ಗೆ ಅವರು ಆಗಾಗ ಮಾತನಾಡುತ್ತಾರೆ, ಈ ಮಾತುಗಳು ರಸ್ತೆಯಂತಹ ತೀರಾ ಅಗತ್ಯ ಮೂಲಸೌಕರ್ಯ ನಿರ್ಮಾಣದ ಮೂಲಕ ಕೃತಿರೂಪಕ್ಕೆ ಬರಬೇಕು. ಸಂಚಾರ ದಟ್ಟಣೆ, ರಸ್ತೆಯ ಸ್ಥಿತಿ, ಜನಸಂಖ್ಯೆಯಂತಹ ಸಂಗತಿಗಳನ್ನು ಪರಿಶೀಲಿಸಿ ಅನುದಾನ ಬಿಡುಗಡೆ ಮಾಡಬೇಕು; ಅನುದಾನ ಹಂಚಿಕೆಗೆ ಪಕ್ಷವು ಆಧಾರವಾಗಬಾರದು. ರಸ್ತೆ ಗುಂಡಿಗಳನ್ನು ಮುಚ್ಚಲಿ ಎಂದು ಜನ ಬಯಸುತ್ತಾರೆಯೇ ವಿನಾ ರಾಜಕೀಯ ಕಂದಕಗಳು ಹೆಚ್ಚಾಗಲಿ ಎಂದು ಅಪೇಕ್ಷಿಸುವುದಿಲ್ಲ. ಬೆಂಗಳೂರು ಬಹಳ ತುರ್ತಾಗಿ ರಿಪೇರಿ ಆಗಬೇಕು, ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತಾರತಮ್ಯ ಬೇಡ.

ಚಾಟಿ

ಸನ್ಮಾನದ ಹೆಸರಲ್ಲಿ ದುಂದು



ದಸರಾ ಉದ್ಘಾಟಕರನ್ನು ಸನ್ಮಾನಿಸುವುದು, ಸ್ಮರಣಿಕೆ ನೀಡುವುದು ಸರಿ. ಕಾರ್ಯಕ್ರಮದ ರೂವಾರಿಗಳೇ ಸಾಲು ಸಾಲು ಸನ್ಮಾನಕ್ಕೆ ಒಳಪಡುವುದು, ಸ್ಮರಣಿಕೆಗಳನ್ನು ಸ್ವೀಕರಿಸುವುದು ಎಷ್ಟು ಸಮಂಜಸ? ಮುಖ್ಯಮಂತ್ರಿ, ಮಂತ್ರಿಗಳು, ಶಾಸಕರು, ನಿಗಮ, ಮಂಡಳಿ, ಪ್ರಾಧಿಕಾರ, ಅಕಾಡೆಮಿ ಅಧ್ಯಕ್ಷರು, ಅಧಿಕಾರಿಗಳೆಲ್ಲ ಸನ್ಮಾನಕ್ಕೆ ಒಳಗಾದರು! ಈ ದುಂದುಗಾರಿಕೆ ಅಗತ್ಯವೇ? ನಮ್ಮ ಮನೆಯಲ್ಲಿ ನಾವೇ ಸನ್ಮಾನಕ್ಕೆ ಒಳಗಾಗಬೇಕೇ?

ಕುಮಾರ ರೈತ, ಪತ್ರಕರ್ತ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಶೇ 18ಕ್ಕಿಂತ ಹೆಚ್ಚು ಜಿಎಸ್‌ಟಿ ಬೇಡ ಎಂದು ರಾಹುಲ್ ಗಾಂಧಿ ಹೇಳಿದಾಗ ಬಿಜೆಪಿಯವರು ಹಾಸ್ಯ ಮಾಡಿದ್ದರು. ಈಗ ಅದನ್ನೇ ಜಾರಿಗೆ ತಂದಿದ್ದಾರೆ. 'ಜನರೇಷನ್ ನೆಕ್ಸ್ಟ್ ಟ್ಯಾಕ್ಸ್' ಅಂತಾ ಹೆಸರಿಟ್ಟಿದ್ದಾರೆ. ಪ್ರಪಂಚದಲ್ಲೇ ಇಂತಹ ತೆರಿಗೆ ವ್ಯವಸ್ಥೆ ಎಲ್ಲೂ ಇಲ್ಲ.

ಸಂತೋಷ್ ಲಾಡ್, ಕಾರ್ಮಿಕ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 24-9-2000

• **ತೈಲ ಬೆಲೆ ಏರಿಕೆಗೆ ಒಪ್ಪಿಗೆ**

ನವದೆಹಲಿ, ಸೆಪ್ಟೆಂಬರ್ 23– ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮತ್ತು ಸೀಮೆಎಣ್ಣೆ ಬೆಲೆ ಏರಿಕೆಗೆ ಕೇಂದ್ರ ಸಚಿವ ಸಂಪುಟ ಇಂದು ತಾತ್ವಿಕವಾಗಿ ಒಪ್ಪಿಗೆ ನೀಡಿದರೂ, ಈ ಕುರಿತ ಅಧಿಕೃತ ಪ್ರಕಟಣೆ ವಿಳಂಬವಾಗುವ ಸಾಧ್ಯತೆಯಿದೆ.

ಅಮೆರಿಕ ತನ್ನ ತೈಲನಿಧಿಯಿಂದ ಕಚ್ಚಾತೈಲವನ್ನು ಬಿಡುಗಡೆ ಮಾಡುವ ನಿರ್ಧಾರ ಕೈಗೊಂಡಿರುವ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಮತ್ತೆ ಇಳಿಯುವ ಸೂಚನೆ ಇಂದು ವ್ಯಕ್ತವಾಗಿರುವುದು ಮತ್ತು ಮುಂಬರುವ ದಿನಗಳಲ್ಲಿ ಹಬ್ಬಗಳಿರುವುದರಿಂದ ಸರ್ಕಾರ ಕೆಲವು ದಿನ ಕಾದು ನೋಡುವ ತೀರ್ಮಾನಕ್ಕೆ ಬಂದಿದೆ ಎನ್ನಲಾಗಿದೆ.

• **ಸೆಮಿಫೈನಲ್‌ಗೆ ಬೀನಾ ಮೋಳ್**

ಸಿಡ್ನಿ, ಸೆಪ್ಟೆಂಬರ್ 23– ಭಾರತದ ಬೀನಾಮೋಳ್ ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನಲ್ಲಿ ಇಂದು ಮಹಿಳಾ 400 ಮೀಟರ್ಸ್ ಓಟದ ಸೆಮಿಫೈನಲ್ ತಲುಪಿದರು. ಅಮೆರಿಕದ ಮಾರಿಸ್ ಗ್ರೀನ್ ಮತ್ತು ಮರಿಯನ್ ಜೋನ್ಸ್ ವಿಶ್ವ ವೇಗದ ರಾಜ–ರಾಣಿಯರೆನಿಸಿಕೊಂಡರು.

ಹಾಕಿಯಲ್ಲಿ ಭಾರತದ ಆಟಗಾರರು ಸ್ಪೇನ್ ವಿರುದ್ಧ 3–2 ಗೋಲುಗಳಿಂದ ಗೆಲುವು ಸಾಧಿಸಿ, ಸೆಮಿಫೈನಲ್ ತಲಪುವ ಹಾದಿಯನ್ನು ಇನ್ನಷ್ಟು ಸುಗಮಗೊಳಿಸಿಕೊಂಡಿದ್ದಾರೆ.

75 ವರ್ಷಗಳ ಹಿಂದೆ

ಭಾನುವಾರ, 24-9-1950

• **ಅಮೆರಿಕದಿಂದ ಗೋಧಿ ಆಮದು**

ನವದೆಹಲಿ, ಸೆಪ್ಟೆಂಬರ್ 23– ಮುಂದಿನ ವರ್ಷ ಅಮೆರಿಕ ಮತ್ತು ಕೆನಡಾದಿಂದ ಭಾರತವು ಗೋಧಿ ಆಮದು ಮಾಡಿಕೊಳ್ಳುವ ನಿರೀಕ್ಷೆಯಿದೆ.

ಈ ಕುರಿತು ಚರ್ಚಿಸಲು ಕೇಂದ್ರ ಆಹಾರ ಕಾರ್ಯದರ್ಶಿ ಆರ್.ಎಲ್. ಗುಪ್ತ ಅವರು, ಅಮೆರಿಕಕ್ಕೆ ಮೂರು ದಿನಗಳ ಭೇಟಿ ನೀಡಲಿದ್ದಾರೆ.

'ಬಾನು'ದಾರಿಯಲ್ಲಿ ಮುಂದೇನು?



ಪಡಸಾಲೆ

ರಘುನಾಥ ಚ.ಹ.

> ಕೋಮುದ್ವೇಷದ ಕೇಡುಗಳಿಗೆ 'ಕನ್ನಡ ವಿವೇಕ' ನೀಡಬಹುದಾದ ಉತ್ತರದ ರೂಪದಲ್ಲಿದೆ, ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಿದ ವಿದ್ಯಮಾನ. ಎಲ್ಲರನ್ನೂ ಒಳಗೊಳ್ಳುವ ಸೌಹಾರ್ದದ ಮಾದರಿಯೊಂದು ದಸರೆಯ ಮೂಲಕ ತೆರೆದುಕೊಂಡಿರುವುದನ್ನು ಸರ್ಕಾರ ಗಮನಿಸಬೇಕು ಹಾಗೂ ನಾಡಹಬ್ಬವನ್ನು ಸಾಮರಸ್ಯದ ಸಂಕೇತವಾಗಿ ರೂಪಿಸಬೇಕು.

ಹುಟ್ಟಿ-ಬೆಳೆದ ಪರಿಸರ ಹಾಗೂ ತಲೆಮಾರುಗಳ ಜೀವನ-ನಂಬಿಕೆಗಳ ಮೂಲಕ ರೂಪುಗೊಂಡ ವಿವೇಕವೊಂದು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನಮ್ಮ ಬದುಕಿನ ಭಾಗವಾಗಿರುತ್ತದೆ. ಆ ವಿವೇಕ ನಮ್ಮ ವ್ಯಕ್ತಿತ್ವವನ್ನು ರೂಪಿಸುವಂತೆ, ಸಮುದಾಯದ ಆರೋಗ್ಯಕ್ಕೂ ಪೂರಕವಾಗಿರುತ್ತದೆ; ಕೇಡು ಎದುರಾದ ಸಂದರ್ಭದಲ್ಲಿ ನೈತಿಕಶಕ್ತಿಯ ರೂಪದಲ್ಲಿ ಒದಗಿಬರುತ್ತದೆ. ಆದರೆ, ನಾಡು-ನುಡಿಯ ಮೂಲಕ ದತ್ತವಾದ ವಿವೇಕದಿಂದ ವಿಮುಖವಾಗುವ ಪ್ರಕ್ರಿಯೆಯೊಂದು ಇತ್ತೀಚಿನ ವರ್ಷಗಳಲ್ಲಿ ಚಾಲ್ತಿಯಲ್ಲಿದೆ. ಅದರ ಫಲವಾಗಿಯೇ, ನಮ್ಮ ನಡುವೆ ನಾವೇ ಎಬ್ಬಿಸಿಕೊಳ್ಳುತ್ತಿರುವ ಗೋಡೆಗಳು. ಆದರೆ, ಕೆಲವೊಮ್ಮೆ ನೆಲದ ವಿವೇಕ ಜಾಗೃತಗೊಂಡಾಗ, ವಿಭಜಕ ಗೋಡೆಗಳು ಕುಸಿದುಬೀಳುತ್ತವೆ. ಇದಕ್ಕೆ ಇತ್ತೀಚಿನ ನಿದರ್ಶನ: ಕಥೆಗಾರ್ತಿ ಬಾನು ಮುಷ್ತಾಕ್ ಅವರು ನಾಡಹಬ್ಬ ದಸರಾವನ್ನು ಉದ್ಘಾಟಿಸಿರುವ ವಿದ್ಯಮಾನ. ಒಂದು ವರ್ಗದ ಪ್ರತಿರೋಧದ ನಡುವೆಯೂ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಿರುವ ಘಟನೆ, ಮತೀಯ ಮನಸ್ಸುಗಳ ಕತ್ತಲೆಯ ಮೇಲೆ 'ಕನ್ನಡ ವಿವೇಕ'ದ 'ಎದೆಯ ಹಣತೆ' ಚೆಲ್ಲಿರುವ ಬೆಳುದಿಂಗಳು.

ನವರಾತ್ರಿಯ ಪ್ರಮುಖ ಉದ್ದೇಶವೇ ಸಮಾಜಘಾತುಕ ಶಕ್ತಿಗಳ ಧ್ವನಿ ಕುಗ್ಗಿಸಿ, ಶಾಂತಿ–ಸೌಹಾರ್ದದ ಸಂಕೇತಗಳನ್ನು ಮುನ್ನೆಲೆಗೆ ತರುವುದು. ಜಗದ ತಾಯಿ ಕೇಂದ್ರದಲ್ಲಿರುವ ಹಬ್ಬಕ್ಕೆ, ನಮ್ಮ ನಡುವಿನ ತಾಯಿಯೊಬ್ಬಳು ಚಾಲನೆ ನೀಡಿರುವುದು ಮಾತೃಶಕ್ತಿಗೆ- ಮಹಿಳೆಯರಿಗೆ- ನೀಡಿದ ಬಹುದೊಡ್ಡ ಮನ್ನಣೆಯೂ ಆಗಿದೆ. ಸರ್ಕಾರಿ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಟ್ಟಿರುವ 'ಶಕ್ತಿ' ಯೋಜನೆಯ ಮೂಲಕ ಸಾಧ್ಯವಾಗಬಹುದಾದ ಮಹಿಳಾ ಸಬಲೀಕರಣದ ಮತ್ತೊಂದು ಹೆಜ್ಜೆಯ ರೂಪದಲ್ಲಿ ದಸರಾ ಉದ್ಘಾಟನೆಯ ವಿದ್ಯಮಾನವನ್ನು ನೋಡಬೇಕಾಗಿದೆ.

ಉರಿಗೌಡ, ನಂಜೇಗೌಡ ಎನ್ನುವ ಕೋಮುದ್ವೇಷದ ರೂಪಕಗಳು ಸೃಷ್ಟಿಯಾದುದು ಇದೇ ನೆಲದಲ್ಲಿ. ಆ ಉರಿ-ನಂಜನ್ನೂ 'ಕನ್ನಡ ವಿವೇಕ' ಹಿಮ್ಮೆಟ್ಟಿಸಿತ್ತು. ಹಾಗೆಂದು, ಕೋಮುದ್ವೇಷದ ಅಟ್ಟಹಾಸದ ವಿರುದ್ಧ 'ಕನ್ನಡ ವಿವೇಕ' ಮೇಲುಗೈ ಸಾಧಿಸಿದೆ ಎಂದರ್ಥವಲ್ಲ. ಕಳೆದ ಕೆಲವು ವರ್ಷಗಳಲ್ಲಿ ಈ ನಾಡಿನ ವಿವೇಕ ಪರಂಪರೆ ಲಜ್ಜೆಯಿಂದ ತಲೆತಗ್ಗಿಸುವಂಥ ಅಹಿತಕರ ಘಟನೆಗಳ ಸರಣಿಗಳನ್ನು ನಾಡು ಕಂಡಿದೆ. ಹಿಜಾಬ್ ನೆಪದಲ್ಲಿ ಹೆಣ್ಣುಮಕ್ಕಳನ್ನು ತರಗತಿಗೆ ಬಿಟ್ಟುಕೊಳ್ಳದೆ, ಶಾಲಾ–ಕಾಲೇಜುಗಳ ಆಚೆ ನಿಲ್ಲಿಸಿದ್ದಕ್ಕೂ ಜಯಭಾರತ ಜನನಿಯ ತನುಜಾತೆ ಸಾಕ್ಷಿಯಾಗಿದ್ದಾಳೆ. ಸೌಹಾರ್ದದ ಸಂಕೇತಗಳಾಗಿದ್ದ ಊರದೇವರ ಜಾತ್ರೆ, ಉತ್ಸವಗಳಲ್ಲಿ ಧರ್ಮದ ಗೋಡೆಗಳು ಧುತ್ತನೆದ್ದು ನಿಂತಿರುವುದನ್ನೂ ಕನ್ನಡದೇವಿ ನೋಡಿದ್ದಾಳೆ. ಸರ್ವ ಜನಾಂಗದ ಶಾಂತಿಯ ತೋಟ ಎನ್ನುವ ಆಶಯ ಹುಸಿಯಾಗುವ ವಿದ್ಯಮಾನಗಳೇ ಹೆಚ್ಚುತ್ತಿರುವ ಸಂದರ್ಭದಲ್ಲಿ ಉರಿಗೌಡ-ನಂಜೇಗೌಡರಂಥ ದುಷ್ಟ ಪರಿಕಲ್ಪನೆಗಳ ನಿರಾಕರಣೆ ಹಾಗೂ ಹೊಸ ಹೊಳಪಿನ ದಸರಾ ಆಚರಣೆ, ಸಣ್ಣ ಆಶಾವಾದ ಮೂಡಿಸುವ ಸೌಹಾರ್ದದ ನಡೆಗಳಾಗಿವೆ.

ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸಿರುವ ರಾಜ್ಯ ಸರ್ಕಾರದ ಕ್ರಮಕ್ಕೆ ಹಲವು ಆಯಾಮಗಳ ಮಹತ್ವವಿದೆ. ಬುಕರ್ ಪುರಸ್ಕೃತ ಕಥೆಗಾರ್ತಿಗೆ ಸಂದ ಮನ್ನಣೆಯ ರೂಪದಲ್ಲಿ ನಾಡಹಬ್ಬದ ಉದ್ಘಾಟನೆಯ ಅವಕಾಶವನ್ನು ಬಾನು ಅವರಿಗೆ ನೀಡಲಾಗಿದ್ದರೂ, ಅದು ಮೇಲ್ನೋಟದ ಒಂದು ಕಾರಣವಷ್ಟೇ. ಬಾನು ಅವರ ಕಥೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ ದೀಪಾ ಬಸ್ತಿ ಅವರಿಗೂ ಬುಕರ್ ಪ್ರಶಸ್ತಿ ಸಂದಿರುವುದರಿಂದ, ದಸರಾ ಉದ್ಘಾಟನೆಯ ಅವಕಾಶ ಅವರಿಗೂ ಸಲ್ಲಬೇಕಿತ್ತು ಎನ್ನುವ ವಾದಗಳು ಈಗಲೂ ಚಾಲ್ತಿಯಲ್ಲಿವೆ. ದೀಪಾ ಅವರನ್ನು ಮುಂದಿಟ್ಟುಕೊಂಡು ಬಾನು ಅವರ ಆಯ್ಕೆ ಅನ್ಯಾಯದ್ದು ಎಂದು ಬಿಂಬಿಸುವ ಜಾಣಪ್ರಯತ್ನಗಳ ಹಿಂದೆ ಅನುವಾದಕಿಯ ಕುರಿತಾದ ಕಾಳಜಿಗಿಂತಲೂ ಹೆಚ್ಚಾಗಿ, ಬಾನು ಅವರನ್ನು ಅನ್ಯಕೋಮಿನ ಮಹಿಳೆಯಾಗಿ ಬಿಂಬಿಸುವ ಕೋಮುಕಾಮಾಲೆಯ ಕಣ್ಣುಗಳಿವೆ. ಬುಕರ್ ಪ್ರಶಸ್ತಿಯನ್ನು ಮುಂದು ಮಾಡಿಕೊಂಡು ಚರ್ಚಿಸುವವರು, ನಾಡಹಬ್ಬವನ್ನು ಉದ್ಘಾಟಿಸಲು ಬಾನು ಅವರಿಗಿರುವ ಅರ್ಹತೆಗಳನ್ನು ಗೌಣಗೊಳಿಸುತ್ತಿದ್ದಾರೆ. ವಕೀಲರಾಗಿ, ಬಂಡಾಯ ಚಳವಳಿಯ ಭಾಗವಾಗಿ ಸಮಾಜದೊಂದಿಗೆ ಅವರು ರೂಪಿಸಿಕೊಂಡ ಅನುಬಂಧ, ಬರಹಗಾರ್ತಿಯಾಗಿ ಅವರು ಮಾಡಿದ ಸಾಧನೆಯಷ್ಟೇ ದೊಡ್ಡದು ಅಥವಾ ಅದಕ್ಕೂ ಮಿಗಿಲಾದುದು. ಮುಸ್ಲಿಂ ಸಮುದಾಯದ ಮಹಿಳೆಯೊಬ್ಬರು ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರದಲ್ಲಿನ ಅಡೆತಡೆಗಳನ್ನು ಮೀರಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಹಾಗೂ ನಾಡಿನ ವಿವೇಕ ಪರಂಪರೆಯ ಭಾಗವಾಗುವುದು ಭಾರತೀಯ ಸಂದರ್ಭದಲ್ಲಿ ಅಸಾಧಾರಣ ಸಾಧನೆಯೇ ಸರಿ. ಈ ಸಾಧನೆಯ ಕಾರಣದಿಂದಾಗಿಯೇ ಬಾನು ಅವರು ದಸರಾ ಉದ್ಘಾಟನೆಯ ವೇದಿಕೆ ಏರುವುದು ಸಾಧ್ಯವಾಗಿದೆ, ಅದು ಅರ್ಹವೂ ಆಗಿದೆ. ಈ ವಾಸ್ತವವನ್ನು ಮರೆತು, ಬಾನು ಅವರ ಛಾಯೆಯ ರೂಪದಲ್ಲಿ ದೀಪಾ ಅವರನ್ನು ನೋಡಲು ಪ್ರಯತ್ನಿಸುವುದು ಬಾನು ಅವರಿಗೆ ಮಾಡುವ ಅನ್ಯಾಯದಂತೆಯೇ, ದೀಪಾ ಅವರಿಗೆ ಎಸಗುವ ಅನ್ಯಾಯವೂ ಹೌದು. ಸ್ವತಂತ್ರ ಕೃತಿಗೂ ಅನುವಾದದ ಮರುಸೃಷ್ಟಿಗೂ ಇರುವ ವ್ಯತ್ಯಾಸವನ್ನು ಅರಿಯದೆ ಹೋಗುವುದು ಸಾಹಿತ್ಯಕ್ಕೆ ಎಸಗುವ ಅಪಚಾರವೂ ಹೌದು.

ಬಾನು ಅವರನ್ನು ನಾಡಹಬ್ಬದ ಕೇಂದ್ರಕ್ಕೆ ಕರೆತಂದ ಸರ್ಕಾರದ ನಿರ್ಧಾರ, ಸಾಂವಿಧಾನಿಕ ಸರ್ಕಾರವೊಂದು ಹೊಂದಿರಬೇಕಾದ ಜಾತ್ಯತೀತ ನಿಲುವಿನ ಪ್ರಬುದ್ಧತೆಯಾಗಿದೆ. ಅಲ್ಪಸಂಖ್ಯಾತ ಸಮುದಾಯವನ್ನು ಈ ನೆಲದ, ಸಂಸ್ಕೃತಿಯ ಭಾಗವಾಗಿ ನೋಡುವ ಪ್ರಜಾಪ್ರಭುತ್ವದ ವಿವೇಕ ಹಾಗೂ ಎಲ್ಲರನ್ನೂ ಒಳಗೊಳ್ಳುವ ಸಾಧ್ಯತೆಯನ್ನು ಪ್ರಸಕ್ತ ದಸರಾ ಅನಾವರಣಗೊಳಿಸಿದೆ.

ನಾಡಹಬ್ಬಕ್ಕೆ ಬಾನು ಮುಷ್ತಾಕ್ ಅವರು ಚಾಲನೆ ನೀಡಿದ ಪ್ರಸಂಗ ಒಂದು ಆಕಸ್ಮಿಕ ಅಥವಾ ಸಾಂದರ್ಭಿಕ ಪ್ರತಿಕ್ರಿಯೆಯ ರೂಪದಲ್ಲಷ್ಟೇ ಕೊನೆಗೊಳ್ಳಬಾರದು. ಈ ವಿದ್ಯಮಾನ, ಮುಂದಿನ ವರ್ಷಗಳ ದಸರೆ ಹೇಗಿರಬೇಕು ಎನ್ನುವುದಕ್ಕೆ ದಾರಿ ಹಾಗೂ ಮಾದರಿಯಾಗಿ ಉಳಿಯದೆ ಹೋದರೆ, ಬಾನು ಅವರ ಆಯ್ಕೆ ರಾಜಕೀಯ ಲೆಕ್ಕಾಚಾರದ ಒಂದು ನಡೆಯಷ್ಟೇ ಆಗಿ ಚರಿತ್ರೆಯಲ್ಲಿ ಉಳಿಯುತ್ತದೆ.

ಮೈಸೂರು ದಸರಾ ಆಚರಣೆಯನ್ನು 'ನಾಡಹಬ್ಬ' ಎಂದು ಬಿಂಬಿಸಲಾಗುತ್ತಿದ್ದರೂ, ಆ ಆಚರಣೆಗೆ ಧಾರ್ಮಿಕ ಆಯಾಮವಿರುವುದು ಸ್ಪಷ್ಟ. ಆ ಧಾರ್ಮಿಕ ಆಯಾಮ, ಜಾತಿ–ಧರ್ಮಗಳ ಹೆಸರಿನಲ್ಲಿ ಸಾಮಾಜಿಕ ಅಸಮಾನತೆಯನ್ನು ಜೀವಂತವಾಗಿಡಲು ಬಯಸುವ ಕೆಲವರಿಗೆ ಪೂರಕವಾಗಿಯೂ ಒದಗಿಬರುತ್ತಿರುವಂತಿದೆ. ದಸರಾದಲ್ಲಿ ಚಾಮುಂಡಿದೇವಿಗೆ ಸನಾತನ ಧರ್ಮದವರು ಮಾತ್ರ ಹೂ ಮುಡಿಸಬೇಕೇ ಹೊರತು, ದಲಿತ ಮಹಿಳೆಗೆ ಆ ಅವಕಾಶವಿಲ್ಲ ಎಂದು ಶಾಸಕರೊಬ್ಬರು ಹೇಳಿದ ಮಾತಿನಲ್ಲಿ ಮಹಿಳೆಯ ಬಗೆಗಿನ ಪೂರ್ವಗ್ರಹ ಇರುವಂತೆಯೇ ದಲಿತರ ಬಗೆಗಿನ ತೀವ್ರ ಅಸಹನೆಯೂ ಸ್ಪಷ್ಟವಾಗಿದೆ. ಇಂಥ ಅಸಹನೆಗೆ ಉತ್ತರದ ರೂಪದಲ್ಲಿ ಬಾನು ಮುಷ್ತಾಕ್ ಅವರು ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿದ ವಿದ್ಯಮಾನಕ್ಕೆ ವಿಶೇಷ ಮಹತ್ವವಿದೆ. ಈ ಪರಂಪರೆ ಮುಂದಿನ ವರ್ಷಗಳಲ್ಲೂ ಮುಂದುವರಿಯುವುದು, ದಸರೆಯನ್ನು ನಿಜವಾದ ಅರ್ಥದಲ್ಲಿ 'ನಾಡಹಬ್ಬ' ಆಗಿಸುವುದಕ್ಕಾಗಿ ಅಗತ್ಯ. ಚಾಮುಂಡಿದೇವಿಯನ್ನು ಪೂಜಿಸುವ ಎಲ್ಲ ಹಕ್ಕು–ಅರ್ಹತೆ ದಲಿತ ಮಹಿಳೆಗಿದೆ ಎನ್ನುವುದಕ್ಕೆ ಸಂಕೇತವಾಗಿ, ಮುಂದಿನ ವರ್ಷದ ದಸರಾ ಉದ್ಘಾಟನೆ ದಲಿತ ಮಹಿಳೆಯಿಂದ, ಅದರಲ್ಲೂ ಪೌರಕಾರ್ಮಿಕ ಮಹಿಳೆಯಿಂದ ನಡೆಯಬೇಕು ಎನ್ನುವ ಸಾರ್ವಜನಿಕ ಚಿಂತನೆಯೊಂದು ಈಗಾಗಲೇ ರೂಪುಗೊಳ್ಳುತ್ತಿದೆ. ಈ ಚಿಂತನೆಗೆ ಸರ್ಕಾರ ಕಿವಿಗೊಡಬೇಕು. ಪೌರಕಾರ್ಮಿಕ ಮಹಿಳೆಯಿಂದ ದಸರಾಕ್ಕೆ ಚಾಲನೆ ದೊರೆಯುವುದು, 'ಸ್ವಚ್ಛಭಾರತ' ಆಂದೋಲನಕ್ಕೆ ಪೂರಕವಾಗಿಯೂ ಇದೆ. 'ಜಗದ ಜಲಗಾರ'ರನ್ನು ಗೌರವಿಸುವುದು, ತನಗೆ ತಾನೇ ಶಾಪವಾಗಿ ಹೇರಿಕೊಂಡಿರುವ ಅಸ್ಪೃಶ್ಯತೆಯಿಂದ ಹೊರಬರಲು ಮುಖ್ಯವಾಹಿನಿ ಮಾಡಬಹುದಾದ ಸಣ್ಣಪ್ರಯತ್ನವೂ ಹೌದು.

ಕೋಮುದ್ವೇಷದ ಸಾರ್ವಜನಿಕ ಆಚರಣೆಗಳು ರಾಜಕೀಯ ಬಂಡವಾಳದ ರೂಪದಲ್ಲಿ ಚಾಲ್ತಿಯಲ್ಲಿರುವಾಗ, ಸರ್ಕಾರವೇ ಆಚರಿಸುವ ದಸರಾವನ್ನು ಸೌಹಾರ್ದದ ಸಂಕೇತವಾಗಿಸುವುದು ಸಾಮಾಜಿಕ ಕಾಳಜಿಯ ಬಗ್ಗೆ ನಂಬಿಕೆಯುಳ್ಳ ಸರ್ಕಾರದ ಕರ್ತವ್ಯವಾಗಿದೆ. ದಸರಾ ಉದ್ಘಾಟನೆಯ ಜೊತೆಗೆ, 'ಜಂಬೂಸವಾರಿ' ಮೆರವಣಿಗೆಯನ್ನೂ ಸೌಹಾರ್ದದ ನಡಿಗೆಯಾಗಿ ಸರ್ಕಾರ ರೂಪಿಸಬಹುದಾಗಿದೆ. ಸೌಹಾರ್ದ ಸಮಾಜದ ಬಗ್ಗೆ ಹಂಬಲವುಳ್ಳ ಎಲ್ಲರೂ ಜಂಬೂಸವಾರಿ ಭಾಗವಾಗುವುದು, ಸಂವಿಧಾನದ ಆಶಯಗಳು ಮೆರವಣಿಗೆಯಲ್ಲಿ ಅನುರಣಿಸುವಂತೆ ನೋಡಿಕೊಳ್ಳುವುದು, ಇಡೀ ದೇಶಕ್ಕೆ ಕರ್ನಾಟಕ ನೀಡಬಹುದಾದ ಬಹುದೊಡ್ಡ ಸಂದೇಶ ಆಗಲಿದೆ. ಕವಿರಾಜಮಾರ್ಗಕಾರ, ಪಂಪ, ವಚನಕಾರರು, ದಾಸರು ಸೇರಿದಂತೆ ಕುವೆಂಪು, ರಾಜ್‌ಕುಮಾರ್‌ವರೆಗೆ 'ಕನ್ನಡ ವಿವೇಕ' ಪರಂಪರೆ ಸೌಹಾರ್ದದ ಹಲವು ಮಾದರಿಗಳನ್ನು ದೇಶದ ಮುಂದಿಟ್ಟಿದೆ. ಆ ಮಾದರಿಯ ಮುಂದುವರಿಕೆಯಾಗಿ ದಸರೆಯನ್ನು ರೂಪಿಸುವ ಸಾಧ್ಯತೆಯಿದೆ. ಧಾರ್ಮಿಕಶಕ್ತಿಯಾಗಿರುವ ಚಾಮುಂಡೇಶ್ವರಿ ಸಾಂವಿಧಾನಿಕಶಕ್ತಿಯ ಅವತಾರ ತಾಳಬೇಕಿರುವುದು ವರ್ತಮಾನವೇ ಸೃಷ್ಟಿಸಿರುವ ಒತ್ತಡವಾಗಿದೆ.

ಬಾನು ಅವರು ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಸಲ್ಲಿಸಿ, ಆರತಿ ಸ್ವೀಕರಿಸಿರುವುದು ಸಾಂವಿಧಾನಿಕ ಮನಃಸ್ಥಿತಿಗೆ ವಿರುದ್ಧವಾದ ಹಾಗೂ ಧಾರ್ಮಿಕ ಸಂಕೇತಗಳನ್ನು ಬಲಪಡಿಸುವಂತಹ ನಡೆಯಾಗಿ ಕೆಲವರಿಗೆ ಕಾಣಿಸಿದೆ. ಹಾಗೆ ಕಾಣಿಸುವುದು ಅಸಹಜವೇನೂ ಅಲ್ಲ. ಆದರೆ, ಧಾರ್ಮಿಕ ಭಾವುಕತೆಯಲ್ಲಿ ವರ್ತಮಾನದ ಸಂಕಟಗಳೆಲ್ಲವನ್ನೂ ಮರೆತಿರುವ ದೇಶದಲ್ಲಿ, ಪೂರ್ಣಪ್ರಮಾಣದಲ್ಲಿ ಧಾರ್ಮಿಕ ಸಂಕೇತಗಳನ್ನು ನಿರಾಕರಿಸುವುದು ಅಥವಾ ಮೀರುವುದು ಜನಸಮೂಹದಿಂದ ದೂರವಾಗುವ ನಡವಳಿಕೆಯೇ ಆಗಿದೆ. ಧಾರ್ಮಿಕ ಪ್ರಜಾಪ್ರಭುತ್ವದ ಮೂಲಕವೇ ಸಾಮಾಜಿಕ ಸಾಮರಸ್ಯದ ಸಾಧ್ಯತೆಗಳನ್ನು ಕಂಡುಕೊಳ್ಳಬೇಕಾದ ಸವಾಲನ್ನು ಎದುರಿಸುವ ರಾಜಕೀಯ ಜಾಣ್ಮೆ ರೂಪುಗೊಳ್ಳದೆ ಹೋದರೆ, ಜನಸಾಮಾನ್ಯರ ಮೇಲಿನ ಮತೀಯಶಕ್ತಿಗಳ ಹಿಡಿತ ಮತ್ತಷ್ಟು ಬಲಗೊಳ್ಳುತ್ತಲೇ ಹೋಗುತ್ತದೆ.



ವಾಚಕರ ವಾಣಿ

ರಸ್ತೆಯಲ್ಲಿ ಕೊಳಚೆ ನೀರಿನ ಪ್ರವಾಹ

ಮ್ಯಾನ್‌ಹೋಲ್‌ನಿಂದ ಉಕ್ಕಿ ಬರುವ ಕೊಳಚೆ ನೀರಿನ ಪ್ರವಾಹವು ಮಳೆಗಾಲದಲ್ಲಿ ಪಾದಚಾರಿಗಳು ಎದುರಿಸಬೇಕಾದ ಸಮಸ್ಯೆಗಳಲ್ಲಿ ಒಂದು. ಇಂತಹ ಸನ್ನಿವೇಶದಲ್ಲಿ ನೀರಿನ ಮೂಲಕ ಹರಡುವ ಸಾಂಕ್ರಾಮಿಕ ಕಾಯಿಲೆಗಳ ಸಾಧ್ಯತೆಯೂ ಜಾಸ್ತಿ. ಈ ಸಮಸ್ಯೆಗೆ ಮೂರು ಆಯಾಮಗಳಿವೆ. ಮೊದಲನೆಯದು, ಜೋರು ಮಳೆ ಬಂದಾಗ ಪ್ರವಾಹದ ಹಾವಳಿ ಹೆಚ್ಚು. ಎರಡನೆಯದು, ತಗ್ಗು ಪ್ರದೇಶದ ಮ್ಯಾನ್‌ಹೋಲ್‌ನಿಂದಲೇ ಕೊಳಚೆ ನೀರು ಉಕ್ಕುತ್ತದೆ. ಎಂದರೆ, ಕಟ್ಟಡಗಳ ಮೇಲೆ ಬೀಳುವ ನೀರನ್ನು ಮಳೆನೀರಿನ ಇಂಗುಗುಂಡಿ, ರಾಜಕಾಲುವೆಗೆ ಹರಿಯಬಿಡುವುದರ ಬದಲು, ಒಳಚರಂಡಿಗೆ ಹರಿಯಬಿಡಲಾಗಿದೆ. ಮೂರನೆಯದು, ಈ ಸಮಸ್ಯೆ ಬಹಳ ವರ್ಷದಿಂದ ಪರಿಹಾರವಾಗಿಲ್ಲ ಎಂದರೆ ಅಧಿಕಾರಿಗಳ ಗಮನ ಈ ಕಡೆಗೆ ಹರಿದಿಲ್ಲ. ಈ ಸಮಸ್ಯೆಗೆ ಪರಿಹಾರವೂ ಸರಳ. ಮೊದಲು, ಈ ಸಮಸ್ಯೆ ಎಲ್ಲೆಲ್ಲಿ ಇದೆ ಎಂದು ಗುರುತಿಸಬೇಕು. ನಂತರ, ಮೇಲು ಪ್ರದೇಶದಿಂದ ಬರುವ ಮಳೆಯ ನೀರನ್ನು ರಾಜಕಾಲುವೆಗೆ ಹರಿಯಬಿಡಬೇಕು. ಈ ವ್ಯವಸ್ಥೆ ಸರಿಯಾಗಿ ನಡೆದಿದೆಯೋ ಇಲ್ಲವೋ ಎಂಬುದರ ಮೇಲೆ ನಿಗಾ ಇಡಬೇಕು. ಈ ಕಾರ್ಯದಲ್ಲಿ ನಿವಾಸಿಗಳ ಕಲ್ಯಾಣ ಸಂಘಗಳ ಸಹಭಾಗಿತ್ವವೂ ಅಗತ್ಯ.

ಸಿ. ಶಾಮಸುಂದರ್, ಬೆಂಗಳೂರು

ಹಿಂದುಳಿದವರ ಅಭ್ಯುದಯಕ್ಕೆ ಅಡ್ಡಗಾಲು ಬೇಡ

ರಾಜ್ಯದಲ್ಲಿರುವ ಹಿಂದುಳಿದ ಜಾತಿಗಳ ಸ್ಥಿತಿಗತಿ ತಿಳಿದುಕೊಳ್ಳಲು ಸಮೀಕ್ಷೆ ಅನಿವಾರ್ಯ. ಇದಕ್ಕಾಗಿಯೇ ರಾಜ್ಯ ಸರ್ಕಾರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದೆ. ಸಮ ಸಮಾಜದ ನಿರ್ಮಾಣಕ್ಕೆ ಇಂತಹ ಸಮೀಕ್ಷೆಗಳು ಕಾಲಕಾಲಕ್ಕೆ ಅನಿವಾರ್ಯವೂ ಹೌದು. ಸಮೀಕ್ಷೆಯಿಂದ ಹೊರಬರುವ ದತ್ತಾಂಶ ಆಧರಿಸಿ ಅತ್ಯಂತ ಹಿಂದುಳಿದ ಜಾತಿಗಳ ಅಭ್ಯುದಯಕ್ಕೆ ಕಾರ್ಯಕ್ರಮಗಳನ್ನು ರೂಪಿಸಲು ಸರ್ಕಾರಕ್ಕೆ ಸಾಧ್ಯವಾಗಲಿದೆ. ಆದರೆ, ಪ್ರಬಲ ಜಾತಿಯ ನಾಯಕರು ಮತ್ತು ವಿರೋಧ ಪಕ್ಷದವರು ಸಮೀಕ್ಷೆಗೆ ಆಕ್ಷೇಪಿಸುವುದು ಸರಿಯಲ್ಲ. ಒಳ್ಳೆಯ ಕಾರ್ಯಕ್ರಮಗಳನ್ನು ಬೆಂಬಲಿಸುವುದು ವಿಪಕ್ಷಗಳ ಜವಾಬ್ದಾರಿ.

ಆಂಜನೇಯ, ಯರಮರಸ್

ಜಾತಿವಾದಿಗಳ ಸೋಗಿಗೆ ಕೊನೆಯಿಲ್ಲವೇ?

'ಜೋಪಡಿವಾಸಿಗಳು ಕೆಳಮಟ್ಟದವರೇ?' (ಪ್ರ.ವಾ., ಸೆ. 23) ವರದಿ ಜಾತಿಗ್ರಸ್ತ ಸಮಾಜದ ಮನಃಸ್ಥಿತಿಗೆ ಹಿಡಿದಿರುವ ಕನ್ನಡಿ. ದೇವಸ್ಥಾನದ ಪಕ್ಕದಲ್ಲಿ ಕೊಳೆಗೇರಿ ನಿವಾಸಿಗಳಿಗೆ ಪುನರ್ವಸತಿ ನಿರ್ಮಿಸಿದರೆ ದೇಗುಲದ ಪಾವಿತ್ರ್ಯಕ್ಕೆ ಧಕ್ಕೆ ಬರುತ್ತದೆ ಎಂಬ ಭಕ್ತರ ಸೋಗಿನ ಜಾತಿವಾದಿಗಳ ವಾದಕ್ಕೆ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ನೀಡಿರುವ ಪ್ರತಿಕ್ರಿಯೆ ಸರಿಯಾಗಿದೆ. ಹಿಂದೂ ನಾವೆಲ್ಲ ಒಂದು ಎಂದು ಹೇಳುವ ಒಂದುತ್ವವಾದಿಗಳು ಇಂತಹ ವಿಚಾರಗಳನ್ನು ಮುಂದಿಟ್ಟುಕೊಂಡು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೋರಾಟಗಳನ್ನು ರೂಪಿಸಬೇಕು.

ರಾಜು ವೆಂಕಟಪ್ಪ, ಬೆಂಗಳೂರು

ಎಲ್ಲದ್ದಕ್ಕೂ 'ಭೀಮೆ' ತಳಕು ಸರಿಯಲ್ಲ

ಇತ್ತೀಚೆಗೆ ಚಡಚಣ ತಾಲ್ಲೂಕಿನ ದೇವರ ನಿಂಬರಗಿಯಲ್ಲಿ ಗ್ರಾ.ಪಂ. ಮಾಜಿ ಅಧ್ಯಕ್ಷರೊಬ್ಬರ ಹತ್ಯೆಯಾಗಿತ್ತು. ಟಿ.ವಿ. ವಾಹಿನಿಗಳು 'ಭೀಮಾತೀರದಲ್ಲಿ ಮತ್ತೆ ಗುಂಡಿನ ಸದ್ದು' ಎಂಬ ಶೀರ್ಷಿಕೆಯಡಿ ಮೂರ್ನಾಲ್ಕು ದಿನದವರೆಗೆ ಅತಿರಂಜಿತವಾಗಿ ಸುದ್ದಿ ಬಿತ್ತರಿಸಿದ್ದವು. ಎಲ್ಲಿಯ ಭೀಮಾನದಿ? ಎಲ್ಲಿಯ ದೇವರ ನಿಂಬರಗಿ? ಈ ಗ್ರಾಮವು 30ಕ್ಕೂ ಹೆಚ್ಚು ಕಿ.ಮೀ. ದೂರದಲ್ಲಿದೆ.

ನದಿ ದಡದಲ್ಲಿ ಮಣ್ಣೂರ ಎಲ್ಲಮ್ಮ ದೇವಿ ದೇಗುಲ, ಘತ್ತರಗಿಯ ಭಾಗ್ಯವಂತಿ ದೇಗುಲ ಹಾಗೂ ಗಾಣಗಾಪೂರದ ದತ್ತಾತ್ರೇಯ ದೇವಸ್ಥಾನವಿದೆ. ರೈತರು ಕೃಷಿ ಚಟುವಟಿಕೆಯೊಂದಿಗೆ ನೆಮ್ಮದಿಯಾಗಿದ್ದಾರೆ. ಆದರೆ, ಈ ಭಾಗದಲ್ಲಿ ಏನೇ ಅಪರಾಧ ಘಟಿಸಿದರೂ 'ಭೀಮೆ'ಯ ಹೆಸರು ತಳುಕು ಹಾಕುವುದು ಸರಿಯಲ್ಲ.

ಗುರುರಾಜ ಪಾಟೀಲ, ಇಂಡಿ

ಚಾಣಾಕ್ಷತನ

ಮನಗಳ್ಳತನ
ಮನೆಕಳ್ಳತನ
ಮತಕಳ್ಳತನ
ಈಗ ಶುರುವಾಗಿದೆ
ಜಾತಿಗಳ್ಳತನ
ನಮ್ಮ'ತನ'ವೇ ಇಲ್ಲದ
ಚಾಣಾಕ್ಷತನ

ಹೆಚ್.ವಿ. ಶ್ರೀಧರ್, ಬೆಂಗಳೂರು

ಶಾಲೆಗೆ ಹೋರಾಡಿದ ಸ್ವಾಮೀಜಿ ಇರುವರೆ?

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಹಲವು ಸ್ವಾಮೀಜಿಗಳು ಪ್ರತಿದಿನ ತಮ್ಮ ಸಮುದಾಯಗಳಿಗೆ ಜಾತಿ, ಧರ್ಮದ ಹೆಸರು ನಮೂದಿಸಲು ಹೇಳುತ್ತಿದ್ದಾರೆ. ಲಿಂಗ–ಧರ್ಮ, ಜಾತಿ–ಮತ ಎಲ್ಲವನ್ನೂ ಮೀರಿ ವರ್ತಿಸಬೇಕಾದ ಪೂಜ್ಯರೇ, ನಿರ್ದಿಷ್ಟ ಜಾತಿವಾರು ಹೇಳಿಕೆ ನೀಡುವುದು ಎಷ್ಟು ಸರಿ. ನಿರ್ದಿಷ್ಟ ಜಾತಿಯ ಮೀಸಲಾತಿಗಾಗಿ, ನಿರ್ದಿಷ್ಟ ಜಾತಿಯವರನ್ನು ಮಂತ್ರಿಯಾಗಿ–ಮುಖ್ಯಮಂತ್ರಿಯಾಗಿ ಮಾಡಬೇಕೆಂದು ಹೋರಾಡುವುದು ಸರ್ವೇ ಸಾಮಾನ್ಯ. ಜಾತಿಗಾಗಿ ಉಪವಾಸ ಸತ್ಯಾಗ್ರಹ ಮಾಡಿದವರಿದ್ದಾರೆ; ರಸ್ತೆ, ಶಾಲೆ, ಆಸ್ಪತ್ರೆ ಸರಿ ಇಲ್ಲವೆಂದು ಹೋರಾಡಿದ ಒಬ್ಬ ಸ್ವಾಮೀಜಿಯಾದರೂ ಇದ್ದಾರೆಯೆ?

ಸುನಿಲ್ ಟಿ.ಪಿ., ಮಳವಳ್ಳಿ

ನೆಗಡಿಯಾದರೆ ಮೂಗು ಕೊಯ್ಯಲಾಗದು

ಅನುಕಂಪದ ಆಧಾರದಲ್ಲಿ ಗ್ರೂಪ್ 'ಡಿ' ಹುದ್ದೆಗೆ ಇನ್ನು ನೇಮಕಾತಿ ಮಾಡದಂತೆ ಸಾರಿಗೆ ಇಲಾಖೆ ಕಾರ್ಯದರ್ಶಿಯು ಸಾರಿಗೆ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ (ಪ್ರ.ವಾ., ಸೆ. 23). ಅನುಕಂಪ ನೇಮಕಾತಿ ಯೋಜನೆಯ ಅನುಷ್ಠಾನದಲ್ಲಿ ಲೋಪವಾದರೆ, ಅಂಥ ನೇಮಕಾತಿಗಳನ್ನು ಅನೂರ್ಜಿತಗೊಳಿಸುವುದು ನ್ಯಾಯ. ಅದು ಬಿಟ್ಟು ಅನುಕಂಪದ ಆಧಾರದಲ್ಲಿ ನೇಮಕಾತಿಯನ್ನೇ ಮಾಡಿಕೊಳ್ಳದಂತೆ ನಿರ್ದೇಶಿಸುವುದು ಅನ್ಯಾಯ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಚುರುಮುರಿ



ತರಕಾರಿ ತೆರಿಗೆ

• ಮಣ್ಣೆ ರಾಜು

'**ತರಕಾರಿ,** ತಾಜಾ ತರಕಾರಿ...' ಕೂಗುತ್ತಾ ತಮ್ಮಣ್ಣ ತರಕಾರಿ ಗಾಡಿ ತಳ್ಳಿಕೊಂಡು ಬಂದ.

ಕೇಳಿಸಿಕೊಂಡು ಹೊರಗೆ ಬಂದ ಸುಮಿ, 'ನಿಮ್ದುತ್ರ ರೇಟ್ ಜಾಸ್ತಿ, ಬೇರೆಯವರು ಕಾಸಿಗೊಂದು ಕೊಸರಿಗೆ ಎರಡು ಕೊಡ್ತಾರೆ, ನಿಮ್ಮ ತರಕಾರಿ ಬೇಡ...' ಎನ್ನುತ್ತಲೇ ತರಕಾರಿ ಆರಿಸತೊಡಗಿದಳು.

'ತರಕಾರಿಯ ಜಿಎಸ್‌ಟಿ ದರ ಪರಿಷ್ಕರಣೆ ಮಾಡಿದ್ದೇನೆ, ಈಗ ರೇಟ್ ಕಮ್ಮಿ ಮಾಡಿದ್ದೀನಿ ಮೇಡಂ' ಅಂದ ತಮ್ಮಣ್ಣ.

'ಹೌದಾ? ಎಷ್ಟು ಮಾಡಿದ್ದೀರಿ?'

'ತಾಜಾ ತರಕಾರಿಗೆ 28ರಿಂದ 18 ಪರ್ಸೆಂಟ್‌ಗೆ ಜಿಎಸ್‌ಟಿ ದರ ಇಳಿಸಿದ್ದೇನೆ. ನಿನ್ನೆಯ ಓಲ್ಡ್ ತರಕಾರಿಗೆ 12ರಿಂದ 5 ಪರ್ಸೆಂಟ್ ಜಿಎಸ್‌ಟಿ ದರ ನಿಗದಿ ಮಾಡಿದ್ದೇನೆ. ನಿಮಗೂ ಹಣ ಉಳಿತಾಯವಾಗುತ್ತದೆ, ನನ್ನ ವ್ಯಾಪಾರವೂ ಹೆಚ್ಚುತ್ತದೆ. ಇಬ್ಬರ ಬದುಕೂ ಸುಲಭವಾಗುತ್ತದೆ!' ಎಂದ ತಮ್ಮಣ್ಣ.

'ಬೆಂಡೆಕಾಯಿ ಕೊಂಡರೆ ಟೊಮೆಟೊ ಉಚಿತ, ಈರುಳ್ಳಿಗೆ ಬೆಳ್ಳುಳ್ಳಿ ಫ್ರೀ ಎನ್ನುವ ಆಫರ್ ಇಲ್ವಾ?'

'ಅಂಥಾ ಆಫರ್ ಕೊಟ್ಟರೆ ನಾನು ಪಾಪರ್ ಆಗಿಬಿಡ್ತೀನಿ' ತಮ್ಮಣ್ಣ ನಕ್ಕ.

'ತರಕಾರಿಯ ತೆರಿಗೆ ಇಳಿಸಲು ಕಾರಣವೇನು?'

'ನಾನು ದುಬಾರಿ ಬೆಲೆಗೆ ತರಕಾರಿ ಮಾರುತ್ತೇನೆ ಎಂದು ಅಪಪ್ರಚಾರವಾಗಿ, ನಿಮ್ಮಂಥವರು ನನ್ನ ಹತ್ರ ತರಕಾರಿ ಕೊಳ್ಳೋದನ್ನೇ ನಿಲ್ಲಿಸಿದ್ರಿ. ಹೀಗಾದ್ರೆ ಬದುಕು ಬರ್ಬರ ಆಗುತ್ತೆ ಅಂತ ಚಿಂತನೆ ಮಾಡಿ, ನನ್ನ ಹೆಂಡ್ತಿ ಜೊತೆ ಸಮಾಲೋಚನೆ ಮಾಡಿ, ತರಕಾರಿ ಮೇಲಿನ ಜಿಎಸ್‌ಟಿ ದರ ಪರಿಷ್ಕರಣೆ ಮಾಡಲು ತೀರ್ಮಾನ ಮಾಡಿದೆ'.

'ಅದ್ಸರಿ, ಜಿಎಸ್‌ಟಿ ಅಂದರೇನು?' ತರಕಾರಿ ಆರಿಸಿಕೊಂಡ ಸುಮಿ ತಮ್ಮಣ್ಣನಿಗೆ ದುಡ್ಡು ಕೊಟ್ಟಳು.

'ಗಾಡಿ ಸೇವಾ ತೆರಿಗೆ ಮೇಡಂ! ನಿಮ್ಮ ಮನೆ ಬಾಗಿಲಿಗೆ ತರಕಾರಿ ಗಾಡಿ ತಳ್ಳಿಕೊಂಡು ಬಂದು ಸೇವೆ ನೀಡುತ್ತಿದ್ದೇನಲ್ಲ, ಗಾಡಿಯ ಸೇವಾ ತೆರಿಗೆ...' ಎಂದು ಹೇಳಿ ತಮ್ಮಣ್ಣ ಹೊರಟ.

ಸಂಗತ

'ದಿಟ್ಟ ಹೆಜ್ಜೆ, ಧೀರ ಕ್ರಮ'ದ ಎಲ್ಲರಂತಲ್ಲದ ಗುರು

ನಡೆ–ನುಡಿ ಅಭಿನ್ನವಾದ ಸಂತ ಪರಂಪರೆ ತರಳಬಾಳು ಬೃಹನ್ಮಠದ ಶಿವಕುಮಾರ ಸ್ವಾಮೀಜಿ ಅವರದು. ತತ್ವಗಳನ್ನು ಮಾರಿ ಮಠ ಕಟ್ಟಿಕೊಳ್ಳುವುದನ್ನು ಅವರು ಸಹಿಸುತ್ತಿರಲಿಲ್ಲ.

• ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಮಠ ಮತ್ತು ಮಠದ ಸ್ವಾಮಿಗಳೆಂದರೆ ಕಂದಾಚಾರ, ಅವೈಚಾರಿಕತೆಗಳ ತವರು ಎನ್ನುವ ಭಾವನೆ ಇದೆ. ಇದಕ್ಕೆ ಅಪವಾದ, ಶ್ರೀತರಳಬಾಳು ಜಗದ್ಗುರು ಬೃಹನ್ಮಠ ಮತ್ತು ಆ ಮಠದ ಪೂಜ್ಯರು. ಈ ಮಠದ ಮೂಲಪುರುಷ ವಿಶ್ವಬಂಧು ಮರುಳಸಿದ್ಧರು. ಹುಟ್ಟಿನ ಕಾರಣಕ್ಕಾಗಿ ಸಮಗಾರರು. ತಮ್ಮ ಚಿಂತನೆ, ಸಾಮಾಜಿಕ ಕಳಕಳಿ, ದೂರದೃಷ್ಟಿಯ ಕಾರಣದಿಂದ 'ವಿಶ್ವಬಂಧು' ಎನಿಸಿಕೊಂಡವರು. ಅವರಿಂದ ಸ್ಥಾಪಿತವಾದದ್ದೇ 'ತರಳಬಾಳು ಜಗದ್ಗುರು ಪೀಠ'. ಈ ಪೀಠದಲ್ಲಿ ಈಗಾಗಲೇ 21 ಜಗದ್ಗುರುಗಳು ಸಮಾಜೋ–ಧಾರ್ಮಿಕ ಸೇವಾಕಾರ್ಯಗಳನ್ನು ಮಾಡುತ್ತ ಬಂದಿದ್ದಾರೆ. ಅವರಲ್ಲಿ 20ನೆಯ ಪೀಠಾಧ್ಯಕ್ಷರಾಗಿದ್ದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ವ್ಯಕ್ತಿತ್ವ, ಸಮಾಜ ಕಟ್ಟಿದ ರೀತಿ, ಶಿಕ್ಷಣಕ್ಕೆ ನೀಡಿದ ಮಹತ್ವ, ಧರ್ಮಪ್ರಚಾರದ ವಿಧಾನ, ಶಿಷ್ಯ ವಾತ್ಸಲ್ಯ, ತಾಯ್ತನ, ನ್ಯಾಯನಿಷ್ಠುರತೆ, ತ್ಯಾಗ ಮುಂತಾದವುಗಳನ್ನು ಮರೆಯಲು ಸಾಧ್ಯವಿಲ್ಲ. ಅವರು ತರಳಬಾಳು ಜಗದ್ಗುರು ಪೀಠಾಧ್ಯಕ್ಷರಾಗಿದ್ದು 1940ರಲ್ಲಿ. ಆಗ ಮಠ ಒಡೆದ ಮಡಕೆಯಂತಾಗಿತ್ತು. ಮಡಕೆಯ ಚೂರುಗಳಿಂದಲೇ ಹೊಸ ಮಡಕೆಯನ್ನು ನಿರ್ಮಾಣ ಮಾಡಿದ್ದು ಅವರ ಹೆಗ್ಗಳಿಕೆ.

ಗುರುಗಳೊಮ್ಮೆ ತಮ್ಮ ಆಶೀರ್ವಚನದಲ್ಲಿ 'ಮನೆಯಲ್ಲಿ ಯಾವ ಕೆಲಸಕ್ಕೂ ಬಾರದವನನ್ನು ಒಂದು ಮಠಕ್ಕೆ ಮರಿಯನ್ನಾಗಿ ಮಾಡಿದರೆ, ಸಾಲ ಹೆಚ್ಚಾಗಿ ಸೋಮಾರಿಯಾದವನನ್ನು ಸೈನ್ಯಕ್ಕೆ ಸೇರಿಸಿದರೆ, ಊರ ಉಡಾಳನಾದ ನಿರುದ್ಯೋಗಿಯೊಬ್ಬನು ರಾಜಕೀಯ ಸೇರಿದರೆ ಅಂಥವರಿಂದ ಏನನ್ನು ನಿರೀಕ್ಷಿಸಲು ಸಾಧ್ಯ?' ಎಂದು ಪ್ರಶ್ನಿಸಿದ್ದನ್ನು ಮಹಾದೇವ ಬಣಕಾರರು ದಾಖಲಿಸಿದ್ದಾರೆ. ಪೂಜ್ಯರ ನಡಾವಳಿಯನ್ನು ಕಂಡ ನಮಗೆ ನೆನಪಾಗುವುದು, 'ಹೇಡಿಂಗೆ ಹಿರಿತನವು, ಮೂಢಂಗೆ ಗುರುತನವು, ನಾಡ ನೀಚಂಗೆ ದೊರೆತನವು ದೊರೆತರೆ ನಾಡಿಂಗೆ ಕೇಡು ತಪ್ಪದು ಸರ್ವಜ್ಞ' ಎನ್ನುವ ತ್ರಿಪದಿ.

ಹಾ.ಮಾ. ನಾಯಕ ಅವರು ಪೂಜ್ಯರ 'ದಿಟ್ಟಹೆಜ್ಜೆ ಧೀರಕ್ರಮ' ಕೃತಿಗೆ ಬರೆದ 'ನುಡಿಗಾಣಿಕೆ'ಯಲ್ಲಿ, 'ನಾನು ಮಹಾಸ್ವಾಮಿಗಳವರನ್ನು ಕಂಡದ್ದು ಒಂದೇ ಒಂದು ಸಲ. ಅವರ ಒಂದು ಕಾಲೇಜಿನ ಪರಿಶೀಲನೆಗಾಗಿ ಮೈಸೂರು ವಿಶ್ವವಿದ್ಯಾಲಯದ ಸಂಯೋಜಕ ಸಮಿತಿಯಲ್ಲಿ ಸಿರಿಗೆರೆಗೆ ಹೋಗಿದ್ದೆ. ಸ್ವಾಮಿಗಳನ್ನು ಮೊದಲ ಬಾರಿಗೆ ಕಂಡ ಚಿತ್ರ ನನ್ನ ಮನಸ್ಸಿನಲ್ಲಿ ಹಸುರಾಗಿದೆ. ಯಾವುದೋ ಒಂದು ಕಟ್ಟಡದ ಕೆಲಸ ನಡೆಯುತ್ತಿತ್ತು. ಸ್ವಾಮಿಗಳು ಮಣ್ಣು ರಾಶಿಯೊಂದರ ಮೇಲೆ ನಿಂತು ಕೆಲಸಗಾರರಿಗೆ ಸೂಚನೆ ಕೊಡುತ್ತಿದ್ದರು. ಕಾವಿಯುಡುಗೆಯಿಂದ ಸ್ವಾಮಿಗಳೆಂದು ಗುರುತಿಸಿದೆ. ಇಲ್ಲದಿದ್ದರೆ ಕೆಲಸಗಾರರಲ್ಲಿ ಅವರೊಬ್ಬ ಕೆಲಸಗಾರರು. ಅದು ಕೈಲಾಸವಾಗುವ ಕಾಯಕ. ಕರ್ಮಯೋಗಿ ಸಿದ್ಧರಾಮನ ಸಂಕೇತ' ಎಂದಿದ್ದಾರೆ.



ನಾವು ಸಿರಿಗೆರೆಯಲ್ಲಿ ಪಿಯುಸಿ ಓದುತ್ತಿದ್ದಾಗ 'ಮಹಾಮನೆ'ಯ ಕಟ್ಟಡಕ್ಕೆ ಆರ್‌ಸಿಸಿ ಹಾಕುವ ಕೆಲಸ ನಡೆದಿತ್ತು. ಮರಳು, ಜಲ್ಲಿ ಮಿಶ್ರಣದ ಕಾಂಕ್ರೀಟನ್ನು ಬಾಣಲಿಯಲ್ಲಿ ತುಂಬಿ ಸಾಗಿಸಲು ವಿದ್ಯಾರ್ಥಿಗಳ ಬಳಕೆ ಮಾಡಿಕೊಳ್ಳುತ್ತಿದ್ದರು. ಒಮ್ಮೊಮ್ಮೆ ಗುರುಗಳೇ ಮರಳು ತುಂಬಿ, ಪುಟ್ಟಿಯನ್ನು ವಿದ್ಯಾರ್ಥಿಗಳ ತಲೆಯ ಮೇಲೆ ಇಡುತ್ತಿದ್ದರು. ಪೂಜ್ಯರೇ ಕೈ ಮುಟ್ಟಿ ಕೆಲಸ ಮಾಡುವಾಗ ವಿದ್ಯಾರ್ಥಿಗಳು ಸೋಮಾರಿಯಾಗಲು ಹೇಗೆ ಸಾಧ್ಯ?

ಜಾತ್ಯತೀತ ಗುಣ ಅವರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಮೀಸಲಾತಿ ಸೌಲಭ್ಯ ಇಲ್ಲದಿದ್ದಾಗಲೇ ತರಳಬಾಳು ವಿದ್ಯಾಸಂಸ್ಥೆಯಲ್ಲಿ ಎಲ್ಲ ವರ್ಗದ ನೌಕರರು ಸೇವೆ ಸಲ್ಲಿಸುತ್ತಿದ್ದರು. ವಿದ್ಯಾರ್ಥಿನಿಲಯ, ಮಠದಲ್ಲಿ ಜಾತಿಭೇದವಿಲ್ಲದೆ ಎಲ್ಲರೂ ಒಟ್ಟಾಗಿ ಪ್ರಸಾದ ಸ್ವೀಕರಿಸುತ್ತಿದ್ದರು. ಕೆಲವು ಮಡಿವಂತ ಲಿಂಗಾಯತರು 'ಬುದ್ಧಿ, ಲಿಂಗಾಯತರಿಗೇ ಬೇರೆ, ಇತರೆ ಜನಾಂಗದವರಿಗೇ ಬೇರೆ ಊಟ, ವಸತಿಯ ವ್ಯವಸ್ಥೆ ಮಾಡಿರಿ' ಎಂದಾಗ, 'ಬೇಕಾದರೆ ಪೀಠವನ್ನು ತ್ಯಜಿಸುತ್ತೇವೆ, ಜಾತ್ಯತೀತ ಮನೋಭಾವನೆಯನ್ನಲ್ಲ' ಎಂದು ಹೇಳಿ, ಅವರ ಮನಸ್ಸನ್ನು ಪರಿವರ್ತನೆ ಮಾಡಿದ ಶರಣರವರು.

ಬಸವಣ್ಣನವರ ಸಂತಾನ ತಾವೆನ್ನುವವರೇ ಮತ್ತೆ ಲಿಂಗಾಯತ ಒಂದು ಜಾತಿ ಎನ್ನುವುದನ್ನು ಅವರು ಪ್ರತಿಭಟಿಸುತ್ತಿದ್ದರು. 'ಅಸಂಬದ್ಧ ಜಾತಿಗಳನ್ನು ನಿರ್ಮೂಲನೆ ಮಾಡಿದ ಬಸವಣ್ಣನು ಲಿಂಗಾಯತ ಜಾತಿಯನ್ನು ಸೃಷ್ಟಿಸಿದನೇ' ಎಂದು ಕೇಳುತ್ತ, ಅದೊಂದು ಧರ್ಮ, ತತ್ವ, ಸಿದ್ಧಾಂತ ಎಂದು ಪ್ರತಿಪಾದಿಸುತ್ತಿದ್ದರು.

ಮೂಢಾಚರಣೆಗಳನ್ನು ಗುರುಗಳಂತೆ ವಿರೋಧಿಸಿದವರು ವಿರಳ. ಏನೇ ಕಾರ್ಯ ಮಾಡಲು ಅಮಾವಾಸ್ಯೆ, ಹುಣ್ಣಿಮೆ, ರಾಹುಕಾಲ, ಶುಭದಿನ ಎಂದು ಅವರು ನೋಡಿದವರಲ್ಲ. ತಾವೇ ಒಬ್ಬ ಮಠಾಧಿಪತಿಯಾಗಿ ಬೇರೆ ಮಠಾಧೀಶರ ಅವಗುಣಗಳನ್ನು ಹೇಳಲು ಹಿಂದೆಮುಂದೆ ನೋಡಿದವರೂ ಅಲ್ಲ. ಅದಕ್ಕೆ ಸಾಕ್ಷಿ ಅವರ 'ಆತ್ಮನಿವೇದನೆ' ಮತ್ತು 'ದಿಟ್ಟಹೆಜ್ಜೆ ಧೀರಕ್ರಮ' ಪುಸ್ತಕಗಳು. ತತ್ವಗಳನ್ನು ಮಾರಿ, ಗಾಳಿಗೆ ತೂರಿ ಮಠ ಕಟ್ಟಿಕೊಳ್ಳುವುದನ್ನು ಅವರೆಂದೂ ಸಹಿಸುತ್ತಿರಲಿಲ್ಲ.

ಒಮ್ಮೆ ಸ್ಥಾನಮಾನ ಪಡೆದವರು ಸಾಯುವವರೆಗೂ ಆ ಸ್ಥಾನಮಾನದಲ್ಲೇ ಇರಬೇಕೆಂದು ತಂತ್ರಗಳನ್ನು ಮಾಡುವುದು ಸರ್ವೇಸಾಮಾನ್ಯ. ಇದಕ್ಕೆ ಅಪವಾದವಾಗಿದ್ದವರು ಗುರುಗಳು. ಅವರು ತಮ್ಮ 60ನೇ ವಯಸ್ಸಿಗೆ ಪೀಠತ್ಯಾಗ ಮಾಡುವುದಾಗಿ ತಮ್ಮ 53ನೇ ವಯಸ್ಸಿನಲ್ಲೇ ಘೋಷಿಸಿದ್ದರು. 60 ವರ್ಷ ತುಂಬುತ್ತಲೇ ತ್ಯಾಗಪತ್ರವನ್ನು ಸಲ್ಲಿಸಿ, ಯೋಗ್ಯ ಉತ್ತರಾಧಿಕಾರಿಗಳನ್ನು ಮಾಡಿಕೊಳ್ಳಿ ಎಂದು ಸಾಧು ಸದ್ಧರ್ಮ ಸಂಘಕ್ಕೆ ಹೇಳಿದವರು. ತ್ಯಾಗಪತ್ರ ಕೊಟ್ಟನಂತರ ಸಿರಿಗೆರೆಯಲ್ಲಿರದೆ, ಮುತ್ತಗದೂರಿನ ಶ್ರೀ ಗುರುಶಾಂತನಿಕೇತನದಲ್ಲಿ ನಿಜವಾದ ಸಂತರ ಜೀವನ ನಡೆಸಿದರು. 1992ರ ಸೆಪ್ಟೆಂಬರ್ 24ರಂದು ಶಿವನ ಪಾದ ಸೇರಿದರು. ಅವರು ತೋರಿದ ಬೆಳಕು ನಮ್ಮ ನಡಿಗೆಗೆ ದಾರಿದೀಪ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಖಾಸಗಿ ವಲಯದ ಉದ್ಯೋಗಿಗಳ ದೀರ್ಘಾವಧಿಯ ಸಮಸ್ಯೆ ನಿವಾರಣೆ

ಇಪಿಎಫ್ ವಿಮೆ: ನಿಯಮ ಸರಳ

ಖಾಸಗಿ ವಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೂ ಜೀವ ವಿಮೆಯ ಸೌಲಭ್ಯ ಕಲ್ಪಿಸುವುದಕ್ಕಾಗಿ ಜಾರಿಗೆ ತರಲಾಗಿರುವ ಉದ್ಯೋಗಿಗಳ ಭವಿಷ್ಯ ನಿಧಿ (ಇಪಿಎಫ್) ಠೇವಣಿ ಆಧಾರಿತ ವಿಮಾ ಯೋಜನೆಯ (ಇಡಿಎಲ್‌ಐ) ನಿಯಮಗಳನ್ನು ಸರಳೀಕರಿಸಿ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಇತ್ತೀಚೆಗೆ ಅಧಿಸೂಚನೆ ಹೊರಡಿಸಿದೆ. ಯೋಜನೆಗೆ ಸಂಬಂಧಿಸಿದ ಕೆಲವು ಷರತ್ತುಗಳನ್ನು ತೆಗೆದುಹಾಕಿರುವುದರಿಂದ ಕಡಿಮೆ ವೇತನ ಹೊಂದಿರುವ ಮತ್ತು ಪದೇ ಪದೇ ಕೆಲಸ ಬದಲಾಯಿಸುವ ಉದ್ಯೋಗಿಗಳಿಗೆ ನೆರವಾಗಲಿದೆ

₹7.37 ಕೋಟಿ	7.66 ಲಕ್ಷ	91.59 ಲಕ್ಷ	67,867	74,576
ದೇಶದಲ್ಲಿರುವ ಇಪಿಎಫ್‌ಒ ಚಂದಾದಾರರು	ಚಂದಾದಾರರಿಗೆ ಉದ್ಯೋಗ ನೀಡಿರುವ ಕಂಪನಿಗಳು	ಕರ್ನಾಟಕದಲ್ಲಿರುವ ಚಂದಾದಾರರು (ಗೋವಾವನ್ನೂ ಸೇರಿಸಿ)	ಕರ್ನಾಟಕದಲ್ಲಿರುವ ಚಂದಾದಾರರು ಕೆಲಸ ಮಾಡುತ್ತಿರುವ ಕಂಪನಿಗಳು (ಗೋವಾವನ್ನೂ ಒಳಗೊಂಡು)	2023–24ರಲ್ಲಿ ಇಡಿಎಲ್‌ಐ ಅಡಿಯಲ್ಲಿ ಮಾಡಲಾದ ಕ್ಲೇಮುಗಳು

*2023-24ರ ಮಾಹಿತಿ, **ಇಪಿಎಫ್‌ಒನ ವಲಯಗಳ ವರ್ಗೀಕರಣದಲ್ಲಿ ಬೆಂಗಳೂರು ಪ್ರತ್ಯೇಕ ವಲಯವಾಗಿದ್ದು, ಬೆಂಗಳೂರು ಹೊರತುಪಡಿಸಿ ಕರ್ನಾಟಕದ ಇತರ ಪ್ರದೇಶಗಳು ಮತ್ತು ಗೋವಾ ಸೇರಿಕೊಂಡು ಇನ್ನೊಂದು ವಲಯ ಮಾಡಲಾಗಿದೆ.

• ಕೆ.ಎಚ್. ಓಬಳೇಶ್

ಕುಟುಂಬದಲ್ಲಿ ದುಡಿಯುವ ವ್ಯಕ್ತಿ ಆಕಸ್ಮಿಕವಾಗಿ ಮೃತಪಟ್ಟರೆ ಆ ಕುಟುಂಬ ಎದುರಿಸಬೇಕಾಗುವ ಸವಾಲುಗಳು ಒಂದೆರಡಲ್ಲ. ಇಡೀ ಕುಟುಂಬ ಆರ್ಥಿಕ ಮುಗ್ಗಟ್ಟಿಗೆ ಸಿಲುಕುತ್ತದೆ. ಅವಲಂಬಿತರು ಬದುಕಿನ ಬಂಡಿ ಎಳೆಯಲು ಕಷ್ಟಪಡುತ್ತಾರೆ. ಜೀವನದ ಇಂಥ ಅನಿರೀಕ್ಷಿತ ಅವಘಡಗಳಿಂದ ರಕ್ಷಣೆ ನೀಡುವುದು ವಿಮಾ ಸೌಲಭ್ಯ. ದೇಶದಲ್ಲಿ ಖಾಸಗಿ ವಲಯದಲ್ಲಿ ದುಡಿಯುವವರ ಸಂಖ್ಯೆ ಹೆಚ್ಚಿದೆ. ಆದರೆ, ಇಂದಿನ ಧಾವಂತದ ಬದುಕಿನಲ್ಲಿ ವಿಮೆಗೆ ಆದ್ಯತೆ ನೀಡುವವರು ಕಡಿಮೆ. ಬಹುತೇಕರ ಆದ್ಯತೆಯ ಪಟ್ಟಿಯಲ್ಲಿ ವಿಮೆಯು ಕೊನೆಯ ಸ್ಥಾನ.

ಸರ್ಕಾರಿ ನೌಕರರಿಗೆ ಹೋಲಿಸಿದರೆ ಖಾಸಗಿ ವಲಯದ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತಾ ಸೌಲಭ್ಯ ಅತ್ಯಲ್ಪ. ಹಾಗಾಗಿಯೇ, ಖಾಸಗಿ ವಲಯದ ಸಂಬಳ ಪಡೆಯುವ ಉದ್ಯೋಗಿಗಳಿಗೆ ಜೀವ ವಿಮೆಯ ಸೌಲಭ್ಯ ಕಲ್ಪಿಸಲು ಕೇಂದ್ರ ಸರ್ಕಾರವು 1976ರಲ್ಲಿ ಉದ್ಯೋಗಿಗಳ ಠೇವಣಿ ಆಧಾರಿತ ವಿಮಾ ಯೋಜನೆಯನ್ನು ('ಇಡಿಎಲ್‌ಐ- ಎಂಪ್ಲಾಯೀಸ್ ಡೆಪಾಸಿಟ್ ಲಿಂಕ್ಡ್ ಇನ್ಶೂರೆನ್ಸ್ ಸ್ಕೀಮ್') ಪರಿಚಯಿಸಿತು. ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಇಪಿಎಫ್ ಖಾತೆದಾರರಿಗೆ ಒದಗಿಸುವ ವಿಮಾ ರಕ್ಷಣೆ ಇದಾಗಿದೆ. ಸೇವಾವಧಿಯಲ್ಲಿ ವಿಮೆಗೆ ಒಳಪಟ್ಟ ವ್ಯಕ್ತಿಯು (ಉದ್ಯೋಗಿ) ಮೃತಪಟ್ಟ ಸಂದರ್ಭದಲ್ಲಿ, ಅವರ ಕುಟುಂಬಕ್ಕೆ ವಿಮಾ ಮೊತ್ತ ಸಿಗಲಿದೆ.

ಸರಳಗೊಂಡ ನಿಯಮಗಳು: ಸದ್ಯ ಈ ವಿಮೆ ಪಡೆಯಲು ನಿಗದಿಪಡಿಸಿದ್ದ ಷರತ್ತುಗಳನ್ನು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಸಡಿಲಗೊಳಿಸಿದೆ. ಇದು ಉದ್ಯೋಗಿಗಳ ಪಾಲಿಗೆ ವರದಾನವಾಗಿದೆ.

1. ಈ ಮೊದಲು ಉದ್ಯೋಗಿ ಮೃತಪಟ್ಟ ನಂತರ ಅವರ ಭವಿಷ್ಯ ನಿಧಿ (ಪಿ.ಎಫ್) ಖಾತೆಯಲ್ಲಿರುವ ಮೊತ್ತ ಆಧರಿಸಿ ಸಂತ್ರಸ್ತ ಕುಟುಂಬಕ್ಕೆ ಸಿಗಬೇಕಾದ ವಿಮಾ ಪರಿಹಾರದ ಮೊತ್ತವನ್ನು ಲೆಕ್ಕ ಹಾಕಲಾಗುತ್ತಿತ್ತು. ಪ್ರಸ್ತುತ ಆ ನಿಯಮವನ್ನು ತೆಗೆದುಹಾಕಲಾಗಿದೆ.

ಇನ್ನು ಮುಂದೆ ಇಪಿಎಫ್‌ಒ ಚಂದಾದಾರರಾದ ಯಾವುದೇ ಉದ್ಯೋಗಿ ಸೇವೆಯಲ್ಲಿದ್ದಾಗ ಮೃತಪಟ್ಟರೆ ಅವರ ಪಿ.ಎಫ್. ಖಾತೆಯಲ್ಲಿ ₹50 ಸಾವಿರಕ್ಕಿಂತ ಕಡಿಮೆ ಮೊತ್ತವಿದ್ದರೂ ಅವರ ಕುಟುಂಬಕ್ಕೆ ಕನಿಷ್ಠ ₹50 ಸಾವಿರ ಪರಿಹಾರ ಸಿಗಲಿದೆ. ದೇಶದಲ್ಲಿ ಪ್ರತಿವರ್ಷ 5 ಸಾವಿರಕ್ಕೂ ಹೆಚ್ಚು ಕಾರ್ಮಿಕ ಕುಟುಂಬಗಳಿಗೆ ಈ ಹೊಸ ನಿಯಮ ಉಪಯೋಗವಾಗಲಿದೆ ಎಂದು ಸಚಿವಾಲಯ ತಿಳಿಸಿದೆ.

2. ಉದ್ಯೋಗಿಗಳು ವೈಯಕ್ತಿಕ ಹಾಗೂ ಇತರ ಕಾರಣಗಳಿಗೆ ಕಂಪನಿ ಬದಲಿಸುವುದು ಸಾಮಾನ್ಯ. ಈ ಹಿಂದೆ, ಉದ್ಯೋಗಿಯ 12 ತಿಂಗಳ ನಿರಂತರ ಕೆಲಸವನ್ನು ಲೆಕ್ಕ ಹಾಕಿ ವಿಮಾ ಪರಿಹಾರ ನೀಡಲಾಗುತ್ತಿತ್ತು. ಇದರಿಂದ ಒಂದು ಕಂಪನಿಯಿಂದ ಕೆಲಸ ಬಿಟ್ಟು, ಮತ್ತೊಂದು ಕಂಪನಿಗೆ ಸೇರಿಕೊಳ್ಳುವ ಉದ್ಯೋಗಿಗಳು ಮರಣ ಹೊಂದಿದರೆ ಅವರ ಕುಟುಂಬಗಳು ಇಡಿಎಲ್‌ಐ ಪ್ರಯೋಜನ ಪಡೆಯಲು ತೊಡಕಾಗುತ್ತಿತ್ತು. ಈಗ, ಈ ನಿಯಮವನ್ನು ಪರಿಷ್ಕರಿಸಲಾಗಿದೆ. ಉದ್ಯೋಗಿಯು ಒಂದು ಕಂಪನಿ ತೊರೆದು ಮತ್ತೊಂದು ಕಂಪನಿಗೆ ಸೇರಿಕೊಳ್ಳಲು 60 ದಿನಗಳವರೆಗಿನ ಅಂತರವನ್ನು ಈಗ ಪರಿಗಣಿಸುವುದಿಲ್ಲ. ಹಳೆಯ ಮತ್ತು ಹೊಸ ಕೆಲಸದ ಅವಧಿಯನ್ನು ಒಟ್ಟಿಗೆ ಸೇರಿಸಿ, 'ನಿರಂತರ ಕೆಲಸ' ಎಂದು ಪರಿಗಣಿಸಲಾಗುತ್ತದೆ.

3. ಪಿ.ಎಫ್ ಖಾತೆಗೆ ಕೊನೆಯ ಕೊಡುಗೆ ನೀಡಿದ ಆರು ತಿಂಗಳ ಒಳಗಾಗಿ ಉದ್ಯೋಗಿ ಮೃತಪಟ್ಟು, ಅವರ ಹೆಸರು ಕಂಪನಿ/ಸಂಸ್ಥೆಯ ವೇತನದಾರರ ಪಟ್ಟಿಯಲ್ಲಿದ್ದರೆ ಇಡಿಎಲ್‌ಐ ಪ್ರಯೋಜನಕ್ಕೆ ಅರ್ಹ ಎಂದು ಹೊಸ ನಿಯಮದಲ್ಲಿ ಸ್ಪಷ್ಟಪಡಿಸಲಾಗಿದೆ.

ನಿಯಮಗಳ ಸರಳೀಕರಣದಿಂದಾಗಿ ಆಗಾಗ್ಗೆ ಉದ್ಯೋಗ ಬದಲಾಯಿಸುವ, ಮಾಸಿಕ ಕಡಿಮೆ ಸಂಬಳ ಪಡೆಯುವ ಉದ್ಯೋಗಿಗಳು ಎದುರಿಸುತ್ತಿದ್ದ ದೀರ್ಘಕಾಲೀನ ಸಮಸ್ಯೆಗೆ ಪರಿಹಾರ ಸಿಕ್ಕಿದಂತಾಗಿದೆ.

ಆಧಾರ: ಕಾರ್ಮಿಕ ಸಚಿವಾಲಯದ ಅಧಿಸೂಚನೆ, ಇಪಿಎಫ್‌ಒ ವಾರ್ಷಿಕ ವರದಿ

ಸೌಲಭ್ಯಕ್ಕೆ ಯಾರು ಅರ್ಹ?

ನೌಕರರ ಭವಿಷ್ಯ ನಿಧಿ (ಇಪಿಎಫ್) ಮತ್ತು ವಿವಿಧ ನಿಬಂಧನೆಗಳ ಕಾಯ್ದೆ 1952ರ ಅಡಿ ನೋಂದಣಿಯಾದ ಎಲ್ಲಾ ಕಂಪನಿಗಳು/ಸಂಸ್ಥೆಗಳು ಇಡಿಎಲ್‌ಐ ಯೋಜನೆಗೆ ಒಳಪಡುತ್ತವೆ. ಅಂತಹ ಸಂಸ್ಥೆಗಳು ಉದ್ಯೋಗಿಗಳಿಗೆ ಇಡಿಎಲ್‌ಐ ಸೌಲಭ್ಯ ಒದಗಿಸಬೇಕಿದೆ. ನೌಕರರ ಭವಿಷ್ಯ ನಿಧಿ ಮತ್ತು ನೌಕರರ ಪಿಂಚಣಿ ಯೋಜನೆ (ಇಪಿಎಸ್) ಸಂಯೋಜಿತ ಯೋಜನೆ ಇದಾಗಿದೆ. ಇಪಿಎಫ್ ಖಾತೆ ಹೊಂದಿರುವ ಯಾವುದೇ ಉದ್ಯೋಗಿ ಸ್ವಯಂಚಾಲಿತವಾಗಿ ಇಡಿಎಲ್‌ಐಗೆ ಅರ್ಹರಾಗುತ್ತಾರೆ. ಪ್ರತಿ ಉದ್ಯೋಗಿಯು ಅವರ ಹುದ್ದೆ ಅಥವಾ ಸಂಬಳ ಲೆಕ್ಕಿಸದೆ ವಿಮೆಗೆ ಒಳಪಡುತ್ತಾರೆ.

ಉದ್ಯೋಗಿಯು ಈ ವಿಮಾ ಸೌಲಭ್ಯ ಪಡೆಯಲು ವೈಯಕ್ತಿಕವಾಗಿ ಕಂತು ಪಾವತಿಸಬೇಕಿಲ್ಲ. ಕಂಪನಿಗಳೇ ಉದ್ಯೋಗಿಯ ಮೂಲ ವೇತನದ ಶೇ 0.5ರಷ್ಟು ಅಥವಾ ಪ್ರತಿ ತಿಂಗಳು ₹75 ಅನ್ನು ಇಡಿಎಲ್‌ಐಗೆ ಕೊಡುಗೆಯಾಗಿ ನೀಡುತ್ತವೆ.



ಪ್ರಯೋಜನ ಪಡೆಯುವುದು ಹೇಗೆ?

ವಿಮಾದಾರರು (ಉದ್ಯೋಗಿ) ಸೂಚಿಸಿದ ನಾಮಿನಿಗೆ ಯೋಜನೆಯಡಿ ಪರಿಹಾರ ಸಿಗಲಿದೆ. ಒಂದು ವೇಳೆ ನಾಮಿನಿ ಹೆಸರನ್ನು ನೋಂದಾಯಿಸದಿದ್ದರೆ, ಅವರ ಕುಟುಂಬದ ಸದಸ್ಯರು ಅಥವಾ ಕಾನೂನುಬದ್ಧ ಉತ್ತರಾಧಿಕಾರಿ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಬಹುದು. ಹಕ್ಕುದಾರರು ಭರ್ತಿ ಮಾಡಿದ ಇಡಿಎಲ್‌ಐ ಅರ್ಜಿಗೆ ಉದ್ಯೋಗದಾತ ಕಂಪನಿ/ ಸಂಸ್ಥೆ ಸಹಿ ಮಾಡಿ ದೃಢೀಕರಿಸಬೇಕು.

ಒಂದು ವೇಳೆ, ಉದ್ಯೋಗದಾತರು ಇಲ್ಲದಿದ್ದರೆ ಅಥವಾ ಉದ್ಯೋಗದಾತರ ಸಹಿ ಪಡೆಯಲು ಸಾಧ್ಯವಾಗದಿದ್ದರೂ ಪರ್ಯಾಯ ಕ್ರಮದ ಮೂಲಕ ವಿಮಾ ಸೌಲಭ್ಯದ ಹಾದಿಯನ್ನು ಸುಗಮಗೊಳಿಸಲಾಗಿದೆ.

ಬ್ಯಾಂಕ್ ವ್ಯವಸ್ಥಾಪಕರು (ಮೃತ ಉದ್ಯೋಗಿಯ ಖಾತೆ ಇರುವ ಬ್ಯಾಂಕ್), ಸ್ಥಳೀಯ ಸಂಸದ ಅಥವಾ ಶಾಸಕರು, ಗೆಜೆಟೆಡ್ ಅಧಿಕಾರಿ, ನ್ಯಾಯಾಧೀಶರು, ಸ್ಥಳೀಯ ನಗರ ಸಂಸ್ಥೆಯ ಸದಸ್ಯರು/ ಅಧ್ಯಕ್ಷರು, ಪೋಸ್ಟ್ ಮಾಸ್ಟರ್ ಅಥವಾ ಸಬ್-ಪೋಸ್ಟ್ ಮಾಸ್ಟರ್, ಇಪಿಎಫ್ ಅಥವಾ ಇಪಿಎಫ್‌ಒ ಕೇಂದ್ರೀಯ ಧರ್ಮದರ್ಶಿ ಮಂಡಳಿಯ (ಸಿಬಿಟಿ) ಪ್ರಾದೇಶಿಕ ಸಮಿತಿ ಸದಸ್ಯರಿಂದ ಕ್ಲೇಮು ಅರ್ಜಿ ದೃಢೀಕರಿಸಿ ಸೂಕ್ತ ದಾಖಲೆಗಳ ಸಮೇತ ಪ್ರಾದೇಶಿಕ ಇಪಿಎಫ್ ಆಯುಕ್ತರ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಈ ಅರ್ಜಿ ಸ್ವೀಕರಿಸಿದ ನಂತರ ಆಯುಕ್ತರು 30 ದಿನಗಳೊಗೆ ಇತ್ಯರ್ಥಪಡಿಸಬೇಕೆಂಬ ನಿಯಮವಿದೆ.

ವಿಮಾ ಲೆಕ್ಕಾಚಾರ ಹೇಗೆ?

ಇಡಿಎಲ್‌ಐ ಅಡಿ ಪ್ರಯೋಜನ ಪಡೆಯಲು 12 ತಿಂಗಳುಗಳಲ್ಲಿ ಚಂದಾದಾರರ ಪಿ.ಎಫ್ ಖಾತೆಯಲ್ಲಿನ ಸರಾಸರಿ ಮೊತ್ತವನ್ನು ಪರಿಗಣಿಸಲಾಗುತ್ತದೆ. ಒಟ್ಟಾರೆ ವಿಮಾ ರಕ್ಷಣೆಯ ಲೆಕ್ಕಾಚಾರವು ಎರಡು ಹಂತದ ಪ್ರಕ್ರಿಯೆ. ಮೃತ ಉದ್ಯೋಗಿಯ 12 ತಿಂಗಳ ಸರಾಸರಿ ಮಾಸಿಕ ವೇತನವನ್ನು (ಮೂಲ ವೇತನ + ತುಟ್ಟಿಭತ್ಯೆ) ಗರಿಷ್ಠ ₹15 ಸಾವಿರಕ್ಕೆ ಮಿತಿಗೊಳಿಸಿ, ಅದನ್ನು 35 ಪಟ್ಟು ಗುಣಿಸುವುದು ಒಂದು ಹಂತ; 12 ತಿಂಗಳಿನಲ್ಲಿ ಮೃತ ಉದ್ಯೋಗಿಯ ಭವಿಷ್ಯ ನಿಧಿ ಖಾತೆಯಲ್ಲಿರುವ ಸರಾಸರಿ ಮೊತ್ತದ ಶೇ 50ರಷ್ಟನ್ನು ಪರಿಗಣಿಸುವುದು ಎರಡನೇ ಹಂತ.

ಈ ಸೌಲಭ್ಯ ಪಡೆಯಲು ಗರಿಷ್ಠ ವೇತನ ಮಿತಿಯನ್ನು ₹15 ಸಾವಿರಕ್ಕೆ ಮಿತಿಗೊಳಿಸಲಾಗಿದೆ. ಮೂಲ ವೇತನವು ಇದಕ್ಕಿಂತಲೂ ಹೆಚ್ಚಿದ್ದರೂ ವಿಮಾ ಸೌಲಭ್ಯ ಪಡೆಯುವಾಗ ₹15 ಸಾವಿರವನ್ನಷ್ಟೇ ಪರಿಗಣಿಸಲಾಗುತ್ತದೆ.

ಉದಾಹರಣೆಗೆ, ಮಾಸಿಕ ಸಂಬಳ ₹25 ಸಾವಿರ ಇದ್ದು, ಪಿ.ಎಫ್. ಖಾತೆಯಲ್ಲಿ ₹6 ಲಕ್ಷ ಇದೆ ಎಂದಿಟ್ಟುಕೊಳ್ಳಿ. ಆಗ ಈ ವಿಧಾನದಲ್ಲಿ ಲೆಕ್ಕ ಹಾಕಿದಾಗ (₹25,000x35 = ₹8.75 ಲಕ್ಷ ಮತ್ತು ₹6 ಲಕ್ಷದ ಶೇ 50 ಅಂದರೆ ₹3 ಲಕ್ಷ) ವಿಮಾ ಮೊತ್ತವು ₹11.75 ಲಕ್ಷ ಆಗುತ್ತದೆ. ಆದರೆ, 2021ರಲ್ಲಿ ಇಡಿಎಲ್‌ಐ ಅಡಿ ಗರಿಷ್ಠ ವಿಮಾ ಮೊತ್ತವನ್ನು ₹7 ಲಕ್ಷಕ್ಕೆ ನಿಗದಿಪಡಿಸಲಾಗಿದೆ. ಹಾಗಾಗಿ, ನಾಮಿನಿಗೆ ಇಷ್ಟು ಮೊತ್ತವಷ್ಟೇ ಸಿಗುತ್ತದೆ. ಪರಿಷ್ಕೃತ ನಿಯಮಗಳ ಪ್ರಕಾರ ಈ ಯೋಜನೆಯಡಿ ಕನಿಷ್ಠ ₹50 ಸಾವಿರ ಮತ್ತು ಗರಿಷ್ಠ ₹7 ಲಕ್ಷ ವಿಮೆ ಸೌಲಭ್ಯ ಕುಟುಂಬದವರಿಗೆ ಸಿಗಲಿದೆ.


ಗಿಗ್ ಕಾರ್ಮಿಕರಿಗೆ ಸೌಲಭ್ಯ

ಗಿಗ್ ಕಾರ್ಮಿಕರು ಸಾಂಪ್ರದಾಯಿಕವಾದ ಉದ್ಯೋಗದಾತ ಮತ್ತು ಉದ್ಯೋಗಿ ನಡುವಿನ ಕೆಲಸದ ವ್ಯವಸ್ಥೆಯಿಂದ ದೂರ ಇರುತ್ತಾರೆ. ಈ ವಲಯದಲ್ಲಿ ದುಡಿಯುವವರಿಗೆ ಸಾಮಾಜಿಕ ಭದ್ರತೆ ಕಲ್ಪಿಸಲು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ಕಾರ್ಯನಿರತವಾಗಿದೆ. ಇದರಿಂದ ದೇಶದ ಆರ್ಥಿಕತೆಗೆ ಮತ್ತಷ್ಟು ಬೆಂಬಲ ನೀಡಿದಂತಾಗುತ್ತದೆ ಎಂಬುದು ಸಚಿವಾಲಯದ ಲೆಕ್ಕಾಚಾರ. ಗಿಗ್ ಕಾರ್ಮಿಕರಿಗೆ ಇಡಿಎಲ್‌ಐ ಸೌಲಭ್ಯ ಒದಗಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಈ ಕುರಿತು ಚೌಕಟ್ಟು ರೂಪಿಸುವುದಾಗಿ ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಹೇಳಿದ್ದಾರೆ.

ಈ ವಿಷಯದಲ್ಲಿ ಕರ್ನಾಟಕ ಸರ್ಕಾರವು ಒಂದು ಹೆಜ್ಜೆ ಮುಂದೆ ಇಟ್ಟಿದ್ದು, 'ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಕಾಯ್ದೆ–2025' ರೂಪಿಸಿದೆ. ಈ ಕಾರ್ಮಿಕರು ಸರಕು ಸೇವೆ ವಿತರಣೆ ವೇಳೆ ಅವಘಡಕ್ಕೀಡಾಗಿ ಅಂಗವಿಕಲರಾದರೆ ಅಥವಾ ಮೃತಪಟ್ಟರೆ ಅವರ ಅವಲಂಬಿತರು ತೊಂದರೆಗೆ ಸಿಲುಕುತ್ತಾರೆ. ಇದಕ್ಕಾಗಿ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಕಾಯ್ದೆಯ ಉದ್ದೇಶ.

ಆನ್‌ಲೈನ್ ಪ್ಲಾಟ್‌ಫಾರ್ಮ್ ಆಧಾರಿತ ಸೇವೆಯ ಪ್ರತಿ ವಹಿವಾಟಿನ ಮೇಲೆ ಶೇ 1ರಿಂದ ಶೇ 2ರಷ್ಟು ಮೀರದಂತೆ ಕ್ಷೇಮಾಭಿವೃದ್ಧಿ ಶುಲ್ಕ ಸಂಗ್ರಹಿಸಲಾಗುತ್ತದೆ. ಅವರಿಗೆ ಭವಿಷ್ಯ ನಿಧಿ, ಅಪಘಾತ ಸೌಲಭ್ಯ, ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯಕ್ಕೆ ನೆರವು, ಅಂತ್ಯಸಂಸ್ಕಾರಕ್ಕೆ ಧನಸಹಾಯ ನೀಡಲು ಕಾಯ್ದೆ ಅವಕಾಶ ಕಲ್ಪಿಸಿದೆ.

2025–26ನೇ ಆರ್ಥಿಕ ವರ್ಷದಲ್ಲಿ ಗಿಗ್ ವಲಯದಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆ ದೇಶದಲ್ಲಿ ಒಂದು ಕೋಟಿ ದಾಟಲಿದ್ದು, 2029–30ರ ವೇಳೆಗೆ 2.35 ಕೋಟಿಗೆ ತಲುಪಲಿದೆ ಎಂದು ನೀತಿ ಆಯೋಗ ಅಂದಾಜಿಸಿದೆ. ಕರ್ನಾಟಕದಲ್ಲಿ 4 ಲಕ್ಷ ಗಿಗ್ ಕಾರ್ಮಿಕರಿದ್ದಾರೆ.



ರಾಷ್ಟ್ರೀಯ

ಖನಿಜಗಳ ಮೇಲೆ ತೆರಿಗೆ 'ಸುಪ್ರೀಂ'ಗೆ ಮೇಲ್ಮನವಿ



ನವದೆಹಲಿ (ಪಿಟಿಐ): ಗಣಿಗಾರಿಕೆ ಹಾಗೂ ಖನಿಜಗಳಿರುವ ಜಮೀನುಗಳ ಮೇಲೆ ತೆರಿಗೆ ವಿಧಿಸಲು ರಾಜ್ಯಗಳು ಶಾಸನಬದ್ಧ ಅಧಿಕಾರ ಹೊಂದಿವೆ ಎಂಬ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠ ನೀಡಿದ್ದ ತೀರ್ಪು ಪ್ರಶ್ನಿಸಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಪರಿಹಾರಾತ್ಮಕ ಅರ್ಜಿ ಸಲ್ಲಿಸಿದೆ.

'9 ಸದಸ್ಯರು ಇದ್ದ ನ್ಯಾಯಪೀಠವು 8:1ರ ಅನುಪಾತದಲ್ಲಿ ಬಹುಮತ ತೀರ್ಪು ನೀಡಿದೆ. ತೆರಿಗೆ ವಿಧಿಸುವ ವಿಚಾರ ಗಂಭೀರವಾಗಿರುವ ಕಾರಣ, ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುತ್ತಿದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಮೂರ್ತಿಗಳಾದ ವಿಕ್ರಮ ನಾಥ್ ಹಾಗೂ ಸಂದೀಪ್ ಮೆಹ್ತಾ ಅವರು ಇರುವ ಪೀಠಕ್ಕೆ ತಿಳಿಸಿದ್ದಾರೆ.

ಗಣಿಗಾರಿಕೆ ಹಾಗೂ ಖನಿಜಗಳಿರುವ ಜಮೀನುಗಳ ಮೇಲೆ ತೆರಿಗೆ ವಿಧಿಸುವುದಕ್ಕೆ ಸಂಬಂಧಿಸಿ, ಆಗ ಮುಖ್ಯ ನ್ಯಾಯಮೂರ್ತಿಯಾಗಿದ್ದ ಡಿ.ವೈ.ಚಂದ್ರಚೂಡ್ ನೇತೃತ್ವದ 9 ಸದಸ್ಯರಿದ್ದ ಸಂವಿಧಾನ ಪೀಠವು, ಕಳೆದ ವರ್ಷ ಜುಲೈ 25ರಂದು 8:1ರ ಬಹುಮತದ ತೀರ್ಪು ನೀಡಿತ್ತು.

ಖನಿಜಗಳಿರುವ ಜಮೀನುಗಳ ಮೇಲೆ ತೆರಿಗೆ ವಿಧಿಸಲು ರಾಜ್ಯಗಳಿಗೆ ಅಧಿಕಾರ ಇದೆ. ತೆರಿಗೆ ಮತ್ತು ರಾಯಧನ ಬೇರೆಬೇರೆ ಎಂದೂ ಪೀಠ ಸ್ಪಷ್ಟಪಡಿಸಿತ್ತು.

ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಭಿನ್ನ ನಿಲುವು ವ್ಯಕ್ತಪಡಿಸಿದ್ದರು. ರಾಯಧನ ಕೂಡ ತೆರಿಗೆಯ ಒಂದು ರೂಪವೇ ಆಗಿದ್ದು, ಇಂತಹ ತೆರಿಗೆ ಆಕರಣೆ ಮಾಡುವುದಕ್ಕೆ ಕೇಂದ್ರಕ್ಕೆ ಅಧಿಕಾರ ಇದೆ ಎಂದು ಭಿನ್ನ ತೀರ್ಪು ನೀಡಿದ್ದರು.

ಅಕ್ಟೋಬರ್‌ನಲ್ಲಿ ಸೇನೆಯಿಂದ ಡ್ರೋನ್‌ಗಳ ಸಾಮರ್ಥ್ಯ ಪರೀಕ್ಷೆ



ನವದೆಹಲಿ (ಪಿಟಿಐ): ಸಶಸ್ತ್ರ ಪಡೆಗಳು ತಮ್ಮ ಡ್ರೋನ್‌ಗಳು ಮತ್ತು ಡ್ರೋನ್ ಪ್ರತಿರೋಧಕ ವ್ಯವಸ್ಥೆಗಳ ಸಾಮರ್ಥ್ಯ ಪರೀಕ್ಷೆಯನ್ನು ಅಕ್ಟೋಬರ್ ಮೊದಲ ವಾರದಲ್ಲಿ ಹಮ್ಮಿಕೊಂಡಿರುವ ಸಮರಾಭ್ಯಾಸದ ವೇಳೆ ನಡೆಸಲಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಕ್ಟೋಬರ್ 6–10ರವರೆಗೆ ಮಧ್ಯಪ್ರದೇಶದಲ್ಲಿ 'ಕೇಂದ್ರ ಕಚೇರಿಯ ಸಮಗ್ರ ರಕ್ಷಣಾ ಸಿಬ್ಬಂದಿ'ಯು (ಎಚ್‌ಕ್ಯೂ–ಐಡಿಎಸ್) ಈ ಸಮರಾಭ್ಯಾಸವನ್ನು ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಾಯು ರಕ್ಷಣಾ ವ್ಯವಸ್ಥೆಗಳ ಕುರಿತ ಸಮ್ಮೇಳನದಲ್ಲಿ ಮಾತನಾಡಿದ ಏರ್ ಮಾರ್ಷಲ್ ರಾಕೇಶ್ ಸಿನ್ಹಾ, ಆಪರೇಷನ್ ಸಿಂಧೂರದಿಂದ ಕಲಿತ ಪಾಠಗಳು ಮತ್ತು ಮಿಲಿಟರಿ ಚಿಂತನೆ ಹಾಗೂ ಯೋಜನೆಗಳಲ್ಲಿ ಎದುರಾಳಿಗಿಂತ ಮುಂದೆ ಇರಬೇಕಾದ ಅಗತ್ಯದ ಬಗ್ಗೆ ಪ್ರತಿಪಾದಿಸಿದ್ದಾರೆ.

'ಎಕ್ಸರ್‌ಸೈಸ್ ಕೋಲ್ಡ್ ಸ್ಟಾರ್ಟ್' ಅನ್ನು ಕೇಂದ್ರ ವಲಯದಲ್ಲಿ ನಡೆಸಲಾಗುವುದು ಮತ್ತು ಮೂರು ಸೇನೆಗಳು ಅದರಲ್ಲಿ ಭಾಗವಹಿಸಲಿವೆ ಎಂದು ಹೇಳಿದ್ದಾರೆ.

ಹೈದರಾಬಾದ್ ಘಟಕದಲ್ಲಿ ಸ್ನೈಪರ್ ರೈಫಲ್ ತಯಾರಿಕೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಸಣ್ಣ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಅಬು ಧಾಬಿಯ ಎಡ್ಜ್ ಕರಾಕಲ್ ಸಂಸ್ಥೆಯು, ಹೈದರಾಬಾದ್‌ನ ಎಂಇಐಎಲ್ ಸಮೂಹದ ಐಕಾಂ ಟೆಲಿ ಲಿಮಿಟೆಡ್ ಸಹಯೋಗದಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಗಾಗಿ (ಸಿಆರ್‌ಪಿಎಫ್) ಇಲ್ಲಿನ ಘಟಕದಲ್ಲಿ ಸ್ನೈಪರ್ ರೈಫಲ್‌ಗಳನ್ನು ತಯಾರಿಸಲಿದೆ.

ಭಾರತ–ಯುಎಇ ರಕ್ಷಣಾ ಪಾಲುದಾರಿಕೆಯ ಹೆಗ್ಗುರುತಾಗಿ ಈ ಯೋಜನೆ ಅನುಷ್ಠಾನಗೊಳ್ಳಲಿದೆ. ಗರಿಷ್ಠ ಕಾರ್ಯಕ್ಷಮತೆಯ '200 ಸಿಎಸ್‌ಆರ್ ಸ್ನೈಪರ್ ರೈಫಲ್'ಗಳನ್ನು ಈ ಸಂಸ್ಥೆಗಳು ತಯಾರಿಸಲಿವೆ. ಭಾರತೀಯ ಶಸಸ್ತ್ರ ಪಡೆ, ಕೇಂದ್ರ ಶಸಸ್ತ್ರ ಪೊಲೀಸ್ ಪಡೆಯ ಶಸ್ತ್ರಾಸ್ತ್ರ ಅಗತ್ಯವನ್ನೂ ಈ ಘಟಕದ ಪೂರೈಸಲಿದೆ.

'ಮೇಕ್ ಇನ್ ಇಂಡಿಯಾ ಯೋಜನೆಯನ್ನು ಬಲಪಡಿಸಲು ನಾವು ಬದ್ಧರಾಗಿದ್ದೇವೆ. ಭಾರತಕ್ಕೆ ಸಣ್ಣ ಶಸ್ತ್ರಾಸ್ತ್ರಗಳ ತಂತ್ರಜ್ಞಾನ ವರ್ಗಾಯಿಸುವ ನಿಟ್ಟಿನಲ್ಲಿ ಈ ಒಪ್ಪಂದ ಮಹತ್ವದ ಮೈಲಿಗಲ್ಲು' ಎಂದು ಕರಾಕಲ್‌ನ ಸಿಇಒ ಅಹಮದ್ ಅಲಮೇರಿ ಹೇಳಿದ್ದಾರೆ.

2025ರ ನಾಲ್ಕನೆಯ ತ್ರೈಮಾಸಿಕದಲ್ಲಿ ಸಿಆರ್‌ಪಿಎಫ್‌ಗೆ '200 ಸಿಎಸ್‌ಆರ್ ಸ್ನೈಪರ್ ರೈಫಲ್'ಗಳ ವಿತರಣೆ ಆರಂಭವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತ ಅವರ ಸಂದರ್ಶನದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಎಲೆಕ್ಟ್ರಾನಿಕ್ ವೋಟಿಂಗ್ ಮಷೀನ್‌ಗಳನ್ನು (ಇವಿಎಂ) ತಿರುಚುವ ಮೂಲಕ ಬಿಜೆಪಿಯು ಚುನಾವಣೆಗಳಲ್ಲಿ ಜಯ ಗಳಿಸುತ್ತಿದೆ ಎಂದು ರೇಖಾ ಗುಪ್ತಾ ಅವರು ಸಂದರ್ಶನದಲ್ಲಿ ಒಪ್ಪಿಕೊಂಡಿದ್ದಾರೆ; 'ಅವರು (ಕಾಂಗ್ರೆಸ್) 70 ವರ್ಷಗಳಿಂದ ಇವಿಎಂಗಳನ್ನು ತಿರುಚುತ್ತಿದ್ದಾರೆ. ನಾವು ಹಾಗೆ ಮಾಡಿದಾಗ, ಅದನ್ನೊಂದು ಸಮಸ್ಯೆ ಎನ್ನುವಂತೆ ಮಾಡಲಾಗಿದೆ' ಎಂದು ರೇಖಾ ಅವರು ಹೇಳಿದ್ದಾರೆ ಎಂಬುದಾಗಿ ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್ ಮತ್ತು ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಅವರು ಕೂಡ ಇದೇ ಪ್ರತಿಪಾದನೆಯೊಂದಿಗೆ ವಿಡಿಯೊ ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



✓ ರೇಖಾ ಗುಪ್ತಾ ಅವರ ಸಂದರ್ಶನದ (8.19 ನಿಮಿಷದ) ಮೂಲ ವಿಡಿಯೊ ಎನ್‌ಡಿಟಿವಿಯಲ್ಲಿ ಪ್ರಸಾರವಾಗಿದೆ. ಅದನ್ನು ಪರಿಶೀಲಿಸಿದಾಗ, ವಿಡಿಯೊದ 2.40 ನಿಮಿಷದಲ್ಲಿ 'ಅವರು (ಕಾಂಗ್ರೆಸ್) ಗೆದ್ದರೆ, ಅದು ಜನಾದೇಶ. ನಾವು (ಬಿಜೆಪಿ) ಗೆದ್ದರೆ, ಅದು ಇವಿಎಂ ತಿರುಚುವಿಕೆ...' ಎಂದು ಅವರು ಹೇಳಿದ್ದಾರೆ. ಆದರೆ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ವಿಡಿಯೊದಲ್ಲಿ ಇರುವಂತೆ, ಅವರ ಉತ್ತರದ ಮುಂದಿನ ಭಾಗ ಮೂಲ ವಿಡಿಯೊದಲ್ಲಿ ಇಲ್ಲ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು



ವಾಸುದೇವ ನಾಡಿಗ್

ತಲುಪಲು ದಾರಿಗಳು


ಮಗಳ ಮನೆ ಕಣ್ಣೆದುರಲ್ಲೇ ಇತ್ತು. 250 ಮೀಟರ್ ಅಷ್ಟೆ. ಬಸ್ಸಾರು, ಮಸ್ಸೊ, ಮೊಳಕೆ ಪಲ್ಯ... ಏನು ಮಾಡಿದರೂ ಪರಸ್ಪರ ವಿನಿಮಯ. ಮಗಳ ಮನೆ ಮತ್ತು ತಾಯಿಯ ಮನೆಗೆ ಕೇವಲ ರಸ್ತೆ ದಾಟಬೇಕಿತ್ತು ಅಷ್ಟೆ. ಮಗ– ಸೊಸೆ ಹಾಗಲ್ಲ, ದೂರದ ಶಹರಿನ ಮೋಹಕ್ಕೆ ಒಳಗಾಗಿ ಉದ್ಯೋಗದ ನೆಪದಲ್ಲಿ ದೂರವೇ ಉಳಿದಿದ್ದರು. ಸಣ್ಣಹಳ್ಳಿ. ಒಂದು ಶಿವನ ದೇವಾಲಯ, ಪಂಚಾಯ್ತಿ ಕುಡಿಯುವ ನೀರಿನ ಕೇಂದ್ರ... ಇಷ್ಟು ರೋಡಿನ ಈ ಬದಿ. ಆ ಬದಿಯಲ್ಲಿ ಹತ್ತಾರು ಅಂಗಡಿಗಳು ಹರಡಿದ್ದವು. ಎಲ್ಲವೂ ಕೂಗಳತೆಯಲ್ಲೇ. ಆದರೆ ರಸ್ತೆಯನ್ನು ದಾಟಬೇಕಿತ್ತಷ್ಟೆ.

ಮಗಳ ಬಸಿರು ಬಾಣಂತನ ಮುಗಿಸಿ ಎರಡು ತಿಂಗಳಲ್ಲೇ ಹೆದ್ದಾರಿಯ ನಿರ್ಮಾಣ ಶುರುವಾಗಿತ್ತು. ಜನ, ವಾಹನ ನಿಬಿಡತೆ ಅಂದರೆ ಏನು ಅಂತ ಗೊತ್ತಿರದ ಆ ರಸ್ತೆಗೆ ಹೆದ್ದಾರಿ ಬರುವುದೆಂದರೆ ಒಂದು ತಲ್ಲಣವೇ ಹೌದು. ಮೈಮೇಲೆ ರೊಯ್ಯಂತ ಹಾದು ಹೋಗುವ ಹಾಗೆ ಹಾಯುವ ವಾಹನಗಳು ಒಂದಿಷ್ಟು ಮನೆಗಳನ್ನು ಹಿಂದಕ್ಕೆ ತಳ್ಳಿದ ಹೆದ್ದಾರಿಯದು. ಹಿಂದೆ ಸರಿದಂತಾಗಿದ್ದ ಗ್ರಾಮದ ಇಬ್ಬದಿಯ ಜನರು ಪರಸ್ಪರ ಅಪರಿಚಿತರ ಹಾಗೆ ಕಂಡರು. ತಾಯಿ ಮಗಳದು ಇದೇ ಪರಿತಾಪ. ಮೊದಲೆಲ್ಲ ಸಣ್ಣ ಬಟ್ಟಲು, ತಟ್ಟೆ, ಹಾಲು ಮೊಸರು... ಅಂತೆಲ್ಲ ಸಲೀಸಾಗಿ ಸಾಗಿಸಬಹುದಾಗಿತ್ತು. ಈಗ ಹಾಗಲ್ಲ, ದೈತ್ಯ ದಾರಿಯನ್ನು ದಾಟಿ ಬೇಗ ಬರೋ ಹಾಗಿಲ್ಲ. ಎರಡೂ ಬದಿ ಎರಡೆರಡು ವಾಹನಗಳ ಅಬ್ಬರ. ಅಷ್ಟು ದೂರದಲ್ಲಿ ಬಿಟ್ಟ ತಿರುವಿನ ದಾರಿಯಲ್ಲಿ ಬರಬೇಕಿತ್ತು. ತಾಯಿ ಕೂಗಾಟ, 'ಹುಷಾರು ಮಗಳೇ... ನೀನು ಬರಬೇಡ. ಮಗುವನ್ನು ಎತ್ತಿಕೊಂಡು ಬರಲೇಬೇಡ'. ಹೆದ್ದಾರಿಯ ಚಾಚುವಿಕೆ ಸ್ವಲ್ಪ ಮಟ್ಟಿಗೆ ತಾಯಿ ಮಗಳ ಓಡಾಟವನ್ನು ಕಡಿಮೆ ಮಾಡಿತ್ತು.

ಮಗ ಸೊಸೆ ಹಳ್ಳಿಗೆ ಹೆದ್ದಾರಿಯಾದ ಸುದ್ದಿಗೆ ಹಿಗ್ಗಿದ್ದರು. ಮಗ ಸೊಸೆಯಂತೂ ಕುಗ್ರಾಮ, ಬಸ್ ಇಲ್ಲ, ಇದ್ದರೂ ನಿಲ್ಲಿಸುವುದಿಲ್ಲ, ರಸ್ತೆ ಅಧ್ವಾನ... ಎಂದೆಲ್ಲ ನೆಪ ಹಾಕಿ ಬರೋದನ್ನೇ ಬಿಟ್ಟಿದ್ದರು. ಈಗ ಹಾಗಲ್ಲ, ಕಾರಲ್ಲಿ ಬಂದು ನಿಲ್ಲುತ್ತಿದ್ದರು. ಮಗಳಿಗೆ ಹಾಗಲ್ಲ ಒಂದು ಬಗೆಯ ತಲ್ಲಣ. ಕಪ್ಪಗೆ ಚಾಚಿಕೊಂಡ ಈ ಹೆದ್ದಾರಿ ಯಾಕಾದರೂ ಬಂತೋ ಎಂಬ ಬೇಸರ. ಕೂಗಳತೆಯ ಮನೆಗೆ ಅಡ್ಡಲಾದ ಕೆಟ್ಟ ಕನಸಿನ ಹಾಗೆ.

ಈ ಹಿಂದೆ ಸಣ್ಣ ಏಕೈಕ ಅರೆ ಡಾಂಬರಿನ ರಸ್ತೆ ಇದ್ದಾಗ ಪದೆ ಪದೇ ಬರುತ್ತಿದ್ದ ಮಗಳು–ಅಳಿಯ ಮತ್ತು ಹೆದ್ದಾರಿ ಆದ ಮೇಲೆ ಬರೋ ಮನಸ್ಸು ಮಾಡಿದ ಮಗ–ಸೊಸೆ. ಜೀವನವೇ ಹೀಗೆ ಅಲ್ಲವೆ? ದಾರಿಗಳು ಸಂಬಂಧವನ್ನು ಬಣ್ಣಿಸುತ್ತವೆ. ತಾಯಿಯಂತಹ ದಡವೊಂದು ಎಲ್ಲವನ್ನೂ ನಿರೀಕ್ಷಿಸುತ್ತದೆ ಮತ್ತು ಒಳಿತನ್ನೇ ಬಯಸುತ್ತದೆ. ಓಡಾಟ ಅವರವರ ಭಾವ ಮತ್ತು ಭಕ್ತಿಗೆ ಬಿಟ್ಟದ್ದು. ಮಧ್ಯೆ ಅಂತಃಕರಣದ ಸ್ರೋತ ಇರಬೇಕಷ್ಟೆ. ❖

ಗುಂಡಣ್ಣ



ಪದಬಂಧ 6174

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅನಿರೀಕ್ಷಿತವಾಗಿ ಬಂದ ಅತಿಥಿ (4)
4.ಇದು ಹೆದರಿಕೆಯನ್ನುಂಟು ಮಾಡುವುದು (4)
5.ಗುಲಾಲು ಎರಚುತ್ತಿರುವ ಸೇವಕ (3)
7.ಜನವರಿಯಲ್ಲಿರುವ ವೇಗ! (2)
9.ಸೂರ್ಯನು ಮಕರರಾಶಿಗೆ ಹೋಗುವ ದಿನದಂದು ಆಚರಿಸುವ ಹಬ್ಬ (7)
11.ಈ ರೀತಿ ಆಯಾಸ ಹೊಂದು (2)
12.ಪಣ ಕಟ್ಟಿ ಮಾಡಿದ ಪ್ರಯಾಣ ಉಲ್ಟಾ ಆಗಿಬಿಟ್ಟಿದೆ (3)
14.ಕರ್ನಾಟಕದ ಕಾಶ್ಮೀರ' ಎಂದು ರವೀಂದ್ರನಾಥ್ ಟ್ಯಾಗೋರ್ ಹೊಗಳಿರುವ ಈ ಊರು ಉತ್ತರಕನ್ನಡ ಜಿಲ್ಲೆಯಲ್ಲಿದೆ (4)
16.ಮೂರು ಮೈಲುಗಳ ಒಂದು ಅಳತೆ (4)

ಮೇಲಿಂದ ಕೆಳಕ್ಕೆ

1.ಆಯುಧದ ಅಂಚು (3)
2.ನೀರಾಗಿ ಕಡೆದ ಮೊಸರು (2)
3.ಚಾಕರನು ಮಾಡುತ್ತಿರುವ ಊಳಿಗ (3)
4.ಭವನದಲ್ಲಿರುವ ಸಂಸಾರ (2)
6.ಮರವನ್ನು ಸುತ್ತುತ್ತಿರುವ ಹೆಣ್ಣುದುಂಬಿ (4)
7.ಧಣಿ ನೋಡಲು ಮಂದಿ ಸೇರಿದ ಗುಂಪು (5)
8.ಇದು ಹೂವಿನ ಶರ (4)
10.ಹಣದಲ್ಲಿರುವ ಪ್ರಾಣ! (3)
11.ಆದರದಿಂದ ತಿಳಿಸಿದ ಬೆಲೆ! (2)
13.ಈ ಪರಿ ಓಡಿಹೋಗುವಿಕೆ (3)
15.ಬಾಯಾರಿಕೆ ಈ ರೀತಿ ಬಂದಿದೆ (2)



6173ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಗಲುಗನಸು 4.ತರತಮ
6.ಗಲಿಬಿಲಿ 8.ಕಟ್ಟುಮಸ್ತು
10.ಕಸುಗಾಯಿ 12.ಹಲ್ಲುಪುಡಿ
13.ಅಡಿಪಾಯ 15.ಲಲಾಟಲಿಖಿತ

ಮೇಲಿಂದ ಕೆಳಕ್ಕೆ:
1.ಹದ್ದುಗಣ್ಣು 2.ಸುತ
3.ಕಾಮ 5.ತಥಾಸ್ತು
7.ಬಿಡಿಗಾಸು 8.ಕಡಾಯಿ
9.ಮಕಮಲ್ಲು 10.ಕನ್ನಡಿ
11.ಮಡಿವಂತ 13.ಅಕ್ಕ
14.ಯಲ

ಸುಡೊಕು 6558

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5	3		4			2		7
7		4		3			5	
			1			8		3
		7		4				
3		2	9		1		8	
				6				2
1		8	3		4			5
	2					9	7	8
6		9		2			3	

6557 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

24 ಸೆಪ್ಟೆಂಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ತೃತೀಯ ಅಹೋರಾತ್ರ ನಕ್ಷತ್ರ: ಚಿತ್ರಾ ಗಂ. 16-17 ಯೋಗ: ಐಂದ್ರ ಗಂ. 21-03 ಕರಣ: ತೈತಿಲ ಗಂ.17-57 ಕನ್ಯಾ ಮಾಸದ 07 ನೇ ದಿನ. ಮಳೆ ನಕ್ಷತ್ರ : ಉತ್ತರಾ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 01-30 ,ಸೂರ್ಯೋದಯ : 06-23 ಸೂರ್ಯಾಸ್ತ : 06-23, ಮುಸ್ಲಿಂ ದಿನಾಂಕ : 1 ರಬಿಯುಸ್ಸಾನಿ, ಅದೃಷ್ಟ ಸಂಖ್ಯೆ : 8, 1.

ಮೇಷ: ಕೆಲವು ವಿಚಾರಗಳಲ್ಲಿ ಧೈರ್ಯವು ಕಡಿಮೆಯಾಗುವುದು. ತರಕಾರಿ ಹಾಗೂ ಹಣ್ಣಿನ ಬೆಳೆಯಿಂದ ಲಾಭ ಹೊಂದುವಿರಿ. ನಿದ್ದೆಯ ಸಮಯವನ್ನು ಬೇಗ ಮಾಡಿಕೊಂಡರೆ ಲವಲವಿಕೆ ಹೊಂದಬಹುದು.

ವೃಷಭ: ನೀರಿಗೆ ಸಂಬಂಧಿಸಿದಂತೆ ನೆರೆಹೊರೆಯವರೊಂದಿಗಿನ ಸಮಸ್ಯೆಗಳು ನಿವಾರಣೆಗೊಳ್ಳಲಿವೆ. ಷೇರು ಹೂಡಿಕೆದಾರರು ಉತ್ತಮವಾಗಿ ಪರಿಶೀಲಿಸಿದ ನಂತರವಷ್ಟೇ ಹೂಡಿಕೆಯನ್ನು ಮಾಡಿ.

ಮಿಥುನ: ಅತಿಯಾದ ಔದಾರ್ಯತನ ತೋರಬೇಕೆನಿಸಿದಲ್ಲಿ ಹಣಕಾಸಿನ ಸ್ಥಿತಿಯನ್ನು ಒಮ್ಮೆ ಗಮನಿಸಿ. ವೃದ್ಧಾಶ್ರಮವಾಸಿಗಳಿಗೆ ಹೆಚ್ಚಿನ ಸಹಾಯ ಮತ್ತು ಸಿಹಿತಿನಿಸುಗಳು ಸಿಗಲಿವೆ.

ಕರ್ಕಾಟಕ: ನಿಷ್ಠೆ ಹಾಗೂ ಪ್ರಾಮಾಣಿಕತೆಯನ್ನು ಮೆಚ್ಚಿದ ಮೇಲಧಿಕಾರಿಗಳ ಒತ್ತಾಯಕ್ಕೆ ಮಣಿದು ಸ್ವಯಂ ನಿವೃತ್ತಿ ಯೋಚನೆಯನ್ನು ಕೈ ಬಿಡಬೇಕಾಗುವುದು. ಮೊಮ್ಮಕ್ಕಳು ಸಂತೋಷಕ್ಕೆ ಕಾರಣವಾಗಲಿದ್ದಾರೆ.

ಸಿಂಹ: ವ್ಯಾವಹಾರಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೃದು ಧೋರಣೆಯಿಂದ ಕೆಲವು ಮಂದಿ ವಿರುದ್ಧ ಧ್ವನಿ ಎತ್ತುವ ಸಾಧ್ಯತೆ ಇದೆ. ಈ ಕಾರಣದಿಂದ ದಿನದಿಂದ ದಿನಕ್ಕೆ ಬದಲಾಗಬೇಕಾಗುತ್ತದೆ.

ಕನ್ಯಾ: ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹೆಣಗಾಡಬೇಕಾಗಬಹುದು. ಕಾರ್ಯವು ನಿರ್ವಿಘ್ನವಾಗಿ ನೆರವೇರಲು ವಿಘ್ನೇಶ್ವರನ ಸ್ತೋತ್ರ ಪಠಿಸಿ. ಪಾದರಕ್ಷೆಯ ಮಾರಾಟಗಾರರಿಗೆ ಲಾಭ ಉಂಟಾಗುವುದು.

ತುಲಾ: ತಾಂತ್ರಿಕ ಕ್ಷೇತ್ರದಲ್ಲಿ ನೂತನ ಉದ್ಯೋಗ ಸಂಪಾದನೆಗೆ ಹೊರಟಂಥ ವ್ಯಕ್ತಿಗಳಿಗೆ ಅಭಿವೃದ್ಧಿದಾಯಕವೆಂದು ಅನಿಸಲಿದೆ. ಸನ್ನಿವೇಶಗಳು ನಿಮ್ಮ ಪರ ಇರುವುದರಿಂದ ನಿರಾಳವಾಗಿ ಮುಂದುವರಿಯಬಹುದು.

ವೃಶ್ಚಿಕ: ಅಣ್ಣ–ತಂಗಿಯರ ನಡುವೆ ಸಂಬಂಧಗಳು ಗಟ್ಟಿಯಾಗುವಂಥ ವಿಶೇಷ ವಿಚಾರಗಳು ನಡೆಯುವ ಸಾಧ್ಯತೆಗಳಿವೆ. ಸಣ್ಣಮಟ್ಟದ ಗುತ್ತಿಗೆದಾರರಿಗೆ ಸರ್ಕಾರಿ ಕಾಮಗಾರಿಗಳು ದೊರೆಯುವ ಸಂಭವವಿದೆ.

ಧನು: ಸಾಲದ ರೂಪದಲ್ಲಿ ಸ್ನೇಹಿತರಿಗೆ ನೀಡಿದ ಹಣವು ಹಿಂದಿರುಗಿ ಕೈಸೇರಲಿದೆ. ವೃತ್ತಿರಂಗದಲ್ಲಿ ನೂತನ ಸ್ಥಾನಮಾನ ದೊರೆತು ಸಂತಸವಾಗುತ್ತದೆ. ಇದು ಆನಂದವನ್ನು ಹೆಚ್ಚಿಸುತ್ತದೆ.

ಮಕರ: ವಿದೇಶದಲ್ಲಿರುವ ಮಕ್ಕಳ ಅಥವಾ ಬಂಧುಮಿತ್ರರ ಆಗಮನ ಮನಸ್ಸಿಗೆ ಸಂತೋಷ ಕೊಡುತ್ತದೆ. ತೆಗೆದುಕೊಂಡ ನಿರ್ಧಾರಗಳು ತಪ್ಪಾಗಿರುವ ಬಗ್ಗೆ ಅರಿವಾಗುವುದು, ಸರಿಪಡಿಸುವ ಮಾರ್ಗವನ್ನು ಕಂಡುಕೊಳ್ಳಿರಿ.

ಕುಂಭ: ಮಕ್ಕಳ ವಿಷಯದಲ್ಲಿ ಕಾಳಜಿಯನ್ನು ತೋರಿದಲ್ಲಿ ಅವರ ಭವಿಷ್ಯ ಉತ್ತಮವಾಗುವುದು. ಕ್ರೀಡಾಸಕ್ತರಿಗೆ ಉತ್ತಮ ಸಮಯ ಮತ್ತು ಅವಕಾಶ ಸಿಗಲಿದೆ. ವೈವಾಹಿಕ ಜೀವನಕ್ಕೆ ಸಮಯ ಕೂಡಿಬರಲಿದೆ.

ಮೀನ: ಧಾರ್ಮಿಕ ವಿಚಾರಗಳಲ್ಲಿ ಸಾಧನೆ ಮಾಡುವವರಿಗೆ ಈ ದಿನವು ಸುಸಮಯವಾಗಲಿದೆ. ರೈತರಿಗೆ ಬೆಳೆಗಳಿಗೆ ಉತ್ತಮ ಬೆಲೆ ದೊರೆಯುವ ಸಂಭವವಿದೆ. ಹಣ್ಣು, ತರಕಾರಿ ವ್ಯಾಪಾರದಿಂದ ಬಹಳಷ್ಟು ಲಾಭ ಬರುವುದು.



ರೈಲು ಅಪಘಾತದಲ್ಲಿ ಕೈ ಮತ್ತು ಕಾಲನ್ನು ಕಳೆದುಕೊಂಡ ಲಂಡನ್ನಿನ ಸಾರಾ ಡಿ ಲಗಾರ್ಡೆ ಎಂಬ ಮಹಿಳೆಗೆ ಎ.ಐ.ಆಧಾರಿತ ಕೃತಕ ಬಯೋನಿಕ್ ತೋಳನ್ನು ಅಳವಡಿಸಲಾಗಿದೆ. ಅದು ದೇಹದ ಚಲನವಲನಗಳಿಗೆ ತಕ್ಕಂತೆ ಸ್ಪಂದಿಸುತ್ತಿದೆಯಂತೆ!



ಡ್ರಗ್‌ಪ್ರೊಟ್‌ಎಐ

ಔಷಧ ಸಂಶೋಧನೆಯಲ್ಲಿ ಕ್ರಾಂತಿ

• ಗುಬ್ಬಿಲ್ಯಾಬ್ಸ್

ಜೀವವನ್ನು ಉಳಿಸುವ ಔಷಧಗಳನ್ನು ಕಂಡುಹಿಡಿಯುವುದು ಒಂದು ದೀರ್ಘ ಮತ್ತು ಸವಾಲಿನ ಹಾದಿ. ಹೊಸ ಔಷಧವೊಂದನ್ನು ಮಾರುಕಟ್ಟೆಗೆ ತರಲು ಹಲವು ವರ್ಷಗಳ ಸಮಯ ಮತ್ತು ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ಆದರೂ, ಶೇ 90ರಷ್ಟು ಔಷಧಗಳು ಯಶಸ್ವಿಯಾಗದೆ ಪ್ರಯೋಗ ಹಂತದಲ್ಲೇ ವಿಫಲಗೊಳ್ಳುತ್ತವೆ. ಇದಕ್ಕೆ ಮುಖ್ಯ ಕಾರಣ, ರೋಗದ ಮೇಲೆ ಪರಿಣಾಮ ಬೀರಬಲ್ಲ ಸೂಕ್ತ ಪ್ರೋಟೀನ್ ಗುರಿಯನ್ನು ಆರಂಭದಲ್ಲೇ ನಿರ್ದಿಷ್ಟವಾಗಿ ಗುರುತಿಸಲು ವಿಜ್ಞಾನಿಗಳಿಗೆ ಇರುವ ಸವಾಲು. ಇದಕ್ಕೊಂದು ಪರಿಹಾರವಾಗಿ, ಮುಂಬೈನ ಐಐಟಿ ಬಾಂಬೆ ಸಂಸ್ಥೆಯ ವಿಜ್ಞಾನಿಗಳು 'ಡ್ರಗ್‌ಪ್ರೊಟ್‌ಎಐ' (DrugProtAI) ಎಂಬ ಕೃತಕ ಬುದ್ಧಿಮತ್ತೆ ಆಧಾರಿತ ನವೀನ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಔಷಧ ಸಂಶೋಧನೆಯ ಹಾದಿಯನ್ನು ಬದಲಿಸಬಲ್ಲ ಮಹತ್ವದ ಹೆಜ್ಜೆಯಾಗಿದೆ.

ನಮ್ಮ ದೇಹದಲ್ಲಿ ಸುಮಾರು 20,000ಕ್ಕೂ ಹೆಚ್ಚು ವಿಭಿನ್ನ ಪ್ರೋಟೀನ್‌ಗಳಿವೆ. ಇವು ನಮ್ಮ ದೇಹದ ಜೈವಿಕ ಕ್ರಿಯೆಗಳಿಗೆ ಆಧಾರ. ಪ್ರತಿಯೊಂದು ರೋಗಕ್ಕೂ ಒಂದು ನಿರ್ದಿಷ್ಟ ಕಾರಣವಿರುತ್ತದೆ ಮತ್ತು ಆ ಕಾರಣಕ್ಕೆ ಯಾವುದಾದರು ಪ್ರೋಟೀನ್‌ಗಳ ಪಾತ್ರವಿರುತ್ತದೆ. ಉದಾಹರಣೆಗೆ, ಕ್ಯಾನ್ಸರ್‌ಕೋಶಗಳ ಬೆಳವಣಿಗೆಗೆ ಕೆಲವು ಪ್ರೋಟೀನ್‌ಗಳು ಕಾರಣವಾಗಿರುತ್ತವೆ. ಔಷಧಗಳು ಈ ಪ್ರೋಟೀನ್‌ಗಳಿಗೆ ಅಂಟಿಕೊಂಡು ಅವುಗಳ ಚಟುವಟಿಕೆಯನ್ನು ನಿಯಂತ್ರಿಸಬೇಕು ಅಥವಾ ನಿಲ್ಲಿಸಬೇಕು.

ಪ್ರೋಟೀನೊಂದು ಔಷಧವೊಂದರ ಗುರಿಯಾಗಲು ಸೂಕ್ತವಾಗಿದೆಯೇ ಎಂಬುದನ್ನು ವೈಜ್ಞಾನಿಕವಾಗಿ 'ಡ್ರಗ್ಗೆಬಿಲಿಟಿ' (Druggability) ಎಂದು ಕರೆಯುತ್ತಾರೆ. ಇದನ್ನು ಗುರುತಿಸುವುದು ಸುಲಭವಲ್ಲ. ಏಕೆಂದರೆ, ಔಷಧಗಳಿಗೆ ಸೂಕ್ತ ಗುರಿಯಾಗಬಲ್ಲ ಪ್ರೋಟೀನ್‌ಗಳ ಸಂಖ್ಯೆ ಬಹಳ ಕಡಿಮೆ. ಸಾಂಪ್ರದಾಯಿಕ ವಿಧಾನಗಳಲ್ಲಿ ಇದರ ಪತ್ತೆಗೆ ಪ್ರಯೋಗಾಲಯಗಳ ಸಂಶೋಧನೆ ಮತ್ತು ಗಣಕಯಂತ್ರ ಆಧಾರಿತ ವಿಶ್ಲೇಷಣೆ ಎರಡನ್ನೂ ಬಳಸಲಾಗುತ್ತದೆ. ಈ ವಿಧಾನಗಳು ನಿಧಾನ ಮತ್ತು ನಿಖರತೆಯಲ್ಲಿ ಸ್ವಲ್ಪ ಕಡಿಮೆ.

ಹಿಂದಿನ ತಂತ್ರಜ್ಞಾನಗಳಿಗೆ ಹೋಲಿಸಿದರೆ, ಈ ಹೊಸ 'ಡ್ರಗ್‌ಪ್ರೊಟ್‌ಎಐ' ತಂತ್ರಜ್ಞಾನ ಹೆಚ್ಚು ಮಾಹಿತಿಯನ್ನು ವಿಶ್ಲೇಷಿಸುತ್ತದೆ. ಪ್ರೋಟೀನ್‌ಗಳು ಅಮೈನೊ ಆಮ್ಲಗಳಿಂದ (amino acids) ರೂಪುಗೊಂಡಿರುತ್ತವೆ. ಹಿಂದಿನ ತಂತ್ರಜ್ಞಾನಗಳು ಕೇವಲ ಅಮೈನೊ ಆಮ್ಲಗಳ ರಚನೆಯನ್ನು ಮಾತ್ರ ಪರಿಗಣಿಸುತ್ತಿದ್ದವು. ಆದರೆ, 'ಡ್ರಗ್‌ಪ್ರೊಟ್‌ಎಐ' ಸುಮಾರು 183 ವಿವಿಧ ಪ್ರೋಟೀನ್‌ಗಳ ಗುಣಲಕ್ಷಣಗಳನ್ನು ವಿಶ್ಲೇಷಿಸುತ್ತದೆ. ಇದರಲ್ಲಿ, ಪ್ರೋಟೀನ್‌ನ ಭೌತಿಕ ಹಾಗೂ ರಾಸಾಯನಿಕ ಗುಣಗಳು, ಅದರ ಅಮೈನೊ ಆಮ್ಲಗಳ ಅನುಕ್ರಮ (sequence), ಇತರೆ ಪ್ರೋಟೀನ್‌ಗಳೊಂದಿಗೆ ಅದು ಹೇಗೆ ಸಂವಹನ ನಡೆಸುತ್ತದೆ, ಮತ್ತು ಕೋಶದ ಯಾವ ಭಾಗದಲ್ಲಿ ಅದು ಇದೆ ಎಂಬ ವಿವರಗಳೂ ಸೇರಿವೆ. ಇದು ಕೇವಲ ಒಂದು ಪ್ರೋಟೀನನ್ನು ಅದರ ರಚನೆಯ ಆಧಾರದ ಮೇಲೆ ನೋಡುವುದಿಲ್ಲ, ಬದಲಿಗೆ ಅದರ ಸಂಪೂರ್ಣ ಗುಣಲಕ್ಷಣಗಳನ್ನು ಆಧರಿಸಿ ವಿಶ್ಲೇಷಿಸುತ್ತದೆ. ಇದು ನಿಖರತೆಯನ್ನು ಹೆಚ್ಚಿಸಿದೆ. ಈ ಕಾರಣಕ್ಕಾಗಿಯೇ 'ಡ್ರಗ್‌ಪ್ರೊಟ್‌ಎಐ' ಇತರ ತಂತ್ರಜ್ಞಾನಗಳಾದ 'ಸ್ಪೈಡರ್' (SPIDER) ಮತ್ತು 'ಡ್ರಗ್‌ಟಾರ್' (DrugTar) ಗಿಂತ ಉತ್ತಮವಾಗಿ ಕಾರ್ಯನಿರ್ವಹಿಸಿದೆ ಎಂದು ಸಂಶೋಧಕರು ಹೇಳಿದ್ದಾರೆ.

> ಪ್ರೋಟೀನೊಂದು ಔಷಧವೊಂದರ ಗುರಿಯಾಗಲು ಸೂಕ್ತವಾಗಿದೆಯೇ ಎಂಬುದನ್ನು ಗುರುತಿಸುವುದು ಸುಲಭವಲ್ಲ. 'ಡ್ರಗ್‌ಪ್ರೊಟ್‌ಎಐ'ನಿಂದ ಇದು ಸುಲಭವಾಗುತ್ತದೆ. ಈ ತಂತ್ರಜ್ಞಾನ ಔಷಧ ಸಂಶೋಧನೆಯ ಹಾದಿಯನ್ನು ಬದಲಿಸಬಲ್ಲ ಮಹತ್ವದ ಹೆಜ್ಜೆ.

ಕೃತಕ ಬುದ್ಧಿಮತ್ತೆ ಆಧಾರಿತ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವಲ್ಲಿ ಇರುವ ಒಂದು ದೊಡ್ಡ ಸವಾಲು, 'ಅಸಮತೋಲಿತ ದತ್ತಾಂಶ' (imbalanced data) ಅಥವಾ ಮಾಹಿತಿ. ಔಷಧಗಳ ಗುರಿಯಾಗದ ಪ್ರೋಟೀನ್‌ಗಳ ಸಂಖ್ಯೆ, ಗುರಿಯಾಗುವ ಪ್ರೋಟೀನ್‌ಗಳ ಸಂಖ್ಯೆಗಿಂತ ಬಹಳ ಜಾಸ್ತಿ ಇದೆ. ಹೀಗಾಗಿ, ಕೃತಕ ಬುದ್ಧಿಮತ್ತೆಯ ಮಾದರಿಯು ಈ ಮಾಹಿತಿಯ ಮೇಲೆ ತರಬೇತಿಗೊಂಡರೆ, ಅದು ಕೇವಲ ಗುರಿಯಾಗದ ಪ್ರೋಟೀನ್‌ಗಳನ್ನೇ ಹೆಚ್ಚು ನಿಖರವಾಗಿ ಗುರುತಿಸುತ್ತದೆ. ಆದರೆ, ವಿರಳವಾಗಿರುವ, ಆದರೆ ಪ್ರಮುಖವಾಗಿರುವ ಗುರಿಯಾಗಬಲ್ಲ ಪ್ರೋಟೀನ್‌ಗಳನ್ನು ಗುರುತಿಸಲು ವಿಫಲವಾಗುತ್ತದೆ.

ಈ ಸಮಸ್ಯೆಯನ್ನು ಪರಿಹರಿಸಲು, 'ಡ್ರಗ್‌ಪ್ರೊಟ್‌ಎಐ' ಅನ್ನು ಅಭಿವೃದ್ಧಿಪಡಿಸಿದ ವಿಜ್ಞಾನಿಗಳು 'ಪಾರ್ಟಿಷನಿಂಗ್-ಆಧಾರಿತ ಸಮಗ್ರ ವಿಧಾನ' (partitioning-based ensemble method) ಎಂಬ ವಿಶೇಷ ತಂತ್ರವನ್ನು ಬಳಸಿದ್ದಾರೆ. ಇದರಡಿಯಲ್ಲಿ, ಗುರಿಯಾಗದ ಪ್ರೋಟೀನ್‌ಗಳ ದೊಡ್ಡ ಸಮೂಹವನ್ನು ಸಣ್ಣ ಸಣ್ಣ ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ನಂತರ, ಹಲವಾರು ಕೃತಕ ಬುದ್ಧಿಮತ್ತೆ ಮಾದರಿಗಳನ್ನು ತರಬೇತಿಗೊಳಿಸಲಾಗುತ್ತದೆ. ಪ್ರತಿಯೊಂದು ಮಾದರಿಯು ಒಂದು ಸಣ್ಣ ಗುಂಪಿನೊಂದಿಗೆ, ಮತ್ತು ಗುರಿಯಾಗಬಲ್ಲ ಪ್ರೋಟೀನ್‌ಗಳ ಸಂಪೂರ್ಣ ಗುಂಪಿನೊಂದಿಗೆ ತರಬೇತಿ ಪಡೆಯುತ್ತದೆ. ಇದರಿಂದ, ಎಲ್ಲ ಮಾದರಿಗಳಿಗೂ ಸಮತೋಲಿತ ಮಾಹಿತಿ ಸಿಗುತ್ತದೆ ಮತ್ತು ಪ್ರಮುಖ ಮಾಹಿತಿಯು ಕಣ್ಮರೆಯಾಗುವುದಿಲ್ಲ. ಈ ತಂತ್ರದಿಂದಾಗಿ, 'ಡ್ರಗ್‌ಪ್ರೊಟ್‌ಎಐ' ಶೇ. 87ರಷ್ಟು ನಿಖರತೆಯನ್ನು ಸಾಧಿಸಿದೆ.

ತಮ್ಮ ಸಾಧನವು ನೈಜವಾಗಿ ಎಷ್ಟು ಪರಿಣಾಮಕಾರಿ ಎಂದು ಪರೀಕ್ಷಿಸಲು, ಸಂಶೋಧಕರು ಒಂದು ವಿಶೇಷ ಪರೀಕ್ಷೆ ನಡೆಸಿದರು. ಅವರು 'ಡ್ರಗ್‌ಪ್ರೊಟ್‌ಎಐ'ಅನ್ನು ಇತ್ತೀಚೆಗೆ ಔಷಧಗಳಿಗೆ ಗುರಿ ಎಂದು ಗುರುತಿಸಲ್ಪಟ್ಟಿದ್ದ ಪ್ರೋಟೀನ್‌ಗಳನ್ನು ಗುರುತಿಸಲು ಬಳಸಿದರು. ಈ ಪ್ರೋಟೀನ್‌ಗಳನ್ನು ಕೃತಕ ಬುದ್ಧಿಮತ್ತೆ ಮಾದರಿಯ ತರಬೇತಿಯ ಸಮಯದಲ್ಲಿ ಬಳಸಲಾಗಿರಲಿಲ್ಲ. ಈ ಪರೀಕ್ಷೆಯಲ್ಲಿ, 'ಡ್ರಗ್‌ಪ್ರೊಟ್‌ಎಐ' 81 ಹೊಸ ಗುರಿಗಳಲ್ಲಿ 61 ಪ್ರೋಟೀನ್‌ಗಳನ್ನು ಸರಿಯಾಗಿ ಗುರುತಿಸಿತು. ಇದು ಈ ತಂತ್ರಜ್ಞಾನದ ಪ್ರಾಯೋಗಿಕ ಮತ್ತು ನೈಜ-ಜೀವನದ ಅನ್ವಯಿಕತೆಯನ್ನು ಸಾಬೀತುಪಡಿಸುತ್ತದೆ.

ಈ ಸಾಧನದ ಮತ್ತೊಂದು ಪ್ರಮುಖ ವೈಶಿಷ್ಟ್ಯವೆಂದರೆ, ಕೇವಲ ಪ್ರೋಟೀನ್‌ಗಳನ್ನು ಒಂದು ನಿರ್ದಿಷ್ಟ ಮಟ್ಟದಲ್ಲಿ ಊಹಿಸುವುದು (prediction) ಮಾತ್ರ ಅಲ್ಲ, ಅದು 'ಏಕೆ' ಒಂದು ಪ್ರೋಟೀನ್ ಡ್ರಗ್ಗೆಬಲ್ ಆಗಿದೆ ಎಂಬುದನ್ನು ವಿವರಿಸುತ್ತದೆ. 'ಶ್ಯಾಪ್' (SHAP - SHapley Additive exPlanations) ಎಂಬ ತಂತ್ರವನ್ನು ಬಳಸಿ, ಪ್ರೋಟೀನ್‌ನ ಯಾವ ಗುಣಲಕ್ಷಣಗಳು ಅದರ ಡ್ರಗ್ಗೆಬಿಲಿಟಿಗೆ ಹೆಚ್ಚು ಕಾರಣವಾಗಿವೆ ಎಂಬುದನ್ನು ಇದು ವಿಶ್ಲೇಷಿಸುತ್ತದೆ. ಉದಾಹರಣೆಗೆ, ಕೋಶ ಸಂಕೇತಗಳನ್ನು (cell signalling) ನಿಯಂತ್ರಿಸುವ 'ಕೈನೇಸ್' (kinases) ಎಂಬ ಪ್ರೋಟೀನ್‌ಗಳು ಮತ್ತು ಕೆಲವು ನಿರ್ದಿಷ್ಟ ರಚನೆಗಳು ಪ್ರೋಟೀನ್‌ಗಳು ಔಷಧಕ್ಕೆ ಸೂಕ್ತವಾಗಿವೆ ಎಂಬುದರ ಪ್ರಬಲ ಸೂಚಕಗಳಾಗಿವೆ ಎಂದು ಈ ತಂತ್ರಜ್ಞಾನ ತೋರಿಸಿಕೊಟ್ಟಿದೆ. ಈ ಅಂಶವು ಸಂಶೋಧಕರಿಗೆ ಒಂದು ನಿರ್ದಿಷ್ಟ ಔಷಧವನ್ನು ಅಭಿವೃದ್ಧಿಪಡಿಸುವ ನಿರ್ಧಾರ ತೆಗೆದುಕೊಳ್ಳಲು ಸಹಕಾರಿಯಾಗಿದೆ.

'ಡ್ರಗ್‌ಪ್ರೊಟ್‌ಎಐ'ನಂತಹ ಸಾಧನಗಳು ಔಷಧ ಸಂಶೋಧನೆಯ ಸಮಯ ಮತ್ತು ಹಣವನ್ನು ಕಡಿಮೆ ಮಾಡಬಹುದು. ಇದು ವಿಶೇಷವಾಗಿ ಬೆಂಗಳೂರು ಮತ್ತು ಕರ್ನಾಟಕದಲ್ಲಿರುವ ಹಲವು ಜೈವಿಕ ತಂತ್ರಜ್ಞಾನ ಮತ್ತು ಔಷಧ ಸಂಶೋಧನಾ ಸಂಸ್ಥೆಗಳಿಗೆ ಬಹಳ ಸಹಕಾರಿ ಆಗಬಹುದು. ಈ ತಂತ್ರಜ್ಞಾನವು ಹೆಚ್ಚು ನಿಖರ ಮತ್ತು ವೇಗವಾಗಿ ಕಾರ್ಯನಿರ್ವಹಿಸುವುದರಿಂದ, ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಆವಿಷ್ಕಾರಗಳಿಗೆ ದಾರಿ ಮಾಡಿಕೊಡುತ್ತದೆ. ಸಂಶೋಧಕರು ಹೊಸ ಔಷಧಗಳನ್ನು ವೇಗವಾಗಿ ಕಂಡುಹಿಡಿದು, ಮನುಕುಲದ ಒಳಿತಿಗಾಗಿ ಅದನ್ನು ಇನ್ನಷ್ಟು ಶೀಘ್ರವಾಗಿ ಮಾರುಕಟ್ಟೆಗೆ ತರಬಹುದು. ಎಲ್ಲಕ್ಕಿಂತ ಮುಖ್ಯವಾಗಿ, 'ಡ್ರಗ್‌ಪ್ರೊಟ್‌ಎಐ' ಅನ್ನು ಆನ್‌ಲೈನ್‌ನಲ್ಲಿ ಉಚಿತವಾಗಿ ಲಭ್ಯವಾಗುವಂತೆ ಮಾಡಲಾಗಿದೆ. ❖

ಹಣ್ಣುಗಳ ಸಂರಕ್ಷಣೆಗೆ ಪ್ರೋಟೀನ್

• ಅಮೃತೇಶ್ವರಿ ಬಿ.



ಹಣ್ಣುಗಳು ನಮ್ಮ ಆಹಾರದ ಪ್ರಮುಖ ಭಾಗ. ಇವು ನಮ್ಮ ಪೋಷಣೆ ಮತ್ತು ಬೆಳವಣಿಗೆಗೆ ಅತ್ಯವಶ್ಯವಾಗಿ ಬೇಕಾದ ಆಹಾರದ ವಿಧ; ಸೂಕ್ಷ್ಮ ಪೋಷಕಾಂಶಗಳ ಆಕರ; ತುರ್ತಾಗಿ ನಮ್ಮ ದೇಹಕ್ಕೆ ಚೈತನ್ಯ ನೀಡಬಲ್ಲ ಶಕ್ತಿಯ ಮೂಲ. ನಮ್ಮ ಆಹಾರದಲ್ಲಿ ಇಷ್ಟೆಲ್ಲಾ ಮಹತ್ವದ ಪಾತ್ರ ವಹಿಸುವ ಹಣ್ಣುಗಳು ಅಷ್ಟೇ ಬೇಗ ಹಾಳಾಗಿ ಹೋಗುವಂಥವು. ಹಾಗಾಗಿ ಹಣ್ಣುಗಳನ್ನು ದೀರ್ಘಕಾಲ ಸಂರಕ್ಷಿಡುವುದು ಅನಿವಾರ್ಯ. ಕಟಾವು ಮಾಡಿದ ನಂತರ ಒಣಗಿಸುವುದು, ಉಪ್ಪಿನಕಾಯಿ ತಯಾರಿಸುವುದು, ಫರ್ಮೆಂಟೇಶನ್ (ಹುದುಗುವಿಕೆ), ಸಕ್ಕರೆ ಪಾಕದಲ್ಲಿ ನೆನೆಸಿಡುವುದು ಮುಂತಾದ ಸಾಂಪ್ರದಾಯಿಕ ವಿಧಾನಗಳನ್ನು ನಾವು ಕೂಡ ಅನುಸರಿಸುತ್ತಿದ್ದೆವು. ಇವು ಇಂದಿಗೂ ಬಳಕೆಯಲ್ಲಿವೆಯೆನ್ನಿ. ಆದರೆ ಈ ವಿಧಾನಗಳಲ್ಲಿ ಹಣ್ಣನ್ನು ಸಂರಕ್ಷಿಸಿ ಅದರಿಂದ ಸಿಗಬೇಕಾದ ಪೋಷಣೆಯನ್ನೇನೊ ಪಡೆದುಕೊಳ್ಳಬಹುದು, ಆಯಾ ಹಣ್ಣುಗಳ ಋತುಮಾನದಿಂದಾಚೆಗೂ! ಆದರೆ ಈ ವಿಧಾನದಿಂದ ತಾಜಾ ಹಣ್ಣುಗಳು ತಿನ್ನಲು ಸಿಗದೆ ಹಣ್ಣನ್ನು ಬೇರೆ ರುಚಿಯಲ್ಲಿ ಸವಿಯಬಹುದಷ್ಟೆ. ವಿಜ್ಞಾನದಲ್ಲಿ ನಾವು ಮುಂದುವರೆದಂತೆ, ಹಣ್ಣುಗಳನ್ನು ಯಥಾವತ್ತಾಗಿ ಶೈತ್ಯಾಗಾರಗಳಲ್ಲಿ ಸಂಗ್ರಹಿಸುವುದು (ಡೀಪ್ ಫ್ರೀಜಿಂಗ್), ಹಣ್ಣಿನ ರಸಗಳನ್ನು ತೆಗೆದು ಬಾಟಲಿಗಳಲ್ಲಿ ಸಂಗ್ರಹಿಸುವುದು (ಕ್ಯಾನಿಂಗ್), ಒಣಗಿಸಬಹುದಾದ ಹಣ್ಣುಗಳಾದರೆ ಒಣಗಿಸುವುದು, ಫರ್ಮೆಂಟೇಷನ್ ಮತ್ತು ಸಕ್ಕರೆ ಪಾಕದಲ್ಲಿ ಸಂಗ್ರಹಿಸುವುದು, ಹೈಡ್ರೋಫೋಬಿಕ್ ಸರ್ಫೇಸ್ ಟ್ರೀಟ್ಮೆಂಟ್ (ತೇವಾಂಶವನ್ನು ಹೀರಿಕೊಳ್ಳದ ಸಿಲೇನುಗಳು, ಫ್ಲೂರೋಕಾರ್ಬನ್‌ಗಳಂತಹ ರಾಸಾಯನಿಕಗಳನ್ನು ಹಣ್ಣುಗಳ ಹೊರಪದರಕ್ಕೆ ಲೇಪಿಸುವುದು), ತುಸು ಜಟಿಲವಾದ ಹೊರಪದರವಿರುವ ಹಣ್ಣುಗಳಿಗೆ ನೈಸರ್ಗಿಕ ಪಾಲಿಮರುಗಳಾದ ಕೈಟೋಸಾನ್, ಶರ್ಕರಗಳ ಪದರವನ್ನು ಲೇಪಿಸುವುದು – ಹೀಗೆ ಹಲವಾರು ವಿಧಾನಗಳಿಂದ ಹಣ್ಣುಗಳನ್ನು ಹಾಳಾಗದಂತೆ ಶೇಖರಿಸುವ ಅವಧಿಯನ್ನು ವಿಸ್ತರಿಸುವುದನ್ನು ಆರಂಭಿಸಿದೆವು.

ಇನ್ನು, ಹೆಚ್ಚಿನ ಪ್ರಮಾಣದಲ್ಲಿ ಬೆಳೆದ, ವೇಗವಾಗಿ ಹಾಳಾಗಿಹೋಗುವಂಥ ಹಣ್ಣುಗಳೆಲ್ಲವನ್ನು ದೀರ್ಘ ಕಾಲದವರೆಗೆ ತಾಜಾರೂಪದಲ್ಲಿ ಬಳಸಬೇಕಾದರೆ ಮತ್ತು ಆರ್ಥಿಕವಾಗಿಯೂ ನಷ್ಟವಾಗದಂತೆ ಖಾತರಿವಹಿಸಲು ಇನ್ನೂ ಆಧುನಿಕವಾದ ಸಂರಕ್ಷಣಾ ವಿಧಾನ ಅನಿವಾರ್ಯವಾಗಿತ್ತು. ಜೆನೆಟಿಕ್ ಮಾಡಿಫಿಕೇಶನ್, ಶೈತ್ಯಾಗಾರಗಳಲ್ಲಿ ಶೇಖರಿಸುವ ಮತ್ತು ಫಾರ್ಮಾಲ್ಡಿಹೈಡ್, ಕಾಪರ್ ಸಲ್ಫೇಟ್, ಪೊಟ್ಯಾಶಿಯಂ ಸಾರ್ಬೇಟ್ ಇತ್ಯಾದಿಗಳಂತಹ ರಾಸಾಯನಿಕಗಳನ್ನು ಬಳಸಿ ಸಂರಕ್ಷಿಸುವ ವಿಧಾನಗಳನ್ನು ಕೂಡ ಅನ್ವೇಷಿಸಲಾದರೂ ಇವು ಆರ್ಥಿಕವಾಗಿಯೂ ದುಬಾರಿ ಮತ್ತು ಇಂಗಾಲ ಹೊರಸೂಸುವಿಕೆಯಿಂದಾಗಿ ಪರಿಸರ ಮಾಲಿನ್ಯಕ್ಕೂ ಕಾರಣವಾಗುತ್ತವೆ. ಹಾಗಾಗಿ ಈ ಎಲ್ಲ ಅಡ್ಡಪರಿಣಾಮಗಳನ್ನು ನಿವಾರಿಸುತ್ತ ನಾವು ಬೆಳೆದ ಹಣ್ಣುಗಳನ್ನು ಪರಿಣಾಮಕಾರಿಯಾಗಿ ಸಂರಕ್ಷಿಸುವ ವಿಶೇಷ, ಸುಲಭ ಹಾಗೂ ಪರಿಸರಸ್ನೇಹಿ ಪರಿಹಾರವೊಂದನ್ನು ಚೀನಿವಿಜ್ಞಾನಿಗಳು ಪತ್ತೆ ಮಾಡಿದ್ದಾರಂತೆ. ಅದುವೇ ಕಂಪ್ಯೂಟರ್ ಸಹಾಯದಿಂದ 'ಮಾಲಿಕ್ಯುಲಾರ್ ಸಿಮ್ಯುಲೇಷನ್' ತಂತ್ರವನ್ನು ಬಳಸಿಕೊಂಡು ಪ್ರೋಟೀನು ಸಂಯೋಜನೆಯೊಂದನ್ನು ಸಿದ್ಧಪಡಿಸಿ ಹಣ್ಣಿನ ಮೇಲ್ಭಾಗಕ್ಕೆ ಲೇಪನ ಮಾಡುವುದು! ಈ ಸುದ್ದಿಯನ್ನು ಮೊನ್ನೆ ನೇಚರ್ ಪತ್ರಿಕೆಯಲ್ಲಿ ಚೀನಾದ ಶಾಂಕ್ಸಿ ನಾರ್ಮಲ್ ಯೂನಿವರ್ಸಿಟಿಯ ವಿಜ್ಞಾನಿಗಳು ವರದಿ ಮಾಡಿದ್ದಾರೆ.

'ಲೈಸೋಜೈಮು' ಎನ್ನುವ ಕಿಣ್ವಗಳಲ್ಲಿರುವ ಡೈ ಸಲ್ಫೈಡ್ ಬಂಧಗಳನ್ನು ಇಳಿಸಿ ಹಾಗೂ ಆಲ್ಫಾ ಸುರುಳಿ ಆಕಾರವನ್ನು ರೂಪಾಂತರಿಸಿ, ಸೋಡಿಯಂ ಆಲ್ಜಿನೇಟ್ ಮತ್ತು ಸೆಲ್ಯುಲೋಸಿನ ಸೂಕ್ಷ್ಮಕಣಗಳೊಂದಿಗೆ ಹೊಂದಿಸಿ ಸಿದ್ಧಪಡಿಸಿರುವ ಪ್ರೋಟೀನ್ ಇದು. ಸೋಡಿಯಂ ಆಲ್ಜಿನೇಟ್ ನೀರಿನಲ್ಲಿ ಕರಗುವ ಒಂದು ನೈಸರ್ಗಿಕ ಪಾಲಿಸ್ಯಾಕರೈಡ್ ಆಗಿದ್ದು ಎಮಲ್ಸಿಕಾರಕವಾಗಿ ಬಳಸಬಹುದಾಗಿದೆ. ಸೆಲ್ಯುಲೋಸ್ ಒಂದು ನೈಸರ್ಗಿಕ ಪಾಲಿಮರ್. ಈ ಮೂರು ಪದಾರ್ಥಗಳನ್ನು ಬಳಸಿ ತಯಾರಿಸಿದ ಈ ಪ್ರೋಟೀನು ಹಣ್ಣಿನ ಹೊರಪದರೊಂದಿಗೆ ಬೆರೆತುಕೊಂಡು ಹಣ್ಣಿನಲ್ಲಿರುವ ನೀರಿನಾಂಶವನ್ನು ಹೊರಬಿಡದೆ, ಸೂಕ್ಷ್ಮಾಣುಜೀವಿಗಳನ್ನು ಬೆಳೆಯಗೊಡದಂತೆ ಹಣ್ಣನ್ನು ರಕ್ಷಿಸುತ್ತದೆ. ಈ ಪ್ರೋಟೀನು ನೀರನ್ನು ಇಷ್ಟಪಡದ ಸ್ವಭಾವದಾದ್ದರಿಂದ ಹೊರಗಿನಿಂದ ಹಣ್ಣಿನ ಮೇಲೆ ನೀರು ಬಿದ್ದರೂ ಅದನ್ನು ಹೀರಿಕೊಳ್ಳುವುದಿಲ್ಲ. ಲೇಪಿಸಲೂ ಸುಲಭ. ತನ್ಮೂಲಕ ಹಣ್ಣನ್ನು ಕೆಡದಂತೆ ಸಂಪೂರ್ಣವಾಗಿ ರಕ್ಷಿಸಿಡುತ್ತದೆ.

ಕಟಾವು ಮಾಡಿತಂದ ಹಣ್ಣುಗಳು ಗಾಳಿಗೆ ತೆರೆದಿಟ್ಟಾಗ ವೇಗವಾಗಿ ಆಕ್ಸಿಡೀಕರಣಕ್ಕೊಳಗಾಗುತ್ತವೆ. ಆಗ ಪೋಷಕಾಂಶಗಳೂ ನಷ್ಟವಾಗಿ, ಸೂಕ್ಷ್ಮಾಣುಜೀವಿಗಳೂ ಹಣ್ಣಿನ ಒಳಪ್ರವೇಶಿಸಲು ಅನುಕೂಲ ವಾತಾವರಣ ಸೃಷಿಯಾಗುತ್ತದೆ. ಆದರೆ ವಿಜ್ಞಾನಿಗಳು ರೂಪಿಸಿರುವ ಪ್ರೋಟೀನ್ ಸಂಯೋಜನೆಯು ಇವೆಲ್ಲವನ್ನೂ ನಿವಾರಿಸುವ ಅತ್ಯುತ್ತಮ ಗುಣವುಳ್ಳವಾಗಿವೆ ಹಾಗೂ ಇದನ್ನು, ಕತ್ತರಿಸಿದ ಹಣ್ಣಿನ ತೊಳೆಗಳನ್ನೂ ತಾಜಾವಾಗಿರಿಸಲು ಬಳಸಬಹುದಾದ್ದರಿಂದ ಜಾಗತಿಕವಾಗಿ ಎದುರಿಸುತ್ತಿರುವ ಆಹಾರ ತ್ಯಾಜ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸಲು ಇದೂ ಒಂದು ಉತ್ತಮ ಮತ್ತು ಸುಸ್ಥಿರ ಪರಿಹಾರವಾಗಿ ಹೊರಹೊಮ್ಮಲಿದೆ ಎನ್ನುವುದು ವಿಜ್ಞಾನಿಗಳ ಆಶಯ. ಈ ಪ್ರೋಟೀನು ಹಣ್ಣುಗಳ ಅವಧಿಯನ್ನು ಸುಮಾರು ಎರಡರಿಂದ ಐದು ಪಟ್ಟು ವಿಸ್ತರಿಸುವುದಲ್ಲದೆ, ಸುಮಾರು ಹದಿನೇಳು ರೀತಿಯ ಹಣ್ಣುಗಳನ್ನು ಸಂರಕ್ಷಿಸಲು ಈ ತಂತ್ರವನ್ನು ಬಳಸಬಹುದಾಗಿದೆಯಂತೆ. ಹಣ್ಣುಗಳಲ್ಲಿ ಕೆಲವು ಕಟಾವು ಮಾಡಿದ ನಂತರವೂ ಮಾಗಲು ಬೇಕಾದ ಹಾರ್ಮೋನ್, ಇಥಿಲೀನ್ ಉತ್ಪಾದನೆಯಾಗುವುದರಿಂದ ಮಾಗುವುದು ಮುಂದುವರೆಯುತ್ತದೆ. ಉದಾಹರಣೆಗೆ, ಬಾಳೆಹಣ್ಣು, ಮಾವು, ಟೊಮ್ಯಾಟೋ ಇತ್ಯಾದಿ. ಕೆಲವು ಹಣ್ಣುಗಳಲ್ಲಿ ಕಟಾವು ಮಾಡಿದ ನಂತರ ಇಥಿಲೀನ್ ಉತ್ಪಾದನೆಯಾಗದಿರುವುದರಿಂದ ಮರದಲ್ಲಿಯೇ ಪೂರ್ತಿ ಹಣ್ಣಾದ ನಂತರವಷ್ಟೇ ಕಟಾವು ಮಾಡಬೇಕಿರುತ್ತದೆ. ಉದಾಹರಣೆಗೆ ಸ್ಟ್ರಾಬೆರಿ, ಕಿತ್ತಳೆ, ದ್ರಾಕ್ಷಿ ಮುಂತಾದವು. ಆದರೆ ಈ ಪ್ರೋಟೀನನ್ನು ಇಂಥ ಎರಡೂ ರೀತಿಯ ಹಣ್ಣುಗಳಲ್ಲಿ ಬಳಸಿ ಸಂರಕ್ಷಿಸಬಹುದು ಎನ್ನುವುದು ಮತ್ತೊಂದು ಪ್ರಯೋಜನ.

ಅಲ್ಲದೇ, ಸಂರಕ್ಷಿಸಿದಷ್ಟೂ ದಿನಗಳವರೆಗೆ ಪೋಷಕಾಂಶಗಳ ಪ್ರಮಾಣ ಸುಮಾರು ಪ್ರತಿಶತ 60-98ರಷ್ಟು ಉಳಿದಿತ್ತಂತೆ. ಅರ್ಥಾತ್, ಅವಧಿ ವಿಸ್ತರಣೆಯಾದಷ್ಟೂ ಹಲವು ದಿನಗಳವರೆಗೆ ಪೋಷಕಾಂಶಗಳೂ ಸುಸ್ಥಿರವಾಗಿರುತ್ತವೆ. ಹಣ್ಣಿನೊಳಗಿನ ನೀರಿನಾಂಶವನ್ನೂ ನಷ್ಟವಾಗದಂತೆ ಕಾಪಾಡುವುದರಿಂದ ಹಣ್ಣಿನ ತೂಕದಲ್ಲಿಯೂ ಇಳಿಕೆಯಾಗುವುದಿಲ್ಲ. ಇತರೆ ಆಹಾರ ಸಂಸ್ಕರಣಾ ವಿಧಾನಗಳಲ್ಲಿ ಪೋಷಕಾಂಶಗಳು ನಷ್ಟವಾಗುವ ಸಾಧ್ಯತೆ ಇದ್ದು, ಇಲ್ಲಿ ಹಣ್ಣುಗಳು ತಾಜಾರೂಪದಲ್ಲಿ ಸಿಗುವುದಲ್ಲದೆ, ಪೋಷಕಾಂಶಗಳನ್ನೂ ಪೂರ್ಣಪ್ರಮಾಣದಲ್ಲಿ ಉಳಿಸಿಕೊಡುತ್ತದೆ. ಹಣ್ಣುಗಳನ್ನು ಸಂರಕ್ಷಿಸುವ ಇತರೆ ವಿಧಾನಗಳಿಗೆ ಹೋಲಿಸಿದರೆ ಇಂಗಾಲ ಹೊರಸೂಸುವಿಕೆಯಲ್ಲಿಯೂ ಸುಮಾರು ಪ್ರತಿಶತ 90ರಷ್ಟು ಇಳಿಕೆಯಾಗುತ್ತದಂತೆ. ಜೊತೆಗೆ ಹೀಗೆ ಲೇಪಿಸುವ ಪ್ರೋಟೀನ್‌ನ ಪದರವು ತಿನ್ನಬಲ್ಲದಾದ್ದರಿಂದ ಅಕಸ್ಮಾತಾಗಿ ಹೊಟ್ಟೆ ಸೇರಿದರೂ ತೊಂದರೆಯಿಲ್ಲ. ಹಣ್ಣುಗಳನ್ನು ಕತ್ತರಿಸುವ ಮುಂಚೆ ಹೊರಪದರವನ್ನು ತೊಳೆಯುವಾಗ ಈ ಪ್ರೋಟೀನ್‌ನ ಲೇಪನವನ್ನು ತೊಳೆದು ಸ್ವಚ್ಛಗೊಳಿಸುವುದೂ ಸುಲಭವಂತೆ. ಸಾಂಪ್ರದಾಯಿಕ ವಿಧಾನಗಳು ಕೆಲವೇ ಹಣ್ಣುಗಳನ್ನು ಮಾತ್ರವೇ ಸಂರಕ್ಷಿಸಲು ಬಳಕೆಯಾದರೆ, ಈ ಪ್ರೋಟೀನ್ ವಿಧಾನವು ವೈವಿಧ್ಯಮಯ ಹಣ್ಣುಗಳನ್ನು ಸಂರಕ್ಷಿಸಲು ಬಳಕೆಯಾಗಬಲ್ಲ, ಆರ್ಥಿಕವಾಗಿಯೂ ಅಗ್ಗವಾಗಿರುವ, ಸುರಕ್ಷಿತ ಹಾಗೂ ಪರಿಸರಸ್ನೇಹಿ ಉಪಾಯ ಎನ್ನುತ್ತಾರೆ, ವಿಜ್ಞಾನಿಗಳು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ನಿಯಂತ್ರಣ ಮತ್ತು ಸಹಭಾಗಿತ್ವ

5) ಮಿದುಳಿನ ಮೂರು ಪ್ರಮುಖ ಭಾಗಗಳ(ಪ್ರದೇಶಗಳ)ನ್ನು ಹೆಸರಿಸಿ

ಉತ್ತರ:– ಮಿದುಳಿನ ಮೂರು ಪ್ರಮುಖ ಭಾಗಗಳು ಅಥವಾ ಪ್ರದೇಶಗಳೆಂದರೆ, ಮುಮ್ಮೆದುಳು, ಮಧ್ಯಮಿದುಳು ಮತ್ತು ಹಿಮ್ಮೆದುಳು.

6) ಮುಮ್ಮೆದುಳಿನ ಕುರಿತು ಬರೆಯಿರಿ

ಉತ್ತರ:– ಮುಮ್ಮೆದುಳು (fore brain) ಮಿದುಳಿನ ಪ್ರಮುಖ ಆಲೋಚನೆಯ ಭಾಗವಾಗಿದೆ. ಇದು ವಿವಿಧ ಗ್ರಾಹಕ ಜೀವಕೋಶಗಳಿಂದ ಸಂವೇದನಾ ಆವೇಗಗಳನ್ನು ಸ್ವೀಕರಿಸುವ ಪ್ರದೇಶಗಳನ್ನು ಹೊಂದಿದೆ. ಮುಮ್ಮೆದುಳಿನ ಬೇರೆ ಬೇರೆ ಪ್ರದೇಶಗಳು ಶ್ರವಣ, ವಾಸನೆ, ದೃಷ್ಟಿ ಮತ್ತಿತರ ಕಾರ್ಯಗಳನ್ನು ನಿರ್ವಹಿಸಲು ವೈಶಿಷ್ಟ್ಯತೆಯನ್ನು ಪಡೆದಿವೆ. ಮುಮ್ಮೆದುಳಿನಲ್ಲಿ ಕೆಲವು ಸಾಂಘಿಕ ಪ್ರದೇಶಗಳಿದ್ದು ಅಲ್ಲಿ ಈ ಸಂವೇದನಾ ಮಾಹಿತಿಯನ್ನು ಇತರ ಗ್ರಾಹಕಗಳಿಂದ ಪಡೆದ ಮಾಹಿತಿಯೊಂದಿಗೆ ಹಾಗೂ ಈಗಾಗಲೇ ಮಿದುಳಿನಲ್ಲಿ ಸಂಗ್ರಹವಾಗಿರುವ ಮಾಹಿತಿಯೊಂದಿಗೆ ಜೊತೆಯಾಗಿರಿಸಿ ಅರ್ಥೈಸಲಾಗುತ್ತದೆ. ಇವೆಲ್ಲವುಗಳ ಆಧಾರದ ಮೇಲೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ನಿರ್ಣಯಿಸಲಾಗುತ್ತದೆ ಮತ್ತು ಮಾಹಿತಿಯನ್ನು ಕಾರ್ಯನಿರ್ವಾಹಕ ಪ್ರದೇಶಗಳಿಗೆ ರವಾನಿಸಲಾಗುತ್ತದೆ, ಅವು ನಮ್ಮ ಕಾಲಿನ ಸ್ನಾಯುಗಳಂಥ ಐಚ್ಛಿಕ ಸ್ನಾಯುಗಳ ಚಲನೆಯನ್ನು ನಿಯಂತ್ರಿಸುತ್ತವೆ. ಆದಾಗ್ಯೂ ಕೆಲವು ಸಂವೇದನೆಗಳು ದೃಷ್ಟಿ ಹಾಗೂ ಶ್ರವಣಗಳಿಗಿಂತ ವಿಶಿಷ್ಟವಾಗಿವೆ. ಉದಾಹರಣೆಗೆ, ನಾವು ಸಾಕಷ್ಟು ಆಹಾರ ಸೇವಿಸಿದ್ದೇವೆ ಹಾಗೂ ಹೊಟ್ಟೆ ತುಂಬಿದೆ ಎಂಬ ಭಾವನೆಯ ಸಂವೇದನೆಯು ಹಸಿವಿನೊಂದಿಗೆ ಸಂಬಂಧಿಸಿದ ಕೇಂದ್ರದ ಕಾರಣದಿಂದ ತಿಳಿಯುತ್ತದೆ ಅದು ಮುಮ್ಮೆದುಳಿನ ಪ್ರತ್ಯೇಕ ಭಾಗದಲ್ಲಿದೆ.

6) ಮಾನವ ಹಲವು ಆಲೋಚನೆಗಳನ್ನು ಮಾಡುತ್ತಾನೆ, ಈ ಕಾರ್ಯದಲ್ಲಿ ಮೆದುಳು ಬಳ್ಳಿಯ ಪಾತ್ರ ಹೇಗಿದೆ ಎಂಬುದನ್ನು ವಿವರಿಸಿ

ಅಥವಾ

'ನಾವು ಮಾಡುವ ಆಲೋಚನೆ ಮತ್ತು ಕೇಂದ್ರ ನರವ್ಯೂಹ' ಈ ಕುರಿತು ಬರೆಯಿರಿ

ಉತ್ತರ:– ಮಿದುಳು ಬಳ್ಳಿಯು ಆಲೋಚನೆ ಮಾಡಲು ಮಾಹಿತಿಯನ್ನು ಪೂರೈಸುವ ನರಗಳಿಂದ ಮಾಡಲ್ಪಟ್ಟಿದೆ. ಆಲೋಚನಾ ಪ್ರಕ್ರಿಯೆಯು ಹೆಚ್ಚು ಸಂಕೀರ್ಣವಾದ ಯಾಂತ್ರಿಕ ವ್ಯವಸ್ಥೆ ಮತ್ತು ನರವ್ಯೂಹ ಜೋಡಣೆಗಳನ್ನು ಒಳಗೊಂಡಿದೆ. ಇವು ದೇಹದ ಸಮನ್ವಯತೆಯ ಮುಖ್ಯ ಕೇಂದ್ರವಾದ ಮಿದುಳಿನಲ್ಲಿ ಕೇಂದ್ರೀಕೃತವಾಗಿವೆ. ಮಿದುಳು ಮತ್ತು ಮಿದುಳುಬಳ್ಳಿ ಒಟ್ಟಾಗಿ ಕೇಂದ್ರ ನರವ್ಯೂಹ ವ್ಯವಸ್ಥೆಯನ್ನು (central nervous system) ರೂಪಿಸುತ್ತವೆ. ಅವು ದೇಹದ ಎಲ್ಲಾ ಭಾಗಗಳಿಂದ ಮಾಹಿತಿಯನ್ನು ಸ್ವೀಕರಿಸುತ್ತವೆ ಮತ್ತು ಅದನ್ನು ಸಂಯೋಜಿಸುತ್ತವೆ. ನಾವು ನಮ್ಮ ಕ್ರಿಯೆಗಳ ಬಗ್ಗೆ ಕೂಡಾ ಆಲೋಚಿಸುತ್ತೇವೆ. ಬರೆಯುವುದು, ಮಾತನಾಡುವುದು, ಒಂದು ಕುರ್ಚಿಯನ್ನು ಜರುಗಿಸುವುದು, ಒಂದು ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು ಇವೆಲ್ಲ ಐಚ್ಛಿಕ ಕ್ರಿಯೆಗಳಿಗೆ ಉದಾಹರಣೆಗಳಾಗಿವೆ. ಈ ಕ್ರಿಯೆಗಳು ಮುಂದೇನು ಮಾಡಬೇಕೆಂಬ ನಿರ್ಧಾರವನ್ನು ಆಧರಿಸಿವೆ. ಅದೇ ರೀತಿ ಮಿದುಳೂ ಕೂಡಾ ಸ್ನಾಯುಗಳಿಗೆ ಸಂದೇಶಗಳನ್ನು ಕಳಿಸಬೇಕಾಗುತ್ತದೆ. ಇದು ನರವ್ಯೂಹವು ಸ್ನಾಯುಗಳೊಂದಿಗೆ ಸಂವಹನ ನಡೆಸುವ ದ್ವಿತೀಯ ವಿಧಾನವಾಗಿದೆ. ಕೇಂದ್ರ ನರವ್ಯೂಹ ಮತ್ತು ದೇಹದ ಇತರ ಭಾಗಗಳ ನಡುವಿನ ಸಂವಹನವನ್ನು ಮಿದುಳಿನಿಂದ ಹೊರಡುವ ಮಿದುಳು ನರಗಳು ಮತ್ತು ಮಿದುಳುಬಳ್ಳಿಯಿಂದ ಹೊರಡುವ ಮಿದುಳುಬಳ್ಳಿ ನರಗಳನ್ನು ಒಳಗೊಂಡ ಪರಿಧಿ ನರವ್ಯೂಹ (peripheral nervous system) ಅನುಕೂಲಿಸುತ್ತವೆ.

7) ರಕ್ತದ ಒತ್ತಡ, ಬಾಯಲ್ಲಿ ನೀರೂರುವಿಕೆ ಮತ್ತು ವಾಂತಿಯಾಗುವಿಕೆಗಳಂಥ ಎಲ್ಲಾ ಅನೈಚ್ಛಿಕ ಕ್ರಿಯೆಗಳನ್ನು ಯಾವುದು ನಿಯಂತ್ರಿಸುತ್ತದೆ?

ಉತ್ತರ:– ಹಿಮ್ಮೆದುಳಿನ ಮೆಡುಲ್ಲ

8) ನೇರ ರೇಖೆಯಲ್ಲಿ ನಡೆಯುವುದು, ಬೈಸಿಕಲ್ ಸವಾರಿ, ಒಂದು ಪೆನ್ಸಿಲ್‌ಅನ್ನು ಎತ್ತಿಕೊಳ್ಳುವುದು ಮುಂತಾದ ಚಟುವಟಿಕೆಗಳನ್ನು ಮಾಡಲು ಯಾರ ಅವಶ್ಯಕತೆ ಇದೆ?

ಉತ್ತರ:– ಹಿಮ್ಮೆದುಳಿನ ಭಾಗವಾದ ಅನುಮಸಿ

9) ಸಸ್ಯಗಳು ತೋರುವ ಎರಡು ವಿಭಿನ್ನ ರೀತಿಯ ಚಲನೆಗಳ ಬಗ್ಗೆ ಬರೆಯಿರಿ

ಉತ್ತರ:– ಸಸ್ಯಗಳು ಎರಡು ಬಗೆಯ ಚಲನೆಗಳನ್ನು ತೋರಿಸುತ್ತವೆ ಅವುಗಳೆಂದರೆ (1) ಬೆಳವಣಿಗೆಯನ್ನು ಆಧರಿಸಿದ ಚಲನೆ
(2) ಸ್ವತಂತ್ರ ಚಲನೆ

10) ಸಸ್ಯ ಹಾರ್ಮೋನ್‌ಗಳು ಎಂದರೇನು?

ಉತ್ತರ:– ಸಸ್ಯಗಳಲ್ಲಿ ಸಹಭಾಗಿತ್ವ ಮತ್ತು ನಿಯಂತ್ರಣಕ್ಕೆ ಕಾರಣವಾಗುವ ವಿಶೇಷ ರಸಾಯನಿಕಗಳನ್ನು ಸಸ್ಯ ಹಾರ್ಮೋನ್‌ಗಳು ಎನ್ನುವರು.

11) ಮುಟ್ಟಿದರೆ ಮುನಿ ಎಂಬ ಸಸ್ಯದ ಎಲೆಗಳ ಚಲನೆಯು ಯಾವ ರೀತಿ ಇರುತ್ತದೆ? ಬೆಳಕಿನ ಕಡೆಗೆ ಚಲಿಸುವ ಕಾಂಡದ ಚಲನೆಗಿಂತ ಹೇಗೆ ಭಿನ್ನವಾಗಿದೆ?

ಉತ್ತರ:– ಮುಟ್ಟಿದರೆ ಮುನಿ ಸಸ್ಯದ ಎಲೆಗಳ ಚಲನೆಯು ಸ್ಪರ್ಶದಿಂದ ಉಂಟಾಗುವುದು. ಇದರಲ್ಲಿ ಸಸ್ಯ ಕೋಶಗಳು ತಮ್ಮೊಳಗಿನ ನೀರಿನ ಪ್ರಮಾಣವನ್ನು ಬದಲಾಯಿಸಿ ತಮ್ಮ ಆಕಾರವನ್ನು ಬದಲಿಸುತ್ತದೆ.

12) ಬೆಳವಣಿಗೆಯನ್ನು ಉತ್ತೇಜಿಸುವ ಸಸ್ಯ ಹಾರ್ಮೋನ್‌ಗಳಿಗೆ ಉದಾಹರಣೆ ಕೊಡಿ


ಉತ್ತರ:– ಆಕ್ಸಿನ್ ಬೆಳವಣಿಗೆಯನ್ನು ಉತ್ತೇಜಿಸುವ ಸಸ್ಯ ಹಾರ್ಮೋನ್‌ಗಳ ಉದಾಹಣೆಯಾಗಿದೆ.

13) ಸಸ್ಯಗಳ ಬೆಳವಣಿಗೆ ನಿಲ್ಲಲು ಯಾವ ಹಾರ್ಮೋನು ಕಾರನವಾಗುತ್ತದೆ?

ಉತ್ತರ:– ಅಬ್ಸಿಸಿಕ್ ಆಮ್ಲ (abscisic acid) ಎಂಬ ಹಾರ್ಮೋನ್

14) ಮಾನವ ಮಿದುಳಿನ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



(ಮುಂದುವರಿಯುವುದು..........)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

The d- and f-Block Elements

72. Explain the catalytic properties of transition metals

Ans: (..........Contd)

(2) Iron oxide is used as a catalyst in the Haber's process (Manufacture of NH_3)

(3) Nickel is used as a catalyst in the hydrogenation of oils $\left(\text{Oils} \xrightarrow[+H_2]{Ni} \text{Fat}\right)$.

73. Explain the formation of interstitial compounds.

Ans: The compounds in which small atoms like H, C or N are trapped into the (empty space) cavities of the crystal lattices of metals. Such compounds are called interstitial compounds. Example: TiC, Mn_4C, Fe_3H, $VH_{0.56}$ and $TiH_{1.7}$ etc.

[Interstital compounds are non-stoichiometric]

The physical and chemical properties of interstitial compounds are:

(i) They have high melting points, higher than those of pure metals.

(ii) They are very hard, some borides are as hard as diamond.

(iii) They are chemically inert.

(iv) They retain metallic conductivity.

Note: The empty space present in the crystal lattice is called as interstitial site or void.

74. Explain the formation of alloys of transition elements.

Ans: Transition elements form alloys through a process of melting, mixing, and cooling, driven by their similar atomic sizes which allows them to readily substitute for each other in a crystal lattice. This forms a solid solution called an alloy, where the atoms of different metals intermingle to create a new material with unique, often enhanced, physical and chemical properties.

Transition elements have strong tendency to form alloys because their atomic sizes are very similar and in the crystal lattice one metal can be readily replaced by another. Alloys have high melting point and hard.

Example: (i) Stainless steel is an alloy of Fe, Cr, Cr and Ni.

(ii) Amalgam is an alloy of Hg with other metals.

(iii) Brass (Cu + Zn)

(iv) Bronze (Cu + Sn)

75. Give characteristics of oxides and oxoanions of transition metals.

Ans:- Transition metal oxides show increasing acidity with higher oxidation states (e.g., MnO is basic, Mn_2O_7 is acidic) due to the increased effective nuclear charge of the metal and the formation of more covalent bonds with oxygen. Transition metal oxoanions, like permanganate (MnO_4^-), also exhibit the highest oxidation states because highly electronegative and small oxygen atoms act as strong oxidizing agents, facilitating covalent multiple bonding and the highest possible oxidation state for the metal.

All transition metals except Sc from metal oxides which are ionic and basic nature.

Higher oxidation state oxides like Mn_2O_7 are covalent and acidic in nature.

Some metal oxides react with both acids and bases. Such oxides are called amphoteric oxides. Examples: Cr_2O_3, V_2O_5.

76. Vandium pentoxide (V_2O_5) is amphoteric oxide. Explain.

Ans: V_2O_5 is amphoteric because its Vanadium atom is in a high, intermediate oxidation state (+5), which allows it to react with both acids and bases, exhibiting both acidic and basic characteristics. When reacting with acids, V_2O_5 forms oxo-cations like VO^{2+}, while with bases, it forms oxo-anions like VO_4^{3-}.

77. Give an example for amphoteric oxide.

Ans: Cr_2O_3

78. Name the important ore or chief ore of potassium dichromate ($K_2Cr_2O_7$).

Ans: Chromite ore or chrome iron stone – FeO. Cr_2O_3 or $FeCr_2O_4$.

79. Give two uses of potassium dichromate.

Ans: (i) It is used in leather industry. (ii) Used as an oxidizing agent.

80. How is potassium dichromate ($K_2Cr_2O_7$) manufactured?

Ans: $K_2Cr_2O_7$ is manufactured from chromite ore or chrome iron stone – FeO. Cr_2O_3 or $FeCr_2O_4$.

Step-1 – Chromite ore is heated with sodium carbonate in excess of air to form sodium chromate.

$$4FeCr_2O_4 + 8Na_2CO_3 + 7O_2 \longrightarrow 8Na_2CrO_4 + 2Fe_2O_3 + 8CO_2$$

Step 2 – The yellow solution of sodium chromate is filtered and acidified with sulphuric acid to give orange solution of sodium dichromate.

$$2Na_2CrO_4 + H_2SO_4 \longrightarrow Na_2Cr_2O_7 + Na_2SO_4 + H_2O$$

The less soluble sodium sulphate is removed by filtration.

Step 3 – The solution of sodium dichromate is treated with KCI to form potassium dichromate.

$$Na_2CrO_7 + 2KCl \longrightarrow K_2Cr_2O_7 + 2NaCl$$

Solution on colling gives orange red crystals of $K_2Cr_2O_7$.

(Contd.........)

ಪ್ರಜಾವಾಣಿ ನವವರ್ಣ

ಬೂದು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಬುಧವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಅಶ್ವಿನಿ & ಗೆಳತಿ, ಬೆಂಗಳೂರು


ಚಂದನ & ಜಲಜಾ, ಬೆಂಗಳೂರು


ಕಲಾ & ಗೆಳತಿಯರು, ಮಲ್ಲೇಶ್ವರಂ


ದಿನಮಣಿ & ಗೆಳತಿಯರು, ಹೆಬ್ಬಾಳ


ರಾಧಿಕಾ & ಗೆಳತಿಯರು, ನಾಗರಭಾವಿ


ಸರೋಜಮ್ಮ ಮತ್ತು ಕುಟುಂಬ, ಯಲಹಂಕ


ಶುಭಾ, ಪದ್ಮನಾಭನಗರ


ರಾಜೇಶ್ವರಿ & ಗೆಳತಿ, BTM ಲೇಔಟ್


ಸಿಂಧು & ಗೆಳತಿಯರು, ಜಯನಗರ


ಸುಶೀಲಾ ಸೋದರಿಯರು, ನಾಗರಭಾವಿ


ಮಂಗಳಾ & ಗೆಳತಿಯರು, ಉಳ್ಳಾಲ


ಭೂಮಿ & ಗೆಳತಿಯರು, ಎಲೆಕ್ಟ್ರಾನಿಕ್ ಸಿಟಿ


ಅನುಪಮಾ & ಗೆಳತಿಯರು, ಬೆಂಗಳೂರು


ಕೃಷ್ಣ ಭಜನಾ ಮಂಡಳಿ, ಬೆಂಗಳೂರು


ಲಾವಣ್ಯ, ಬೆಂಗಳೂರು


ಪೂರ್ಣ ಪ್ರಜ್ಞಾ ಶಾಲೆ, ಬೆಂಗಳೂರು


ಭಾಗ್ಯರಾಮಣ್ಣ & ಗೆಳತಿಯರು, ಬೆಂಗಳೂರು


ಪಲ್ಲವಿ & ಗೆಳತಿಯರು, ನಾಗರಭಾವಿ


ದೀಪಾ & ಗೆಳತಿಯರು, ನಿಸರ್ಗ ಲೇಔಟ್

ಇಂದಿನ ಬಣ್ಣ - ಬೂದು


BMS ಕಾಲೇಜು ಸ್ನೇಹಿತರು, ಬೆಂಗಳೂರು


ದಯಾನಂದ ಕೆಎಚ್‌ಪಿಎಸ್, ಬೆಂಗಳೂರು


ಕಲ್ಪನಾ & ಗೆಳತಿಯರು, ವಿಜಯನಗರ


ವಿದ್ಯಾ ಮತ್ತು ಕುಟುಂಬ, ಬೆಂಗಳೂರು


SNVM ಶಾಲೆ, ಬೆಂಗಳೂರು


ವಿಜಯಾ ಕಾಲೇಜು ಸಿಬ್ಬಂದಿ, ತುಮಕೂರು


ಏಕತಾ ಮಹಿಳಾ ಗುಂಪು, ಬೆಂಗಳೂರು

ಇಬ್ಬರು ಇನ್‌ಸ್ಪೆಕ್ಟರ್ ಸೇರಿ ಐವರ ಅಮಾನತು

₹10 ಲಕ್ಷ ಲಂಚ ತೆಗೆದುಕೊಂಡಿದ್ದ ಹಲಸೂರು ಗೇಟ್ ಠಾಣೆ ಇನ್‌ಸ್ಪೆಕ್ಟರ್

ಪ್ರಜಾವಾಣಿ ವಾರ್ತೆ


ಹನುಮಂತ ಭಜಂತ್ರಿ

ಬೆಂಗಳೂರು: ಲಂಚ ತೆಗೆದುಕೊಂಡ ಹಾಗೂ ಕರ್ತವ್ಯ ಲೋಪ ಎಸಗಿದ್ದ ಆರೋಪದ ಅಡಿ ಇಬ್ಬರು ಇನ್‌ಸ್ಪೆಕ್ಟರ್, ಎಎಸ್‌ಐ ಹಾಗೂ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಅಮಾನತುಗೊಳಿಸಿ ಮಂಗಳವಾರ ಆದೇಶಿಸಿದ್ದಾರೆ.

ಹಲಸೂರು ಗೇಟ್ ಠಾಣೆಯ ಇನ್‌ಸ್ಪೆಕ್ಟರ್ ಹನುಮಂತ ಭಜಂತ್ರಿ, ಎಎಸ್‌ಐ ಪ್ರಸನ್ನ, ಹೆಡ್ ಕಾನ್‌ಸ್ಟೆಬಲ್ ಶ್ರೀನಿವಾಸ್, ಕಾನ್‌ಸ್ಟೆಬಲ್ ನಾಗರಾಜ್, ಕೋರಮಂಗಲ ಠಾಣೆ ಇನ್‌ಸ್ಪೆಕ್ಟರ್ ಲೂಯಿರಾಮ ರೆಡ್ಡಿ ಅವರನ್ನು ಅಮಾನತು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಚಿನ್ನದ ವ್ಯಾಪಾರಿಯಿಂದ ₹10 ಲಕ್ಷವನ್ನು ನಗದು ರೂಪದಲ್ಲಿ ತೆಗೆದುಕೊಂಡ ಆರೋಪದ ಅಡಿ ಹನುಮಂತ ಭಜಂತ್ರಿ, ಅದೇ ಠಾಣೆಯ ಎಎಸ್‌ಐ ಹಾಗೂ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಲಾಗಿದೆ.

'₹10 ಲಕ್ಷ ಲಂಚ ತೆಗೆದುಕೊಂಡ ಬಗ್ಗೆ ದೂರು ಬಂದಿತ್ತು. ಕೇಂದ್ರ ವಿಭಾಗದ ಡಿಸಿಪಿ ಅವರಿಗೆ ಪ್ರಕರಣದ ತನಿಖೆಗೆ ಸೂಚನೆ ನೀಡಲಾಗಿತ್ತು. ತನಿಖೆ ವೇಳೆ ಲಂಚ ತೆಗೆದುಕೊಂಡಿರುವುದು ಸಾಬೀತಾಗಿತ್ತು. ಡಿಸಿಪಿ ಅವರ ಪ್ರಾಥಮಿಕ ತನಿಖಾ ವರದಿ ಆಧರಿಸಿ ಹಲಸೂರು ಗೇಟ್ ಠಾಣೆಯ ಐವರನ್ನು ಅಮಾನತುಗೊಳಿಸಲಾಗಿದೆ. ಜತೆಗೆ, ಇಲಾಖಾ ತನಿಖೆಗೆ ಆದೇಶಿಸಲಾಗಿದೆ. ಹನುಮಂತ ಭಜಂತ್ರಿ ಅವರ ವಿರುದ್ಧ ಇನ್ನೂ ಹಲವು ಆರೋಪಗಳಿದ್ದು ಅವುಗಳ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಮತ್ತೊಂದು ಪ್ರಕರಣದಲ್ಲಿ ಕೋರಮಂಗಲ ವ್ಯಾಪ್ತಿಯಲ್ಲಿ ಅವಧಿ ಮೀರಿ ಪಬ್, ಬಾರ್, ರೆಸ್ಟೋರೆಂಟ್‌ಗಳ ಕಾರ್ಯಾಚರಣೆಗೆ ಅವಕಾಶ ನೀಡಿದ ಆರೋಪದ ಅಡಿ ಲೂಯಿರಾಮ ರೆಡ್ಡಿ ಅವರನ್ನು ಅಮಾನತುಗೊಳಿಸಲಾಗಿದೆ.

ಡ್ರಗ್ಸ್ ಪೆಡ್ಲರ್‌ಗಳ ಸ್ನೇಹ ಸಂಪಾದಿಸಿ ಅವರೊಂದಿಗೆ ಪಾರ್ಟಿ ನಡೆಸಿದ್ದ ಆರೋಪದ ಅಡಿ ಚಾಮರಾಜಪೇಟೆ ಠಾಣೆಯ ಇನ್‌ಸ್ಪೆಕ್ಟರ್ ಮಂಜಣ್ಣ ಸೇರಿ 11 ಮಂದಿಯನ್ನು ಇತ್ತೀಚೆಗಷ್ಟೇ ಅಮಾನತು ಮಾಡಲಾಗಿತ್ತು.

ಗಸ್ತು ವೇಳೆ ಲೋಪ ಪತ್ತೆ

'ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರ ನೇತೃತ್ವದಲ್ಲಿ ಇತ್ತೀಚೆಗೆ ರಾತ್ರಿ ಗಸ್ತು ನಡೆಸಲಾಗಿತ್ತು. ಆ ವೇಳೆ ಕೋರಮಂಗಲ ವ್ಯಾಪ್ತಿಯಲ್ಲಿ ಅವಧಿ ಮೀರಿ ಪಬ್, ಬಾರ್, ರೆಸ್ಟೋರೆಂಟ್‌ಗಳು ಗ್ರಾಹಕರಿಗೆ ಸೇವೆ ನೀಡುತ್ತಿರುವುದು ಕಂಡು ಬಂದಿತ್ತು. ಆಗ್ನೇಯ ವಿಭಾಗದ ಡಿಸಿಪಿ ಅವರಿಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಕಮಿಷನರ್ ಸೂಚನೆ ನೀಡಿದ್ದರು. ಡಿಸಿಪಿಯವರ ಪ್ರಾಥಮಿಕ ತನಿಖಾ ವರದಿ ಆಧರಿಸಿ ಇನ್‌ಸ್ಪೆಕ್ಟರ್ ಲೂಯಿರಾಮ ರೆಡ್ಡಿ ಅವರನ್ನು ಅಮಾನತು ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

ಮಲತಾಯಿ ಕೊಂದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಪ್ಪಟ್ಟಾದಿಂದ ಮಲತಾಯಿಯ ಕುತ್ತಿಗೆಯನ್ನು ಬಿಗಿದು ಕೊಲೆ ಮಾಡಿದ ಪುತ್ರನನ್ನು ಬೇಗೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಗೀತಾ(45) ಕೊಲೆಯಾದ ಮಹಿಳೆ.

ಕೃತ್ಯ ಎಸಗಿದ ಆರೋಪದಡಿ ಚೇತನ್ (30) ಎಂಬಾತನನ್ನು ಬಂಧಿಸಲಾಗಿದೆ. ಠಾಣಾ ವ್ಯಾಪ್ತಿಯ ಗಾರ್ವೇಬಾವಿಪಾಳ್ಯದಲ್ಲಿ ಘಟನೆ ನಡೆದಿದೆ.

ರಾಜಸ್ಥಾನ ಮೂಲದ ಗೀತಾ ಹಾಗೂ ಚೇತನ್ ಗಾರ್ವೇಬಾವಿಪಾಳ್ಯದ ಬಾಡಿಗೆ ಮನೆಯಲ್ಲಿ ನೆಲಸಿದ್ದರು. ಕೌಟುಂಬಿಕ ಕಲಹದ ಕಾರಣಕ್ಕೆ ಕೊಲೆ ನಡೆದಿರುವ ಶಂಕೆ ವ್ಯಕ್ತವಾಗಿದೆ. ಆರೋಪಿಯನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಎರಡನೇ ಪತ್ನಿ ಕೊಂದ ಪತಿ ಪೊಲೀಸರಿಗೆ ಶರಣು


ಲೋಹಿತಾಶ್ವ


ರೇಖಾ

ಬೆಂಗಳೂರು: ಕೌಟುಂಬಿಕ ವಿಚಾರಕ್ಕೆ ಪುತ್ರಿಯ ಎದುರು ಎರಡನೇ ಪತ್ನಿಗೆ ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದ ಪತಿ ಲೋಹಿತಾಶ್ವ (43) ಎಂಬಾತ ಪೊಲೀಸರಿಗೆ ಸೋಮವಾರ ತಡರಾತ್ರಿ ಶರಣಾಗಿದ್ದಾನೆ.

'ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಬಂಧಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ ಚಾಕು ಜಪ್ತಿ ಮಾಡಲಾಗಿದೆ. ಎರಡನೇ ಪತ್ನಿಯ ಮೇಲೆ ಅನುಮಾನಗೊಂಡು 11 ಬಾರಿ ಇರಿದು ಕೊಲೆ ಮಾಡಿದ್ದೆ ಎಂಬುದಾಗಿ ಆರೋಪಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಕಾಮಾಕ್ಷಿಪಾಳ್ಯ ಠಾಣೆಯ ಪೊಲೀಸರು ತಿಳಿಸಿದರು.

'ಸೋಮವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ರೇಖಾ ಅವರು 13 ವರ್ಷದ ಪುತ್ರಿಯ ಜತೆಗೆ ಸುಂಕದಕಟ್ಟೆ ಬಸ್ ನಿಲ್ದಾಣದಲ್ಲಿ ನಿಂತಿದ್ದರು. ಆಗ ಸ್ಥಳಕ್ಕೆ ಬಂದಿದ್ದ ಆರೋಪಿ, ಜಗಳ ತೆಗೆದು ಕೊಲೆ ಮಾಡಿ ಪರಾರಿ ಆಗಿದ್ದ' ಎಂದರು.

'ಹಾಸನ ಜಿಲ್ಲೆ, ಚನ್ನರಾಯಪಟ್ಟಣದ ರೇಖಾ ಅವರು ಕೌಟುಂಬಿಕ ಕಾರಣಕ್ಕೆ ಮೊದಲ ಪತಿಯಿಂದ ವಿಚ್ಛೇದನ ಪಡೆದುಕೊಂಡಿದ್ದರು. ಇಬ್ಬರು ಹೆಣ್ಣು ಮಕ್ಕಳ ಜತೆಗೆ ಚನ್ನೇನಹಳ್ಳಿಯಲ್ಲಿ ನೆಲಸಿದ್ದರು. ಟೆಲಿಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದರು. ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಲೋಹಿತಾಶ್ವನಿಗೂ ಮದುವೆಯಾಗಿತ್ತು. ಆತ ಸಹ ಕೌಟುಂಬಿಕ ಕಾರಣಕ್ಕೆ ಪತ್ನಿ, ಮಕ್ಕಳಿಂದ ದೂರವಾಗಿ ಪ್ರತ್ಯೇಕವಾಗಿ ನೆಲಸಿದ್ದ. ಈ ನಡುವೆ ಸ್ನೇಹಿತರ ಮೂಲಕ ಪರಿಚಯವಾದ ರೇಖಾ ಜತೆಗೆ ಆರೋಪಿ ಸ್ನೇಹ ಬೆಳೆಸಿದ್ದ. ಒಂದೂವರೆ ವರ್ಷದಿಂದ ಇಬ್ಬರೂ ಆತ್ಮೀಯರಾಗಿದ್ದರು. ಮೂರು ತಿಂಗಳ ಹಿಂದೆ ರೇಖಾ ಹಾಗೂ ಲೋಹಿತಾಶ್ವ ಅವರು ಮದುವೆಯಾಗಿದ್ದರು. ಕೆಬ್ಬೆಹಳ್ಳದ ಬಾಡಿಗೆ ಮನೆಯಲ್ಲಿ ರೇಖಾ, ಅವರ ಪುತ್ರಿಯ ಜತೆಗೆ ಲೋಹಿತಾಶ್ವ ವಾಸವಾಗಿದ್ದ. ರೇಖಾ ಅವರು ಕಿರಿಯ ಪುತ್ರಿಯನ್ನು ತನ್ನ ಪೋಷಕರ ಮನೆಯಲ್ಲಿ ಇರಿಸಿದ್ದರು' ಎಂದು ಪೊಲೀಸರು ಹೇಳಿದರು.

'ಮದುವೆಯಾದ ಬಳಿಕ ರೇಖಾ ಅವರು ಪತಿ ಇದ್ದ ಕಂಪನಿಯಲ್ಲೇ ಕೆಲಸಕ್ಕೆ ಸೇರಿಕೊಂಡಿದ್ದರು. ಕೌಟುಂಬಿಕ ಕಾರಣಕ್ಕೆ ಇಬ್ಬರೂ ಪ್ರತಿನಿತ್ಯ ಗಲಾಟೆ ಮಾಡಿಕೊಳ್ಳುತ್ತಿದ್ದರು. ಸೋಮವಾರ ಮುಂಜಾನೆಯೂ ದಂಪತಿ ನಡುವೆ ಗಲಾಟೆ ಆಗಿತ್ತು. ಬಳಿಕ ಬಸ್ ನಿಲ್ದಾಣದಲ್ಲಿ ನಿಂತಿದ್ದ ಪತ್ನಿಯನ್ನು ಆರೋಪಿ ಕೊಲೆ ಮಾಡಿ ಪರಾರಿಯಾಗಿದ್ದ' ಎಂದು ಹೇಳಿದರು.

'ವಿಟಿಯು: 'ಎಐ' ಬಳಕೆಗೆ ಚಿಂತನೆ'

ಪ್ರಜಾವಾಣಿ ವಾರ್ತೆ


ಪ್ರೊ.ಎಸ್. ವಿದ್ಯಾಶಂಕರ

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ತನ್ನ ವಿವಿಧ ತಾಂತ್ರಿಕ ಕೋರ್ಸ್‌ಗಳ ಪ್ರಶ್ನೆಪತ್ರಿಕೆ ರಚನೆ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿಕೊಳ್ಳಲು ಚಿಂತನೆ ನಡೆಸಿದೆ.

ಎಂಬಿಎ ಓದುತ್ತಿರುವ 480 ವಿದ್ಯಾರ್ಥಿಗಳು 'ವಿಟಿಯು ಕ್ಯಾಂಪಸ್‌ನಲ್ಲಿ ಇದ್ದಾರೆ. ಆರಂಭಿಕ ಹಂತದಲ್ಲಿ ಅವರಿಗಾಗಿ ಪ್ರಶ್ನೆಪತ್ರಿಕೆ ರಚಿಸಲು ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಲು ಇದೇ ಶೈಕ್ಷಣಿಕ ವರ್ಷದಿಂದ ಎ.ಐ ತಂತ್ರಜ್ಞಾನ ಬಳಸಲು ಯೋಜಿಸಿದ್ದೇವೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್. ವಿದ್ಯಾಶಂಕರ 'ಪ್ರಜಾವಾಣಿ'ಗೆ ತಿಳಿಸಿದರು.

ಹೊರ ರಾಜ್ಯದ ಆರೋಪಿ ಬಂಧನ, ವೈಟ್‌ಫೀಲ್ಡ್ ಠಾಣೆ ಪೊಲೀಸರ ಕಾರ್ಯಾಚರಣೆ

ತಂದೆಗೆ ಕ್ಯಾನ್ಸರ್: ಹಣ ಹೊಂದಿಸಲು ಕಳ್ಳತನ

ಪ್ರಜಾವಾಣಿ ವಾರ್ತೆ


ಫಿರೋಜ್

ಅಪರಾಧ ಸುದ್ದಿ

ಬೆಂಗಳೂರು: ಮನೆಯ ಎದುರು ಹಾಗೂ ರಸ್ತೆಯ ಬದಿಯಲ್ಲಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಹೊರರಾಜ್ಯದ ಆರೋಪಿಯನ್ನು ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆಂಧ್ರ ಪ್ರದೇಶದ ಅನಂತಪುರದ ಫಿರೋಜ್ (24) ಬಂಧಿತ ಆರೋಪಿ.

ಬಂಧಿತ ಆರೋಪಿಯಿಂದ ₹20 ಲಕ್ಷ ಮೌಲ್ಯದ ವಿವಿಧ ಕಂಪನಿಯ 20 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

'ಚಾಲಕನಾಗಿದ್ದ ಫಿರೋಜ್ ಪತ್ನಿ ಹಾಗೂ ಮಗು ಜತೆಗೆ ಹೊಸಕೋಟೆಯ ಅನುಗೊಂಡನಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ನೆಲಸಿದ್ದ. ಚಾಲಕ ವೃತ್ತಿಯಿಂದ ಬಂದ ಹಣದಿಂದ ಜೀವನ ನಡೆಸುತ್ತಿದ್ದ. ಈ ನಡುವೆ ಆರೋಪಿಯ ತಂದೆ ಮೊಹಮ್ಮದ್ ಪಾಷಾ ಕ್ಯಾನ್ಸರ್‌ಗೆ ತುತ್ತಾಗಿದ್ದರು. ಚಿಕಿತ್ಸೆಗೆ ಹಣ ಹೊಂದಿಸಲಾಗದೇ ಪರದಾಟ ನಡೆಸಿದ್ದ ಫಿರೋಜ್, ಒಮ್ಮೆ ದ್ವಿಚಕ್ರ ವಾಹನವೊಂದನ್ನು ಕಳವು ಮಾಡಿ ಮಾರಾಟ ಮಾಡುವುದರಲ್ಲಿ ಯಶಸ್ವಿಯಾಗಿದ್ದ. ಆ ಬಳಿಕ ಕಳ್ಳತನ ಮುಂದುವರಿಸಿದ್ದ' ಎಂದು ಪೊಲೀಸರು ಹೇಳಿದರು.

ವೈಟ್‌ಫೀಲ್ಡ್ ಮೆಟ್ರೊ ನಿಲ್ದಾಣದ ಸಮೀಪ, ಪಾರ್ಕಿಂಗ್ ಸ್ಥಳಗಳಲ್ಲಿ ದ್ವಿಚಕ್ರ ವಾಹನಗಳ ಹ್ಯಾಂಡಲ್ ತೆಗೆದು ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ. ಕಳವು ಮಾಡಿದ ವಾಹನಗಳನ್ನು ಆಂಧ್ರಪ್ರದೇಶ, ತೆಲಂಗಾಣ ಹಾಗೂ ರಾಜ್ಯದ ಬಳ್ಳಾರಿ, ಮಂಡ್ಯದಲ್ಲಿ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಸೆ.9ರಂದು ವಿಜಯನಗರದ ನಿವಾಸಿಯೊಬ್ಬರು ಮಾರಮ್ಮ ದೇವಸ್ಥಾನದ ಬಳಿ ವಾಹನವೊಂದನ್ನು ನಿಲುಗಡೆ ಮಾಡಿ ತೆರಳಿದ್ದರು. ವಾಪಸ್ ಬಂದು ನೋಡುವಾಗ ಆ ಸ್ಥಳದಲ್ಲಿ ದ್ವಿಚಕ್ರ ವಾಹನ ಇರಲಿಲ್ಲ. ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಯಿತು. 12 ದ್ವಿಚಕ್ರ ವಾಹನಗಳ ವಾರಸುದಾರರು ಪತ್ತೆಯಾಗಿದ್ದು, ಉಳಿದ 8 ವಾಹನಗಳ ಮಾಲೀಕರು ಪತ್ತೆ ಆಗಬೇಕಿದೆ ಎಂದು ಅವರು ಮಾಹಿತಿ ನೀಡಿದರು.

ದೇವಸ್ಥಾನಗಳಿಗೆ ಕನ್ನ: ಇಬ್ಬರ ಬಂಧನ

ವಿಲಾಸಿ ಜೀವನ ನಡೆಸಲು ದೇವಾಲಯಗಳ ಬೀಗ ಮುರಿದು ವಿಗ್ರಹಗಳು, ಚಿನ್ನ ಮತ್ತು ಬೆಳ್ಳಿ ವಸ್ತು ಕಳವು ಮಾಡುತ್ತಿದ್ದ ಇಬ್ಬರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪ್ರವೀಣ್ ಭಟ್ ಹಾಗೂ ಸಂತೋಷ್ ಬಂಧಿತರು.

ಆರೋಪಿಗಳಿಂದ ₹ 14 ಲಕ್ಷ ಮೌಲ್ಯದ 5 ಕೆ.ಜಿ ಬೆಳ್ಳಿ ಸಾಮಗ್ರಿ, 67 ಗ್ರಾಂ ಚಿನ್ನಾಭರಣ, 1,426 ಗ್ರಾಂ ಹಿತ್ತಾಳೆ ವಸ್ತುಗಳು, 353 ಗ್ರಾಂ ತಾಮ್ರದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಉಡುಪಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಅರ್ಚಕನಾಗಿ ಕೆಲಸ ಮಾಡಿದ್ದ ಪ್ರವೀಣ್ ಭಟ್ ಕಳ್ಳತನ ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿದ್ದ. ಅದೇ ಜೈಲಿನಲ್ಲಿದ್ದ ಸಂತೋಷ್ ಎಂಬಾತನ ಪರಿಚಯವಾಗಿತ್ತು. ಜೈಲಿನಿಂದ ಹೊರಬಂದ ಬಳಿಕ ಇಬ್ಬರೂ ಜತೆಯಾಗಿ ಬನಶಂಕರಿ, ಕುಮಾರಸ್ವಾಮಿ ಲೇಔಟ್, ಜಯನಗರ, ಕೆಂಗೇರಿ, ರಾಜರಾಜೇಶ್ವರಿ ನಗರ ಸೇರಿ 11 ದೇವಸ್ಥಾನಗಳಿಗೆ ಕನ್ನ ಹಾಕಿದ್ದರು' ಎಂದು ಹೇಳಿದರು.

ಕದ್ದ ವಸ್ತುಗಳನ್ನು ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ಇಬ್ಬರೂ ಹಂಚಿಕೊಳ್ಳುತ್ತಿದ್ದರು. ಇಬ್ಬರ ಬಂಧನದಿಂದ ಬನಶಂಕರಿ, ಗಿರಿನಗರ ಠಾಣೆಗಳಲ್ಲಿ ದಾಖಲಾಗಿದ್ದ ತಲಾ 2 ಪ್ರಕರಣಗಳು, ಜಯನಗರ, ಕೆ. ಜಿ. ಹಳ್ಳಿ, ಕೆಂಗೇರಿ, ರಾಜರಾಜೇಶ್ವರಿ ನಗರ, ಸಂಪಿಗೆಹಳ್ಳಿ, ಸುಬ್ರಹ್ಮಣ್ಯಪುರ, ಕುಮಾರಸ್ವಾಮಿ ಲೇಔಟ್, ತಲಘಟ್ಟಪುರ, ಜಿಗಣಿ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ತಲಾ 1 ಪ್ರಕರಣಗಳು ಸೇರಿ ಒಟ್ಟು 13 ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಮಾಹಿತಿ ನೀಡಿದರು.

ಚಿನ್ನ, ವಜ್ರದ ಆಭರಣ ಕಳವು: ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಭರಣ ಮಳಿಗೆಯಲ್ಲಿ ಚಿನ್ನ ಕಳವು ಮಾಡಿದ್ದ ಆರೋಪಿಯನ್ನು ರಾಜಾಜಿನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಜೈಪುರ ನಿವಾಸಿ ನಿತಿನ್ ಸೋನಿ (33) ಬಂಧಿತ.

ಆರೋಪಿಯಿಂದ ₹36 ಲಕ್ಷ ಮೌಲ್ಯದ 243 ಗ್ರಾಂ ಚಿನ್ನಾಭರಣ, 22 ಗ್ರಾಂ ಬೆಳ್ಳಿಯ ಗಟ್ಟಿ ಹಾಗೂ ವಜ್ರದ ಆಭರಣಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ರಾಜಾಜಿನಗರದ ಮೂರನೇ ಬ್ಲಾಕ್ 46ನೇ ಕ್ರಾಸ್ ನಿವಾಸಿ ರಾಜಕುಮಾರ್ ಎಂ. ಜೈನ್ ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ.

ರಾಜಕುಮಾರ್ ಜೈನ್ ಅವರು ರಾಜಾಜಿನಗರ ಮುಖ್ಯರಸ್ತೆಯಲ್ಲಿ ಆಭರಣ ಅಂಗಡಿ ಇಟ್ಟುಕೊಂಡಿದ್ದಾರೆ. ಅದೇ ಅಂಗಡಿಯಲ್ಲಿ ಆರೋಪಿ ಕೆಲಸ ಮಾಡುತ್ತಿದ್ದ. ಸೆ.4ರಂದು ಅಂಗಡಿಯಿಂದ 351 ಗ್ರಾಂ ನೆಕ್ಲೆಸ್, ಹರಳುಗಳು, ವಜ್ರದ ಆಭರಣ, 22 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ ₹62 ಸಾವಿರ ನಗದು ಕಳವು ಮಾಡಿಕೊಂಡು ಪರಾರಿಯಾಗಿದ್ದ. ನಂತರ, ರಾಜಾಜಿನಗರದ ಇಎಸ್‌ಐ ಆಸ್ಪತ್ರೆ ಬಳಿಯ ಚಿನ್ನಾಭರಣ ಮಳಿಗೆಯೊಂದರಲ್ಲಿ ಆರೋಪಿ ಕೆಲಸಕ್ಕೆ ಸೇರಿಕೊಂಡಿದ್ದ. ಆರೋಪಿಯಿದ್ದ ಸ್ಥಳದ ಮಾಹಿತಿ ಪಡೆದು ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸ್ ಮೂಲಗಳು ಹೇಳಿವೆ.


ಅಗ್ರಹಾರ ದಾಸರಹಳ್ಳಿಯ ಸರ್ವೋದಯ ಶಿಕ್ಷಣ ಟ್ರಸ್ಟ್‌ನ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಬ್ಯಾಚುಲರ್ ಆಫ್ ಆಡಿಯೋಲಜಿ ಅಂಡ್ ಸ್ಪೀಚ್ ಲಾಂಗ್ವೇಜ್ ಪೆಥಾಲಜಿ (ಬಿಎಎಸ್‌ಎಲ್‌ಪಿ) ಪದವಿ ಶಿಕ್ಷಣವನ್ನು ಆರಂಭಿಸಲಾಯಿತು. ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಎಂ.ಪುಷ್ಪಾವತಿ, ನಿಮ್ಹಾನ್ಸ್ ನಿವೃತ್ತ ರಿಜಿಸ್ಟ್ರಾರ್ ಬಿ.ಎಸ್.ಶಂಕರನಾರಾಯಣರಾವ್, ವಾಕ್ ಮತ್ತು ಶ್ರವಣ ತಜ್ಞ ಎಂ.ಜಯರಾಂ, ಟ್ರಸ್ಟ್ ಅಧ್ಯಕ್ಷ ವಿ.ನಾರಾಯಣಸ್ವಾಮಿ ಹಾಜರಿದ್ದರು

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಜೀವ ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಂತಿಮ ವರ್ಷದಲ್ಲಿ ಓದುತ್ತಿರುವ ಇಲ್ಲವೇ ಈಗಷ್ಟೇ ಪದವಿ ಮುಗಿಸಿರುವ ವಿದ್ಯಾರ್ಥಿನಿಯರಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಬಯೋಕಾನ್ ಫೌಂಡೇಷನ್ ಹಾಗೂ ಬೆಸ್ಟ್ ಸಂಸ್ಥೆ ಜಂಟಿಯಾಗಿ ಕಾರ್ಯಕ್ರಮ ರೂಪಿಸಿವೆ. ಅ.15ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ https://shorturl.atHmZUO ಸಂಪರ್ಕಿಸಬಹುದು.

'ನಾಪತ್ತೆ: ದೂರು ಸ್ವೀಕಾರಕ್ಕೆ ಠಾಣೆಯ ಮಿತಿಯಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಪತ್ತೆ ಪ್ರಕರಣಗಳಲ್ಲಿ, ನಾಪತ್ತೆಯಾದವರ ಬಗ್ಗೆ ದೂರು ಸ್ವೀಕರಿಸುವಾಗ ಪೊಲೀಸರು; 'ಸಂಬಂಧಿಸಿದ ಪ್ರದೇಶ ನಮ್ಮ ಠಾಣೆ ವ್ಯಾಪ್ತಿಗೆ ಒಳಪಡುವುದಿಲ್ಲ' ಎಂದು ನಿರಾಕರಣೆ ಮಾಡುವಂತಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

'ನನ್ನ ಪುತ್ರಿ 2023ರಲ್ಲಿ ನಾಪತ್ತೆಯಾಗಿದ್ದಾಳೆ. ಪೊಲೀಸರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ' ಎಂದು ಆರೋಪಿಸಿ ಹುಬ್ಬಳಿಯ ರಾಮಕೃಷ್ಣ ಭಟ್ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ (ಧಾರವಾಡ), ಇಂತಹ ದೂರುಗಳು ಬಂದಾಗ ಪೊಲೀಸರು ಯಾವ ಕ್ರಮ ಅನುಸರಿಸಬೇಕು ಎಂಬ ಬಗ್ಗೆ ಮಾರ್ಗಸೂಚಿ ಬಿಡುಗಡೆ ಮಾಡಿದೆ.

'ತಂತ್ರಜ್ಞಾನ ಬದಲಾಗುತ್ತಿರುವ ಇಂದಿನ ದಿನಗಳಲ್ಲಿ ನಾಪತ್ತೆ ಅಥವಾ ಕಣ್ಮರೆಯಾಗುತ್ತಿರುವ ವ್ಯಕ್ತಿಗಳ ಕುರಿತ ದೂರುಗಳ ಸ್ವೀಕಾರ–ಪರಿಹಾರಕ್ಕೆ ಮಾರ್ಗಸೂಚಿಗಳೂ ಬದಲಾಗುವ ಅಗತ್ಯವಿದೆ. ಈ ಕುರಿತಂತೆ ಕೇಂದ್ರ ಸರ್ಕಾರ 2009ರಲ್ಲಿ ಹೊರಡಿಸಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಮತ್ತು 2016ರಲ್ಲಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಹೊರಡಿಸಿರುವ ಎಸ್‌ಒಪಿ ಆಧರಿಸಿ ರಾಜ್ಯ ಸರ್ಕಾರ ಅಗತ್ಯ ಸುತ್ತೋಲೆ ಅಥವಾ ಅಧಿಸೂಚನೆ ಹೊರಡಿಸಬೇಕು' ಎಂದು ನಿರ್ದೇಶಿಸಿದೆ. ಪ್ರಸಕ್ತ ಪ್ರಕರಣದಲ್ಲಿ ಪೊಲೀಸರು ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಣೆ ನೀಡುವಂತೆ ಸೂಚಿಸಿ ವಿಚಾರಣೆಯನ್ನು ಅ.15ಕ್ಕೆ ಮುಂದೂಡಲಾಗಿದೆ.

ಮಾರ್ಗಸೂಚಿಗಳು

- ನಾಪತ್ತೆಯಾಗಿರುವ ವ್ಯಕ್ತಿಗಳ ಬಗ್ಗೆ ದೂರುಗಳನ್ನು ಪ್ರಾಮಾಣಿಕವಾಗಿ ದಾಖಲು ಮಾಡಿಕೊಳ್ಳಬೇಕು.
- ಸಂಬಂಧಿಸಿದ ಶಾಸನಬದ್ಧ ಪ್ರಾಧಿಕಾರಗಳು ಕಾಣೆಯಾದ ಮಹಿಳೆ, ಅಪ್ರಾಪ್ತ ವಯಸ್ಕರಿಗೆ ಸಂಬಂಧಿಸಿದೆಯೇ ಅಥವಾ ಯಾವುದೇ ಇತರ ವ್ಯಕ್ತಿಗೆ ಸಂಬಂಧಿಸಿದೆಯೇ ಎಂಬುದನ್ನು ನಿರ್ದಿಷ್ಟವಾಗಿ ಗಮನಿಸಿದ ನಂತರ ಮಾನವ ಕಳ್ಳ ಸಾಗಣೆ ಘಟಕ ಅಥವಾ ಕೋಶಕ್ಕೆ ಮಾಹಿತಿ ನೀಡಬೇಕು.
- ಯಾವುದೇ ಸಂದರ್ಭದಲ್ಲಿಯೂ ಯಾವುದೇ ಪೊಲೀಸ್ ಅಧಿಕಾರಿಯು ಇಂತಹ ಯಾವುದೇ ದೂರನ್ನು ತಿರಸ್ಕರಿಸಬಾರದು ಮತ್ತು ಪ್ರತಿಯೊಂದು ದೂರನ್ನು ತಕ್ಷಣವೇ ಪರಿಗಣಿಸಬೇಕು.
- ನಾಪತ್ತೆಯಾದವರ ಮೃತದೇಹ ನಂತರದಲ್ಲಿ ಪತ್ತೆಯಾದರೆ, ತನಿಖಾ ಅಧಿಕಾರಿಗಳು ಡಿಎನ್‌ಎ ವಿಶ್ಲೇಷಣೆ ಮೂಲಕ ಹೋಲಿಕೆ ಮಾಡಲು ಸಾಧ್ಯವಾಗುವಂತೆ ಕಾಣೆಯಾದ ವ್ಯಕ್ತಿಯ ಕುಟುಂಬದ ಸದಸ್ಯರ ಫೋರೆನ್ಸಿಕ್ ಪುರಾವೆಗಳನ್ನು ಪಡೆದುಕೊಳ್ಳಬೇಕು.
- ಕಾಣೆಯಾದ ವ್ಯಕ್ತಿಯ ಇತ್ತೀಚಿನ ಛಾಯಾ ಚಿತ್ರ ಸಂಗ್ರಹಿಸಿ ಅದರ ಪ್ರತಿಗಳನ್ನು ಎಯುಟಿಎಚ್‌ಯು, ಸಿಐಡಿ, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋಗಳಿಗೂ ಒದಗಿಸಬೇಕು.
- ಕಾಣೆಯಾದವರ ದೂರಿನ ವಿವರಗಳನ್ನು ದೂರು ದಾಖಲಾದ 24 ಗಂಟೆಗಳ ಒಳಗೆ ಬೀಟ್ ಪೊಲೀಸ್ ಸಿಬ್ಬಂದಿ ಮತ್ತು ಹೊಯ್ಸಳ ಮುಂತಾದ ಮೊಬೈಲ್ ಪೊಲೀಸ್ ಘಟಕಗಳಿಗೆ ಡಿಜಿಟಲ್ ರೂಪದಲ್ಲಿ ರವಾನಿಸಬೇಕು.
- ಕಾಣೆಯಾದವರ ವಿವರಗಳನ್ನು (ಆ ನಿಟ್ಟಿನಲ್ಲಿ ಅಗತ್ಯ ಒಪ್ಪಿಗೆ ಪಡೆದ ನಂತರ) ಮಾನ್ಯತೆ ಪಡೆದ ದಿನಪತ್ರಿಕೆಗಳು, ನಿಯತಕಾಲಿಕಗಳಲ್ಲಿ ಹಾಗೂ ಆಡಿಯೊ ಮತ್ತು ವಿಡಿಯೊ ಸುದ್ದಿ ಜಾಲತಾಣಗಳ ಮೂಲಕ ಪ್ರಕಟಿಸಬೇಕು.
- ಕಾಣೆಯಾದವರ ದೂರಿನ ವಿವರಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಪೋರ್ಟಲ್‌ಗಳಲ್ಲಿ, ಇತರ ಪೋರ್ಟಲ್‌ಗಳಲ್ಲಿಯೂ ಅಪ್‌ಲೋಡ್ ಮಾಡಬೇಕು.

ಅಧಿಕಾರಿಗಳ ವಿದೇಶ ಪ್ರವಾಸ: ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ವರ್ಷದ (2025) ಅಂತ್ಯದವರೆಗೆ ಎಲ್ಲ ಅಧಿಕೃತ ವಿದೇಶ ಪ್ರವಾಸಗಳಿಗೆ ನಿರ್ಬಂಧ ವಿಧಿಸಿ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರ್ದೇಶನದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಈ ಆದೇಶ ಹೊರಡಿಸಿದೆ. ತಕ್ಷಣದಿಂದ ಈ ಆದೇಶ ಜಾರಿಗೆ ಬರಲಿದ್ದು, ಮುಂದಿನ ಆದೇಶದವರೆಗೆ ಅನ್ವಯವಾಗಲಿದೆ ಎಂದು ತಿಳಿಸಲಾಗಿದೆ.

ಅಲ್ಲದೆ, 2024ನೇ ಸಾಲಿನ ಆಗಸ್ಟ್ ತಿಂಗಳಿನಿಂದ ಇದೇ ಜುಲೈವರೆಗೆ ಸರ್ಕಾರಿ ಅಧಿಕಾರಿಗಳು ಅಧಿಕೃತ ವಿದೇಶ ಪ್ರವಾಸ ಕೈಗೊಂಡು ಅಧ್ಯಯನ ನಡೆಸಿದ, ಕಲಿಕೆ, ಶಿಫಾರಸುಗಳೊಂದಿಗೆ ಒಂದು ವಾರದ ಒಳಗೆ ಸರ್ಕಾರಕ್ಕೆ ಅಧ್ಯಯನ ವರದಿ ಸಲ್ಲಿಸಬೇಕು ಎಂದೂ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ.

'ಅಧಿಕೃತ ವಿದೇಶ ಪ್ರವಾಸದ ವರದಿಗಳನ್ನು ಹಲವು ಅಧಿಕಾರಿಗಳು ಸಲ್ಲಿಸದಿರುವುದು ಗಮನಕ್ಕೆ ಬಂದಿದೆ. ಮುಂಬರುವ ದಿನಗಳಲ್ಲಿ ಅಧಿಕೃತ ವಿದೇಶ ಪ್ರವಾಸಕ್ಕೆ ಅನುಮತಿ ಕೋರಿ ಪ್ರಸ್ತಾವ ಸಲ್ಲಿಸುವ ಮೊದಲು ಈ ಹಿಂದೆ ಕೈಗೊಂಡಿರುವ ಪ್ರವಾಸಗಳ ಕಲಿಕೆ ಹಾಗೂ ಅನುಷ್ಠಾನ ವರದಿಯನ್ನು ನೀಡಿದ್ದರೆ ಮಾತ್ರ, ಹಾಲಿ ಪ್ರವಾಸದ ಪ್ರಸ್ತಾವಕ್ಕೆ ಅನುಮತಿ ನೀಡುವ ಕುರಿತು ಪರಿಶೀಲಿಸಲಾಗುವುದು' ಎಂದೂ ಆದೇಶದಲ್ಲಿ ವಿವರಿಸಲಾಗಿದೆ.







ಪ್ರಜಾವಾಣಿ ನವವರ್ಣ

ಬೂದು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಇಂದು, ಬುಧವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ವೈಶಾಲಿ & ಗೆಳತಿಯರು, ಬಸವೇಶ್ವರನಗರ


ಶಾಂತಿ & ತಂಡ, ಜಯನಗರ


ಸಂಧ್ಯಾ & ಗೆಳತಿಯರು, ಕೆಂಗೇರಿ


ಶೋಭಾ & ಗೆಳತಿಯರು, ನಾಗರಭಾವಿ


DRDO ಸಿಬ್ಬಂದಿ, ಬೆಂಗಳೂರು


ಭೂಮಿಕಾ & ಸಂಧ್ಯಾ


ಎಸ್.ಎನ್.ಶಾಲೆ ಸಿಬ್ಬಂದಿ, ಆಡುಗೋಡಿ


ವಸುಮತಿ & ಗೆಳತಿಯರು, ನಾಗರಭಾವಿ


ಅಶ್ವಿನಿ & ಗೆಳತಿಯರು, ಅಜ್ಜಂಪುರ


ಲಲಿತಾ & ಗೆಳತಿಯರು, ತುಮಕೂರು


ಮಾನ್ವಿತಾ, ಮೋನಿಕಾ, ದೊಡ್ಡಬಳ್ಳಾಪುರ


ಸವಿತಾ & ಗೆಳತಿಯರು, ಬೆಂಗಳೂರು


ಶ್ವೇತಾ & ಗೆಳತಿಯರು, ಜೆಪಿ ನಗರ


ಜ್ಯೋತಿ ಸಜ್ಜನ ಯೋಗ ತಂಡ, ಜಕ್ಕೂರು


ಮಮತಾ & ಸವಿತಾ, ಆನೇಕಲ್


ಸ್ಪರ್ಶ & ಕುಟುಂಬ, ಬೆಂಗಳೂರು


ದಶಪ್ರಮತಿ ಗುಂಪು, ಕೆಂಗೇರಿ


ಶ್ರೀ ಮಧುರಾ ಗ್ರೂಪ್, ಅಬಕಾರಿ ಬಡಾವಣೆ


ಸುಮನಾ & ಗೆಳತಿಯರು, ನಾಗರಭಾವಿ


ಕೆಪಿಟಿಸಿಎಲ್, ಬೆಂಗಳೂರು


SS ಕುಟುಂಬ, ಅತ್ತಾಡಿ


RES ಪಾಲಿಟೆಕ್ನಿಕ್, ಸುಂಕದಕಟ್ಟೆ

ಇಂದಿನ ಬಣ್ಣ - ಬೂದು


ಪುಷ್ಪಲತಾ & ಗೆಳತಿಯರು, ಬೆಂಗಳೂರು


ಭಕ್ತಿ ಸಂಗಮ ಭಜನಾ ಮಂಡಳಿ, ಬೆಂಗಳೂರು


ಚೈತ್ರಾ & ಗೆಳತಿಯರು, ದೊಡ್ಡಬಳ್ಳಾಪುರ


ಪೂರ್ವಿಕಾ & ತಂಡ, ನಂದಿಪುರ


ಪದ್ಮಾ & ಗೆಳತಿಯರು, ಬೆಂಗಳೂರು


ಕಲ್ಪನಾ & ಗೆಳತಿಯರು, ಕುಣಿಗಲ್


ಕೆಂಪೇಗೌಡ ಬಸ್ ನಿಲ್ದಾಣದ ಸಿಬ್ಬಂದಿ, ಬೆಂಗಳೂರು


ಶ್ರೀಮಾತಾ ಸತ್ಸಂಘ ಮಂಡಳಿ, ಬೆಂಗಳೂರು

ಇ.ಡಿ ವಿಚಾರಣೆಗೆ ಯುವರಾಜ್ ಸಿಂಗ್



ನವದೆಹಲಿ (ಪಿಟಿಐ): ಆನ್‌ಲೈನ್ ಬೆಟ್ಟಿಂಗ್ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ, ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ಅವರು ವಿಚಾರಣೆಗಾಗಿ ಜಾರಿ ನಿರ್ದೇಶನಾಲಯದ (ಇ.ಡಿ) ಮುಂದೆ ಹಾಜರಾದರು.

ಕೇಂದ್ರ ದೆಹಲಿಯಲ್ಲಿರುವ ಇ.ಡಿ ಕಚೇರಿಗೆ ಮಂಗಳವಾರ ಮಧ್ಯಾಹ್ನ 12 ಗಂಟೆ ವೇಳೆಗೆ ಯುವರಾಜ್ ಸಿಂಗ್ ಅವರು ವಿಚಾರಣೆಗಾಗಿ ತಮ್ಮ ವಕೀಲರ ತಂಡದೊಂದಿಗೆ ಬಂದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1xಬೆಟ್ ಆ್ಯಪ್‌ಗೆ ಸಂಬಂಧಿಸಿದ ಪ್ರಕರಣದಲ್ಲಿ ಅವರನ್ನು ಪ್ರಶ್ನಿಸಿದ ಇ.ಡಿ.ಯು, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿದೆ ಎಂದಿದ್ದಾರೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್‌ಫ್ಲುಯೆನ್ಸರ್ ಅನ್ವೇಶಿ ಜೈನ್ ಸಹ ಇ.ಡಿ ಕಚೇರಿಗೆ ವಿಚಾರಣೆಗಾಗಿ ಹಾಜರಾದರು

‘ಕೈ’ ಕಾರ್ಯಕಾರಿ ಸಮಿತಿ ಸಭೆ ಇಂದು

ಸ್ವಾತಂತ್ರ್ಯಾ ನಂತರ ಮೊದಲ ಬಾರಿ ಬಿಹಾರದಲ್ಲಿ ಸಿಡಬ್ಲ್ಯುಸಿ ಸಭೆ

ಪಟ್ನಾ (ಪಿಟಿಐ): ಬಿಹಾರ ವಿಧಾನಸಭಾ ಚುನಾವಣಾ ಕಾರ್ಯತಂತ್ರದ ಕುರಿತು ಚರ್ಚಿಸಲು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಸಭೆ (ಸಿಡಬ್ಲ್ಯುಸಿ) ಇಲ್ಲಿನ ಸದಾಖತ್ ಆಶ್ರಮದಲ್ಲಿ ಬುಧವಾರ ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ.

ಸ್ವಾತಂತ್ರ್ಯಾ ನಂತರ ಬಿಹಾರದಲ್ಲಿ ನಡೆಯುತ್ತಿರುವ ಮೊದಲ ‘ಸಿಡಬ್ಲ್ಯುಸಿ’ ಸಭೆ ಇದಾಗಿದ್ದು, ಈ ಸಭೆಯ ಮೂಲಕ ಬಿಹಾರವು ರಾಷ್ಟ್ರ ರಾಜಕಾರಣದ ಕೇಂದ್ರ ಬಿಂದು ಆಗಲಿದೆ ಎಂಬ ವಿಶ್ಲೇಷಣೆಗಳು ನಡೆಯುತ್ತಿವೆ.

ಮಹಾ ಘಟಬಂಧನ್ ಮೈತ್ರಿಕೂಟದ ನಡುವೆ ಸೀಟು ಹಂಚಿಕೆ ಮಾತುಕತೆ ನಡೆದಿರುವುದು, ರಾಹುಲ್ ಗಾಂಧಿ ನಡೆಸಿದ ‘ಮತದಾರರ ಅಧಿಕಾರ ಯಾತ್ರೆ’ ಸಮಾರೋಪಗೊಂಡ ಬೆನ್ನಲ್ಲೇ ‘ಸಿಡಬ್ಲ್ಯುಸಿ’ ಸಭೆ ನಡೆಯುತ್ತಿರುವುದು ಮಹತ್ವ ಪಡೆದುಕೊಂಡಿದೆ.

> ಕಾಂಗ್ರೆಸ್ ಬಿಹಾರದಲ್ಲಿ ಎರಡನೆಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಿದ್ಧವಾಗಿದೆ. ಇದರ ಭಾಗವಾಗಿ ‘ಸಿಡಬ್ಲ್ಯುಸಿ’ ಸಭೆ ನಡೆಯುತ್ತಿದೆ.
> **ಕೃಷ್ಣ ಅಲ್ಲವರು**
> ಬಿಹಾರ ಕಾಂಗ್ರೆಸ್ ಉಸ್ತುವಾರಿ



ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ‘ಮತ ಕಳ್ಳತನ’ ಆರೋಪದಲ್ಲಿ ಬಿಜೆಪಿ ವಿರುದ್ಧದ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಲು ಕಾಂಗ್ರೆಸ್ ನಿರ್ಧರಿಸಿದ್ದು, ಮುಂದಿನ ಹಂತದ ನಡೆಯ ಕುರಿತು ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆಗಳಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳು, ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು, ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ನಾಯಕರು ಸಿಡಬ್ಲ್ಯುಸಿ ಸಭೆಯಲ್ಲಿ ಭಾಗವಹಿಸಲಿದ್ದು, ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಪ್ರಜಾಪ್ರಭುತ್ವವನ್ನು ನಾಶಮಾಡಲು ಹೊರಟಿರುವವರನ್ನು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಕ್ಷಿಸುತ್ತಿದ್ದಾರೆ’ ಎಂದು ಆರೋಪಿಸಿದ್ದ ರಾಹುಲ್ ಗಾಂಧಿ, ಇದನ್ನು ಸಮರ್ಥಿಸಿಕೊಳ್ಳಲು ಕರ್ನಾಟಕದ ವಿಧಾನಸಭಾ ಕ್ಷೇತ್ರವೊಂದರ ಮತದಾರರ ಪಟ್ಟಿಯಲ್ಲಿ ಕಾಂಗ್ರೆಸ್ ಬೆಂಬಲಿಗರ ಹೆಸರುಗಳನ್ನು ವ್ಯವಸ್ಥಿತವಾಗಿ ತೆಗೆದುಹಾಕಲಾಗಿದೆ ಎಂದು ಅಂಕಿ ಅಂಶಗಳನ್ನು ಬಿಡುಗಡೆ ಮಾಡಿದ್ದರು. ಆದರೆ, ಆಯೋಗವು ಈ ಆರೋಪವನ್ನು ‘ತಪ್ಪು ಮತ್ತು ಆಧಾರ ರಹಿತ’ ಎಂದು ಅಲ್ಲಗಳೆದಿತ್ತು.

‘ಇಸಿ ಮೇಲೆ ಅಪನಂಬಿಕೆ ಹೆಚ್ಚಿಸಿದ ಬಿಜೆಪಿ’

ಪುಣೆ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಚುನಾವಣಾ ಆಯೋಗದ ಕಾರ್ಯವನ್ನು ಪ್ರಶ್ನಿಸಿದಾಗಲೆಲ್ಲ, ಬಿಜೆಪಿ ಮುಖಂಡರು ವಾಡಿಕೆಯಂತೆ ಪ್ರತಿಕ್ರಿಯಿಸುತ್ತಿರುವುದು, ಜನರಲ್ಲಿ ಚುನಾವಣಾ ಆಯೋಗದ ಮೇಲೆ ಅಪನಂಬಿಕೆ ಹೆಚ್ಚುವಂತೆ ಮಾಡಿದೆ’ ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ.

‘ಮತಕಳ್ಳತನ’ ಆರೋಪದ ಮೂಲಕ ರಾಹುಲ್ ಗಾಂಧಿ ಮತ್ತು ವಿರೋಧ ಪಕ್ಷದ ಮುಖಂಡರು ಚುನಾವಣಾ ಆಯೋಗದ ಕಾರ್ಯನಿರ್ವಹಣೆ ಬಗ್ಗೆ ಮಹತ್ವದ ಪ್ರಶ್ನೆಗಳನ್ನು ಎತ್ತಿದ್ದಾರೆ. ಆಯೋಗವು ಇದಕ್ಕೆ ಉತ್ತರ ನೀಡುವ ಬದಲಿಗೆ, ಆ ಕೆಲಸವನ್ನು ಬಿಜೆಪಿ ಮುಖಂಡರು ಮಾಡುತ್ತಿದ್ದಾರೆ. ಈ ಮೂಲಕ ಬಿಜೆಪಿಯು ಆಯೋಗದ ಮೇಲೆ ಮತದಾರರಲ್ಲಿ ಅಪನಂಬಿಕೆ ಹೆಚ್ಚುವಂತೆ ಮಾಡಿದೆ ಎಂದರು.

‘ಮತ ಕಳ್ಳತನದಿಂದ ನಿರುದ್ಯೋಗ’

ನವದೆಹಲಿ (ಪಿಟಿಐ): ‘ಮತ ಕಳ್ಳತನ ಮತ್ತು ಭ್ರಷ್ಟಾಚಾರದಿಂದ ದೇಶದಲ್ಲಿ ನಿರುದ್ಯೋಗ ಹೆಚ್ಚಿದೆ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

‘ದೇಶದ ಯುವಜನರು ಮತಕಳ್ಳತನ ಮತ್ತು ನಿರುದ್ಯೋಗವನ್ನು ಇನ್ನು ಮುಂದೆ ಸಹಿಸುವುದಿಲ್ಲ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಭಾರತ ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ ನಿರುದ್ಯೋಗ. ಇದು ಮತಕಳ್ಳತನದೊಂದಿಗೆ ನೇರವಾದ ಸಂಪರ್ಕ ಹೊಂದಿದೆ. ಜನರ ವಿಶ್ವಾಸ ಗಳಿಸಿ ಅಧಿಕಾರಕ್ಕೆ ಬರುವ ಸರ್ಕಾರದ ಮೊದಲ ಕರ್ತವ್ಯ, ಯುವಜನರಿಗೆ ಉದ್ಯೋಗ ಒದಗಿಸುವುದಾಗಿದೆ. ಆದರೆ, ಬಿಜೆಪಿಯು ಪ್ರಾಮಾಣಿಕವಾಗಿ ಚುನಾವಣೆಯನ್ನು ಗೆದ್ದಿಲ್ಲ. ಮತಕಳ್ಳತನ ಮತ್ತು ಸಂಸ್ಥೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಮೂಲಕ ಅಧಿಕಾರಕ್ಕೆ ಬಂದಿದೆ. ಹೀಗಾಗಿಯೇ ಕಳೆದ 45 ವರ್ಷಗಳಲ್ಲೇ ಗರಿಷ್ಠ ಮಟ್ಟಕ್ಕೆ ನಿರುದ್ಯೋಗ ಪ್ರಮಾಣ ತಲುಪಿದೆ’ ಎಂದು ಆರೋಪಿಸಿದ್ದಾರೆ.


ಸುದ್ದಿ 2 ನಿಮಿಷ

ದೇಶ ‘ವಿಶ್ವಗುರು’ವಾಗಲೂ ಜ್ಞಾನ ಮುಖ್ಯ’: ನಿತಿನ್ ಗಡ್ಕರಿ

ಮುಂಬೈ (ಪಿಟಿಐ): ‘ಜ್ಞಾನ ಮತ್ತು ಸಂಶೋಧನೆಯಲ್ಲಿ ಆಧುನಿಕವಾದ ದೇಶವು ‘ವಿಶ್ವಗುರು’ ಆಗುತ್ತದೆ. ಭಾರತವನ್ನು ‘ವಿಶ್ವಗುರು’ ಮಾಡಬೇಕಾದರೆ ಜ್ಞಾನ ಮುಖ್ಯವಾಗುತ್ತದೆ’ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮಂಗಳವಾರ ಅಭಿಪ್ರಾಯಪಟ್ಟರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ದೇಶವನ್ನು ₹5 ಲಕ್ಷ ಕೋಟಿ ಡಾಲರ್ ಆರ್ಥಿಕತೆಯನ್ನಾಗಿ ಮಾಡಬೇಕು ಎಂಬ ಗುರಿಯನ್ನು ಪ್ರಧಾನಿ ಮೋದಿ ಅವರು ಹಾಕಿಕೊಂಡಿದ್ದಾರೆ. ಇದು ಸಾಧ್ಯವಾಗಬೇಕಾದರೆ, ನಾವು ಜ್ಞಾನ ಮತ್ತು ಸಂಶೋಧನೆಗೆ ಒತ್ತು ನೀಡಬೇಕು. ನಾವು ಪಡೆದುಕೊಳ್ಳುವ ಶಿಕ್ಷಣವು ನಮ್ಮ ಜೀವನಕ್ಕೆ ಹತ್ತಿರವಾಗಿರಬೇಕು’ ಎಂದರು.

‘ಯುವಕರ ಭವಿಷ್ಯವು ದೇಶದ ಭವಿಷ್ಯಕ್ಕೆ ಸಂಬಂಧಿಸಿದೆ. ನಾವು ಏನನ್ನು ಆಮದು ಮಾಡಿಕೊಳ್ಳುತ್ತೇವೆಯೊ ಅದರ ಬಗ್ಗೆ ಸಂಶೋಧನೆ ನಡೆಯಬೇಕು. ಆ ಮೂಲಕ ಆ ವಸ್ತುವಿನ ಆಮದನ್ನು ತಗ್ಗಿಸಿ, ರಫ್ತು ಪ್ರಮಾಣವನ್ನು ಹೆಚ್ಚಿಸುವುದು ರಾಷ್ಟ್ರೀಯತೆ’ ಎಂದರು.



ಜಗತ್ತು ಭಾರತದ ಪರಂಪರೆ, ಇತಿಹಾಸ, ಸಂಸ್ಕೃತಿ, ಯೋಗದಲ್ಲಿ ಆಸಕ್ತಿ ತೋರಿದೆ. ಅಂತೆಯೇ ನಮ್ಮ ಜ್ಞಾನವೂ ಈ ದೇಶ ಮತ್ತು ಸಮಾಜದ ಒಳಿತಿಗಾಗಿ ಇದೆ ಎನ್ನುವುದನ್ನು ಖಾತರಿ ಪಡಿಸಬೇಕು ಎಂದು ಹೇಳಿದರು.

ಜೋರು ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಬಹುತೇಕ ಕಡೆ ಬುಧವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂಬ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ‘ಯೆಲ್ಲೊ ಅಲರ್ಟ್’ ನೀಡಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಗಾಳಿ ಸಹಿತ ಜೋರು ಮಳೆಯಾಗುವ ಸಾಧ್ಯತೆ ಇದೆ. ಬೆಳಗಾವಿ, ಬಾಗಲಕೋಟೆ, ಗದಗ, ಕಲಬುರಗಿ, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ತಿಳಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ 9 ಸೆಂ.ಮೀ, ವಿಜಯಪುರ ಜಿಲ್ಲೆಯ ಇಂಡಿಯಲ್ಲಿ 7 ಸೆಂ.ಮೀ. ಬೀದರ್ ಜಿಲ್ಲೆಯ ಔರಾದ್, ಭಾಲ್ಕಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ತಲಾ 6 ಸೆಂ.ಮೀ. ಮಳೆ ದಾಖಲಾಗಿದೆ.



ಜುಬೀನ್ ಅವರ ಸಹೋದರಿ ಪಾಲ್ಮೆ ಬೊರ್ಥಾಕೂರ್ ಅವರು ಜುಬೀನ್ ಅವರ ಚಿತೆಗೆ ಅಗ್ನಿಯನ್ನು ಸ್ಪರ್ಶಿಸಿದರು —ಪಿಟಿಐ ಚಿತ್ರ

ರಾಜ್ಯ ಗೌರವದೊಂದಿಗೆ ಗಾಯಕ ಜುಬೀನ್ ಅಂತ್ಯಸಂಸ್ಕಾರ

ಗುವಾಹಟಿ (ಪಿಟಿಐ): ಖ್ಯಾತ ಗಾಯಕ ಜುಬೀನ್ ಗರ್ಗ್ ಅವರ ಅಂತಿಮ ಸಂಸ್ಕಾರವನ್ನು ರಾಜ್ಯ ಸರ್ಕಾರಿ ಗೌರವಗಳೊಂದಿಗೆ ಗುವಾಹಟಿಯ ಹೊರವಲಯ ಕಾಮಾರ್‌ಕುಚಿಯಲ್ಲಿ ಮಂಗಳವಾರ ನೆರವೇರಿಸಲಾಯಿತು.

ಜುಬೀನ್ ಅವರ ಸಹೋದರಿ ಪಾಲ್ಮೆ ಬೊರ್ಥಾಕೂರ್ ಮತ್ತು ಸಂಗೀತ ಸಂಯೋಜಕ ರಾಹುಲ್ ಗೌತಮ್ ಅವರು ಚಿತೆಗೆ ಅಗ್ನಿಯನ್ನು ಸ್ಪರ್ಶಿಸಿದರು.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ ಸೇರಿದಂತೆ ಸಾವಿರಾರು ಜನರು ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು. ಹಲವರು ಜುಬೀನ್ ಅವರು ಹಾಡಿದ್ದ ಹಾಡನ್ನು ಹಾಡುವ ಮೂಲಕ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಇದಕ್ಕೂ ಮುನ್ನ ಗುವಾಹಟಿಯ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಜುಬೀನ್ ಮೃತದೇಹದ ಮರಣೋತ್ತರ ಪರೀಕ್ಷೆಯನ್ನು ಎರಡನೇ ಬಾರಿ ನಡೆಸಲಾಯಿತು. ಮೊದಲಿಗೆ ಸಿಂಗಪುರದಲ್ಲಿ ಮರಣೋತ್ತರ ಪರೀಕ್ಷೆ ನಡೆದಿತ್ತು.

‘ನಾರ್ತ್ ಈಸ್ಟ್ ಇಂಡಿಯಾ ಫೆಸ್ಟಿವಲ್’ ಕಾರ್ಯಕ್ರಮದಲ್ಲಿ ಭಾಗವಹಿಸಲು ಜುಬೀನ್ ಸಿಂಗಪುರಕ್ಕೆ ತೆರಳಿದ್ದರು.

ಸೆ.19ರಂದು ಅಲ್ಲಿ ಸ್ಕೂಬಾಡೈವಿಂಗ್ ಮಾಡುತ್ತಿದ್ದ ವೇಳೆ ಮೃತಪಟ್ಟಿದ್ದರು.

ಕೋಲ್ಕತ್ತದಲ್ಲಿ ಭಾರಿ ಮಳೆ: 10 ಸಾವು

ಕೋಲ್ಕತ್ತ (ಪಿಟಿಐ): ರಾತ್ರಿ ಇಡೀ ಸುರಿದ ಧಾರಾಕಾರ ಮಳೆಗೆ ಕೋಲ್ಕತ್ತ ನಗರವು ಮಂಗಳವಾರ ಸಂಪೂರ್ಣವಾಗಿ ಸ್ಥಬ್ದವಾಯಿತು. ವಿದ್ಯುತ್ ತಂತಿ ತಗುಲಿ ಸುಮಾರು ಏಳು ಮಂದಿ ಸೇರಿ ಹತ್ತು ಜನರು ಮೃತಪಟ್ಟಿದ್ದಾರೆ. ನಗರದ ಮುಕ್ಕಾಲು ಭಾಗವು ಮುಳುಗಿದೆ. ಸಂಚಾರ ಕೂಡ ಪೂರ್ಣ ಪ್ರಮಾಣದಲ್ಲಿ ನಿಂತು ಹೋಗಿತ್ತು.

ರಸ್ತೆಗಳಲ್ಲಿ ಸೊಂಟದವರೆಗೆ ನೀರು ನಿಂತಿದೆ. ಮಾರ್ಗ ಮಧ್ಯದಲ್ಲಿಯೇ ಮಧ್ಯ ರಸ್ತೆಗಳಲ್ಲಿಯೇ ಬಸ್‌ಗಳು, ಕಾರುಗಳು ಕೆಟ್ಟು ನಿಂತಿವೆ. ಬಸ್‌ನಲ್ಲಿದ್ದ ಜನರು ಪರದಾಡುವಂತಾಯಿತು. ರಸ್ತೆಗಳ ಮೇಲೆ ನಿಂತ ಮಳೆ ನೀರಿನಲ್ಲಿಯೇ ಜನರು ಓಡಾಡುತ್ತಿದ್ದ ದೃಶ್ಯಗಳು ಕಂಡುಬಂದವು. ಕ್ಯಾಬ್‌ಗಳು ಬುಕ್ ಆಗುತ್ತಲೇ ಇರಲಿಲ್ಲ. ಪರಿಸ್ಥಿತಿಯ ಲಾಭ ಪಡೆಯಲು ಯತ್ನಿಸಿದ ಕ್ಯಾಬ್ ಸೇವೆ ಒದಗಿಸುವವರು, ದುಬಾರಿ ದರ ವಸೂಲಿ ಮಾಡಿದರು.

30 ವಿಮಾನಗಳ ಹಾರಾಟ ಸ್ಥಗಿತಗೊಂಡಿತು. 31 ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾಯಿತು. ಮೆಟ್ರೊ, ರೈಲು ಸಂಚಾರ ಕೂಡ ಸ್ಥಗಿತವಾಗಿತ್ತು. ನವರಾತ್ರಿಯ ಸಂದರ್ಭವಾಗಿದ್ದರಿಂದ ನಗರವು ದುರ್ಗಾ ಪೂಜೆಯ ಸಿದ್ಧತೆಯಲ್ಲಿತ್ತು. ದುರ್ಗಾ ಪೆಂಡಾಲ್‌ಗಳ ನಿರ್ಮಾಣ ಕಾರ್ಯ ನಡೆಯುತ್ತಿತ್ತು. ಈ ಸ್ಥಳಗಳೂ ನೀರಿನಲ್ಲಿ ಆವೃತವಾಗಿವೆ.



ಭಾರಿ ಮಳೆಗೆ ಕೋಲ್ಕತ್ತದ ರಸ್ತೆಗಳಲ್ಲಿ ನೀರು ನಿಂತಿದೆ —ಎಎಫ್‌ಪಿ ಚಿತ್ರ

3ನೇ ಅತಿ ಹೆಚ್ಚಿನ ಪ್ರಮಾಣದ ಮಳೆ

25.14 ಸೆಂ.ಮೀ — ರಾತ್ರಿ ಇಡೀ ಕೋಲ್ಕತ್ತದಲ್ಲಿ ಸುರಿದ ಮಳೆಯ ಪ್ರಮಾಣ

33.2 ಸೆಂ.ಮೀ — ನಗರದ ಕೆಲವೆಡೆ ಕೆಲವೇ ಗಂಟೆಗಳಲ್ಲಿ ಸುರಿದ ಮಳೆಯ ಪ್ರಮಾಣ

ಕೋಲ್ಕತ್ತದಲ್ಲಿ ಕಳೆದ ಅರ್ಧ ಶತಮಾನದಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಮೂರನೇ ಬಾರಿಗೆ ಅತಿ ಹೆಚ್ಚು ಪ್ರಮಾಣದಲ್ಲಿ ಮಳೆ ಸುರಿದಿದೆ. 1978ರಲ್ಲಿ ನಗರದಲ್ಲಿ 36.9 ಸೆಂ.ಮೀ ಮತ್ತು 1986ರಲ್ಲಿ 25.9 ಸೆಂ.ಮೀ ಮಳೆ ಸುರಿದಿತ್ತು. ಬಂಗಾಳ ಕೊಲ್ಲಿಯ ಈಶಾನ್ಯ ಭಾಗದಲ್ಲಿ ವಾಯುಭಾರ ಕುಸಿತವಾಗಿದ್ದು, ರಾಜ್ಯದ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ
ಭಾರತೀಯ ಹವಾಮಾನ ಇಲಾಖೆ

ನವರಾತ್ರಿಯ ಪ್ರಯುಕ್ತ ಸೆ. 26ರಿಂದ ಶಾಲೆಗಳಿಗೆ ರಜೆ ನೀಡಲಾಗಿತ್ತು. ಆದರೆ, ಮಳೆಯ ಕಾರಣ ಎರಡು ದಿನ ಮುನ್ನವೇ ರಜೆ ಘೋಷಿಸಲಾಗಿದೆ.

‘ಸಿಇಎಸ್‌ಇ ಜವಾಬ್ದಾರ’



ಕೋಲ್ಕತ್ತದ ವಿದ್ಯುತ್ ಸರಬರಾಜನ್ನು ‘ಸಿಇಎಸ್‌ಇ’ ಎಂಬ ಖಾಸಗಿ ಕಂಪನಿ ನಿರ್ವಹಿಸುತ್ತದೆ. ಇದು ನಮ್ಮ ಜವಾಬ್ದಾರಿಯಲ್ಲ. ಈ ಸಾವುಗಳಿಗೆ ಆ ಕಂಪನಿಯ ಬೇಜವಾಬ್ದಾರಿ ತನವೇ ಕಾರಣ. ಮೃತರ ಕುಟುಂಬಗಳಿಗೆ ಈ ಕಂಪನಿಯೇ ಉದ್ಯೋಗ ನೀಡಬೇಕು. ಅವರು ಇಲ್ಲಿ ವ್ಯವಹಾರ ಮಾಡುತ್ತಾರೆ. ಆದರೆ, ವ್ಯವಸ್ಥೆಯನ್ನು ಆಧುನಿಕಗೊಳಿಸಲು ಆಗುವುದಿಲ್ಲವೇ? ಜಿಎಸ್‌ಟಿ ಹೆಸರಿನಲ್ಲಿ ಕೇಂದ್ರ ಸರ್ಕಾರವು ನಮ್ಮಿಂದ ಹಣ ಕಿತ್ತುಕೊಳ್ಳುತ್ತದೆ. ಉಳಿದ ಹಣವನ್ನು ಇಂಥ ವಿಪತ್ತಿನ ಸಂದರ್ಭಕ್ಕೆ ಬಳಸಿಕೊಳ್ಳುವುದರಲ್ಲಿಯೇ ಸಂಪನ್ಮೂಲ ಮುಗಿದು ಹೋಗುತ್ತಿದೆ

ಮಮತಾ ಬ್ಯಾನರ್ಜಿ,
ಪಶ್ಚಿಮ ಬಂಗಾಳ ಮುಖ್ಯಮಂತ್ರಿ



ಜೈ ಕಿಸಾನ್ ಖಾಸಗಿ ಸಗಟು ತರಕಾರಿ ಮಾರುಕಟ್ಟೆ ಪರವಾನಗಿ ರದ್ದು ನಿರ್ಣಯ ಹಿಂಪಡೆಯುವಂತೆ ಒತ್ತಾಯಿಸಿ ಮಂಗಳವಾರ ಬೆಳಗಾವಿಯಲ್ಲಿ ಪ್ರತಿಭಟಿಸಿದ ರೈತರು ರಸ್ತೆ ಮಧ್ಯೆ ಕುಳಿತು ಊಟ ಮಾಡಿದರು ಚಿತ್ರ: ಏಕನಾಥ ಅಗಸಿಮನಿ

ಸಂಕ್ಷಿಪ್ತ ಸುದ್ದಿ

ಎರಡು ಮಸೂದೆಗಳ ಪರಿಶೀಲನೆಗೆ ಸಮಿತಿ ರಚನೆ

ಬೆಂಗಳೂರು: ಕರ್ನಾಟಕ ಜನಸಂದಣಿ ನಿಯಂತ್ರಣ ಮಸೂದೆಯ ಸಮಗ್ರ ಪರಿಶೀಲನೆಗಾಗಿ ಗೃಹ ಸಚಿವ ಜಿ.ಪರಮೇಶ್ವರ ಅವರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿದೆ.

ಈ ಸಮಿತಿಯಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ, ಶಾಸಕರಾದ ರಿಜ್ವಾನ್ ಅರ್ಷದ್, ಎನ್.ಶ್ರೀನಿವಾಸ, ಡಿ. ರವಿಶಂಕರ್, ಶ್ರೀನಿವಾಸ ಮಾನೆ, ಪ್ರಕಾಶ್ ಕೋಳಿವಾಡ, ಎಚ್.ಡಿ.ತಮ್ಮಯ್ಯ, ವಿ.ಸುನಿಲ್‌ಕುಮಾರ್, ಎಸ್.ಆರ್.ವಿಶ್ವನಾಥ್ ಮತ್ತು ಜಿ.ಡಿ.ಹರೀಶ್‌ಗೌಡ ಸದಸ್ಯರಾಗಿದ್ದಾರೆ. ವರದಿ ನೀಡಲು ಮೂರು ತಿಂಗಳ ಕಾಲ ಮಿತಿ ನಿಗದಿ ಮಾಡಲಾಗಿದೆ.

ಭೂಕಂದಾಯ ಪರಿಶೀಲನಾ ಸಮಿತಿ: ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಮಸೂದೆಯ ಸಮಗ್ರ ಪರಿಶೀಲನೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ, ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂಥರ್‌ಗೌಡ, ಎಚ್.ವಿ.ವೆಂಕಟೇಶ್, ಡಾ.ಶ್ರೀನಿವಾಸ್ ಎನ್.ಟಿ, ಗಣೇಶ್ ಹುಕ್ಕೇರಿ, ಭೀಮಣ್ಣ ಟಿ.ನಾಯ್ಕ, ಅರವಿಂದ ಬೆಲ್ಲದ, ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತು ಎಂ.ಟಿ.ಕೃಷ್ಣಪ್ಪ ಅವರು ಸದಸ್ಯರಾಗಿದ್ದಾರೆ. ವರದಿಗೆ ಮೂರು ತಿಂಗಳ ಕಾಲಮಿತಿ ನೀಡಲಾಗಿದೆ.

ಶರಣಾಗತಿ ತಿರಸ್ಕರಿಸಿದ ಸಿಪಿಐ ಮಾವೊ ಕೇಂದ್ರ ಸಮಿತಿ

ಹೈದರಾಬಾದ್: ಸಿಪಿಐ ಮಾವೋವಾದಿಗಳ ವಕ್ತಾರ ಮತ್ತು ಪಾಲಿಟ್‌ಬ್ಯೂರೊ ಸದಸ್ಯ ಅಭಯ್ ಅವರು ಶಸ್ತ್ರಾಸ್ತ್ರಗಳೊಂದಿಗೆ ಶರಣಾಗಲು ಮತ್ತು ಸರ್ಕಾರದ ಜತೆ ಶಾಂತಿ ಮಾತುಕತೆ ನಡೆಸಲು ಇಚ್ಛಿಸಿರುವುದಾಗಿ ಇತ್ತೀಚೆಗೆ ಘೋಷಿಸಿದ್ದನ್ನು ಸಿಪಿಐ ಮಾವೋವಾದಿಗಳ ಕೇಂದ್ರೀಯ ಸಮಿತಿ ಖಂಡಿಸಿದೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಪಕ್ಷದ ಕೇಂದ್ರೀಯ ಸಮಿತಿ ಮತ್ತು ಪಾಲಿಟ್‌ಬ್ಯೂರೊ, ‘ಅದು ಕೇವಲ ಅಭಯ್ ಅವರ ವೈಯಕ್ತಿಕ ಅಭಿಪ್ರಾಯ. ಅದನ್ನು ನಾವು ತಿರಸ್ಕರಿಸುತ್ತೇವೆ ಮತ್ತು ಸಶಸ್ತ್ರ ಹೋರಾಟ ಮುಂದುವರಿಸುತ್ತೇವೆ’ ಎಂದು ಹೇಳಿದೆ. ‘ಅಭಯ್ ಶರಣಾಗಲು ಬಯಸಿದರೆ, ಅವರು ಮೊದಲು ತಮ್ಮಲ್ಲಿರುವ ಎಲ್ಲ ರೀತಿಯ ಶಸ್ತ್ರಾಸ್ತ್ರಗಳನ್ನು ಸಿಪಿಐ ಮಾವೋವಾದಿಗಳ ಪಿಜಿಎಲ್‌ಎಗೆ ಹಸ್ತಾಂತರಿಸಬೇಕು’ ಎಂದು ಸೂಚಿಸಿದೆ. ಕದರಿ ಸತ್ಯನಾರಾಯಣ ಅಲಿಯಾಸ್ ಕೋಸಾ ಮತ್ತು ಕಟ್ಟಾ ರಾಮಚಂದ್ರ ರೆಡ್ಡಿ ಅಲಿಯಾಸ್ ವಿಕಲ್ಪ್ ಅವರು ಈ ಕುರಿತ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಆದರೆ ಈ ಇಬ್ಬರೂ ಛತ್ತೀಸಗಢದಲ್ಲಿ ಸೋಮವಾರ ನಡೆದ ಎನ್‌ಕೌಂಟರ್‌ನಲ್ಲಿ ಮೃತಪಟಿದ್ದಾರೆ. ಅವರು ಸಾವಿಗೂ ಮುನ್ನ ಈ ಹೇಳಿಕೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವರ್ಮಾ ವಿರುದ್ಧದ ತನಿಖಾ ಸಮಿತಿಗೆ ವಕೀಲರ ನೇಮಕ

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧದ ಭ್ರಷ್ಟಾಚಾರ ಆರೋಪಗಳ ತನಿಖೆ ನಡೆಸುವ ಸಮಿತಿಗೆ ಇಬ್ಬರು ವಕೀಲರು ನೆರವಾಗಲಿದ್ದಾರೆ.

ರೋಹನ್ ಸಿಂಗ್ ಮತ್ತು ಸಮೀಕ್ಷಾ ದುವಾ ಸಮಿತಿಗೆ ಸಲಹೆ ನೀಡಲು ನೇಮಕಗೊಂಡ ವಕೀಲರು. ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸಲು ಕೋರಿರುವ ಸೂಚನೆಯಲ್ಲಿ ಮಾಡಿರುವ ಆರೋಪಗಳ ಕುರಿತ ತನಿಖೆಗಾಗಿ ರಚಿಸಲಾದ ಮೂವರು ಸದಸ್ಯರ ಸಮಿತಿಗೆ ಈ ಇಬ್ಬರೂ ವಕೀಲರು ಸಹಾಯ ಮಾಡಲಿದ್ದಾರೆ.

ಯಶವಂತ್ ಅವರನ್ನು ಪದಚ್ಯುತಗೊಳಿಸುವಂತೆ ಬಹು–ಪಕ್ಷಗಳು ನೀಡಿದ ನೋಟಿಸ್‌ಗಳನ್ನು ಲೋಕಸಭೆ ಸ್ಪೀಕರ್ ಬಿರ್ಲಾ ಅವರು ಕಳೆದ ತಿಂಗಳು ಅಂಗೀಕರಿಸಿದ್ದರು.

ಯಶವಂತ್ ಅವರ ಅಧಿಕೃತ ನಿವಾಸದಲ್ಲಿ ಮಾರ್ಚ್ 14ರಂದು ಅರೆ ಸುಟ್ಟ ನೋಟುಗಳ ಕಂತೆಗಳು ಪತ್ತೆಯಾದ ನಂತರ ಅವರನ್ನು ದೆಹಲಿಯಿಂದ ಅಲಹಾಬಾದ್ ಹೈಕೋರ್ಟ್‌ಗೆ ವಾಪಸ್ ಕಳುಹಿಸಲಾಗಿದೆ.

‘ಸೀಮಾಂಚಲ ನ್ಯಾಯ ಯಾತ್ರೆ’ ಇಂದಿನಿಂದ



ಅಸದುದ್ದೀನ್ ಓವೈಸಿ

ಹೈದರಾಬಾದ್ (ಪಿಟಿಐ): ಬಿಹಾರದ ಸೀಮಾಂಚಲ ಪ್ರದೇಶದಲ್ಲಿ ಸೆ. 24ರಿಂದ 27ರವರೆಗೆ ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಅವರು ‘ಸೀಮಾಂಚಲ ನ್ಯಾಯ ಯಾತ್ರೆ’ ನಡೆಸಲಿದ್ದಾರೆ.

ಯಾತ್ರೆಯ ಸಮಯದಲ್ಲಿ ಓವೈಸಿ ಅವರು ಸೀಮಾಂಚಲದ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ರೋಡ್ ಶೋ ಮತ್ತು ಬೀದಿ ಸಭೆಗಳನ್ನು ನಡೆಸುವ ಮೂಲಕ ತಮ್ಮ ಪಕ್ಷದ ಪರ ಚುನಾವಣಾ ಪ್ರಚಾರವನ್ನು ನಡೆಸಲಿದ್ದಾರೆ ಎಂದು ಎಐಎಂಐಎಂ ಮಂಗಳವಾರ ತಿಳಿಸಿದೆ. ಅಭಿವೃದ್ಧಿಗಾಗಿ ಜನರನ್ನು ಒಂದುಗೂಡಿಸಲು ಮತ್ತು ಸೀಮಾಂಚಲಕ್ಕೆ ನ್ಯಾಯ ಒದಗಿಸಲು ಕಿಶನ್‌ಗಂಜ್‌ನಿಂದ ಈ ಯಾತ್ರೆ ನಡೆಸಲಿದ್ದಾರೆ ಎಂದಿದೆ.

ಈ ಹಿಂದಿನ ಚುನಾವಣೆಯಲ್ಲಿ ಸೀಮಾಂಚಲದ 25 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಎಐಎಂಐಎಂ ಐದು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಹಿಂದುಳಿದಿರುವ ಸೀಮಾಂಚಲದ ಅಭಿವೃದ್ಧಿಗಾಗಿ ಸಂವಿಧಾನದ 371ನೇ ವಿಧಿಯಡಿ ‘ಸೀಮಾಂಚಲ ಅಭಿವೃದ್ಧಿ ಮಂಡಳಿ’ ಸ್ಥಾಪಿಸುವಂತೆ ಓವೈಸಿ ಲೋಕಸಭೆಯಲ್ಲಿ ಖಾಸಗಿ ಮಸೂದೆ ಮಂಡಿಸಿದ್ದರು.

ಸಿಟಿ–ಎಂಆರ್‌ಐ ಸ್ಕ್ಯಾನ್: ಎಪಿಎಲ್ ಕಾರ್ಡ್‌ದಾರರಿಗೆ ಶುಲ್ಕ

ಬೆಂಗಳೂರು: ರಾಜ್ಯದ ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ ಸಿಟಿ ಮತ್ತು ಎಂಆರ್‌ಐ ಸ್ಕ್ಯಾನ್‌ಗೆ ಸಂಬಂಧಿಸಿದಂತೆ ಎಪಿಎಲ್ ಕುಟುಂಬದ ಸದಸ್ಯರಿಗೆ ಶೇ 70 ರಷ್ಟು ಶುಲ್ಕ ಪಾವತಿ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

ಈ ಬಗ್ಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು ಆದೇಶ ಹೊರಡಿಸಿದ್ದು, ಮಂಗಳವಾರದಿಂದಲೇ ಈ ಆದೇಶ ಜಾರಿಗೆ ಬಂದಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ಈವರೆಗೆ ರಾಜ್ಯದ 16 ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ಸಿಟಿ ಮತ್ತು ಎಂಆರ್‌ಐ ಸ್ಕ್ಯಾನ್ ನಡೆಸಲಾಗುತ್ತಿತ್ತು. ಒಟ್ಟು ಶುಲ್ಕದಲ್ಲಿ ಎಪಿಎಲ್ ಕುಟುಂಬದ ಸದಸ್ಯ ಶೇ 70ರಷ್ಟು ದರ ಪಾವತಿಸಿದರೆ, ಉಳಿದ ಶೇ 30ರಷ್ಟು ಶುಲ್ಕವನ್ನು ಯೋಜನೆಯಡಿ ಭರಿಸಲಾಗುತ್ತದೆ.

ಚಿಕ್ಕಮಗಳೂರು, ಚಾಮರಾಜನಗರ, ದಾವಣಗೆರೆ, ಚಿತ್ರದುರ್ಗ, ವಿಜಯಪುರ, ಗದಗ, ಹಾವೇರಿ, ಬಾಗಲಕೋಟೆ, ಉಡುಪಿ, ಕಾರವಾರ (ಉತ್ತರ ಕನ್ನಡ), ಕೋಲಾರ, ತುಮಕೂರು, ಕೊಡಗು, ಯಾದಗಿರಿ, ಧಾರವಾಡ ಜಿಲ್ಲಾ ಆಸ್ಪತ್ರೆ ಹಾಗೂ ಬೆಂಗಳೂರಿನ ಜಯನಗರ ಸಾರ್ವಜನಿಕ ಆಸ್ಪತ್ರೆಗೆ ಈ ಆದೇಶ ಅನ್ವಯವಾಗಲಿದ್ದು, ಸಿಟಿ ಮತ್ತು ಎಂಆರ್‌ಐ ಸ್ಕ್ಯಾನ್ ಸೌಲಭ್ಯಕ್ಕೆ ಎಪಿಎಲ್ ಕಾರ್ಡ್‌ದಾರರು ಶುಲ್ಕ ಭರಿಸಬೇಕಾಗಿದೆ.





ನವದೆಹಲಿಯಲ್ಲಿ ಮಂಗಳವಾರ ನಡೆದ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಲಯಾಳ ಭಾಷೆಯ ಖ್ಯಾತ ನಟ ಮೋಹನ್ ಲಾಲ್ (ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ) ಅವರನ್ನು ಶ್ರೇಷ್ಠ ನಟ ಪ್ರಶಸ್ತಿ ಪಡೆದ ಶಾರುಕ್ ಖಾನ್ ಅವರು ಆಲಂಗಿಸಿದರು. ಶ್ರೇಷ್ಠ ನಟಿ ಪ್ರಶಸ್ತಿ ಪುರಸ್ಕೃತೆ ರಾಣಿ ಮುಖರ್ಜಿ ಅವರೂ ಇದ್ದರು (ಎಡ ಚಿತ್ರ) –ಪಿಟಿಐ ಚಿತ್ರ. ‘ಕಂದೀಲು’ ಚಿತ್ರಕ್ಕಾಗಿ ‘ಅತ್ಯುತ್ತಮ ಕನ್ನಡ ಸಿನಿಮಾ ಪ್ರಶಸ್ತಿ’ಯನ್ನು ನಿರ್ದೇಶಕಿ ಯಶೋದ ಪ್ರಕಾಶ್ ಕೊಟ್ಟುಕತ್ತೀರ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರದಾನ ಮಾಡಿದರು

ಅಜಂ ಖಾನ್ ಜೈಲಿನಿಂದ ಬಿಡುಗಡೆ

ಸೀತಾಪುರ (ಉತ್ತರ ಪ್ರದೇಶ) (ಪಿಟಿಐ): ಸಮಾಜವಾದಿ ಪಕ್ಷದ ನಾಯಕ ಮತ್ತು ಉತ್ತರ ಪ್ರದೇಶದ ಮಾಜಿ ಸಚಿವ ಅಜಂ ಖಾನ್ ಜಾಮೀನಿನ ಮೇಲೆ ಸೀತಾಪುರ ಜೈಲಿನಿಂದ ಮಂಗಳವಾರ ಬಿಡುಗಡೆಯಾದರು.

ಎರಡು ವರ್ಷಗಳಿಂದ ಜೈಲಿನಲ್ಲಿದ್ದ ಅವರು, ಬಿಳಿ ಕುರ್ತಾ, ಪೈಜಾಮ ಮತ್ತು ಕಪ್ಪು ಬಣ್ಣದ ವೇಸ್‌ಕೋಟ್ ಧರಿಸಿ ಜೈಲು ಆವರಣದಿಂದ ಹೊರಬಂದು, ಖಾಸಗಿ ವಾಹನದಲ್ಲಿ ತೆರಳಿದರು.

ಖಾನ್ ಅವರ ಹಿರಿಯ ಮಗ ಅದೀಬ್, ಎಸ್‌ಪಿ ರಾಷ್ಟ್ರೀಯ ಕಾರ್ಯದರ್ಶಿ ಅನೂಪ್ ಗುಪ್ತಾ, ಮುರಾದಾಬಾದ್ ಸಂಸದೆ ರುಚಿ ವೀರಾ ಸೇರಿದಂತೆ ಎಸ್‌ಪಿಯ ಹಲವು ನಾಯಕರು ಮತ್ತು ಕಾರ್ಯಕರ್ತರು ಖಾನ್ ಸ್ವಾಗತಕ್ಕಾಗಿ ಜೈಲಿನ ಬಳಿ ಜಮಾಯಿಸಿದ್ದರು.

ಇದಕ್ಕೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಅದೀಬ್, ‘ಜೈಲಿನಿಂದ ಹೊರ ಬಂದ ಬಳಿಕ ನನ್ನ ತಂದೆ ಅವರು ಏನನ್ನು ಹೇಳಬೇಕೊ ಅದನ್ನೆಲ್ಲ ಹೇಳುತ್ತಾರೆ’ ಎಂದು ಹೇಳಿದ್ದರು.

‘ಖಾನ್ ಅವರು ತೀವ್ರ ನೋವನ್ನು ಅನುಭವಿಸಿದ್ದಾರೆ. ಅವರಿಗೆ ನೀಡಿರುವಷ್ಟು ಕಿರುಕುಳವನ್ನು ಬೇರೆ ಯಾವುದೇ ರಾಜಕಾರಣಿಗೆ ನೀಡಿಲ್ಲ. ನ್ಯಾಯಾಂಗದ ಮೇಲೆ ನಮ್ಮ ನಂಬಿಕೆ ಮುಂದುವರಿಯುತ್ತದೆ’ ಎಂದು ಸಂಸದೆ ರುಚಿ ವೀರಾ ಅವರು ಪ್ರತಿಕ್ರಿಯಿಸಿದರು.

ಪ್ರಕರಣ ದಾಖಲಿಸಲು ಸಿಬಿಐಗೆ ಅನುಮತಿ

ನವದೆಹಲಿ (ಪಿಟಿಐ): ಬ್ಯಾಂಕ್‌ಗಳು ಮತ್ತು ರಿಯಲ್ ಎಸ್ಟೇಟ್ ಡೆವಲಪರ್‌ಗಳು ‘ಅಪವಿತ್ರ ಮೈತ್ರಿ’ಯ ಮೂಲಕ ಮನೆ ಖರೀದಿದಾರರನ್ನು ವಂಚಿಸಿದ ಪ್ರಕರಣದಲ್ಲಿ ಇನ್ನೂ 6 ಪ್ರಕರಣಗಳನ್ನು ದಾಖಲಿಸಿಕೊಳ್ಳಲು ಸಿಬಿಐಗೆ ಸುಪ್ರೀಂಕೋರ್ಟ್ ಮಂಗಳವಾರ ಅನುಮತಿ ನೀಡಿದೆ.

ಮುಂಬೈ, ಬೆಂಗಳೂರು, ಕೋಲ್ಕತ್ತ, ಮೊಹಾಲಿ ಮತ್ತು ಪ್ರಯಾಗ್‌ರಾಜ್‌ನಲ್ಲಿ ಕೆಲವು ರಿಯಲ್ ಎಸ್ಟೇಟ್ ಯೋಜನೆಗಳಲ್ಲಿ ಈ ರೀತಿಯ ಅಪವಿತ್ರ ಮೈತ್ರಿಯ ಮೂಲಕ ತಮ್ಮನ್ನು ವಂಚಿಸಲಾಗಿದೆ ಎಂದು ಆರೋಪಿಸಿ 1,200ಕ್ಕೂ ಹೆಚ್ಚು ಮನೆ ಖರೀದಿದಾರರು ಸಲ್ಲಿಸಿದ್ದ ಗುಂಪು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂಕೋರ್ಟ್ ನಡೆಸಿತು.

ಸೂರ್ಯ ಕಾಂತ್, ಉಜ್ವಲ್ ಭುಯಾನ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಅವರನ್ನೊಳಗೊಂಡ ಪೀಠ ವಿಚಾರಣೆ ನಡೆಸಿತು. ಸಿಬಿಐ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಹಾಜರಾದರು. ಸೂಪರ್‌ಟೆಕ್ ಲಿಮಿಟೆಡ್ ಹೊರತುಪಡಿಸಿ ಉಳಿದ ಬಿಲ್ಡರ್‌ಗಳ ವಿರುದ್ಧದ ಪ್ರಾಥಮಿಕ ತನಿಖೆ ಪೂರ್ಣಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ವಂಚನೆ ಹೇಗೆ?: ಮನೆ ಖರೀದಿದಾರರ ಹೆಸರಿನಲ್ಲಿ ಮಂಜೂರಾದ ಸಾಲದ ಮೊತ್ತವನ್ನು ಬ್ಯಾಂಕ್‌ಗಳು ನೇರವಾಗಿ ಬಿಲ್ಡರ್‌ಗಳ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸುತ್ತಿದ್ದವು. ಬಿಲ್ಡರ್‌ಗಳಿಂದ ಫ್ಲ್ಯಾಟ್‌ಗಳು ಹಸ್ತಾಂತರವಾಗುವ ಮುನ್ನವೇ, ಈ ಸಾಲದ ಮೇಲಿನ ಕಂತು ಪಾವತಿಸುವಂತೆ ಬ್ಯಾಂಕ್‌ಗಳು ಮನೆ ಖರೀದಿದಾರರಿಗೆ ಸೂಚಿಸುತ್ತಿದ್ದವು. ಸೂಪರ್‌ಟೆಕ್ ಲಿಮಿಟೆಡ್ ವಿರುದ್ಧ 799 ಮನೆ ಖರೀದಿದಾರರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ. ಅಮಿಕಸ್ ಕ್ಯೂರಿಯು ಸೂಪರ್‌ಟೆಕ್ ಲಿಮಿಟೆಡ್ ಅನ್ನು ಈ ವಂಚನೆ ಪ್ರಕರಣಗಳ ಮುಖ್ಯ ಅಪರಾಧಿ ಎಂದು ಹೇಳಿದ್ದಾರೆ.

ಮೇಲ್ಮನವಿ ಅರ್ಜಿ ವಜಾ: ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ

ಕೆಪಿಸಿಎಲ್ 404 ಹುದ್ದೆ: ಮರು ಪರೀಕ್ಷೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆಪಿಸಿಎಲ್) 404 ಸಹಾಯಕ ಎಂಜಿನಿಯರ್ (ಎ.ಇ) ಮತ್ತು ಕಿರಿಯ ಎಂಜಿನಿಯರ್ (ಜೆ.ಇ) ನೇಮಕಾತಿಗೆ ನಾಲ್ಕು ತಿಂಗಳ ಒಳಗೆ ಹೊಸತಾಗಿ ಪರೀಕ್ಷೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

ಈ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ 2024ರ ಮೇ 8ರಂದು ಆಯ್ಕೆ ಪಟ್ಟಿ ಪ್ರಕಟಿಸಿತ್ತು. ಇದನ್ನು ಪ್ರಶ್ನಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ವಿಭಾಗೀಯ ಪೀಠ, ಆಯ್ಕೆ ಪಟ್ಟಿಯನ್ನು ರದ್ದುಗೊಳಿಸಿ ಮೇ 28ರಂದು ತೀರ್ಪು ನೀಡಿತ್ತು. ಅದನ್ನು ಪ್ರಶ್ನಿಸಿ, ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾ ಮಾಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ, ‘ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನದ ಮಾಹಿತಿ ಬಂದಿದೆ. ಈ ಹುದ್ದೆಗಳ ನೇಮಕಾತಿಗೆ ನಾವು (ಕೆಇಎ) ಪರೀಕ್ಷೆ ನಡೆಸಿದ್ದೆವು. ಮರು ಪರೀಕ್ಷೆ ನಡೆಸಲು ಇಂಧನ ಇಲಾಖೆ ನಮಗೆ ಸೂಚಿಸಬಹುದು ಅಥವಾ ಕೆಪಿಎಸ್‌ಸಿ ಮೂಲಕ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬಹುದು’ ಎಂದರು.

ಏನಿದು ಪ್ರಕರಣ?

ಖಾಲಿ ಇದ್ದ ಸಿವಿಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಆಟೊಮೊಬೈಲ್, ಮೆಕ್ಯಾನಿಕಲ್ ವಿಭಾಗಗಳ ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್ ಹಾಗೂ ಕೆಮಿಸ್ಟ್, ರಾಸಾಯನಿಕ ಮೇಲ್ವಿಚಾರಕರ ಹುದ್ದೆಗಳ ಭರ್ತಿಗೆ 2018ರಲ್ಲಿ ಕೆಪಿಸಿಎಲ್ ನಡೆಸಿದ್ದ ಪರೀಕ್ಷೆಯಲ್ಲಿನ ಅಕ್ರಮ, ಪ್ರಶ್ನೆಪತ್ರಿಕೆ ಸೋರಿಕೆ ಮೊದಲಾದ ವಿಚಾರಕ್ಕೆ ಕೋರ್ಟ್ ರದ್ದುಪಡಿಸಿತ್ತು. ಕೋರ್ಟ್ ಆದೇಶದಂತೆ ಮರು ಪರೀಕ್ಷೆ ನಡೆಸುವುದಾಗಿ 2018ರ ಜೂನ್‌ನಲ್ಲೇ ಅಭ್ಯರ್ಥಿಗಳಿಗೆ ಭರವಸೆ ನೀಡಿದ್ದ ಕೆಪಿಸಿಎಲ್, ಆರು ವರ್ಷಗಳ ಬಳಿಕ 2024ರ ಫೆಬ್ರುವರಿಯಲ್ಲಿ ಕೆಇಎ ಮೂಲಕ ಒಟ್ಟು 622 ಹುದ್ದೆಗಳ ನೇಮಕಾತಿಗೆ ಮರು ಪರೀಕ್ಷೆ ನಡೆಸಿತ್ತು. ಈ ಪೈಕಿ, 404 ಸಹಾಯಕ ಎಂಜಿನಿಯರ್ (ಎ.ಇ) ಮತ್ತು ಕಿರಿಯ ಎಂಜಿನಿಯರ್ (ಜೆ.ಇ) ನೇಮಕಾತಿ ಪಟ್ಟಿಯನ್ನು ಹೈಕೋರ್ಟ್ ರದ್ದುಪಡಿಸಿತ್ತು.

ನೇಮಕಾತಿ ಅಧಿಸೂಚನೆಯಲ್ಲಿ ಇಲ್ಲದಿದ್ದರೂ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ವೇಳೆಯಲ್ಲಿ ಋಣಾತ್ಮಕ ಅಂಕ ಪದ್ಧತಿ ಅನುಸರಿಸಿದ್ದನ್ನು ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೊರೆಹೋಗಿದ್ದರು. ಈ ಅರ್ಜಿಯನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿತ್ತು. ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಎನ್. ನವೀನ್ ಕುಮಾರ್ ಸೇರಿದಂತೆ ನಾಲ್ವರು ಸಲ್ಲಿಸಿದ್ದ ರಿಟ್ ಮೇಲ್ಮನವಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ವಿಭಾಗೀಯ ಪೀಠ, ನೇಮಕಾತಿ ಪಟ್ಟಿ ರದ್ದುಪಡಿಸಿ, ಶೀಘ್ರವೇ ಮರು ಪರೀಕ್ಷೆ ನಡೆಸುವಂತೆ ಕೆಪಿಸಿಎಲ್ ಮತ್ತು ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು.

ನದಿ ಹರಿವು ಹೆಚ್ಚಳ: ಸಂಪರ್ಕ ಕಡಿತ

'ಮಹಾ' ಅಣೆಕಟ್ಟೆಗಳಿಂದ ನೀರು ಬಿಡುಗಡೆ
ಕಲಬುರಗಿ, ಬೀದರ್ ಜಿಲ್ಲೆಗಳಲ್ಲಿ ಸಮಸ್ಯೆ

ಪ್ರಜಾವಾಣಿ ವಾರ್ತೆ

ಹುಲಸೂರ (ಬೀದರ್ ಜಿಲ್ಲೆ): ಸಮೀಪದ ಕೊಂಗಳಿ ಗ್ರಾಮದ ಬಳಿಯಿರುವ ಸೇತುವೆ ಬಳಿ ನದಿಯ ಹರಿವು ಹೆಚ್ಚಾಗಿದೆ. ರಸ್ತೆ ಜಲಾವೃತಗೊಂಡು ಮೆಹಕರ-ಕೊಂಗಳಿ, ವಾಂಜರಖೇಡ ಗ್ರಾಮದಿಂದ ಬಿರಾದ (ಬಾ), ತುಗಾಂವ (ಎಚ್)-ಹಲಸಿ ಗ್ರಾಮಗಳ ಸಂಪರ್ಕ ಕಡಿತವಾಗಿದೆ.

ನೆರೆಯ ಮಹಾರಾಷ್ಟ್ರದ ಧನೆಗಾಂವ, ತೆರಣ, ಹೂಸುರ, ಮಸಲಗಾ ಜಲಾಶಯಗಳಿಂದ ಮಂಗಳವಾರ 80 ಸಾವಿರಕ್ಕೂ ಹೆಚ್ಚು ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗಿದೆ. ಬೆಳಿಗ್ಗೆಯಿಂದ ನದಿಯ ಹರಿವಿನಲ್ಲೂ ಏರಿಕೆ ಕಂಡುಬಂದಿದೆ.

ಮಾಂಜ್ರಾ ನದಿ ಪಾತ್ರದ ಹಲಸಿ ತುಗಾಂವ, ಕೊಂಗಳಿ, ವಾಂಜರಖೇಡ, ಮೆಹಕರ, ಬೋಳೆಗಾಂವ, ನಾರದಾ ಸಂಗಮ, ಅಟ್ಟರಗಾ, ಸಾಯಗಾಂವ, ಹುಲಸೂರ ಸೇರಿ ವಿವಿಧ ಗ್ರಾಮಗಳ ವ್ಯಾಪ್ತಿಯಲ್ಲಿ ಹೆಸರು, ಉದ್ದು, ತೊಗರಿ, ಸೋಯಾ ಅವರೆ ಬೆಳೆಗಳು ಅಧಿಕ ತೇವಾಂಶದಿಂದ ಕೊಳೆಯುತ್ತಿದ್ದು, ರೈತರು ಚಿಂತೆಗೀಡಾಗುವಂತಾಗಿದೆ.

ಕೆಲವೆಡೆ ವಿದ್ಯುತ್ ಕಂಬಗಳು ಬಾಗಿದ್ದು, ರಾತ್ರಿಯಿಡಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಹೊಲಗಳ ಒಡ್ಡುಗಳು ಕೊಚ್ಚಿಕೊಂಡು ಹೋಗಿವೆ.

ತೋರಿ ಬಸವಣ್ಣ ದೇವಸ್ಥಾನ ಜಲಾವೃತ: ಉಕ್ಕಿ ಹರಿಯುತ್ತಿರುವ ಮಾಂಜ್ರಾ ನದಿ ಪಾತ್ರದ ಐತಿಹಾಸಿಕ ತೋರಿ ಬಸವಣ್ಣ ದೇವಸ್ಥಾನ ದೇವಸ್ಥಾನ ಮುಳುಗಿದೆ. ಭಕ್ತರು, ದೂರದಲ್ಲಿಯೇ ನಿಂತು ನಮಸ್ಕರಿಸಿ ವಾಪಸ್ಸಾದರು. ರಾತ್ರಿ ಸುರಿದ ಮಳೆಗೆ ಮುಚಳಂಬ ಗ್ರಾಮದಲ್ಲಿ ಒಟ್ಟು 5 ಮನೆಗಳ ಗೋಡೆ ಕುಸಿದಿದೆ.

ಕಲಬುರಗಿ ವರದಿ: ಜಿಲ್ಲೆಯಲ್ಲಿ ಮಂಗಳವಾರ ಮಳೆಯಾಗಿಲ್ಲ. ಆದರೆ, ರಾತ್ರಿ 8 ಗಂಟೆ ಹೊತ್ತಿಗೆ ಭೀಮಾ ನದಿಗೆ ಒಟ್ಟು 2.75 ಲಕ್ಷ ಕ್ಯೂಸೆಕ್‌ನಷ್ಟು ನೀರು ಹರಿದು ಬರುತ್ತಿದೆ. ಅಷ್ಟೇ ಪ್ರಮಾಣದ ನೀರನ್ನು ಸೊನ್ನ ಬ್ಯಾರೇಜ್‌ನಿಂದ ನದಿ ಪಾತ್ರಕ್ಕೆ ಹರಿಬಿಡಲಾಗಿದೆ.

ಮಣ್ಣೂರು ಗ್ರಾಮದ ಯಲ್ಲಮ್ಮ ದೇವಿ ದೇವಸ್ಥಾನ ಜಲಾವೃತವಾಗಿದೆ. ನವರಾತ್ರಿ ವೇಳೆ ವಿಶೇಷ ಪೂಜೆ, ದರ್ಶನ ಇಲ್ಲದಂತಾಗಿದೆ. ಮತ್ತೊಂದೆಡೆ ಘತ್ತರಗಾ, ದೇವಲ ಗಾಣಗಾಪುರದ ಸೇತುವೆಗಳು ಜಲಾವೃತವಾಗಿ, ಸತತ 4ನೇ ದಿನವೂ ಸಂಚಾರಕ್ಕೆ ಮುಕ್ತವಾಗಿಲ್ಲ.

ಭೀಮಾ ನದಿ ಉಕ್ಕೇರಿ ಯಾದಗಿರಿ ಜಿಲ್ಲೆಯಲ್ಲಿ ನದಿ ಪಾತ್ರದ ಜಮೀನುಗಳಿಗೆ ನೀರು ನುಗ್ಗಿದೆ. ಕಂಗಳೇಶ್ವರ ದೇವಸ್ಥಾನ, ಸ್ಮಶಾನವೂ ಜಲಾವೃತಗೊಂಡಿದೆ. ನಾಯ್ಕಲ್, ಹೆಡಗಿಮದ್ರಾ, ತಳಕ, ಮುಷ್ಟೂರು, ಮಲ್ಹಾರ್ ಸೇರಿದಂತೆ ನದಿ ಪಾತ್ರದ ಗ್ರಾಮಗಳ ಜಮೀನುಗಳಲ್ಲಿ ಅಪಾರ ಪ್ರಮಾಣದ ನೀರು ನಿಂತಿದೆ.

ಕೊಪ್ಪಳ ಜಿಲ್ಲೆಯ ಬಹುತೇಕ ಕಡೆ ಮಂಗಳವಾರ ದಿನಪೂರ್ತಿ ಮಳೆ ಕಾಡಿತು. ಜಿಲ್ಲಾ ಕೇಂದ್ರದಲ್ಲಿ ಬೆಳಿಗ್ಗೆಯಿಂದ ರಾತ್ರಿಯ ತನಕ ನಿರಂತರ ಮಳೆ ಸುರಿದಿದೆ. ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆ ಹಾಗೂ ಜನರ ದೈನಂದಿನ ಬದುಕಿಗೆ ಅಡ್ಡಿಯಾಯಿತು.

ಮಂಗಗಳಿಗೆ ಆಹಾರ

ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ನಾರದ ಸಂಗಮ ಹಾಗೂ ಕೊಂಗಳಿ ಗ್ರಾಮದ ಬಳಿಯ ಮಾಂಜ್ರಾ ನದಿಯ ಪಕ್ಕದಲ್ಲಿರುವ ಮರಗಳ ಮೇಲೆ ಮಂಗಗಳು ಸಿಲುಕಿಕೊಂಡಿದ್ದವು. ಅಗ್ನಿಶಾಮಕ ದಳದವರ ಸಹಾಯದಿಂದ ಮಂಗಗಳಿಗೆ ತಿನ್ನಲು ಆಹಾರ ಪೂರೈಸಲಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.



ಹುಲಸೂರ ಪಟ್ಟಣದ ಮೆಹಕರ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ನೀರಿನಿಂದ ಆವೃತವಾಗಿದೆ

ಭೀಮೆಗೆ 2.55 ಲಕ್ಷ ಕ್ಯೂಸೆಕ್ ನೀರು

ಇಂಡಿ (ವಿಜಯಪುರ ಜಿಲ್ಲೆ): ತಾಲ್ಲೂಕಿನಲ್ಲಿ ಹರಿಯುವ ಭೀಮಾ ನದಿಗೆ 2.55 ಲಕ್ಷ ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಸೀನಾ ನದಿ ಪಾತ್ರ, ಉಜನಿ ಜಲಾಶಯದಿಂದ ನೀರು ಹರಿದು ಬರುತ್ತಿದೆ. ನೀರು ಕರ್ನಾಟಕದ ನದಿಪಾತ್ರ ತಲುಪುತ್ತಿದ್ದು, ಎಲ್ಲಾ ಗ್ರಾಮಗಳು ಸುರಕ್ಷಿತವಾಗಿವೆ ಎಂದು ಕಂದಾಯ ಉಪವಿಭಾಗಾಧಿಕಾರಿ ಅನುರಾಧಾ ವಸ್ತ್ರದ ತಿಳಿಸಿದ್ದಾರೆ.

'ಎಲ್ಲಾ ಪಿಡಿಒಗಳಿಗೆ ಕರ್ತವ್ಯ ಸ್ಥಳದಲ್ಲಿ ಇರಲು ಸೂಚಿಸಲಾಗಿದೆ. ಪ್ರವಾಹದಂತಹ ಪರಿಸ್ಥಿತಿ ತಲೆದೋರಿದ್ದಲ್ಲಿ, ನಿಗಾ ವಹಿಸಲು ಸೂಚಿಸಲಾಗಿದೆ. ಜನರ ಸಮಸ್ಯೆಗಳಿಗೆ ತಕ್ಷಣವೇ ಸ್ಪಂದಿಸಲು ತಿಳಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಯಲ್ಲಮ್ಮ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ಮೇಲೆ ನೀರು ಹರಿಯುತ್ತಿದೆ. ಇದರ ಹಿನ್ನೆಲೆಯಲ್ಲಿ ಭಕ್ತರು ಸೇತುವೆಯಿಂದ ದೇಗುಲ ದರ್ಶನ ಪಡೆಯಲು ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆಆರ್ ಎಸ್ *	124.80	123.56	6,977	6,455
ಹಾರಂಗಿ	2,859	2,857.33	688	1,600
ಕಬಿನಿ	2,284	2,283.38	3,789	4,567
ಹೇಮಾವತಿ	2,922	2,919.40	4,238	6,335
ಲಿಂಗನಮಕ್ಕಿ	1,819	1,816.25	3,037	6,646
ಸೂಪಾ (ಮೀ)	564	559.75	2,331.29	4,652.92
ಮಾಣಿ	595	594.01	1,987	658
ತುಂಗಭದ್ರಾ	1,633	1,626.06	10,632	10,427
ಮಲಪ್ರಭಾ	2,079.5	2,079.50	1,494	1,494
ಘಟಪ್ರಭಾ	2,175	2,174.71	1,392	1,392
ಭದ್ರಾ *	186	185.3	2,905	4,121
ಆಲಮಟ್ಟಿ (ಮೀ)	519.6	519.53	46,735	56,885
ನಾರಾಯಣಪುರ (ಮೀ)	492.25	492.19	43,000	43,160

* ನೆಲಮಟ್ಟದಿಂದ

ಸ್ವಾಮೀಜಿ ಉಚ್ಚಾಟನೆ: ಶೀಘ್ರ ಸಭೆ–ಸಿ.ಸಿ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೂಡಲ ಸಂಗಮಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿಯವರನ್ನು ಪೀಠದಿಂದ ಉಚ್ಚಾಟಿಸಿರುವುದು ಸರಿಯಲ್ಲ. ಸ್ವಾಮೀಜಿಯವರನ್ನು ಸದ್ಯವೇ ಭೇಟಿ ಮಾಡಿ ಮುಂದಿನ ನಡೆಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಬಿಜೆಪಿ ಶಾಸಕ ಸಿ.ಸಿ.ಪಾಟೀಲ ಹೇಳಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಮಾಜದ ಮುಖಂಡರಾದ ಬಸನಗೌಡ ಪಾಟೀಲ ಯತ್ನಾಳ, ಶಿವಶಂಕರ್, ಅರವಿಂದ ಬೆಲ್ಲದ, ಸಿದ್ದು ಸವದಿ ಮತ್ತು ಎಂ.ಬಿ. ಪಾಟೀಲ ಜತೆ ಸೇರಿ ಸ್ವಾಮೀಜಿಯವರನ್ನು ಭೇಟಿ ಮಾಡುತ್ತೇನೆ. ಈ ವಿಷಯವನ್ನು ಸ್ವಾಮೀಜಿಯವರ ಗಮನಕ್ಕೆ ತಂದಿದ್ದೇನೆ' ಎಂದರು.

'ಬಸವ ಜಯಮೃತ್ಯುಂಜಯ ಸ್ವಾಮೀಜಿ ನಮ್ಮ ಸಮಾಜದ ಏಳಿಗೆಗಾಗಿ 750 ಕಿ.ಮೀ. ಪಾದಯಾತ್ರೆ ಮಾಡಿದ್ದರು. ಪೀಠಕ್ಕೆ ಏರಿದಾಗಿನಿಂದಲೂ ಸಮಾಜವನ್ನು ಸಂಘಟಿಸಲು ಹಗಲಿರುಳು ದುಡಿದಿದ್ದಾರೆ. ಹಣದ ಆಸೆಗೆ ಎಂದೂ ಬಲಿಯಾದವರಲ್ಲ. ಎಂಟು ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ದೊಡ್ಡ ಸಮಾವೇಶ ಮಾಡಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದರು. ಸ್ವಾಮೀಜಿ ಉಚ್ಚಾಟನೆ ಅನಿರೀಕ್ಷಿತ ಅಲ್ಲ. ಟ್ರಸ್ಟ್ ಮತ್ತು ವಿಜಯಾನಂದ ಕಾಶಪ್ಪ ಅವರ ಹಲವು ತಿಂಗಳ ನಡವಳಿಕೆಯಿಂದ ಇದು ಗೊತ್ತಾಗುತ್ತಿತ್ತು' ಎಂದರು.

'ನಾನಾಗಲಿ, ನೀವಾಗಲಿ (ಕಾಶಪ್ಪನವರ) ವೈರಿಗಳಲ್ಲ. ಸಮಾಜದ ಸಂಘಟನೆಗೆ ಹೋರಾಟ ಮಾಡಿದವರು. ನಿಮ್ಮ ಮತ್ತು ಸ್ವಾಮೀಜಿ ಮಧ್ಯೆ ಭಿನ್ನಾಭಿಪ್ರಾಯ ಇದ್ದರೆ, ನಾಲ್ಕು ಗೋಡೆಗಳ ಮಧ್ಯೆ ಬಗೆಹರಿಸಿಕೊಳ್ಳುವಂತೆ ಮನವಿ ಮಾಡಿದ್ದೆ' ಎಂದರು.

'ಮುಖಂಡರೊಂದಿಗೆ ಚರ್ಚಿಸಿ ನಿರ್ಧಾರ'

ಮೈಸೂರು: 'ಬಸವ ಜಯಮೃತ್ಯುಂಜಯ ಸ್ವಾಮಿಗಳು ಸಾಕಷ್ಟು ತ್ಯಾಗ ಮಾಡಿದ್ದಾರೆ. ಸದ್ಯದ ವಿವಾದದ ಕುರಿತು ಸಮುದಾಯದ ಮುಖಂಡರು ಒಟ್ಟಿಗೆ ಚರ್ಚಿಸಿ ನಿರ್ಣಯ ಕೈಗೊಳ್ಳುತ್ತೇವೆ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು. ಪಂಚಮಸಾಲಿ ಪೀಠಾಧ್ಯಕ್ಷ ಸ್ಥಾನದಿಂದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಉಚ್ಚಾಟನೆ ನಿರ್ಣಯ ಬಗ್ಗೆ ಮಂಗಳವಾರ ಇಲ್ಲಿ ಪ್ರತಿಕ್ರಿಯಿಸಿದ ಅವರು, 'ಇಂತಹದ್ದೊಂದು ನಿರ್ಣಯ ಆಗಬಾರದಿತ್ತು. ಈ ಕುರಿತು ಮಾತುಕತೆ ಮಾಡುತ್ತೇವೆ' ಎಂದರು.

ಚಿಟಿಕೆ ಸುದ್ದಿ

ಮಧುಮೇಹಿಗಳಿಗೆ ಸಿರಿಧಾನ್ಯ ಪ್ರಸಾದ



ಮಹದೇಶ್ವರ ಬೆಟ್ಟದಲ್ಲಿ ಭಕ್ತರಿಗೆ ಸಿರಿಧಾನ್ಯ ಪ್ರಸಾದ ವಿತರಿಸಲಾಯಿತು

ಹನೂರು (ಚಾಮರಾಜನಗರ ಜಿಲ್ಲೆ): 'ಮಧುಮೇಹಿ ಭಕ್ತರಿಗೆ ಸಿರಿಧಾನ್ಯಗಳ ಪ್ರಸಾದ ವಿತರಿಸುತ್ತಿದ್ದು, ಇದು ರಾಜ್ಯದಲ್ಲಿಯೇ ಮೊದಲ ಪ್ರಯತ್ನ' ಎಂದು ಮಲೆಮಹದೇಶ್ವರ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ. ರಘು ತಿಳಿಸಿದರು.

'ಮಹಾಲಯ ಅಮಾವಾಸ್ಯೆಯ ಜಾತ್ರಾನಿಮಿತ್ತ ಪ್ರಾಧಿಕಾರ ವಿಶೇಷವಾಗಿ ಮಧುಮೇಹಿಗಳಿಗೆ ನವಣೆ, ಸಾಮೆಗಳಿಂದ ಅವಲಕ್ಕಿ ಪಾಯಸ, ಬಿಸಿಬೇಳೆ ಬಾತ್ ಪ್ರಸಾದವನ್ನು ಹೊಸದಾಗಿ ಪರಿಚಯಿಸಿದೆ. ಅದಕ್ಕಾಗಿ ಪ್ರತ್ಯೇಕ ಕೌಂಟರ್ ತೆರೆಯಲಾಗಿದೆ. ಇದು ನಿರಂತರವಾಗಿ ನಡೆಯಲಿದೆ. ಭಕ್ತರ ಆರೋಗ್ಯ ಸುರಕ್ಷತೆ ಪ್ರಾಧಿಕಾರದ ಜವಾಬ್ದಾರಿ' ಎಂದು ತಿಳಿಸಿದರು.

'ವರ್ಗಾವಣೆಯಲ್ಲಿ ಭ್ರಷ್ಟಾಚಾರ ಇಲ್ಲ'

ಬೆಂಗಳೂರು: 'ವಲಯ ಅರಣ್ಯಾಧಿಕಾರಿಗಳ ವರ್ಗಾವಣೆಗೂ ಕೌನ್ಸೆಲಿಂಗ್ ನಿರ್ವಹಣಾ ವ್ಯವಸ್ಥೆ ಜಾರಿ ಮಾಡುವಂತೆ ಅರಣ್ಯ ಸಚಿವರಿಗೆ ಸಲ್ಲಿರುವ ಮನವಿ ಪತ್ರದಲ್ಲಿ 'ಭ್ರಷ್ಟಾಚಾರ' ಪದವನ್ನು ಬಳಕೆ ಮಾಡಿಲ್ಲ' ಎಂದು ಕರ್ನಾಟಕ ರಾಜ್ಯ ವಲಯ ಅರಣ್ಯ ಅಧಿಕಾರಿಗಳ ಸಂಘದ ಅಧ್ಯಕ್ಷ ಚಂದ್ರಶೇಖರ ರೆಡ್ಡಿ ತಿಳಿಸಿದ್ದಾರೆ.

'ವಲಯ ಅರಣ್ಯ ಅಧಿಕಾರಿಗಳಿಗೆ ಅನುಕೂಲ ಆಗುತ್ತದೆ ಎಂಬ ಕಾರಣಕ್ಕೆ ನಮ್ಮ ಸಂಘವು ಸೆ.10ರಂದು ಸಚಿವರಿಗೆ ಮನವಿ ಸಲ್ಲಿಸಿತ್ತು. ವರ್ಗಾವಣೆಯಲ್ಲಿ ರಾಜಕೀಯ ಒತ್ತಡ, ವೈಯಕ್ತಿಕ ಶಿಫಾರಸು, ಭ್ರಷ್ಟಾಚಾರ ಮತ್ತು ಅಕ್ರಮಗಳು ನಡೆಯುತ್ತಿವೆ ಎಂಬ ದಟ್ಟ ಭಾವನೆ ಅಧಿಕಾರಿಗಳು ಮತ್ತು ಸಾರ್ವಜನಿಕರಲ್ಲಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ ಎಂಬಂತೆ ಸುದ್ದಿ ಪ್ರಕಟವಾಗಿದೆ. ನಮ್ಮ ಮನವಿಯಲ್ಲಿ ಈ ರೀತಿಯ ಮಾತುಗಳು ಇರಲಿಲ್ಲ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೌಕರರಿಗೆ ನಗದುರಹಿತ ಚಿಕಿತ್ಸೆ


ಒಂದನೇ ಪುಟದಿಂದ...

ಪತಿ–ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಯಾರಾದರೂ ಒಬ್ಬರ ವೇತನದಿಂದ ಮಾತ್ರ ಒಂದು ಕಂತು ಪಾವತಿಸಬಹುದು. ಅದನ್ನು ಅವರೇ ನಿರ್ಧಾರ ತೆಗೆದುಕೊಂಡು ಮೇಲಧಿಕಾರಿಗಳಿಗೆ ಮಾಹಿತಿ ನೀಡಬೇಕು. ಎಚ್‌ಆರ್‌ಎಂಎಸ್ ವ್ಯಾಪ್ತಿಯಲ್ಲಿ ಇರದ ಇತರೆ ಸರ್ಕಾರಿ ಸಂಸ್ಥೆಗಳ ನೌಕರರ ಕಂತನ್ನು ಆಯಾ ಸಂಸ್ಥೆಗಳು ಕಡಿತ ಮಾಡಿ ನೇರವಾಗಿ ಟ್ರಸ್ಟ್ ಖಾತೆಗೆ ಜಮೆ ಮಾಡಬೇಕು. ಯೋಜನೆ ವ್ಯಾಪ್ತಿಗೆ ಒಳಪಡುವ ಎಲ್ಲ ನೌಕರರ ಕಂತನ್ನು ಅಕ್ಟೋಬರ್ ತಿಂಗಳ ವೇತನದಿಂದಲೇ ಕಡಿತ ಮಾಡಿ, ಖಜಾನೆ–2 ಮೂಲಕ ಟ್ರಸ್ಟ್ ಖಾತೆಗೆ ಜಮೆ ಮಾಡಬೇಕು ಎಂದು ಸೂಚಿಸಲಾಗಿದೆ.

ಹಿಂದೂ ಎಂದೇ ಬರೆಸಿ –ಸ್ವಾಮೀಜಿ

ಚಿತ್ರದುರ್ಗ: 'ಪ್ರತ್ಯೇಕ ಮಾನ್ಯತೆ ಸಿಗುವವರೆಗೆ ಸಾಮಾಜಿಕ, ಶೈಕ್ಷಣಿಯ ಸಮೀಕ್ಷೆಯಲ್ಲಿ ನಾವು ನಮ್ಮ ಪಿತೃ (ತಂದೆ) ಧರ್ಮವಾದ ಹಿಂದೂ ಎಂದೇ ಬರೆಸಬೇಕು' ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಮಂಗಳವಾರ ಹೇಳಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಈಗ ನಾವು ಹಿಂದೂ ಧರ್ಮದಲ್ಲಿದ್ದೇವೆ. ಪ್ರತ್ಯೇಕ ಮಾನ್ಯತೆ ದೊರೆಯುವವರೆಗೂ ಹಿಂದೂ ಧರ್ಮವೇ ನಮ್ಮ ಮನೆಯಾಗಿದೆ. ವೀರಶೈವ ಮಹಾಸಭಾ ಕೂಡಾ ಹಿಂದೂ ಎಂದು ಬರೆಸಲು ಕರೆ ನೀಡಿದೆ' ಎಂದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,202
ಇಂದಿನ ಅಂತ್ಯ: 25,169
ದಿನದ ಕನಿಷ್ಠ: 25,084
32

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹580
12 ಕ್ಕೆ ₹80
ಮೈಸೂರು: 100 ಕ್ಕೆ ₹585

ರಾಮನಗರ ರೇಷ್ಮೆಗೂಡು
ಮಿಶ್ರತಳಿ (ಕಿ.ಗ್ರಾ) ₹360-665
ದ್ವಿತಳಿ (ಕಿ.ಗ್ರಾ) ₹400-836

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿ)
ಆರ್‌ಎಸ್‌ಎಸ್-4 ₹183
ಆರ್‌ಎಸ್‌ಎಸ್-5 ₹178
ಗುಡ್ ಲಾಟ್ ₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1325 (1330)
ಸೋಯಾ (ರಿಫೈನ್ಡ್) ₹1270 (1280)
ಸೂರ್ಯಕಾಂತಿ (ರಿಫೈನ್ಡ್) ₹1410 (1420)
ವನಸ್ಪತಿ ₹1265 (1280)

ಮುದ್ರೆ- ಮನೆ ಕಾಫಿ (50 ಕೆಜಿಗೆ)
ಎಪಿ ₹29,000
ಎಸಿ ₹15,260
ಆರ್‌ಪಿ ₹19,000
ಆರ್‌ಸಿ ₹10,850

ಮುಂಬೈ ಧಾರಣೆ (ಶೇಂಗಾ) 23-09-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1335 (1340)
ಒಂದು ವಾರದ ಡೆಲಿವರಿ	1330 (1335)
ಪಾಮ್ ವಾರದ ಡೆಲಿವರಿ	1263 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1335 (1350)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,13,900 (1,11,500)
ಬೆಳ್ಳಿ ಕೆ.ಜಿಗೆ	1,35,250 (1,32,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಾಹನ ಮಾರಾಟ ಜೋರು

ಮಾರುಕಟ್ಟೆಯಲ್ಲಿ ಕಂಡುಬಂದ ಜಿಎಸ್‌ಟಿ ದರ ಪರಿಷ್ಕರಣೆ ಪರಿಣಾಮ



ನವದೆಹಲಿ (ಪಿಟಿಐ): ನವರಾತ್ರಿಯ ಮೊದಲ ದಿನದಂದು ಜಿಎಸ್‌ಟಿ ದರ ಪರಿಷ್ಕರಣೆ ಜಾರಿಗೆ ಬಂದಿರುವುದು ವಾಹನ ಮಾರುಕಟ್ಟೆಯಲ್ಲಿ ಹೊಸ ಉತ್ಸಾಹ ಮೂಡಿಸಿದೆ.

ನವರಾತ್ರಿಯ ಮೊದಲ ದಿನ ತನ್ನ ಡೀಲರ್‌ಗಳು ಒಟ್ಟು 10 ಸಾವಿರ ಪ್ರಯಾಣಿಕ ವಾಹನಗಳನ್ನು ಮಾರಾಟ ಮಾಡಿದ್ದಾರೆ ಎಂದು ಟಾಟಾ ಮೋಟರ್ಸ್ ಹೇಳಿದೆ. ಅಲ್ಲದೆ, ದೇಶದಾದ್ಯಂತ ಪ್ರಯಾಣಿಕ ವಾಹನ ಡೀಲರ್‌ಗಳ ಬಳಿ ಒಟ್ಟು 25 ಸಾವಿರ ಮಂದಿ ವಾಹನಗಳ ಬಗ್ಗೆ ವಿಚಾರಣೆ ನಡೆಸಿದ್ದಾರೆ ಎಂದು ತಿಳಿಸಿದೆ.

ಮಾರುತಿ ಸುಜುಕಿ ಕಂಪನಿಯು ಸರಿಸುಮಾರು 30 ಸಾವಿರ ವಾಹನಗಳನ್ನು ಮಾರಾಟ ಮಾಡಿರುವುದಾಗಿ ಹೇಳಿದೆ. ಹುಂಡೈ ಕಂಪನಿಯು ತನ್ನ ಡೀಲರ್‌ಗಳ ಬಳಿ 11 ಸಾವಿರ ವಾಹನಗಳಿಗೆ ಬಿಲ್ ಸಿದ್ಧಪಡಿಸಿದ್ದಾಗಿ ಎಂದು ತಿಳಿಸಿದೆ. ಹುಂಡೈ ಪಾಲಿಗೆ ಇದು ಕಳೆದ ಐದು ವರ್ಷಗಳಲ್ಲಿ ಒಂದು ದಿನದಲ್ಲಿ ಆಗಿರುವ ದಾಖಲೆಯ ಮಾರಾಟ.

'ಬಹಳಷ್ಟು ಗ್ರಾಹಕರು ವಾಹನಗಳ ಬಗ್ಗೆ ವಿಚಾರಿಸುತ್ತಿದ್ದಾರೆ. ಬಹಳಷ್ಟು ಮಂದಿ ಮಳಿಗೆಗಳಿಗೆ ಭೇಟಿ ನೀಡಿದ್ದಾರೆ. ಅವರಿಗೆ ವಾಹನ ಖರೀದಿಸಬೇಕಿದೆ' ಎಂದು ಆಟೊಮೊಬೈಲ್ ಡೀಲರ್‌ಗಳ ಸಂಘಟನೆಗಳ ಒಕ್ಕೂಟದ (ಎಫ್‌ಎಡಿಎ) ಅಧ್ಯಕ್ಷ ಸಿ.ಎಸ್. ವಿಘ್ನೇಶ್ವರ್ ತಿಳಿಸಿದ್ದಾರೆ.

'ಹಬ್ಬಗಳ ಋತುವಿನ ಆರಂಭದ ದಿನವು ಬಹಳ ಚೆನ್ನಾಗಿತ್ತು. ಜಿಎಸ್‌ಟಿ ದರ ಪರಿಷ್ಕರಣೆ ಹಾಗೂ ಹಬ್ಬದ ನಡೆದಲ್ಲಿ ನೀಡಿರುವ ವಿಶೇಷ ರಿಯಾಯಿತಿ, ಕೊಡುಗೆಗಳು ಗ್ರಾಹಕರಲ್ಲಿ ಅಸಾಮಾನ್ಯ ಉತ್ಸಾಹ ಮೂಡಿಸಿವೆ' ಎಂದು ಭಾರತೀಯ ಆಟೊಮೊಬೈಲ್ ತಯಾರಕರ ಒಕ್ಕೂಟದ (ಎಸ್‌ಐಎಎಂ) ಅಧ್ಯಕ್ಷ ಶೈಲೇಶ್ ಚಂದ್ರ ಹೇಳಿದ್ದಾರೆ.

'ಆರಂಭಿಕ ಹಂತದ ದ್ವಿಚಕ್ರ ವಾಹನಗಳು ಹಾಗೂ ಆರಂಭಿಕ ಹಂತದ ಸಣ್ಣ ಕಾರುಗಳ ಬೆಲೆ ವಿಚಾರದಲ್ಲಿ ಕೆಲವು ಸಮಸ್ಯೆಗಳು ಇದ್ದವು. ಆದರೆ ಜಿಎಸ್‌ಟಿ ದರ ಪರಿಷ್ಕರಣೆಯ ಪರಿಣಾಮವಾಗಿ, ಆರಂಭಿಕ ಹಂತದ ವಾಹನಗಳ ಮಾರಾಟ ಚುರುಕಾಗುವ ನಿರೀಕ್ಷೆ ಇದೆ' ಎಂದು ವಿಶ್ಲೇಷಕರು ಹೇಳಿದ್ದಾರೆ.

ವಾಹನ ಕಂಪನಿಗಳ ಷೇರು ಜಿಗಿತ: ಮಂಗಳವಾರದ ಷೇರುಪೇಟೆ ವಹಿವಾಟಿನಲ್ಲಿ ವಾಹನ ತಯಾರಿಕಾ ಕಂಪನಿಗಳ ಷೇರು ಮೌಲ್ಯದಲ್ಲಿ ಜಿಗಿತ ಕಂಡಿದೆ. ನವರಾತ್ರಿಯ ಮೊದಲ ದಿನ ವಾಹನಗಳ ಮಾರಾಟವು ಜೋರಾಗಿ ನಡೆದಿರುವುದು ಈ ಜಿಗಿತಕ್ಕೆ ಒಂದು ಕಾರಣವಾಗಿ ಒದಗಿಬಂತು.

ಷೇರುಪೇಟೆಯ ಪ್ರಮುಖ ಸೂಚ್ಯಂಕಗಳು ಮಂಗಳವಾರ ಕುಸಿತ ದಾಖಲಿಸಿದ್ದರೂ, ಅಶೋಕ್ ಲೇಲ್ಯಾಂಡ್ (ಶೇ 3.41ರಷ್ಟು ಏರಿಕೆ), ಮಾರುತಿ ಸುಜುಕಿ (ಶೇ 1.83), ಮಹೀಂದ್ರ ಆ್ಯಂಡ್ ಮಹೀಂದ್ರ (ಶೇ 0.89) ಕಂಪನಿಯ ಷೇರು ಬೆಲೆ ಏರಿಕೆ ದಾಖಲಿಸಿತು. ಟಾಟಾ ಮೋಟರ್ಸ್ (ಶೇ 0.78ರಷ್ಟು), ಹುಂಡೈ ಮೋಟರ್ (ಶೇ 0.08ರಷ್ಟು) ಷೇರು ಬೆಲೆ ಕೂಡ ಜಿಗಿತ ಕಂಡಿತು.

ಅಡಿಕೆ ಧಾರಣೆ

ಸಾಗರ		ಶಿರಸಿ		ಚಿತ್ರದುರ್ಗ	
ಬಿಳಿಗೋಟು	29599-31000	ಬೆಟ್ಟೆ	34199-41699	ಅಪಿ	55839-56269
ಚಾಲಿ	38399-40699	ಬಿಳಿಗೋಟು	20919-37099	ಬೆಟ್ಟೆ	34719-35179
ಕೋಕ	26989-26989	ಚಾಲಿ	37099-44699	ಕೆಂಪುಗೋಟು	24700-25100
ಕೆಂಪುಗೋಟು	32199-36981	ಕೆಂಪುಗೋಟು	27118-33299	ರಾಶಿ	55329-55789
ರಾಶಿ	52991-60719	ರಾಶಿ	38509-52100	**ಬೆಳ್ತಂಗಡಿ**	
ಸಿಪ್ಪೆಗೋಟು	20099-21899	**ಯಲ್ಲಾಪುರ**		ಕೋಕ	14500-27500
ಸಿದ್ದಾಪುರ		ಬಿಳಿಗೋಟು	24710-35173	ಹೊಸತು	28000-49000
ಬಿಳಿಗೋಟು	25699-33209	ಚಾಲಿ	36299-44399	**ಶಿವಮೊಗ್ಗ**	
ಚಾಲಿ	36899-43799	ಕೋಕ	10786-18099	ಬೆಟ್ಟೆ	54040-66219
ಕೋಕ	20319-28499	ಕೆಂಪುಗೋಟು	24109-29716	ಗೊರಬಲು	19000-38869
ಕೆಂಪುಗೋಟು	26199-31300	ರಾಶಿ	41139-57000	ರಾಶಿ	48069-62229
ರಾಶಿ	43699-51699	ತಟ್ಟಿಬೆಟ್ಟೆ	30118-39600	ಸರಕು	54159-94400
ತಟ್ಟಿಬೆಟ್ಟೆ	34599-34609				

ಇ–ವೇದಿಕೆಗಳ ಬೆಲೆ ನಿಗದಿ ಮೇಲೆ ನಿಗಾ

'ಜಿಎಸ್‌ಟಿ ದರ ಪರಿಷ್ಕರಣೆಯ ಪ್ರಯೋಜನ ವರ್ಗಾವಣೆ'

ನವದೆಹಲಿ (ಪಿಟಿಐ): ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳ (ಎಫ್‌ಎಂಸಿಜಿ) ಮೇಲಿನ ಜಿಎಸ್‌ಟಿ ಪರಿಷ್ಕರಣೆಯ ಪ್ರಯೋಜನವನ್ನು ಇ-ವಾಣಿಜ್ಯ ವೇದಿಕೆಗಳು ಗ್ರಾಹಕರಿಗೆ ವರ್ಗಾವಣೆ ಮಾಡಿವೆಯೇ ಎಂಬ ಬಗ್ಗೆ ಕೇಂದ್ರ ಸರ್ಕಾರ ಗಮನ ಇರಿಸಿದೆ ಎಂದು ಮೂಲಗಳು ಮಂಗಳವಾರ ತಿಳಿಸಿವೆ.

ಕೆಲವು ಇ-ವಾಣಿಜ್ಯ ವೇದಿಕೆಗಳು ತಮ್ಮ ಮೂಲಕ ಮಾರಾಟ ಆಗುತ್ತಿರುವ ನಿತ್ಯ ಬಳಕೆಯ ಉತ್ಪನ್ನಗಳ ಮೇಲಿನ ಬೆಲೆಯನ್ನು ಜಿಎಸ್‌ಟಿ ಇಳಿಕೆಗೆ ಅನುಗುಣವಾಗಿ ಪರಿಷ್ಕರಿಸಿಲ್ಲ ಎಂಬ ದೂರುಗಳ ಕಾರಣದಿಂದ, ಬೆಲೆಯಲ್ಲಿನ ಬದಲಾವಣೆಗಳ ಬಗ್ಗೆ ಕಣ್ಣಿಡಲಾಗಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ಮಾಹಿತಿ ನೀಡಿವೆ.

'ನಾವು ಬೆಲೆಯಲ್ಲಿನ ಬದಲಾವಣೆಗಳನ್ನು ಗಮನಿಸುತ್ತಿದ್ದೇವೆ. ಸೆಪ್ಟೆಂಬರ್ 30ಕ್ಕೆ ಮೊದಲು ಪ್ರಥಮ ವರದಿಯು ಸಿಗಲಿದೆ' ಎಂದು ಮೂಲವೊಂದು ಹೇಳಿದೆ. ಇಂತಹ ದೂರುಗಳಿಗೆ ಹಠಾತ್ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಮೂಲವು ಸ್ಪಷ್ಟಪಡಿಸಿದೆ.

ಲಾಭಕೋರತನಕ್ಕೆ ಯಾವುದೇ ಕಂಪನಿ, ಮಾರಾಟಗಾರ ಮುಂದಾದರೆ ಅದನ್ನು ತಡೆಯುವ ಪ್ರತ್ಯೇಕ ವ್ಯವಸ್ಥೆಯು ರೂಪುಗೊಂಡಿಲ್ಲವಾದರೂ, ಬೆಲೆ ನಿಗದಿಯ ಮೇಲೆ ಕೇಂದ್ರವು ಕಣ್ಣಿರಿಸಿದೆ. ಜಿಎಸ್‌ಟಿ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾವಣೆ ಮಾಡುತ್ತಿರುವುದಾಗಿ ಹಲವಾರು ಕಂಪನಿಗಳು ಹೇಳಿವೆ.

ವ್ಯಾಪಕವಾಗಿ ಬಳಕೆಯಾಗುವ 54 ಉತ್ಪನ್ನಗಳ ಬೆಲೆಯಲ್ಲಿ ಆಗುವ ಬದಲಾವಣೆ ಬಗ್ಗೆ ಪ್ರತಿ ತಿಂಗಳೂ ವರದಿ ನೀಡಬೇಕು ಎಂದು ಕೇಂದ್ರ ಜಿಎಸ್‌ಟಿ ಕ್ಷೇತ್ರ ಅಧಿಕಾರಿಗಳಿಗೆ ಕೇಂದ್ರ ಹಣಕಾಸು ಸಚಿವಾಲಯವು ಸೆಪ್ಟೆಂಬರ್ 9ರಂದು ಸೂಚಿಸಿದೆ.

ಈ ಸೂಚನೆಗೆ ಸಂಬಂಧಿಸಿದ ಮೊದಲ ವರದಿಯನ್ನು ಪರೋಕ್ಷ ತೆರಿಗೆಗಳು ಹಾಗೂ ಸುಂಕಗಳ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಸೆಪ್ಟೆಂಬರ್ 30ಕ್ಕೆ ಮೊದಲು ಸಲ್ಲಿಸಬೇಕಿದೆ. ವರದಿಯು ಬ್ರ್ಯಾಂಡ್‌ವಾರು ಸರಕುಗಳ ತುಲನಾತ್ಮಕ ಎಂಆರ್‌ಪಿ ವಿವರವನ್ನು ಒಳಗೊಳ್ಳಬೇಕಿದೆ.

ಬೆಣ್ಣೆ, ಶಾಂಪೂ, ಟೂತ್‌ಪೇಸ್ಟ್, ಟೊಮಾಟೊ ಕೆಚಪ್, ಜಾಮ್, ಐಸ್ ಕ್ರೀಂ, ಹವಾನಿಯಂತ್ರಕಗಳು, ಟಿ.ವಿ., ರೋಗಪತ್ತೆ ಉಪಕರಣಗಳು, ಸಿಮೆಂಟ್ ಸೇರಿದಂತೆ ಒಟ್ಟು 54 ವಸ್ತುಗಳ ಬಗ್ಗೆ ವರದಿಯು ವಿವರ ಒದಗಿಸಬೇಕಿದೆ.

ಜಿಎಸ್‌ಟಿ ಇಳಿಕೆ ಲಾಭ ಗ್ರಾಹಕರಿಗೆ: ನೆಸ್ಲೆ

ಬೆಂಗಳೂರು: ಜಿಎಸ್‌ಟಿ ದರ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾವಣೆ ಮಾಡಲಾಗುತ್ತಿದೆ ಎಂದು ಎಫ್‌ಎಂಸಿಜಿ ವಲಯದ ಪ್ರಮುಖ ಕಂಪನಿಗಳಲ್ಲಿ ಒಂದಾಗಿರುವ ನೆಸ್ಲೆ ಇಂಡಿಯಾ ಮಂಗಳವಾರ ತಿಳಿಸಿದೆ.

ತೆರಿಗೆ ದರ ಪರಿಷ್ಕರಣೆಯು ಸೆಪ್ಟೆಂಬರ್ 22ರಿಂದ ಜಾರಿಗೆ ಬಂದಿದೆ. 'ಜಿಎಸ್‌ಟಿ ಇಳಿಕೆಯು ಧನಾತ್ಮಕ ಕ್ರಮ. ಇದು ಒಟ್ಟಾರೆ ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ಕೊಡುಗೆ ಸಲ್ಲಿಸಲಿದೆ' ಎಂದು ನೆಸ್ಲೆ ಇಂಡಿಯಾದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಮನೀಷ್ ತಿವಾರಿ ಹೇಳಿದ್ದಾರೆ.



ಬೆಲೆಯ ಪರಿಷ್ಕರಣೆಯಲ್ಲಿ ಪಾರದರ್ಶಕತೆಯನ್ನು ಖಾತರಿಪಡಿಸುವ ಉದ್ದೇಶದಿಂದ ನೆಸ್ಲೆ ಇಂಡಿಯಾ ಕಂಪನಿಯು ದರ ಇಳಿಕೆಯ ಬಗ್ಗೆ ವಿವಿಧ ಮಾಧ್ಯಮಗಳ ಮೂಲಕ ಗ್ರಾಹಕರಿಗೆ ತಿಳಿಸಿದೆ ಎಂದು ಪ್ರಕಟಣೆ ಹೇಳಿದೆ.

ಚಿನ್ನದ ಬೆಲೆ ₹2,700 ಏರಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹2,700ರಷ್ಟು ಏರಿಕೆ ಆಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹1,18,900ಕ್ಕೆ ತಲುಪಿದೆ.

ಅಮೆರಿಕವು ಎಚ್-1ಬಿ ವೀಸಾ ಶುಲ್ಕವನ್ನು ಹೆಚ್ಚಿಸಿದ ನಂತರದಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಮತ್ತಷ್ಟು ಕುಸಿದಿದೆ. ಈ ನಡುವೆ ಸುರಕ್ಷಿತ ಹೂಡಿಕೆಯಾದ ಚಿನ್ನಕ್ಕೆ ಬೇಡಿಕೆ ಹೆಚ್ಚಾಗಿದೆ.

ಶೇಕಡ 99.9ರಷ್ಟು ಪರಿಶುದ್ಧತೆಯ ಚಿನ್ನದ ಬೆಲೆಯು ಸೋಮವಾರದ ವಹಿವಾಟಿನ ಅಂತ್ಯದ ವೇಳೆಗೆ 10 ಗ್ರಾಂಗೆ ₹1,16,200 ಆಗಿತ್ತು.

ಶೇ 99.5ರಷ್ಟು ಪರಿಶುದ್ಧತೆಯು ಚಿನ್ನದ ಬೆಲೆಯು ₹2,650ರಷ್ಟು ಹೆಚ್ಚಳವಾಗಿ, ₹1,18,300ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಒಕ್ಕೂಟ ತಿಳಿಸಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ತೀವ್ರವಾಗಿ ಕುಸಿದಿದ್ದು ಕೂಡ ಚಿನ್ನದ ಬೆಲೆ ಏರಿಕೆಗೆ ಕಾರಣವಾಯಿತು ಎಂದು ವರ್ತಕರು ತಿಳಿಸಿದ್ದಾರೆ. ಮಂಗಳವಾರ ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹3,220ರಷ್ಟು ಹೆಚ್ಚಳವಾಗಿ ₹1,39,600ಕ್ಕೆ ತಲುಪಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಕೇಶವ ಪ್ರಭು, ಶಿವಮೊಗ್ಗ

- **ಪ್ರಶ್ನೆ: ನನ್ನ ವಯಸ್ಸು 81 ವರ್ಷ. ನಾನು 1998ರಲ್ಲಿ ಶಿವಮೊಗ್ಗದಲ್ಲಿ ₹50,000ಕ್ಕೆ ಕೊಂಡ ನಿವೇಶನ ಈಗ ₹17 ಲಕ್ಷಕ್ಕೆ ಮಾರಾಟ ಮಾಡುತ್ತಿದ್ದೇನೆ. ಆದಕ್ಕೆ ಎಷ್ಟು ಬಂಡವಾಳ ತೆರಿಗೆ ಬರಬಹುದು?**

ಉತ್ತರ: ನೀವು ಖರೀದಿಸಿದ ನಿವೇಶನವನ್ನು ಈಗ ₹17 ಲಕ್ಷಕ್ಕೆ ಮಾರಾಟ ಮಾಡುವ ಹಂತದಲ್ಲಿದ್ದೀರಿ. ನಿಮ್ಮ ಮೂಲ ಹೂಡಿಕೆ ಕಳೆದು ಇದರಿಂದ ₹16.50 ಲಕ್ಷ ಲಾಭ ಸಿಗುತ್ತದೆ ಎಂಬುದು ಮೇಲ್ನೋಟಕ್ಕೆ ಕಾಣುವ ಅಂಶ. ಆದರೆ ತೆರಿಗೆ ನಿರ್ಣಯಕ್ಕೆ ಪ್ರಸ್ತುತ ಎರಡು ರೀತಿಯ ವಿಧಾನಗಳಿದ್ದು, ನಿಮಗೆ ಉತ್ತಮವಾದುದನ್ನು ಆಯ್ಕೆ ಮಾಡುವ ಅವಕಾಶ ಇದೆ. 2024ರ ಬಜೆಟ್ ಪ್ರಕಾರ, ನೀವು 2024ರ ಜುಲೈ 23ಕ್ಕೆ ಮೊದಲು ಆಸ್ತಿಯನ್ನು ಖರೀದಿಸಿರುವುದರಿಂದ ಹಳೆಯ ಹಾಗೂ ಹೊಸ ವಿಧಾನದಲ್ಲಿ ತೆರಿಗೆ ಲೆಕ್ಕ ಹಾಕುವ ಅವಕಾಶವಿದೆ.

ಹಳೆಯ ವಿಧಾನದಲ್ಲಿ ಹಣದುಬ್ಬರ ಸೂಚ್ಯಂಕ ಬಳಸಲಾಗುತ್ತದೆ. 2001-02ನೇ ಹಣಕಾಸು ವರ್ಷವನ್ನು ಆಧಾರ ವರ್ಷವಾಗಿ ಪರಿಗಣಿಸಲಾಗುತ್ತದೆ. ಅಂದರೆ, 2001ಕ್ಕೆ ಮೊದಲು ಖರೀದಿಸಿದ ಆಸ್ತಿಗಳಿಗೆ 2001ರ ಏಪ್ರಿಲ್ 1ರ ಮಾರುಕಟ್ಟೆ ಮೌಲ್ಯವನ್ನು ತೆಗೆದುಕೊಳ್ಳಬಹುದು. ನೀವು 1998ರಲ್ಲಿ ಖರೀದಿ ಮಾಡಿರುವುದರಿಂದ ₹50,000 ಬದಲು ಆ ದಿನ ಮುದ್ರಾಂಕ ಮೌಲ್ಯ ಎಷ್ಟು ಇದ್ದಿತ್ತೋ ಅದನ್ನು ಮೂಲ ಖರೀದಿ ಬೆಲೆ ಎಂದು ಪರಿಗಣಿಸಲು ಅವಕಾಶವಿದೆ. ಅದನ್ನು ನಂತರ 2025-26ರ ಹಣದುಬ್ಬರ ಸೂಚ್ಯಂಕದ ಮೂಲಕ ಹೆಚ್ಚಿಸಿ ಸರಿಹೊಂದಿಸಲಾಗುತ್ತದೆ. ಉದಾಹರಣೆಗೆ, 2001ರಲ್ಲಿ ಆಸ್ತಿ ಮೌಲ್ಯ ₹1 ಲಕ್ಷ ಇತ್ತು ಎಂದು ಅಂದಾಜಿಸಿದರೆ, ಅದನ್ನು ಸೂಚ್ಯಂಕದ ಪ್ರಕಾರ ಸರಿಹೊಂದಿಸಿದಾಗ (ಹಣದುಬ್ಬರ ಸೂಚ್ಯಂಕ: 376) ಸುಮಾರು ₹3.76 ಲಕ್ಷ ಆಗಬಹುದು. ಮಾರಾಟ ಬೆಲೆ ₹17 ಲಕ್ಷದಿಂದ ಸರಿಹೊಂದಿಸಿದ ಖರೀದಿ ವೆಚ್ಚವನ್ನು ಕಡಿತ ಮಾಡಿದರೆ ಬರುವ ದೀರ್ಘಾವಧಿ ಲಾಭ ಸುಮಾರು ₹13.24 ಲಕ್ಷ. ಇದರ ಮೇಲೆ ಶೇಕಡ 20ರಷ್ಟು ತೆರಿಗೆ ಬರಬಹುದು.

ಹೊಸ ವಿಧಾನದಲ್ಲಿ, ಯಾವುದೇ ಸೂಚ್ಯಂಕವನ್ನು ಪರಿಗಣಿಸುವುದಿಲ್ಲ. ₹17 ಲಕ್ಷ ಮಾರಾಟ ಬೆಲೆಯಿಂದ ₹50,000 ಮೂಲ ಬೆಲೆ ಕಡಿತ ಮಾಡಿ ಲಾಭ ₹16.5 ಲಕ್ಷ ಎಂದು ನಿರ್ಣಯ ಮಾಡಲಾಗುತ್ತದೆ. ಇದರ ಮೇಲೆ ಶೇ 12.5ರಷ್ಟು ತೆರಿಗೆ ಲೆಕ್ಕ ಹಾಕಿದರೆ ₹2.06 ಲಕ್ಷ ಪಾವತಿಸಬೇಕಾಗುತ್ತದೆ. ಹೀಗಾಗಿ ನಿಮಗಿರುವ ಈ ಎರಡು ಆಯ್ಕೆಗಳಲ್ಲಿ, ಹೊಸ ವಿಧಾನವನ್ನು ಬಳಸುವುದೇ ಹೆಚ್ಚು ಲಾಭದಾಯಕ ಆಗಬಹುದು. ಆದರೆ 2001ರಲ್ಲಿ ನಿಮ್ಮ ಜಾಗದ ಮುದ್ರಾಂಕ ಮೌಲ್ಯವನ್ನು ಅಧಿಕೃತವಾಗಿ ಅಂದಾಜಿಸಿ ಹಳೆಯ ವಿಧಾನದಲ್ಲಿ ಲೆಕ್ಕ ಹಾಕಿದಾಗ ಹೆಚ್ಚು ಲಾಭವಾಗುತ್ತದೆಯೇ ಎಂಬುದನ್ನು ಹೋಲಿಸಿ ನೋಡುವುದು ಒಳ್ಳೆಯದು. ಇದಕ್ಕೆ ನುರಿತ ತೆರಿಗೆ ಸಲಹೆಗಾರರ ಮಾರ್ಗದರ್ಶನ ಪಡೆಯಿರಿ.

ಶಿವರಾಜ್ ಮರವಂಜಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ

- **ಪ್ರಶ್ನೆ: ನನಗೆ 29 ವರ್ಷ ವಯಸ್ಸು. ತಿಂಗಳಿಗೆ ₹40,000 ವೇತನ ಬರುತ್ತದೆ. ನನ್ನ ಭವಿಷ್ಯಕ್ಕಾಗಿ ಯಾವ ರೀತಿಯಲ್ಲಿ ಉಳಿತಾಯ ಮಾಡಬೇಕು ಎಂಬುದರ ಬಗ್ಗೆ ಮಾಹಿತಿ ಕೊಡಿ.**

ಉತ್ತರ: ನಿಮ್ಮ ಹೂಡಿಕೆಯ ಯೋಜನೆಯನ್ನು ಬದುಕಿನ ಆದ್ಯ ಹಂತದಲ್ಲೇ ರೂಪಿಸುತ್ತಿರುವುದು ಉತ್ತಮ ವಿಚಾರ. ನೀವು 29ನೇ ವಯಸ್ಸಿನಲ್ಲಿರುವುದರಿಂದ ನಿವೃತ್ತಿಯ ತನಕ ನಿಮಗೆ ಸುದೀರ್ಘ ಮೂರು ದಶಕಗಳ ಕಾಲ ಹೂಡಿಕೆ ಮಾಡಲು ಅವಕಾಶ ಇದೆ. ಇದು ಸಂಪತ್ತು ಸೃಷ್ಟಿಸುವ ವಿಚಾರದಲ್ಲಿ ಮಹತ್ವದ ಹಂತ. ತಿಂಗಳಿಗೆ ಸುಮಾರು ₹40,000 ಸಂಬಳ ಬಂದಾಗ, ಆ ಹಣದಲ್ಲಿ ನಿಮ್ಮ ಖರ್ಚು-ವೆಚ್ಚ ಕಳೆದು ಉಳಿಯುವ ಮೊತ್ತವನ್ನು ನಿಮ್ಮ ಹೂಡಿಕೆಗೆ ಬಳಸಿಕೊಳ್ಳಿ.

ಮೊದಲ ಹೆಜ್ಜೆಯಾಗಿ ತುರ್ತು ಅಗತ್ಯಕ್ಕೆ ಒಂದಿಷ್ಟು ಹಣ ಸಂಗ್ರಹಿಸಿ. ಅನಿರೀಕ್ಷಿತ ಸಂದರ್ಭಗಳಾದ ಯಾವುದೇ ಆರೋಗ್ಯ ಸಮಸ್ಯೆ, ಉದ್ಯೋಗದ ಅಸ್ಥಿರತೆ, ಕುಟುಂಬದ ಅವಶ್ಯಕತೆಗಳು – ಇವುಗಳನ್ನು ಎದುರಿಸಲು ಕನಿಷ್ಠ ಆರು ತಿಂಗಳ ವೆಚ್ಚಕ್ಕೆ ಸಮನಾದಷ್ಟು ಮೊತ್ತವನ್ನು ಸುಲಭವಾಗಿ ಹಿಂಪಡೆಯಬಹುದಾದ ಖಾತೆಯಲ್ಲಿ ಇಟ್ಟುಕೊಳ್ಳಿ. ಅನಿರೀಕ್ಷಿತ ಸಂಕಷ್ಟಗಳು ದೊಡ್ಡ ಹೊರೆ ಆಗುವುದನ್ನು ಇಂತಹ ಆರ್ಥಿಕ ಶಿಸ್ತಿನಿಂದ ತಡೆಯಬಹುದು. ಇದಾದ ಬಳಿಕ ಆರೋಗ್ಯ ವಿಮೆ ಮತ್ತು ಜೀವ ವಿಮೆಗಳನ್ನು ಪರಿಗಣಿಸಿ. ಇಂದು ಆರೋಗ್ಯ ವೆಚ್ಚಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವಿಮೆ ಇಲ್ಲದಿರುವುದು ಅಪಾಯಕರ. ಇದಲ್ಲದೆ ಅವಧಿ ವಿಮೆ ಆದ್ಯ ಹಂತದಲ್ಲಿ ಪಡೆಯುವುದರಿಂದ, ಪ್ರೀಮಿಯಂ ಮೊತ್ತವನ್ನು ತಗ್ಗಿಸುತ್ತದೆ. ಕೆಲವು ಸಾಂಪ್ರದಾಯಿಕ ವಿಮೆಗಳನ್ನು ಹೊಂದುವುದು ಕೂಡ ಅಗತ್ಯ. ಇವು ಲಾಭದ ದೃಷ್ಟಿಯಿಂದ ಮಾಡುವ ಹೂಡಿಕೆಗಳಲ್ಲ. ಬದಲಾಗಿ ಕುಟುಂಬದ ಮಂದಿಗೆ ಅನಿವಾರ್ಯ.

ಹೂಡಿಕೆಗಳನ್ನು ದೀರ್ಘಾವಧಿಗೆ ಯೋಚಿಸಿ ಮಾಡುವುದೇ ಒಳಿತು. ಪಿಪಿಎಫ್ ಮತ್ತು ಎನ್‌ಪಿಎಸ್ ನಿವೃತ್ತಿಯ ನಂತರ ಆರ್ಥಿಕ ಭದ್ರತೆ ಒದಗಿಸುತ್ತವೆ. ಜೊತೆಗೆ ಮ್ಯೂಚುವಲ್ ಫಂಡ್‌ಗಳಲ್ಲಿ ಪ್ರತಿ ತಿಂಗಳ ಹೂಡಿಕೆ ಈಕ್ವಿಟಿ ಮಾರುಕಟ್ಟೆಯ ಲಾಭವನ್ನು ಪಡೆದುಕೊಳ್ಳಲು ಸಹಕಾರಿ. ಚಿನ್ನದಲ್ಲಿ ಹೂಡಿಕೆ ಹಣದ ಮೌಲ್ಯ ಸಂರಕ್ಷಣೆಗೆ ಸೂಕ್ತ ಆಯ್ಕೆ. ಒಳ್ಳೆಯ ಷೇರುಗಳಲ್ಲೂ ಹಂತ ಹಂತವಾಗಿ ಹೂಡಿಕೆ ಮಾಡಬಹುದು.

ಅತ್ಯಂತ ಮುಖ್ಯವಾಗಿ, ಖರ್ಚಿನ ಮೇಲೆ ನಿಯಂತ್ರಣ ಹಾಗೂ ಹೂಡಿಕೆಗಿರುವ ಶಕ್ತಿಯನ್ನು ಅರಿತು ಆದಾಯವನ್ನು ಸಮತೋಲನದಿಂದ ಹಂಚಿಕೊಂಡು, ಪರಿಸ್ಥಿತಿಗೆ ಅನುಗುಣವಾಗಿ ಆದಾಯದ ಶೇ 50ರಷ್ಟು ಮೊತ್ತದವರೆಗೆ ಹೂಡಿಕೆ ಮಾಡುವ ಅವಕಾಶ ಇದೆಯೇ ಎಂಬುದನ್ನು ನೋಡಿ. ಆದ್ಯ ಹಂತದಲ್ಲಿ ಇದು ಸಾಧ್ಯ. ನಂತರ ಆದಾಯ ವೃದ್ಧಿಸಿದಂತೆ ಈ ಮೊತ್ತ ಹೆಚ್ಚಿಸಿಕೊಳ್ಳಿ. ಎಲ್ಲದಕ್ಕಿಂತ ಮುಖ್ಯವಾಗಿ ದೀರ್ಘಾವಧಿಗೆ ಹೂಡಿಕೆ ಮಾಡುತ್ತ ಇರಬೇಕಾದುದು ಮುಖ್ಯ. ಇದಕ್ಕಾಗಿ, ಆಯಾ ವಿಭಾಗದ ಹೂಡಿಕೆಗಳಿಗಿರುವ ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳನ್ನು ಮನನ ಮಾಡುವುದು ಯಾವುದೇ ಹೂಡಿಕೆದಾರನ ಆದ್ಯ ಕರ್ತವ್ಯ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in



ಅಮೃತಸರದಲ್ಲಿ ನಡೆದ ನವರಾತ್ರಿ ಹಬ್ಬದ ಮೆರವಣಿಗೆಯಲ್ಲಿ ಹನುಮಂತ ವೇಷಧಾರಿಯೊಬ್ಬರು ಕಾಣಿಸಿಕೊಂಡಿದ್ದು ಹೀಗೆ... ಪಿಟಿಐ ಚಿತ್ರ

ಹನುಮಂತನನ್ನು ನಿಂದಿಸಿದ ಅಮೆರಿಕದ ರಾಜಕಾರಣಿ

ಹೂಸ್ಟನ್ (ಪಿಟಿಐ): ಅಮೆರಿಕದ ರಾಜಕಾರಣಿಯೊಬ್ಬರು 'ಅಮೆರಿಕ ಕ್ರೈಸ್ತರ ದೇಶ' ಎಂದು ಪ್ರತಿಪಾದಿಸಿ, ಹಿಂದೂಗಳು ನಂಬುವ ಹನುಮಂತನನ್ನು 'ಸುಳ್ಳು ದೇವರು' ಎಂದು ಹೇಳುವ ಮೂಲಕ ವಿವಾದ ಹುಟ್ಟುಹಾಕಿದ್ದಾರೆ. ಅವರ ಹೇಳಿಕೆಗೆ ತೀವ್ರ ಟೀಕೆ ವ್ಯಕ್ತವಾಗಿದೆ.

ಕಳೆದ ವಾರ ಟೆಕ್ಸಾಸ್‌ನಲ್ಲಿರುವ 90 ಅಡಿ ಎತ್ತರದ ಹನುಮಂತನ ಕಂಚಿನ ಪ್ರತಿಮೆಯ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ರಿಪಬ್ಲಿಕನ್ ಪಕ್ಷದ ನಾಯಕ ಅಲೆಕ್ಸಾಂಡರ್ ಡಂಕನ್, 'ಟೆಕ್ಸಾಸ್‌ನಲ್ಲಿ ಸುಳ್ಳು ಹಿಂದೂ ದೇವರ ಸುಳ್ಳು ಪ್ರತಿಮೆಗೆ ನಾವು ಯಾಕೆ ಅನುಮತಿ ನೀಡಿದ್ದೇವೆ? ನಮ್ಮದು ಕ್ರೈಸ್ತ ದೇಶ' ಎಂದು ಹೇಳಿದ್ದಾರೆ.

ಅಲೆಕ್ಸಾಂಡರ್ ಡಂಕನ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಹಿಂದೂ ಅಮೆರಿಕನ್ ಫೌಂಡೇಷನ್ ಆಗ್ರಹಿಸಿದೆ.

'ಎಚ್1–ಬಿ' ಶುಲ್ಕ ಹೆಚ್ಚಳ: ಪೂರ್ವಗ್ರಹ ಪೀಡಿತ

ನ್ಯೂಯಾರ್ಕ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿದೇಶಿಗರ ಮೇಲೆ ಹೊಂದಿರುವ ಪೂರ್ವಗ್ರಹ ಪೀಡಿತ ಮನಃಸ್ಥಿತಿಯಿಂದಾಗಿ ವಲಸೆ ನೀತಿಯನ್ನು ಅಸ್ತ್ರವಾಗಿಸಿಕೊಂಡು ಎಚ್-1ಬಿ ವೀಸಾಗಳ ಮೇಲಿನ ಶುಲ್ಕ ಹೆಚ್ಚಿಸಿದ್ದಾರೆ ಎಂದು ಕೆಲವು ವಲಸೆ ಸೇವಾ ಸಂಸ್ಥೆಗಳವರು ಮತ್ತು ತಜ್ಞರು ದೂರಿದ್ದಾರೆ.

ಎಚ್-1ಬಿ ವೀಸಾದ ಶುಲ್ಕವನ್ನು 1 ಲಕ್ಷ ಡಾಲರ್‌ಗೆ ಹೆಚ್ಚಿಸಿರುವುದಾಗಿ ಟ್ರಂಪ್ ಆಡಳಿತವು ಇತ್ತೀಚೆಗಷ್ಟೇ ಘೋಷಿಸಿತು.

ಈ ನಿರ್ಧಾರವನ್ನು 'ಇಂಡಿಯನ್ ಅಮೆರಿಕನ್ ಇಂಪ್ಯಾಕ್ಟ್' ಎಂಬ ಸಂಸ್ಥೆಯು ತೀವ್ರವಾಗಿ ವಿರೋಧಿಸಿದೆ. ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಚಿಂತನ್ ಪಟೇಲ್ ಈ ಕುರಿತು ಮಾತನಾಡಿ, 'ಟ್ರಂಪ್ ಸರ್ಕಾರದ ಅಸಂಬದ್ಧ ನೀತಿಯು ಅಮೆರಿಕದ ಉದ್ಯೋಗ ವ್ಯವಸ್ಥೆಯನ್ನು ರಕ್ಷಿಸುವ ಉದ್ದೇಶವನ್ನು ಹೊಂದಿಲ್ಲ. ಬದಲಿಗೆ ವಿದೇಶಿಗರನ್ನು ಅನ್ಯರಂತೆ ಭಾವಿಸುವ ಟ್ರಂಪ್ ಅವರ ಕಾರ್ಯಸೂಚಿಯನ್ನು ಮತ್ತಷ್ಟು ಬಲಗೊಳಿಸುತ್ತಿದೆ' ಎಂದಿದ್ದಾರೆ.

ಅಲ್ಲದೇ, 'ಈ ಕ್ರಮವು ವಿದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೃತ್ತಿಪರರು, ಆರೋಗ್ಯ ತುರ್ತು ಕಾರಣಕ್ಕೆ ಕುಟುಂಬವನ್ನು ಭೇಟಿ ಮಾಡಲು ಹೋಗಿರುವವರನ್ನೂ ಆತಂಕಕ್ಕೆ ದೂಡಿದೆ' ಎಂದೂ ಆರೋಪಿಸಿದ್ದಾರೆ.

ವಕೀಲ ನವನೀತ್ ಎಂಬವರೂ ಈ ಬಗ್ಗೆ ಮಾತನಾಡಿ, 'ಎಚ್-1ಬಿ ವೀಸಾದಾರರ ಪೈಕಿ ಶೇ72 ಮಂದಿ ಭಾರತೀಯರಾಗಿದ್ದಾರೆ. ಅಮೆರಿಕದ ಆರ್ಥಿಕತೆಗೆ ಬೆನ್ನೆಲುಬಿನಂತಿರುವ ಈ ಸಮುದಾಯದ ವೃತ್ತಿಪರರನ್ನು ಟ್ರಂಪ್ ಸರ್ಕಾರದ ಕ್ರಮವು ಸಂಕಷ್ಟಕ್ಕೆ ದೂಡುತ್ತಿದೆ' ಎಂದಿದ್ದಾರೆ.

ಅಲ್ಲದೇ, 'ಅಮೆರಿಕ ತನ್ನ ವಲಸೆ ನೀತಿಗಳ ಮೂಲಕ ಕೌಶಲ ಸಮುದಾಯವನ್ನು ಕಳೆದುಕೊಳ್ಳಲಿದೆ' ಎಂದೂ ಎಚ್ಚರಿಸಿದ್ದಾರೆ.

ಅಮೆರಿಕದ ರಾಯಭಾರಿ– ಜೈಶಂಕರ್ ಭೇಟಿ

ನ್ಯೂಯಾರ್ಕ್ (ಪಿಟಿಐ): ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಅಮೆರಿಕದ ರಾಯಭಾರಿ ಸರ್ಗಿಯೊ ಗೊರ್ ಅವರನ್ನು ಸೋಮವಾರ ಭೇಟಿಯಾದರು.



ಜೈಶಂಕರ್

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದ ಸಂದರ್ಭದಲ್ಲಿ ಗೊರ್ ಅವರನ್ನು ಜೈಶಂಕರ್ ಭೇಟಿ ಮಾಡಿದರು ಎಂದು ದಕ್ಷಿಣ ಮತ್ತು ಮಧ್ಯ ಏಷ್ಯಾ ವ್ಯವಹಾರಗಳ ರಾಜ್ಯ ಇಲಾಖೆಯು ತಿಳಿಸಿದೆ.

'ಭಾರತ–ಅಮೆರಿಕ ದ್ವಿಪಕ್ಷೀಯ ಸಂಬಂಧ ವೃದ್ಧಿಯ ಉತ್ತೇಜನಕ್ಕೆ ಅವರು ಎದುರು ನೋಡುತ್ತಿದ್ದಾರೆ' ಎಂದು ಅದು ಹೇಳಿದೆ.

ಇದಕ್ಕೂ ಮೊದಲು ಜೈಶಂಕರ್ ಅವರು, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರನ್ನು ಭೇಟಿಯಾಗಿ ದ್ವಿಪಕ್ಷೀಯ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು.

ಭಾರತದೊಂದಿಗಿನ ಸಂಬಂಧವು ಅಮೆರಿಕಕ್ಕೆ ಅತ್ಯಂತ ಮಹತ್ವದ್ದಾಗಿದೆ ಎಂದು ಮಾರ್ಕೊ ರುಬಿಯೊ ಅವರು ಹೇಳಿದರು. ವಾಣಿಜ್ಯ, ರಕ್ಷಣೆ ಮತ್ತು ಇಂಧನ ಸೇರಿದಂತೆ ದ್ವಿಪಕ್ಷೀಯ ಕ್ಷೇತ್ರಗಳಲ್ಲಿ ಪಾಲುದಾರಿಕೆಯನ್ನು ಮುಂದುರಿಸಿರುವ ಭಾರತದ ನಡೆಯನ್ನು ಅವರು ಶ್ಲಾಘಿಸಿದರು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದಲ್ಲಿ ಪಾಲ್ಗೊಳ್ಳಲು ಭಾನುವಾರ ನ್ಯೂಯಾರ್ಕ್‌ಗೆ ತೆರಳಿರುವ ಜೈಶಂಕರ್ ಅವರು, ಅದರ ನಡುವೆಯೇ ವಿವಿಧ ದೇಶಗಳ ನಾಯಕರೊಂದಿಗೆ ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಸಭೆಗಳನ್ನು ನಡೆಸುತ್ತಿದ್ದಾರೆ. ಸೆಪ್ಟೆಂಬರ್ 27ರಂದು ಅವರು ಭಾರತವನ್ನು ಪ್ರತಿನಿಧಿಸಿ ಸಾಮಾನ್ಯ ಸಭೆಯ ಅಧಿವೇಶನದಲ್ಲಿ ಮಾತನಾಡಲಿದ್ದಾರೆ.

ವಿಶ್ವಸಂಸ್ಥೆಯನ್ನೂ ಟೀಕಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್

'ಉಕ್ರೇನ್ ಯುದ್ಧ: ಭಾರತ ಪರೋಕ್ಷ ಕಾರಣ'



ಡೊನಾಲ್ಡ್ ಟ್ರಂಪ್

ವಿಶ್ವಸಂಸ್ಥೆ (ಎಪಿ): ಭಾರತ ಹಾಗೂ ಚೀನಾವು ರಷ್ಯಾದ ತೈಲ ಖರೀದಿಸುವ ಮೂಲಕ ಉಕ್ರೇನ್ ವಿರುದ್ಧದ ಯುದ್ಧಕ್ಕೆ ಪರೋಕ್ಷವಾಗಿ ಹಣಕಾಸು ನೆರವು ನೀಡುತ್ತಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟೀಕಿಸಿದ್ದಾರೆ.

ನ್ಯೂಯಾರ್ಕ್ ನಗರದಲ್ಲಿರುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ 150ಕ್ಕೂ ಹೆಚ್ಚು ವಿಶ್ವ ನಾಯಕರು ಹಾಗೂ ವಿಶ್ವಸಂಸ್ಥೆಯ ಉನ್ನತ ಅಧಿಕಾರಿಗಳ ಮುಂದೆಯೇ ಮಂಗಳವಾರ ಮಾತನಾಡಿದ ಅವರು, ವಿಶ್ವಸಂಸ್ಥೆಯನ್ನೂ ತರಾಟೆಗೆ ತೆಗೆದುಕೊಂಡರು. 'ವಿಶ್ವಸಂಸ್ಥೆಯು ಪ್ರಬುದ್ಧವಾದ ಪದಗಳಲ್ಲಿ ಪತ್ರ ಬರೆಯುತ್ತದೆ. ಆದರೆ, ಅದನ್ನು ಪಾಲಿಸುವುದಿಲ್ಲ. ಖಾಲಿ ಮಾತುಗಳು ಯುದ್ಧಗಳನ್ನು ನಿಲ್ಲಿಸುವುದಿಲ್ಲ' ಎಂದು ಹೇಳಿದ್ದಾರೆ.

'ವಿಶ್ವಸಂಸ್ಥೆಯು ಅಗಾಧವಾದ ಸಾಮರ್ಥ್ಯವನ್ನು ಹೊಂದಿದೆ. ಆದರೆ, ಅದು ಆ ಸಾಮರ್ಥ್ಯಕ್ಕೆ ಹತ್ತಿರವೂ ಬರುತ್ತಿಲ್ಲ' ಎಂದು ಟೀಕಿಸಿದ್ದಾರೆ.

'ವಿಶ್ವದಾದ್ಯಂತ ಅತ್ಯಂತ ಜನಾಕರ್ಷಕ ದೇಶ ಅಮೆರಿಕ. ಜಗತ್ತಿನ ಯಾವ ದೇಶವೂ ಈ ವಿಷಯದಲ್ಲಿ ನಮಗೆ ಸಾಟಿ ಇಲ್ಲ' ಎಂದರು.

ಯಾವುದೇ ರಾಷ್ಟ್ರವು ಈ ರೀತಿ ಬಣ್ಣಿಸಿಕೊಳ್ಳುವುದನ್ನು ವಿಶ್ವಸಂಸ್ಥೆಯು ಒಪ್ಪುವುದಿಲ್ಲ. ಇತ್ತೀಚೆಗೆ ಇಂಗ್ಲೆಂಡ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿಯೂ ಟ್ರಂಪ್ ಇದೇ ರೀತಿ ಬಣ್ಣಿಸಿಕೊಂಡಿದ್ದರು.

'ಯುದ್ಧ ನಿಲ್ಲಿಸಿದ್ದು ನಾನೇ': 'ಭಾರತ ಹಾಗೂ ಪಾಕಿಸ್ತಾನದ ನಡುವಿನ ಯುದ್ಧವನ್ನು ನಿಲ್ಲಿಸಿದ್ದು ನಾನೇ. ಈ ಯುದ್ಧವೂ ಸೇರಿದಂತೆ ಏಳು ಯುದ್ಧಗಳನ್ನು ನಾನು ನಿಲ್ಲಿಸಿದ್ದೇನೆ. ನೊಬೆಲ್ ಶಾಂತಿ ಪುರಸ್ಕಾರಕ್ಕೆ ನನ್ನನ್ನು ಪರಿಗಣಿಸಬೇಕು ' ಎಂದು ಟ್ರಂಪ್ ಅವರು ಪುನರುಚ್ಚರಿಸಿದರು.

ಫ್ರಾನ್ಸ್ ಅಧ್ಯಕ್ಷನನ್ನು ರಸ್ತೆಯಲ್ಲಿ ತಡೆದ ಅಮೆರಿಕದ ಪೊಲೀಸರು!



ಎಮ್ಯಾನುಯೆಲ್

ನ್ಯೂಯಾರ್ಕ್ (ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬೆಂಗಾವಲು ಪಡೆಯ ವಾಹನಗಳಿಗಾಗಿ ನ್ಯೂಯಾರ್ಕ್ ನಗರದಲ್ಲಿ ಹೇರಲಾಗಿದ್ದ ಕಟ್ಟುನಿಟ್ಟಾದ ಸಂಚಾರ ನಿರ್ಬಂಧಗಳ ಕಾರಣದಿಂದಾಗಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್‌ರನ್ನು ಪೊಲೀಸರು ತಡೆದರು.

ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಿದಾಡಿರುವ ವಿಡಿಯೊವೊಂದರಲ್ಲಿ, ಮ್ಯಾಕ್ರನ್ ಮತ್ತು ಅವರ ನಿಯೋಗ ಪಾದಚಾರಿ ರಸ್ತೆಯಲ್ಲಿ ನಿಂತಿರುವುದು ದಾಖಲಾಗಿದೆ. ಈ ವೇಳೆ ನ್ಯೂಯಾರ್ಕ್ ಪೊಲೀಸ್ ಅಧಿಕಾರಿಯೊಬ್ಬರು ಅವರಲ್ಲಿ ಕ್ಷಮೆ ಯಾಚಿಸುತ್ತಾ, ಬೆಂಗಾವಲು ಪಡೆಗಾಗಿ ಸಂಚಾರವನ್ನು ನಿರ್ಬಂಧಿಸಲಾಗಿದ್ದು, ರಸ್ತೆ ದಾಟಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಇದರ ನಂತರ ಫೋನ್‌ನಲ್ಲಿ ಮಾತನಾಡುವ ಮ್ಯಾಕ್ರನ್, 'ಹೇಗಿದ್ದೀರಿ? ವಿಚಾರ ಏನು ಗೊತ್ತೆ? ನಿಮ್ಮ ಆಗಮನಕ್ಕಾಗಿ ಇಲ್ಲಿ ಎಲ್ಲವನ್ನೂ ನಿರ್ಬಂಧಿಸ ಲಾಗಿದ್ದು, ನಾನು ರಸ್ತೆಯಲ್ಲಿ ಕಾಯುತ್ತಿದ್ದೇನೆ' ಎಂದು ಟ್ರಂಪ್ ಜೊತೆಗೆ ಮಾತನಾಡುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಸಂಭಾವ್ಯ ದೂರಸಂಪರ್ಕ ದಾಳಿ ತಡೆದ ಅಮೆರಿಕ

ನ್ಯೂಯಾರ್ಕ್ (ಎಎಫ್‌ಪಿ): ನ್ಯೂಯಾರ್ಕ್‌ನ ದೂರಸಂಪರ್ಕ ಜಾಲವನ್ನು ಸ್ಥಗಿತಗೊಳಿಸಬಹುದಾದ ಒಂದು ಲಕ್ಷಕ್ಕೂ ಹೆಚ್ಚು ಸಿಮ್‌ಕಾರ್ಡ್‌ಗಳ ಜಾಲವನ್ನು ಕಿತ್ತುಹಾಕಿರುವುದಾಗಿ ಅಮೆರಿಕ ಸೀಕ್ರೆಟ್ ಸರ್ವೀಸ್ ಮಂಗಳವಾರ ತಿಳಿಸಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೂ ಮುನ್ನ ಈ ಕಾರ್ಯ ಮಾಡಿರುವುದಾಗಿ ಅದು ಹೇಳಿದೆ. ದೇಶ ಮತ್ತು ಸರ್ಕಾರಕ್ಕೆ ಇದರಿಂದ ಬೆದರಿಕೆ ಎದುರಾಗುವ ಸಾಧ್ಯತೆಯಿತ್ತು. ಹೀಗಾಗಿ ತ್ವರಿತವಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಯಿತು ಎಂದು ಅದು ಹೇಳಿದೆ.

ಅನಾಮಧೇಯ ಕರೆಗಳ ಮೂಲಕ ಬರಬಹುದಾದ ಬೆದರಿಕೆಗಳು ಮತ್ತು ದೂರಸಂಪರ್ಕ ದಾಳಿ ಸಾಧ್ಯತೆಗಳನ್ನು ಈ ಮೂಲಕ ತಡೆಯಲಾಗಿದೆ ಎಂದು ಅದು ವಿವರಿಸಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆ ನಡೆಯುವ ಸ್ಥಳದಿಂದ 56 ಕಿ.ಮೀ. ದೂರದಲ್ಲಿ ಈ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅದು ಮಾಹಿತಿ ನೀಡಿದೆ. ವಶಪಡಿಸಿಕೊಂಡಿರುವ ಸಾಧನಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಿ, ಸಮಗ್ರ ತನಿಖೆ ನಡೆಸಲಾಗುವುದು ಎಂದು ಹೇಳಿದೆ.



ಸುದೀಪ್

ಸೆ.28ರಿಂದ 'ಬಿಗ್ ಬಾಸ್'

ಈ ತಿಂಗಳ ಅಂತ್ಯಕ್ಕೆ ಬಿಗ್‌ಬಾಸ್ ಪ್ರಾರಂಭವಾಗಲಿದೆ ಎಂಬ ಸುಳಿವನ್ನು ಸುದೀಪ್ ಈ ಹಿಂದೆ ನೀಡಿದ್ದರು. ಇದೀಗ ಪ್ರಾರಂಭ ದಿನಾಂಕ ಅಧಿಕೃತವಾಗಿದ್ದು ಸೆ.28ರಿಂದ ಬಿಗ್‌ಬಾಸ್ ಸೀಸನ್ 12ರ ಆಟ ಶುರುವಾಗಲಿದೆ.

'ಕಲರ್ಸ್ ಕನ್ನಡ ವಾಹಿನಿಯಲ್ಲಿ ಸೆಪ್ಟೆಂಬರ್ 28ರಂದು ಸಂಜೆ 6 ಗಂಟೆಗೆ ಬಿಗ್‌ಬಾಸ್ ಸೀಸನ್ 12ರ ಗ್ರಾಂಡ್ ಓಪನಿಂಗ್ ಪ್ರಸಾರವಾಗಲಿದ್ದು, ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9.30ಕ್ಕೆ ಕಲರ್ಸ್ ಕನ್ನಡ ಮತ್ತು ಜಿಯೋ ಹಾಟ್‌ಸ್ಟಾರ್‌ನಲ್ಲಿ ಕಾರ್ಯಕ್ರಮ ವೀಕ್ಷಿಸಬಹುದಾಗಿದೆ. ವಾರಾಂತ್ಯದಲ್ಲಿ ರಾತ್ರಿ 9 ಗಂಟೆಯಿಂದ ಪ್ರಸಾರವಾಗಲಿದೆ' ಎಂದು ಕಲರ್ಸ್ ವಾಹಿನಿ ತಿಳಿಸಿದೆ.

ಕಳೆದ ಸೀಸನ್ ಮುಗಿಯುತ್ತಿದ್ದಂತೆ ಬಿಗ್‌ಬಾಸ್‌ಗೆ ಬಹಿರಂಗವಾಗಿ ವಿದಾಯ ಘೋಷಿಸಿದ್ದ ಸುದೀಪ್ ಅವರೇ ಈ ಬಾರಿಯೂ ಕಾರ್ಯಕ್ರಮ ನಿರೂಪಣೆ ಮಾಡಲಿದ್ದಾರೆ. ಈ ಬಾರಿ 'Expect the Unexpected' ಎಂಬ ಧ್ಯೇಯದೊಂದಿಗೆ ಕಾರ್ಯಕ್ರಮ ನಡೆಯಲಿದೆ.

'ಬಿಗ್‌ಬಾಸ್' ಮನೆಯ ಪ್ರತೀ ಕೋನವೂ, ಕೋಣೆಯೂ ವಿಭಿನ್ನವಾಗಿರುವಂತೆ, ಮನೆಯ ಸದಸ್ಯರೂ ಈ ಸಲ ಭಿನ್ನ. ನಟರು, ಹಾಸ್ಯನಟರು, ಗಾಯಕರು, ಬಾಣಸಿಗರು...ಹೀಗೆ ಬೇರೆ ಬೇರೆ ಕ್ಷೇತ್ರಗಳ ಆಸಕ್ತಿಕರ ವ್ಯಕ್ತಿಗಳು ಬಿಗ್‌ಬಾಸ್ ಮನೆ ಪ್ರವೇಶಿಸಲಿದ್ದಾರೆ ಎಂದು ಆಯೋಜಕರು ಹೇಳಿದ್ದಾರೆ.

ಬಿಡುಗಡೆಗೆ ಸಜ್ಜಾದ 'ಚೌಕಿದಾರ್'



ಪೃಥ್ವಿ ಅಂಬಾರ್

'ರಥಾವರ' ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ಆ್ಯಕ್ಷನ್ ಕಟ್ ಹೇಳಿರುವ, ಪೃಥ್ವಿ ಅಂಬಾರ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಚೌಕಿದಾರ್' ಚಿತ್ರಕ್ಕೆ ಸೆನ್ಸಾರ್ ಮಂಡಳಿಯು 'ಯು/ಎ' ಪ್ರಮಾಣಪತ್ರ ನೀಡಿದೆ.

ಅಪ್ಪ ಮಗನ ಬಾಂಧವ್ಯದ ಕುರಿತ ಈ ಸಿನಿಮಾದಲ್ಲಿ ಸಾಯಿಕುಮಾರ್ ಹಾಗೂ ಪೃಥ್ವಿ ಅಂಬಾರ್ ತಂದೆ–ಮಗನಾಗಿ ಜೊತೆಯಾಗಿದ್ದಾರೆ. ಪೃಥ್ವಿ ಅಂಬಾರ್ ಹಾಗೂ ಧನ್ಯಾ ರಾಮ್ ಕುಮಾರ್ ಜೋಡಿಯಾಗಿ ನಟಿಸಿರುವ ಈ ಸಿನಿಮಾ ಫ್ಯಾಮಿಲಿ ಡ್ರಾಮಾ ಜಾನರ್‌ನಲ್ಲಿದೆ. 'ಚಿತ್ರವನ್ನು ಸೆನ್ಸಾರ್ ಮಂಡಳಿ ಸದಸ್ಯರು ಶ್ಲಾಘಿಸಿದ್ದಾರೆ. ಅದರಲ್ಲಿಯೂ ಸಾಯಿ ಕುಮಾರ್ ಅವರ ಅಭಿನಯವನ್ನು ಕೊಂಡಾಡಿದ್ದಾರೆ. ಮನಸ್ಸಿಗೆ ಹತ್ತಿರವೆನಿಸುವ ಪಾತ್ರದಲ್ಲಿ ಸಾಯಿಕುಮಾರ್ ಅಮೋಘವಾಗಿ ನಟಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ' ಎಂದು ಚಿತ್ರತಂಡ ತಿಳಿಸಿದೆ.

ಕಲ್ಲಹಳ್ಳಿ ಚಂದ್ರಶೇಖರ್ ಈ ಸಿನಿಮಾ ನಿರ್ಮಾಣ ಮಾಡಿದ್ದು, 'ಚೈತ್ರದ ಪ್ರೇಮಾಂಜಲಿ' ಚಿತ್ರದ ನಾಯಕಿ ಶ್ವೇತಾ, ಸುಧಾರಾಣಿ ಪ್ರಮುಖ ಪಾತ್ರಗಳಲ್ಲಿದ್ದಾರೆ. ಸಚಿನ್ ಬಸ್ರೂರು ಸಂಗೀತ, ಸಿದ್ದು ಕಂಚನಹಳ್ಳಿ ಛಾಯಾಚಿತ್ರಗ್ರಹಣ, ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಸಂತೋಷ್ ನಾಯಕ್ ಸಾಹಿತ್ಯ ಚಿತ್ರದ ಹಾಡುಗಳಿಗಿವೆ. ಸಿನಿಮಾ ಬಹುಭಾಷೆಗಳಲ್ಲಿ ಮೂಡಿ ಬರಲಿದ್ದು, ಶೀಘ್ರದಲ್ಲೇ ಬಿಡುಗಡೆ ದಿನಾಂಕ ಘೋಷಣೆಯಾಗಲಿದೆ ಎಂದಿದೆ ಚಿತ್ರತಂಡ.

ಜೀ5ನಲ್ಲಿ 'ಮಾರಿಗಲ್ಲು' ವೆಬ್‌ಸರಣಿ ಶೀಘ್ರ

ಈಗಾಗಲೇ 'ಅಯ್ಯನ ಮನೆ', 'ಶೋಧ' ವೆಬ್‌ಸರಣಿಗಳ ಮೂಲಕ ಸದ್ದು ಮಾಡಿರುವ ಜೀ5 ಇದೀಗ ಮತ್ತೊಂದು ಕನ್ನಡ ವೆಬ್‌ಸರಣಿ ಘೋಷಿಸಿದೆ. ಕೆಆರ್‌ಜಿ ಸ್ಟುಡಿಯೊಸ್ ಸಹಯೋಗದಲ್ಲಿ 'ಶೋಧ' ವೆಬ್‌ಸರಣಿಯನ್ನು ಪ್ರೇಕ್ಷಕರೆದುರಿಗೆ ತಂದಿದ್ದ ಜೀ5 ಈ ಬಾರಿ 'ಪಿಆರ್‌ಕೆ ಪ್ರೊಡಕ್ಷನ್ಸ್' ಸಹಯೋಗದಲ್ಲಿ 'ಮಾರಿಗಲ್ಲು' ವೆಬ್‌ಸರಣಿ ತರಲಿದೆ.

'ಈ ವೆಬ್ ಸರಣಿಯು ಕರ್ನಾಟಕದ ಜನಪದವನ್ನು ಹೇಳುವ ಒಂದು ದೈವಿಕ ಥ್ರಿಲ್ಲರ್ ಆಗಿದೆ. ಈ ಕಥೆಯು ಸದೃಢ ಸಾಂಸ್ಕೃತಿಕ ಮತ್ತು ಐತಿಹಾಸಿಕ ಆಧಾರಗಳ ಮೇಲೆ ನಿರ್ಮಾಣವಾಗಿದೆ. ಕದಂಬರ ಆಳ್ವಿಕೆಯ ಕಾಲದ ಕಥೆಯನ್ನು ಹೊಂದಿರುವ ಈ ಕಥೆಯು, ಕದಂಬರ ಪ್ರಥಮ ರಾಜನಾದ ಮಯೂರ ಶರ್ಮನ ಪರಂಪರೆಯನ್ನು ತೆರೆ ಮೇಲೆ ತರಲಿದೆ. ಕದಂಬರ ಕಾಲದಿಂದಲೂ 'ಮಾರಿ' ಎಂಬ ದೇವತೆಯಿಂದ ಕಾಪಾಡಲ್ಪಟ್ಟಿರುವ ನಿಧಿಯ ಕಳವು ಮತ್ತು ಹುಡುಕಾಟದ ಸುತ್ತ ಇಡೀ ಕಥೆಯನ್ನು ಹೆಣೆಯಲಾಗಿದೆ. ಕಥೆಯೊಳಗಿರುವ ಪಾತ್ರಗಳು ನಿಧಿಯ ರಹಸ್ಯವನ್ನು ಹೇಗೆ ಭೇದಿಸುತ್ತವೆ ಎಂಬುವುದು ಕಥಾಹಂದರ' ಎಂದಿದೆ ತಂಡ.



ಅಶ್ವಿನಿ ಪುನೀತ್ ರಾಜ್‌ಕುಮಾರ್ ಜೊತೆ 'ಮಾರಿಗಲ್ಲು' ತಂಡ

'ನಮ್ಮ ನೆಲದ ಸಂಸ್ಕೃತಿಯನ್ನು ಬಿಂಬಿಸುವ ಕಥೆಗಳು ಹಾಗೂ ಜನ ಜೀವನವನ್ನು ಪ್ರತಿಬಿಂಬಿಸುವ ಕಥೆಗಳನ್ನು ನಾವು ಹೆಚ್ಚು ನಂಬುತ್ತೇವೆ ಮತ್ತು ಅಂತಹ ಕಥೆಗಳಿಗೆ ಉತ್ತೇಜನ ನೀಡುತ್ತೇವೆ. 'ಮಾರಿಗಲ್ಲು' ಇಂಥ ಒಂದು ಕಥೆಯಾಗಿದೆ. ಇದು ಪ್ರತಿಯೊಬ್ಬರೂ ಕಣ್ಣರಳಿಸಿ ನೋಡುವಂತಹ ಥ್ರಿಲ್ಲರ್ ಅಂಶಗಳನ್ನು ಹೊಂದಿದೆ' ಎಂದಿದ್ದಾರೆ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್.

ಸಿನಿಮಾ ಶೀರ್ಷಿಕೆಯಾಯ್ತು ಅಂಬರೀಶ್ ಹುಟ್ಟೂರು

ಅಂಬರೀಶ್ ಹುಟ್ಟೂರಾದ ದೊಡ್ಡರಸಿನಕೆರೆಯನ್ನೇ ಶೀರ್ಷಿಕೆಯಾಗಿಸಿಕೊಂಡ ಸಿನಿಮಾವೊಂದು ಬಿಡುಗಡೆಗೆ ಸಜ್ಜಾಗುತ್ತಿದೆ. 'ಗಜೇಂದ್ರ ಕೇರಾಫ್ ದೊಡ್ಡರಸಿನಕೆರೆ' ಚಿತ್ರವನ್ನು ಅಂಬರೀಶ್ ಅಭಿಮಾನಿಯಾಗಿರುವ ಸುಬ್ರಮಣ್ಯ ನಿರ್ದೇಶಿಸಿ, ನಿರ್ಮಾಣ ಮಾಡಿದ್ದಾರೆ.

'ಇದು ಹಳ್ಳಿಯೊಂದರಲ್ಲಿ ನಡೆಯುವ ಕಥೆ. ದೊಡ್ಡರಸಿನಕೆರೆಯಲ್ಲಿಯೇ ಪೂರ್ತಿ ಚಿತ್ರೀಕರಣ ಮಾಡಿದ್ದೇವೆ. ಊರ ಗೌಡನೊಬ್ಬ ಹಳ್ಳಿಯ ಮುಗ್ಧ ಜನರಿಗೆ ಬಡ್ಡಿಗೆ ಸಾಲಕೊಟ್ಟು, ಹಿಂದಿರುಗಿಸದಿದ್ದಾಗ ಅವರ ಆಸ್ತಿಯನ್ನು ತನ್ನ ವಶಪಡಿಸಿಕೊಳ್ಳುತ್ತಿರುತ್ತಾನೆ. ಆತನಿಂದ ನಾಯಕ ಊರನ್ನು ಹೇಗೆ ರಕ್ಷಿಸುತ್ತಾನೆ ಎಂಬುದೇ ಕಥೆ. ಈಗಾಗಲೇ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿದಿದ್ದು, ಚಿತ್ರ ಸದ್ಯ ಸೆನ್ಸಾರ್ ಹಂತದಲ್ಲಿದೆ. ನವೆಂಬರ್‌ನಲ್ಲಿ ತೆರೆಕಾಣಲಿದೆ' ಎಂದಿದ್ದಾರೆ ನಿರ್ದೇಶಕ.

ಅಭಿಷೇಕ್ ಸುಬ್ಬಣ್ಣ ನಾಯಕ. ವೇದ ಹಾಗೂ ನಿರೀಕ್ಷಾ ನಾಯಕಿಯರು. ಮನೋರಾವ್ ಸಂಗೀತ ಸಂಯೋಜನೆ, ರಾಹುಲ್ ಶೇಖರ್ ಛಾಯಾಚಿತ್ರಗ್ರಹಣವಿದೆ. ವಿನಯ್ ಸುಬ್ಬಣ್ಣ, ತಿಮ್ಮರಾಜು ಮುಂತಾದವರು ಚಿತ್ರದಲ್ಲಿದ್ದಾರೆ.



ಚಿತ್ರತಂಡ

ಮೊದಲ ದಿನ 8 ಕೂಟ ದಾಖಲೆ

'ಸಿ.ಎಂ. ಕಪ್' ದಸರಾ ಕ್ರೀಡಾಕೂಟ ಬೆಂಗಳೂರು, ಮೈಸೂರು ವಿಭಾಗ ಪಾರಮ್ಯ

ಪ್ರಮುಖ ಅಂಶಗಳು
- ಆರಂಭದ ದಿನ ಅಥ್ಲೆಟಿಕ್ಸ್‌ನಲ್ಲಿ ಒಟ್ಟು 12 ಸ್ಪರ್ಧೆ
- ಪುರುಷರ 100 ಮೀ. ಓಟದಲ್ಲಿ ಗೌತಮ್ ಮಿಂಚು
- ಜಾವೆಲಿನ್ ಥ್ರೋನಲ್ಲಿ ಉಡುಪಿಯ ಶ್ರಾವ್ಯಾ ದಾಖಲೆ

• ಆರ್.ಜಿತೇಂದ್ರ

ಮೈಸೂರು: ಬೆಂಗಳೂರು ಹಾಗೂ ಮೈಸೂರು ವಿಭಾಗದ ಅಥ್ಲೀಟ್‌ಗಳು ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭಗೊಂಡ 'ಸಿ.ಎಂ. ಕಪ್' ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಅಥ್ಲೆಟಿಕ್ಸ್ ವಿಭಾಗದಲ್ಲಿ ಪಾರಮ್ಯ ಮೆರೆದರು.

ಮೊದಲನೇ ದಿನ ಅಥ್ಲೆಟಿಕ್ಸ್‌ನಲ್ಲಿ ಒಟ್ಟು 12 ಸ್ಪರ್ಧೆಗಳು ನಡೆದಿದ್ದು, 8 ಸ್ಪರ್ಧೆಗಳಲ್ಲಿ ಅಥ್ಲೀಟ್‌ಗಳು ಹಳೆಯ ಕೂಟ ದಾಖಲೆಗಳನ್ನು ಮುರಿದರು. ಪುರುಷರ 100 ಮೀ. ಓಟವನ್ನು ಶಿವಮೊಗ್ಗದ ಗೌತಮ್ 10.74 ಸೆಕೆಂಡುಗಳಲ್ಲಿ ಕ್ರಮಿಸಿ, ಕಳೆದ ವರ್ಷ ಗಗನ್ ಗೌಡ ಹೆಸರಿನಲ್ಲಿದ್ದ 10.85 ಸೆಕೆಂಡ್‌ಗಳ ದಾಖಲೆಯನ್ನು ಅಳಿಸಿದರು.

ಮಹಿಳೆಯರ 100 ಮೀ. ಓಟದಲ್ಲಿ ಬೆಂಗಳೂರಿನ ನಿಯೋಲ್ ಅನಾ ಕಾರ್ನೆಲಿಯೊ 12 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಜ್ಯೋತಿಕಾ ಹೆಸರಿನಲ್ಲಿದ್ದ 12.24 ಸೆಕೆಂಡ್‌ಗಳ ದಾಖಲೆ ಸರಿಗಟ್ಟಿದರು.

ಪುರುಷರ 400 ಮೀ. ಓಟದಲ್ಲಿ ಬೆಂಗಳೂರಿನ ಶ್ರೀನಾಥ್ ದಳವಿ, 1500 ಮೀ. ಓಟದಲ್ಲಿ ಶಿವಮೊಗ್ಗದ ಎಂ.ಎಸ್. ಆಶ್ರಿತ್, ಡಿಸ್ಕಸ್ ಥ್ರೋನಲ್ಲಿ ದಕ್ಷಿಣ ಕನ್ನಡದ ನಾಗೇಂದ್ರ ನಾಯಕ್, ಹೈಜಂಪ್‌ನಲ್ಲಿ ಶಿವಮೊಗ್ಗದ ಸುದೀಪ್ ಹೊಸ ದಾಖಲೆ ಬರೆದರು. ಮಹಿಳೆಯರ ಹೈಜಂಪ್‌ನಲ್ಲಿ ಉಡುಪಿಯ ಎಸ್.ಪಿ. ಸುಪ್ರಿಯಾ, ಜಾವೆಲಿನ್ ಥ್ರೋನಲ್ಲಿ ಉಡುಪಿಯ ಶ್ರಾವ್ಯಾ ದಾಖಲೆ ತಮ್ಮದಾಗಿಸಿಕೊಂಡರು.



ಮಹಿಳೆಯರ 100 ಮೀ. ಓಟದಲ್ಲಿ ಗುರಿಯತ್ತ ಮುನ್ನುಗ್ಗಿದ ಸ್ಪರ್ಧಿಗಳು ಚಿತ್ರ: ಅನೂಪ್ ರಾಘ.ಟಿ.



ಗೌತಮ್



ಎಂ.ಎಸ್. ಆಶ್ರಿತ್

ಫಲಿತಾಂಶ: ಅಥ್ಲೆಟಿಕ್ಸ್: ಪುರುಷರು: 100 ಮೀ. ಓಟ: ಗೌತಮ್ (ಶಿವಮೊಗ್ಗ. ಕಾಲ: 10.74 ಸೆಕೆಂಡ್)–1, ಡಿ.ಕೆ. ಧನುಷ್ (ಉಡುಪಿ)–2, ಎಂ.ಡಿ. ಪೈಗಂಬರ್ ಗೌಂಡಿ (ವಿಜಯಪುರ)–3; 400 ಮೀ. ಓಟ: ಶ್ರೀನಾಥ್ ದಲಾವಿ (ಬೆಂಗಳೂರು. ಕಾಲ; 47.78 ಸೆಕೆಂಡ್)–1, ಎಂ. ನಿತಿನ್ ಗೌಡ (ಬೆಂಗಳೂರು ಗ್ರಾಮಾಂತರ)–2, ಎಂ.ಡಿ. ದರ್ಶನ್ (ಶಿವಮೊಗ್ಗ)–3; 1500 ಮೀ. ಓಟ: ಎಂ.ಎಸ್. ಆಶ್ರಿತ್ (ಶಿವಮೊಗ್ಗ. ಕಾಲ: 3ನಿಮಿಷ, 57.93 ಸೆಕೆಂಡ್)–1, ಗುರುಪ್ರಸಾದ್ (ಬೆಂಗಳೂರು)–2, ವಿನಾಯಕ್ ರಾಥೋಡ್ (ಧಾರವಾಡ)–3.

ಹೈಜಂಪ್: ಸುದೀಪ್ (ಶಿವಮೊಗ್ಗ. ಎತ್ತರ: 2 ಮೀಟರ್)–1, ಅಭಿಜ್ಞಾನ್ ಅನಿಲ್ ಗೌಡ (ಮೈಸೂರು)–2, ಭವಿತ್ ಕುಮಾರ್ (ದಕ್ಷಿಣ ಕನ್ನಡ)–3; ಡಿಸ್ಕಸ್ ಥ್ರೋ: ನಾಗೇಂದ್ರ ನಾಯಕ್ (ದಕ್ಷಿಣ ಕನ್ನಡ. ದೂರ: 52.78 ಮೀ)–1, ಹೇಮಂತ್ (ಬೆಂಗಳೂರು)–2, ಮೋಹಿತ್ ರಾಜ್ (ಬೆಂಗಳೂರು)–3; ಜಾವೆಲಿನ್ ಥ್ರೋ: ಶಾರುಖ್ ತಾರಿಹಾಳ (ಬೆಂಗಳೂರು. ದೂರ: 64.61 ಮೀ.)–1, ಸಿದ್ದಪ್ಪ ದಂಡಿನ್ (ಉಡುಪಿ)–2, ಯುವರಾಜ್ ಲಮಾಣಿ (ಬಾಗಲಕೋಟೆ)–3.

ಮಹಿಳೆಯರು: 100 ಮೀ. ಓಟ: ನಿಯೋಲ್ ಅನಾ ಕಾರ್ನೆಲಿಯೊ (ಬೆಂಗಳೂರು. ಕಾಲ: 12 ಸೆಕೆಂಡ್)–1,ಮಮತಾ (ಮೈಸೂರು)–2, ವೈಭವಿ (ಬೆಳಗಾವಿ)–3; 400 ಮೀ. ಓಟ: ಶ್ರಾವಣಿ (ದಕ್ಷಿಣ ಕನ್ನಡ. ಕಾಲ: 55.81 ಸೆಕೆಂಡ್)–1, ರೇಖಾ ಪಿರೋಜಿ (ದಕ್ಷಿಣ ಕನ್ನಡ)–2, ಮೇಘಾ ಮನವಳ್ಳಿಮಠ (ಧಾರವಾಡ)–3; 1500 ಮೀ. ಓಟ: ಎಸ್.ಡಿ. ಶಾಹಿನ್ (ಧಾರವಾಡ: ಕಾಲ: 4ನಿಮಿಷ, 50.24 ಸೆಕೆಂಡ್)–1, ಶಿಲ್ಪಾ ಹೊಸಮನಿ (ಬೆಳಗಾವಿ)–2, ಎನ್. ಪ್ರಣಮ್ಯ (ಬೆಳಗಾವಿ)–3.

ಹೈಜಂಪ್: ಎಸ್.ಬಿ. ಸುಪ್ರಿಯಾ (ಉಡುಪಿ. ಎತ್ತರ: 1.71 ಮೀ.)–1, ಪಲ್ಲವಿ ಪಾಟೀಲ (ಉಡುಪಿ)–2, ಅಕ್ಷತಾ ದೊಡ್ಡಮನಿ (ಬೀದರ್)–3; ಡಿಸ್ಕಸ್ ಥ್ರೋ: ಬಿ. ಸುಷ್ಮಾ (ದಕ್ಷಿಣ ಕನ್ನಡ. ದೂರ: 41.89 ಮೀ.)–1, ಸಿ. ತೇಜಸ್ವಿನಿ (ಬೆಂಗಳೂರು)–2, ಎಸ್.ಎಂ. ದೀಕ್ಷಿತಾ (ಬೆಂಗಳೂರು)–3; ಜಾವೆಲಿನ್ ಥ್ರೋ: ಶ್ರಾವ್ಯಾ (ಉಡುಪಿ. ದೂರ: 45.53 ಮೀ)–1, ಶೆಹಜಹಾನಿ (ಮೈಸೂರು)–2, ಪದ್ಮಾವತಿ (ಶಿವಮೊಗ್ಗ)–3.

ಕಬಡ್ಡಿ: ಟೈಟನ್ಸ್‌ಗೆ ರೋಚಕ ಗೆಲುವು

ಜೈಪುರ: ಭರತ್ ಮತ್ತು ವಿಜಯ್ ಮಲಿಕ್ ಅವರ ಅಮೋಘ ರೇಡಿಂಗ್ ಬಲದಿಂದ ತೆಲುಗು ಟೈಟನ್ಸ್ ತಂಡವು ಮಂಗಳವಾರ ಪ್ರೊ ಕಬಡ್ಡಿ ಲೀಗ್‌ನ ರೋಚಕ ಹಣಾಹಣಿಯಲ್ಲಿ 1 ಅಂಕದಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟೈಟನ್ಸ್ ತಂಡವು 30–29ರಿಂದ ಜಯ ಸಾಧಿಸಿತು. ಆಡಿರುವ ಹತ್ತು ಪಂದ್ಯಗಳಲ್ಲಿ ಐದು ಗೆಲುವು ದಾಖಲಿಸಿ 10 ಅಂಕ ಗಳಿಸಿದ ಟೈಟನ್ಸ್ ತಂಡವು ಲೀಗ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ಜೈಂಟ್ಸ್ ತಂಡಕ್ಕೆ ಎಂಟು ಪಂದ್ಯಗಳಲ್ಲಿ ಇದು ಏಳನೇ ಸೋಲಾಗಿದೆ.

ಪಂದ್ಯದ ಮೊದಲಾರ್ಧದಲ್ಲಿ ಎರಡು ಅಂಕಗಳ (12–10) ಮುನ್ನಡೆ ಪಡೆದ ಟೈಟನ್ಸ್ ತಂಡಕ್ಕೆ ದ್ವಿತೀಯಾರ್ಧದಲ್ಲಿ ಜೈಂಟ್ಸ್ ಆಟಗಾರರಿಂದ ಪ್ರಬಲ ಸ್ಪರ್ಧೆ ಎದುರಾಯಿತು. ಒಂದು ಹಂತದಲ್ಲಿ ಎದುರಾಳಿ ತಂಡವನ್ನು ಆಲೌಟ್ ಮಾಡಿ, 18–14 ಮುನ್ನಡೆ ಪಡೆದ ಜೈಂಟ್ಸ್ ಗೆಲುವಿನ ಭರವಸೆ ಮೂಡಿಸಿತ್ತು. ಆದರೆ, ಕೊನೆಯ ಕ್ಷಣದವರೆಗೆ ಹಾವು ಏಣಿಯಂತೆ ಸಾಗಿದ ಪಂದ್ಯದಲ್ಲಿ ಟೈಟನ್ಸ್ ಮೇಲುಗೈ ಸಾಧಿಸಿತು.

ಟೈಟನ್ಸ್ ಪರ ಭರತ್ 9 ಅಂಕ ಕಲೆ ಹಾಕಿದರೆ, ವಿಜಯ್ 7 ಅಂಕ ಸಂಪಾದಿಸಿದರು. ಜೈಂಟ್ಸ್ ಪರ ಮಹಮ್ಮದ್‌ರೇಜಾ ಶಾಡ್ಲುಯಿ 6 ಅಂಕ ಗಳಿಸಿದರು.

ಪ್ಯಾಂಥರ್ಸ್‌ಗೆ ಗೆಲುವು: ದಿನದ ಮತ್ತೊಂದು ಪಂದ್ಯದಲ್ಲಿ ಆತಿಥೇಯ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಟೈಬ್ರೇಕರ್‌ನಲ್ಲಿ 6–4ರಿಂದ ಯು ಮುಂಬಾ ತಂಡವನ್ನು ಮಣಿಸಿತು. ನಿಗದಿತ ಅವಧಿಯ ಪಂದ್ಯ 38–38ರಿಂದ ಟೈ ಆಗಿತ್ತು. ಇದು ಈ ಆವೃತ್ತಿಯಲ್ಲಿ ಆರನೇ ಟೈಬ್ರೇಕರ್ ಪಂದ್ಯವಾಗಿದೆ.

ತೂಗುಯ್ಯಾಲೆಯಲ್ಲಿ ಪಾಂಡೆ ಭವಿಷ್ಯ

ರಣಜಿ ಟ್ರೋಫಿ: ಸಂಭವನೀಯರ ತಂಡದಲ್ಲಿ ಕರುಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುಭವಿ ಬ್ಯಾಟರ್ ಮನೀಷ್ ಪಾಂಡೆ ಅವರಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಮಂಗಳವಾರ ಪ್ರಕಟಿಸಿದ ರಣಜಿ ಟ್ರೋಫಿ ಟೂರ್ನಿಯ ಸಂಭವನೀಯರ ತಂಡದಲ್ಲಿ ಸ್ಥಾನ ನೀಡಿಲ್ಲ. ಹೀಗಾಗಿ, 36 ವರ್ಷದ ಪಾಂಡೆ ಅವರ ಕ್ರಿಕೆಟ್ ಭವಿಷ್ಯ ತೂಗುಯ್ಯಾಲೆಯಲ್ಲಿದೆ.

ಮಾಜಿ ಸ್ಪಿನ್ನರ್ ಆನಂದ್ ಕಟ್ಟಿ ನೇತೃತ್ವದ ಹೊಸ ಆಯ್ಕೆ ಸಮಿತಿಯು 2025–26ನೇ ಸಾಲಿನ ರಣಜಿ ಟ್ರೋಫಿ ಟೂರ್ನಿಗೆ 37 ಆಟಗಾರರ ಸಂಭವನೀಯರ ತಂಡವನ್ನು ಪ್ರಕಟಿಸಿದೆ.

2013-14 ಮತ್ತು 2014-15ರಲ್ಲಿ ಪ್ರಶಸ್ತಿ ಗೆದ್ದ ಕರ್ನಾಟಕ ತಂಡದ ಭಾಗವಾಗಿದ್ದ ಪಾಂಡೆ 2024ರ ನವೆಂಬರ್‌ನಲ್ಲಿ ಉತ್ತರ ಪ್ರದೇಶ ವಿರುದ್ಧದ ರಣಜಿ ಟ್ರೋಫಿ ಗುಂಪು ಹಂತದ ಪಂದ್ಯದಲ್ಲಿ ಕೊನೆಯ ಬಾರಿ ರಾಜ್ಯ ತಂಡಕ್ಕೆ ಆಡಿದ್ದರು. ಹೋದ ವರ್ಷ ರಣಜಿ ಟ್ರೋಫಿಯ ಎರಡನೇ ಹಂತದ ಪಂದ್ಯಗಳಿಂದಲೂ ಪಾಂಡೆ ಅವರನ್ನು ಕೈಬಿಡಲಾಗಿತ್ತು.

ವಿದರ್ಭ ತಂಡವನ್ನು ತೊರೆದ ಕರುಣ್ ನಾಯರ್ ನಿರೀಕ್ಷೆಯಂತೆ ಮತ್ತೆ ತಂಡಕ್ಕೆ ಮರಳಿದ್ದಾರೆ. ಕಳೆದ ಋತುವಿನಲ್ಲಿ ತ್ರಿಪುರ ಪರ ಆಡಿದ್ದ ವಿಕೆಟ್ ಕೀಪರ್ ಶರತ್ ಶ್ರೀನಿವಾಸ್ ಕೂಡ ಸಂಭವನೀಯರ ಪಟ್ಟಿಯಲ್ಲಿದ್ದಾರೆ.

ಸಂಭವನೀಯ ಆಟಗಾರ ಪಟ್ಟಿ: ಮಯಂಕ್ ಅಗರವಾಲ್, ಕೆ.ಎಲ್.ರಾಹುಲ್, ಕರುಣ್ ನಾಯರ್, ದೇವದತ್ತ ಪಡಿಕ್ಕಲ್, ಆರ್. ಸ್ಮರಣ್, ಕೆ.ಎಲ್.ಶ್ರೀಜಿತ್ (ವಿಕೆಟ್ ಕೀಪರ್), ಕೆ.ವಿ. ಅನೀಶ್, ಅಭಿನವ್ ಮನೋಹರ್, ನಿಕಿನ್ ಜೋಸ್, ಪ್ರಸಿದ್ಧ ಕೃಷ್ಣ, ವೈಶಾಖ ವಿಜಯಕುಮಾರ್, ವಿದ್ವತ್ ಕಾವೇರಪ್ಪ, ಶ್ರೇಯಸ್ ಗೋಪಾಲ್, ಮೆಕ್ನೀಲ್ ಎಚ್. ನೊರೊನ್ಹಾ, ವಿದ್ಯಾಧರ ಪಾಟೀಲ, ಕೃತಿಕ್ ಕೃಷ್ಣ (ವಿಕೆಟ್ ಕೀಪರ್), ಹಾರ್ದಿಕ್ ರಾಜ್, ಶಿಖರ್ ಶೆಟ್ಟಿ, ಮೊಹ್ಸಿನ್ ಖಾನ್, ಅಭಿಲಾಷ್ ಶೆಟ್ಟಿ, ಪರಾಸ್ ಗುರುಬಕ್ಷ ಆರ್ಯ, ಶಶಿಕುಮಾರ್ ಕೆ., ವೆಂಕಟೇಶ್ ಎಂ, ಯಶೋವರ್ಧನ್ ಪರಂತಾಪ್, ಸಮರ್ಥ ನಾಗರಾಜ್, ಮಾಧವ ಪಿ.ಬಜಾಜ್, ಶ್ರೀಶ ಎಸ್.ಆಚಾರ್, ಅಭಿಷೇಕ್ ಅಹ್ಲಾವತ್, ಶರತ್ ಶ್ರೀನಿವಾಸ್ (ವಿಕೆಟ್ ಕೀಪರ್), ಕಿಶನ್ ಎಸ್. ಬೆದರೆ, ಮನ್ವಂತ್ ಕುಮಾರ್ ಎಲ್., ಕಾರ್ತಿಕೇಯ ಕೆ.ಪಿ, ಮೋನಿಶ್ ರೆಡ್ಡಿ, ಶುಭಾಂಗ್ ಹೆಗ್ಡೆ, ಅಧೋಕ್ಷ್ ಹೆಗ್ಡೆ, ಕುಮಾರ್ ಎಲ್.ಆರ್, ಶರತ್ ಬಿ.ಆರ್. (ವಿಕೆಟ್ ಕೀಪರ್).

ಯರೇಗೌಡ (ಕೋಚ್), ಮನ್ಸೂರ್ ಅಲಿ ಖಾನ್ (ಬೌಲಿಂಗ್ ಕೋಚ್), ಶಬರೀಶ್ ಪಿ ಮೋಹನ್ (ಫೀಲ್ಡಿಂಗ್ ಕೋಚ್), ಎ.ರಮೇಶ್ ರಾವ್ (ಮ್ಯಾನೇಜರ್).



ಮನೀಷ್ ಪಾಂಡೆ



ಕರುಣ್ ನಾಯರ್

ಆಯ್ಕೆ ಸಮಿತಿಗೆ ಆನಂದ್ ಕಟ್ಟಿ ಅಧ್ಯಕ್ಷ



ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ವಿವಿಧ ಆಯ್ಕೆ ಸಮಿತಿಗಳ ಅಧ್ಯಕ್ಷರ ಮತ್ತು ಸದಸ್ಯರ ವಿವರವನ್ನು ಮಂಗಳವಾರ ಪ್ರಕಟಿಸಿದೆ. ಈ ಸಮಿತಿಗಳ ಸದಸ್ಯರು ಕಳೆದ ಮೂರು ತಿಂಗಳಿನಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಸೀನಿಯರ್ ಪುರುಷರ ತಂಡ ಆಯ್ಕೆ ಸಮಿತಿಗೆ ಮಾಜಿ ರಣಜಿ ಆಟಗಾರ ಆನಂದ್ ಕಟ್ಟಿ ಅಧ್ಯಕ್ಷರಾಗಿದ್ದಾರೆ. ಮಾಜಿ ಆಟಗಾರರಾದ ಸಿ.ರಘು, ಅಮಿತ್ ವರ್ಮಾ ಮತ್ತು ತೇಜಪಾಲ್ ಕೊಠ್ಠಾರಿ ಸಮಿತಿ ಸದಸ್ಯರಾಗಿದ್ದಾರೆ.

ಸೀನಿಯರ್ ಪುರುಷರ ಆಯ್ಕೆ ಸಮಿತಿ: ಅಧ್ಯಕ್ಷ: ಆನಂದ್ ಕಟ್ಟಿ. ಸದಸ್ಯರು: ಸಿ.ರಘು, ಅಮಿತ್ ವರ್ಮಾ ಮತ್ತು ತೇಜಪಾಲ್ ಕೊಠ್ಠಾರಿ.

23 ವರ್ಷದೊಳಗಿನ ಪುರುಷರ ಆಯ್ಕೆ ಸಮಿತಿ: ಅಧ್ಯಕ್ಷ: ಕೆ.ಎಲ್. ಅಶ್ವತ್ಥ್. ಸದಸ್ಯರು: ಅಮಿತ್ ವರ್ಮಾ, ಸುನಿಲ್ ರಾಜು ಮತ್ತು ಎಸ್.ಪ್ರಕಾಶ್. **ಸೀನಿಯರ್ ಮತ್ತು 23 ವರ್ಷದೊಳಗಿನ ಮಹಿಳೆಯರ ಆಯ್ಕೆ ಸಮಿತಿ:** ಅಧ್ಯಕ್ಷೆ: ಸುನೀತಾ ಅನಂತಕೃಷ್ಣನ್. ಸದಸ್ಯರು: ಅರುಣಾ ರೆಡ್ಡಿ, ನಿವೇದಿತಾ ರೇಷ್ಮೆ ಮತ್ತು ಮುಕ್ತಾ ಅಲಗೇರಿ.

ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಸೆಮಿಫೈನಲ್

ಅಭಿಷೇಕ್ ದಾಳಿಗೆ ಕುಸಿದ ಗೋವಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಫ್ ಸ್ಪಿನ್ನರ್ ಅಭಿಷೇಕ್ ಅಹ್ಲಾವತ್ (34ಕ್ಕೆ 4) ಅವರ ದಾಳಿಗೆ ತತ್ತರಿಸಿದ ಗೋವಾ ತಂಡವು ಮಂಗಳವಾರ ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಅಲ್ಪಮೊತ್ತಕ್ಕೆ ಕುಸಿದಿದೆ. ಮೊದಲ ಇನಿಂಗ್ಸ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್ ತಂಡಕ್ಕೆ ಗೆಲುವಿನ ಕನಸು ಚಿಗುರಿದೆ.

ನಗರದ ಹೊರವಲಯದಲ್ಲಿನ ಆಲೂರಿನ ಪ್ಲಾಟಿನಂ ಓವಲ್‌ನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಮೊದಲ ಇನಿಂಗ್ಸ್‌ನಲ್ಲಿ 62 ರನ್‌ಗಳ ಮುನ್ನಡೆ ಪಡೆದ ಗೋವಾ ತಂಡವು ಮೂರನೇ ದಿನದಾಟದ ಅಂತ್ಯಕ್ಕೆ 73 ಓವರ್‌ಗಳಲ್ಲಿ 8 ವಿಕೆಟ್‌ಗೆ 168 ರನ್‌ಗಳಿಸಿದೆ.

ಒಂದು ಹಂತದಲ್ಲಿ 128 ರನ್‌ಗಳಿಗೆ ಎಂಟು ವಿಕೆಟ್ ಕಳೆದುಕೊಂಡಿತ್ತು. ಅರ್ಜುನ್ ತೆಂಡೂಲ್ಕರ್ (ಔಟಾಗದೇ 30) ಮತ್ತು ಸಮರ್ ದುಬಾಶಿ (ಔಟಾಗದೇ 14) ಅವರು ಮುರಿಯದ ಒಂಬತ್ತನೇ ವಿಕೆಟ್‌ಗೆ 40 ರನ್ ಸೇರಿಸಿ ಚೇತರಿಕೆ ನೀಡಿದರು. ಗೋವಾ ಒಟ್ಟಾರೆ 230 ರನ್‌ಗಳ ಮುನ್ನಡೆ ಪಡೆದಿದೆ.

ಸೋಮವಾರ 8 ವಿಕೆಟ್‌ಗೆ 245 ರನ್ ಗಳಿಸಿದ್ದ ಕಾರ್ಯದರ್ಶಿ ಇಲೆವೆನ್ ತಂಡವು 276 ರನ್‌ಗಳಿಗೆ ಆಲೌಟ್ ಆಯಿತು. ಎರಡನೇ ದಿನ ಔಟಾಗದೇ 89 ರನ್ ಗಳಿಸಿದ್ದ ಕೃತಿಕ್ ಕೃಷ್ಣ 95 ರನ್ ಗಳಿಸಿ, ಐದು ರನ್‌ಗಳಿಂದ ಶತಕ ವಂಚಿತರಾದರು.

ಸಂಕ್ಷಿಪ್ತ ಸ್ಕೋರ್: ಆಲೂರು ಕ್ರೀಡಾಂಗಣ: ಗೋವಾ: 338 ಮತ್ತು 73 ಓವರ್‌ಗಳಲ್ಲಿ 8 ವಿಕೆಟ್‌ಗೆ 168 (ಲಲಿತ್ ಯಾದವ್ 27, ಅರ್ಜುನ್ ತೆಂಡೂಲ್ಕರ್ ಔಟಾಗದೇ 25; ಅಭಿಷೇಕ್ ಅಹ್ಲಾವತ್ 34ಕ್ಕೆ 4, ಮಾಧವ್ ಪಿ. ಬಜಾಜ್ 51ಕ್ಕೆ 2, ಧ್ರುವ್ ಪಿ. 22ಕ್ಕೆ 2). ಕೆಎಸ್‌ಸಿಎ ಕಾರ್ಯದರ್ಶಿ ಇಲೆವೆನ್: ಮೊದಲ ಇನಿಂಗ್ಸ್: 97.1 ಓವರ್‌ಗಳಲ್ಲಿ 276 (ಕೃತಿಕ್ ಕೃಷ್ಣ 95; ಅರ್ಜುನ್ ತೆಂಡೂಲ್ಕರ್ 54ಕ್ಕೆ 3, ವಾಸುಕಿ ಕೌಶಿಕ್ 32ಕ್ಕೆ 2).

ಚಿನ್ನಸ್ವಾಮಿ ಕ್ರೀಡಾಂಗಣ: ಮಧ್ಯಪ್ರದೇಶ: 425 ಮತ್ತು 66 ಓವರ್‌ಗಳಲ್ಲಿ 1 ವಿಕೆಟ್‌ಗೆ 233 (ಹರ್ಷ್ ಗೌಳಿ ಔಟಾಗದೇ 121, ಯಶ್ ದುಬೆ 76); ಹಿಮಾಚಲ ಪ್ರದೇಶ: 57.2 ಓವರ್‌ಗಳಲ್ಲಿ 204.



ನಾಲ್ಕು ವಿಕೆಟ್ ಪಡೆದ ಅಭಿಷೇಕ್ ಅಹ್ಲಾವತ್
ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಆಸ್ಟ್ರೇಲಿಯಾ ಎ ನೆರವಿಗೆ ಎಡ್ವರ್ಡ್ಸ್

ಲಖನೌ (ಪಿಟಿಐ): ಭಾರತ ಎ ತಂಡದ ಎಡಗೈ ಸ್ಪಿನ್ನರ್ ಮಾನವ್ ಸುತಾರ್ (28–4–93–5) ಅವರು ಐದು ವಿಕೆಟ್‌ಗಳ ಗೊಂಚಲು ಪಡೆದು ಆಸ್ಟ್ರೇಲಿಯಾ 'ಎ' ತಂಡ ಮಂಗಳವಾರ ಆರಂಭವಾದ ಎರಡನೇ ಕ್ರಿಕೆಟ್ 'ಟೆಸ್ಟ್' ಪಂದ್ಯದಲ್ಲಿ ಗಮನ ಸೆಳೆದರು. ನಾಲ್ಕು ದಿನಗಳ ಪಂದ್ಯದ ಮೊದಲ ದಿನದಾಟ ಮುಗಿದಾಗ ಪ್ರವಾಸಿ ತಂಡ 9 ವಿಕೆಟ್‌ಗೆ 350 ರನ್‌ಗಳಿಸಿತ್ತು.

ಮಾನವ್ ಅವರ ಉತ್ತಮ ಬೌಲಿಂಗ್ ಹೊರತಾಗಿಯೂ ಟೆಸ್ಟ್ ಆಟಗಾರ ನಥಾನ್ ಮೆಕ್‌ಸ್ವೀನಿ (74, 162ಎ, 4x10) ಮತ್ತು ಜಾಕ್ ಎಡ್ವರ್ಡ್ಸ್ (88, 78ಎ, 4x11, 6x1) ಅವರು ಪ್ರವಾಸಿ ತಂಡ ಉತ್ತಮ ಮೊತ್ತ ದಾಖಲಿಸಲು ನೆರವಾದರು.

ಶ್ರೇಯಸ್ ಅಯ್ಯರ್ ಈ ಪಂದ್ಯದಿಂದ ಹಿಂದೆಸರಿದ ಕಾರಣ ಧ್ರುವ್ ಜುರೇಲ್ ಭಾರತ ಎ ತಂಡದ ನಾಯಕತ್ವ ವಹಿಸಿದರು. ತವರಿನಲ್ಲಿ ವೆಸ್ಟ್ ಇಂಡೀಸ್ ಎದುರು ಎರಡು ಟೆಸ್ಟ್‌ಗಳಿಗೆ ಸಜ್ಜಾಗಲು ವೇಗಿ ಮೊಹಮದ್ ಸಿರಾಜ್ ಮತ್ತು ಬ್ಯಾಟರ್ ಕೆ.ಎಲ್.ರಾಹುಲ್ ಅವರು ಇಲ್ಲಿ ಕಣಕ್ಕಿಳಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ ಎ: 84 ಓವರುಗಳಲ್ಲಿ 9 ವಿಕೆಟ್‌ಗೆ 350 (ಸ್ಯಾಮ್ ಕೊನ್ಸ್ಟಾಸ್ 49, ನಥಾನ್ ಮೆಕ್‌ಸ್ವೀನಿ 74, ಜೋಶ್ ಫಿಲಿಪ್ 39, ಜಾಕ್ ಎಡ್ವರ್ಡ್ಸ್ 88, ಟಾಡ್ ಮರ್ಫಿ ಔಟಾಗದೇ 29; ಮೊಹಮ್ಮದ್ ಸಿರಾಜ್ 73ಕ್ಕೆ1, ಪ್ರಸಿದ್ಧ ಕೃಷ್ಣ 63ಕ್ಕೆ1, ಗುರ್ನೂರ್ ಬ್ರಾರ್ 71ಕ್ಕೆ2, ಮಾನವ್ ಸುತಾರ್ 93ಕ್ಕೆ5)

ಕರಾರುವಾಕ್ ತೀರ್ಪು ನೀಡುವುದಕ್ಕೆ ಹೆಸರುವಾಸಿಯಾಗಿದ್ದ ಇಂಗ್ಲೆಂಡ್‌ನ ಅಂಪೈರ್

ದಿಗ್ಗಜ ಅಂಪೈರ್ 'ಡಿಕೀ' ಬರ್ಡ್ ಇನ್ನಿಲ್ಲ

ಲಂಡನ್ (ಪಿಟಿಐ): ಕ್ರಿಕೆಟ್ ಆಟ ಕಂಡ ದಿಗ್ಗಜ ಅಂಪೈರ್ ಹೆರಾಲ್ಡ್ 'ಡಿಕೀ' ಬರ್ಡ್ ಅವರು 92ನೇ ವಯಸ್ಸಿನಲ್ಲಿ ಮಂಗಳವಾರ ನಿಧನರಾದರು.


1973 ರಿಂದ 1996ರ ವರೆಗಿನ ಅವಧಿಯಲ್ಲಿ 66 ಟೆಸ್ಟ್ ಪಂದ್ಯಗಳಲ್ಲಿ ಮತ್ತು 69 ಏಕದಿನ ಪಂದ್ಯಗಳಲ್ಲಿ ಅವರು ಅಂಪೈರಿಂಗ್ ಮಾಡಿದ್ದರು. 1996ರಲ್ಲಿ ಭಾರತ ಮತ್ತು ಇಂಗ್ಲೆಂಡ್ ನಡುವಣ ಲಾರ್ಡ್ಸ್‌ನಲ್ಲಿ ನಡೆದ ಟೆಸ್ಟ್ ಅವರು ಅಂಪೈರ್ ಆಗಿದ್ದ ಕೊನೆಯ ಪಂದ್ಯವಾಗಿತ್ತು. ಆ ಪಂದ್ಯದ ಮೂಲಕ ರಾಹುಲ್ ದ್ರಾವಿಡ್ ಮತ್ತು ಸೌರವ್ ಗಂಗೂಲಿ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು.

ಅವರ ನಿಧನವನ್ನು ಯಾರ್ಕ್‌ಶೈರ್ ಕೌಂಟಿ ಕ್ಲಬ್ ಮಂಗಳವಾರ ಹೇಳಿಕೆಯಲ್ಲಿ ದೃಢಪಡಿಸಿದೆ. 'ಡಿಕೀ ಬರ್ಡ್ ಅವರು ಕ್ರೀಡಾಸ್ಫೂರ್ತಿ, ವಿನಯವಂತಿಕೆ ಮತ್ತು ಸಾಫಲ್ಯದ ಪರಂಪರೆಯನ್ನು ಮತ್ತು ತಲೆಮಾರುಗಳ ಅಭಿಮಾನಿಗಳನ್ನು ಬಿಟ್ಟು ಅಗಲಿದ್ದಾರೆ' ಎಂದು ಕ್ಲಬ್ ಹೇಳಿಕೆಯಲ್ಲಿ ಹೇಳಿದೆ.

ಬ್ಯಾಟರ್ ಆಗಿದ್ದ ಬರ್ಡ್ ಯಾರ್ಕ್‌ಶೈರ್ ಪರ 1956ರಿಂದ 1964ರವರೆಗೆ ಮೊದಲ ದರ್ಜೆ ಕ್ರಿಕೆಟ್‌ನಲ್ಲಿ ಆಡಿದ್ದರು. 93 ಪಂದ್ಯಗಳಲ್ಲಿ ಎರಡು ಶತಕ ಸೇರಿದಂತೆ 3,314 ರನ್ ಗಳಿಸಿದ್ದರು.

ಅವರು 1986ರಲ್ಲಿ ಎಂಬಿಇ (ಮೋಸ್ಟ್ ಎಕ್ಸಲೆಂಟ್ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್) ಮತ್ತು 2012ರಲ್ಲಿ ಒಬಿಇ (ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್) ಗೌರವಕ್ಕೆ ಪಾತ್ರರಾಗಿದ್ದರು. ಡಿಕಿ ಬರ್ಡ್ ಮತ್ತು ಡೇವಿಡ್ ಶೆಫರ್ಡ್ ಜೋಡಿ ಹಲವು ಪಂದ್ಯಗಳಲ್ಲಿ ಜೊತೆಯಾಗಿ ಅಂಪೈರಿಂಗ್ ಮಾಡಿ ಪ್ರಸಿದ್ಧಿ ಪಡೆದಿತ್ತು. ಶೆಫರ್ಡ್ 2009ರಲ್ಲಿ ನಿಧನರಾಗಿದ್ದರು.

ಆಟಗಾರರಿಗೆ ಅಚ್ಚುಮೆಚ್ಚಿನ ಅಂಪೈರ್ ಆಗಿದ್ದ ಬರ್ಡ್ ಅವರು ಕರಾರುವಾಕ್ ತೀರ್ಪು ನೀಡುವುದಕ್ಕೆ ಹೆಸರುವಾಸಿಯಾಗಿದ್ದರು. ಅವಿವಾಹಿತರಾಗಿದ್ದ ಬರ್ಡ್ ಅವರ ಸ್ನೇಹಿತರ ವಲಯ ಬಹು ದೊಡ್ಡದಿತ್ತು. ಎಲಿಜಬೆತ್ ರಾಣಿ ಸಹ ಅವರಲ್ಲಿ ಒಳಗೊಂಡಿದ್ದರು. ಅನೇಕ ಬಾರಿ ಚಹಾ ಕೂಟಗಳಲ್ಲಿ ಅವರು ಭಾಗಿಯಾಗಿದ್ದರು. ಪ್ರಧಾನಿಯಾಗಿದ್ದ ಜಾನ್ ಮೇಜರ್ ಸೇರಿ ಗಣ್ಯರು ಅವರ ಮಿತ್ರ ವೃಂದದಲ್ಲಿದ್ದರು. ನಿವೃತ್ತಿ ನಂತರ ಕ್ವಿಝ್ ಷೊಗಳಲ್ಲಿ, ಚಾಟ್ ಷೋಗಳಲ್ಲಿ ಭಾಗವಹಿಸುತ್ತಿದ್ದರು.



'ಸನ್ನಿ' ಕೇಶಕ್ಕೆ ಕತ್ತರಿ!

ಅದು 1974ರಲ್ಲಿ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆದ ಟೆಸ್ಟ್ ಪಂದ್ಯ. ಭಾರತದ ಆರಂಭ ಆಟಗಾರ ಸುನಿಲ್ ಗಾವಸ್ಕರ್ ಅವರು ಬ್ಯಾಟ್ ಮಾಡುವಾಗ ಕೇಶರಾಶಿ ಕಣ್ಣಿನ ಮೇಲೆ ಬೀಳುತಿದ್ದು ಅವರಿಗೆ ಕಿರಿಕಿರಿಯಾಗುತ್ತಿತ್ತು. ಪಂದ್ಯಕ್ಕೆ ಅಂಪೈರ್ ಆಗಿದ್ದ ಡಿಕಿ ಬರ್ಡ್ ಇದನ್ನು ಗಮನಿಸಿ ಕಣ್ಣಿನ ಮೇಲೆ ಬೀಳುತ್ತಿದ್ದ ಕೂದಲನ್ನು ಅಲ್ಲೇ ಕತ್ತರಿಸಿದ್ದರು!

ಚೆಂಡಿನ ಸೀಮ್ ದಾರ ಎದ್ದರೆ ಅದನ್ನು ಕತ್ತರಿಸಲೆಂದು ಅವರು ಪುಟ್ಟಗಾತ್ರದ ಕತ್ತರಿಯನ್ನು ಜೇಬಿನಲ್ಲಿಟ್ಟುಕೊಳ್ಳುತ್ತಿದ್ದರು. 'ಅಂಪೈರ್‌ಗಳು ಏನೆಲ್ಲಾ ಇಟ್ಟುಕೊಳ್ಳಬೇಕಪ್ಪ!' ಎಂದೂ ನಂತರ ಅವರು ಉದ್ಗರಿಸಿದ್ದರು.

ಅಂದಿನ ಕಾಲದ ಉತ್ತಮ ಆಟಗಾರರೆಲ್ಲ ಬರ್ಡ್ ಬಗ್ಗೆ ಅತೀವ ಗೌರವ ಹೊಂದಿದ್ದರು. ಸೋಬರ್ಸ್, ರಿಚರ್ಡ್ಸ್, ಲಿಲಿ ಮತ್ತು ಬೋಥಮ್ ಅವರೂ ಒಳಗೊಂಡಿದ್ದರು. ಈ ಬಗ್ಗೆ ಸ್ವತಃ ಬರ್ಡ್ ಹೆಮ್ಮೆಯಿಂದ ಹೇಳಿಕೊಂಡಿದ್ದರು.

ಭಾರತದ ಹಿಡಿತ ಮುಂದುವರಿಯುವ ನಿರೀಕ್ಷೆ

ಬಾಂಗ್ಲಾದೇಶ ವಿರುದ್ಧ ಪಂದ್ಯ ಇಂದು • ಬೂಮ್ರಾ, ವರುಣ್ ಚಕ್ರವರ್ತಿ ನಿರ್ವಹಣೆ ಮೇಲೆ ಗಮನ

• ಆರ್.ಕೌಶಿಕ್

ದುಬೈ: ಬಾಂಗ್ಲಾದೇಶ ತಂಡ ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತ ತಂಡವನ್ನು ಸೋಲಿಸಲು 9 ಪಂದ್ಯಗಳವರೆಗೆ ಕಾಯಬೇಕಾಯಿತು. ನವದೆಹಲಿಯಲ್ಲಿ 2019ರ ನವೆಂಬರ್‌ನಲ್ಲಿ ನಡೆದ ಆ ಪಂದ್ಯದಲ್ಲಿ ಬಾಂಗ್ಲಾ ಜಯಗಳಿಸಿತ್ತು. ಅದರ ನಂತರದ ಪಂದ್ಯಗಳಲ್ಲೆಲ್ಲಾ ಮತ್ತೆ ಭಾರತದ್ದೇ ದಂಡಯಾತ್ರೆ.

ಏಷ್ಯಾ ಕಪ್ 2025

16–1 ಗೆಲುವಿನ ದಾಖಲೆ, ಅದರಲ್ಲೂ ಕೊನೆಯ ಸಲ– 2024ರ ಅಕ್ಟೋಬರ್‌ನಲ್ಲಿ ತವರಿನಲ್ಲಿ ಮೂರು ಪಂದ್ಯಗಳಲ್ಲಿ ಭರ್ಜರಿ ಗೆಲುವು. ಈ ಅಂಕಿಅಂಶಗಳು ಬಾಂಗ್ಲಾದೇಶ ವಿರುದ್ಧ ಭಾರತ ತಂಡದ ಪ್ರಶ್ನಾತೀತ ಆಧಿಪತ್ಯಕ್ಕೆ ಕನ್ನಡಿಯಾಗಿದೆ.

ಕೊನೆಯ ಬಾರಿ ಹೈದರಾಬಾದಿನಲ್ಲಿ ಇವೆರಡು ತಂಡಗಳು ಮುಖಾಮುಖಿಯಾದಾಗ ಸೂರ್ಯಕುಮಾರ್ ಯಾದವ್ ಸಾರಥ್ಯದ ಪಡೆ ಆಕ್ರಮಣಕಾರಿಯಾಗಿ ಆಡಿ 6 ವಿಕೆಟ್‌ಗೆ 297 ರನ್ ಕಲೆಹಾಕಿತ್ತು. ಇದು ಚುಟುಕು ಕ್ರಿಕೆಟ್‌ನಲ್ಲಿ ಭಾರತದ ಅತ್ಯಧಿಕ ಮೊತ್ತ. ಸಂಜು ಸ್ಯಾಮ್ಸನ್ ಆ ಇನಿಂಗ್ಸ್‌ನಲ್ಲಿ ಬಿರುಸಿನ 111 ರನ್ ಹೊಡೆದಿದ್ದರು.

ಬುಧವಾರ ದುಬೈ ಇಂಟರ್‌ನ್ಯಾಷನಲ್ ಕ್ರಿಕೆಟ್ ಸ್ಟೇಡಿಯಂನಲ್ಲಿ ಈ ಎರಡು ತಂಡಗಳು ಸೂಪರ್ ಫೋರ್ ಹಂತದಲ್ಲಿ ಮುಖಾಮುಖಿ ಆಗಲಿವೆ. ಸೂಪರ್ ಫೋರ್‌ನಲ್ಲಿ ಈ ಎರಡೂ ತಂಡಗಳು ಅಜೇಯವಾಗಿವೆ. 'ಬಿ' ಗುಂಪಿನಲ್ಲಿ ಲಂಕಾ ಕೈಲಿ ಅನುಭವಿಸಿದ ಸೋಲಿಗೆ ಬಾಂಗ್ಲಾ ತಂಡ ಸೂಪರ್‌ಫೋರ್‌ನಲ್ಲಿ ಬಾಕಿ ತೀರಿಸಿದೆ. ಇದಾಗಿ 24 ಗಂಟೆಗಳ ತರುವಾಯ ಭಾರತವು, ಪಾಕಿಸ್ತಾನ ತಂಡದ ಮೇಲೆ ತನ್ನ ಆಧಿಪತ್ಯ ಮುಂದುವರಿಸಿತು.

ಬಾಂಗ್ಲಾದೇಶ ವಿರುದ್ಧ ಭಾರತದ ಗೆಲುವಿನ ದಾಖಲೆ ಅಮೋಘವಾಗಿ ಕಾಣಿಸುತ್ತಿದೆ. ಆದರೆ ಹಲವು ಬಾರಿ ಬಾಂಗ್ಲಾದೇಶ ತೀವ್ರ ಹೋರಾಟ ಪ್ರದರ್ಶಿಸಿದೆ. ಆದರೆ ನಿರ್ಣಾಯಕ ಗಳಿಗೆಯಲ್ಲಿ ಅನುಭವ ಮತ್ತು ಒತ್ತಡದ ಸಂದರ್ಭವನ್ನು ಎದುರಿಸಿ ನಿಲ್ಲುವ ಸಾಮರ್ಥ್ಯ ಆಗ ಭಾರತದ ನೆರವಿಗೆ ಬಂದಿತ್ತು. ಅದರಲ್ಲೂ ಕೊಲಂಬೊದಲ್ಲಿ ನಡೆದ ನಿದಾಹಾಸ್ ಟ್ರೋಫಿಯ ಫೈನಲ್‌ನಲ್ಲಿ ಸೌಮ್ಯ ಸರ್ಕಾರ್ ಅವರ ಕೊನೆಯ ಎಸೆತದಲ್ಲಿ ದಿನೇಶ್ ಕಾರ್ತಿಕ್ ಎಕ್ಸ್‌ಟ್ರಾ ಕವರ್ ಮೇಲೆ ಎತ್ತಿದ ಸಿಕ್ಸರ್ ಮರೆಯುವ ಹಾಗೇ ಇಲ್ಲ. ಆ ಹೊಡೆತವು, ಭಾರತಕ್ಕೆ ಖಚಿತವಾದಂತೆ ಕಂಡಿದ್ದ ಸೋಲನ್ನು ಗೆಲುವನ್ನಾಗಿ ಪರಿವರ್ತಿಸಿತು.

ಈ ಬಾರಿ ಬಾಂಗ್ಲಾದೇಶ ನಾಯಕ ಲಿಟನ್ ದಾಸ್ ಅವರು ಭರವಸೆಯಿಡಬಲ್ಲ ಕೆಲವು ಅನುಭವಿಗಳು ತಂಡದಲ್ಲಿದ್ದಾರೆ. ಮುಸ್ತಫಿಝುರ್ ರೆಹಮಾನ್, ತಸ್ಕಿನ್ ಅಹ್ಮದ್ ಮತ್ತು ಮಹೆದಿ ಹಸನ್ ಅವರಲ್ಲಿ ಒಳಗೊಂಡಿದ್ದಾರೆ. ತಂಡದಲ್ಲಿ ಉತ್ಸಾಹಿ ಯುವಮುಖಗಳೂ ಇವೆ. ಆದರೆ ಭಾರತದಂಥ ಪ್ರಬಲ ತಂಡವನ್ನು ಅವರು ತಡೆದುನಿಲ್ಲಿಸುವರೇ ಎಂಬುದು ಪ್ರಶ್ನೆ.

ಅಬ್ಬರಿಸದ ಜಸ್‌ಪ್ರೀತ್ ಬೂಮ್ರಾ

ಈ ಟೂರ್ನಿಯ ಏಕೈಕ ಅಜೇಯ ತಂಡವಾಗಿರುವ ಭಾರತಕ್ಕೆ ಇದುವರೆಗಿನ ನಾಲ್ಕು ಪಂದ್ಯಗಳಲ್ಲಿ ಗಂಭೀರ ಸವಾಲು ಎದುರಾಗಿಲ್ಲ. ಸುಧಾರಣೆಗೆ ಸಾಕಷ್ಟು ಅವಕಾಶವಿದೆ ಎಂಬುದೂ ನಿಜ. ಭಾರತ ತಂಡವು ಜಸ್‌ಪ್ರೀತ್ ಬೂಮ್ರಾ ಅವರ ನಿರ್ವಹಣೆಯ ಮೇಲೆ ಕಣ್ಣಿಡಲಿದೆ. 2024ರ ಟಿ20 ವಿಶ್ವಕಪ್ ಗೆದ್ದ ನಂತರ ಮೊದಲ ಬಾರಿ ಈ ಮಾದರಿಯಲ್ಲಿ ಆಡುತ್ತಿರುವ ಬೂಮ್ರಾ ಎಂದಿನ ಲಯದಲ್ಲಿದ್ದಂತೆ ಕಾಣುತ್ತಿಲ್ಲ. ಎಸೆತಗಳ ಮೇಲೆ ಅವರು ಸಾಧಿಸುತ್ತಿದ್ದ ನಿಯಂತ್ರಣ ಇಲ್ಲಿ ಕಾಣುತ್ತಿಲ್ಲ. ಬ್ಯಾಟರ್‌ಗಳು ಆಕ್ರಮಣಕಾರಿ ಆದಾಗ ತಕ್ಷಣವೇ ವಿಕೆಟ್ ಪಡೆಯಲೂ ಆಗಿಲ್ಲ.

ಬೂಮ್ರಾ 11 ಓವರುಗಳಲ್ಲಿ ಕೇವಲ ಮೂರು ವಿಕೆಟ್ ಪಡೆದಿದ್ದಾರೆ. ಅದಕ್ಕಿಂತ ಗಮನಾರ್ಹ ಎಂದರೆ ಅವರು ಓವರೊಂದಕ್ಕೆ 8.36 ರನ್ ತೆತ್ತು ಧಾರಾಳಿಯಾಗಿರುವುದು. ಭಾನುವಾರ ಅವರು 45 ರನ್ ನೀಡಿದ್ದರು. ಪವರ್‌ಪ್ಲೇ ಯಲ್ಲೂ ಪರಿಣಾಮಕಾರಿ ಆಗಿರಲಿಲ್ಲ. ಟೂರ್ನಿಯು ಕ್ಲೈಮಾಕ್ಸ್ ಹಂತ ತಲುಪಿರುವಾಗ ತಂಡವು ಬೂಮ್ರಾ ಅವರಿಂದ ಹೆಚ್ಚಿನದನ್ನು ನಿರೀಕ್ಷಿಸುತ್ತಿದೆ. ಅವರು ಯಶ ಪಡೆದರೆ, ಸ್ಪಿನ್ನರ್‌ಗಳ ಮೇಲಿನ ಭಾರ ತಗ್ಗಲಿದೆ.

ಬೂಮ್ರಾ ಅವರ ಹಾಗೆ ವರುಣ್ ಚಕ್ರವರ್ತಿ ಸಹ ವಿಕೆಟ್ ಗಳಿಕೆಯಲ್ಲಿ ಹಿಂದೆಬಿದ್ದಿದ್ದಾರೆ. ಅಗ್ರಮಾನ್ಯ ಟಿ20 ಬೌಲರ್‌ನ ಎರಡು ಯಶಸ್ಸು, 30ಕ್ಕಿಂತ ಹೆಚ್ಚಿನ ಸ್ಟ್ರೈಕ್‌ರೇಟ್‌ನಲ್ಲಿ ಬಂದಿದೆ. ಆದರೆ ಅವರು ಓವರಿಗೆ 5.30 ರನ್ ಅಷ್ಟೇ ಕೊಟ್ಟು ಮಿತವ್ಯಯಿಯಾಗಿದ್ದಾರೆ. ಮಧ್ಯಮ ಹಂತದ ಓವರುಗಳಲ್ಲಿ ಅವರು ಕುಲದೀಪ್ ಯಾದವ್ ಜೊತೆ ವಿಕೆಟ್ ಕೀಳುವ ಬೌಲರ್ ಆಗಿ ಹೆಸರು ಮಾಡಿದವರು. ಹೀಗಾಗಿ ಬುಧವಾರದ ಪಂದ್ಯದಲ್ಲಿ ಬೂಮ್ರಾ ಮತ್ತು ಚಕ್ರವರ್ತಿ ಅವರ ಬೌಲಿಂಗ್ ಮೇಲೆ ಭಾರತ ಹೆಚ್ಚಿನ ಗಮನವಿಟ್ಟಿದೆ.



ಜಸ್‌ಪ್ರೀತ್ ಬೂಮ್ರಾ

ಟೆಸ್ಟ್: ವಿಶ್ರಾಂತಿ ಕೋರಿದ ಶ್ರೇಯಸ್



ನವದೆಹಲಿ (ಪಿಟಿಐ): ಭಾರತ ಎ ತಂಡದ ನಾಯಕತ್ವದಿಂದ ಹಿಂದೆ ಸರಿದಿರುವ ಮಧ್ಯಮ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರು ಮುಂಬರುವ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಯಿಂದ ವಿಶ್ರಾಂತಿ ಪಡೆಯಲು ನಿರ್ಧರಿಸಿದ್ದಾರೆ.

'ಬೆನ್ನುನೋವಿನಿಂದ ಬಳಲುತ್ತಿರುವ ಕಾರಣ ಟೆಸ್ಟ್ ಮಾದರಿಯಲ್ಲಿ ಆಡುವುದು ಕಷ್ಟ. ತಮ್ಮನ್ನು ತವರಿನಲ್ಲಿ ನಡೆಯುವ ವಿಂಡೀಸ್ ವಿರುದ್ಧದ ಸರಣಿಗೆ ಪರಿಗಣಿಸಬೇಡಿ' ಎಂದು 30 ವರ್ಷದ ಶ್ರೇಯಸ್ ಅವರು ಬಿಸಿಸಿಐ ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರ್ಕರ್ ಲಿಖಿತವಾಗಿ ಕೇಳಿಕೊಂಡಿದ್ದಾರೆ.

ಲಖನೌನಲ್ಲಿ ಆಸ್ಟ್ರೇಲಿಯಾ ಎ ವಿರುದ್ಧ ನಡೆಯುತ್ತಿರುವ ಭಾರತ ಎ ತಂಡದ ಎರಡನೇ 'ಟೆಸ್ಟ್' ಪಂದ್ಯದಿಂದ ಶ್ರೇಯಸ್ ಹಿಂದೆ ಸರಿದಿದ್ದರು. ಈಗ ಅವರು ದೀರ್ಘ ಮಾದರಿಯ ಕ್ರಿಕೆಟ್‌ನಿಂದಲೂ ತಾತ್ಕಾಲಿಕ ವಿರಾಮ ಬಯಸಿದ್ದಾರೆ. ಶ್ರೇಯಸ್ ಅನುಪಸ್ಥಿತಿಯಲ್ಲಿ ಧ್ರುವ್ ಜುರೇಲ್ ಅವರು ಭಾರತ ಎ ತಂಡವನ್ನು ಮುನ್ನಡೆಸುತ್ತಿದ್ದಾರೆ.

2025ರ ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಫೈನಲ್‌ಗೆ ಮುನ್ನಡೆಸಿದ್ದ ಶ್ರೇಯಸ್. ಅಕ್ಟೋಬರ್ 15ರಿಂದ ಪ್ರಾರಂಭವಾಗುವ ರಣಜಿ ಟ್ರೋಫಿ ಋತುವಿಗೆ ಆಡುವುದೂ ಅನುಮಾನವಾಗಿದೆ.

ನಿಧಾನಗತಿ ಓವರ್, ಭಾರತಕ್ಕೆ ದಂಡ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಎದುರಿನ ಏಕದಿನ ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಓವರುಗಳನ್ನು ಪೂರೈಸದ ಕಾರಣ ಭಾರತ ಮಹಿಳಾ ತಂಡಕ್ಕೆ ಪಂದ್ಯ ಸಂಭಾವನೆಯ ಶೇ 10ರಷ್ಟು ದಂಡ ವಿಧಿಸಲಾಗಿದೆ.

ಪಾಕಿಸ್ತಾನಕ್ಕೆ ಮಣಿದ ಲಂಕಾ ಪಡೆ

ಅಬುಧಾಬಿ: ಬೌಲರ್‌ಗಳ ಸಂಘಟಿತ ಪ್ರಯತ್ನದಿಂದ ಪಾಕಿಸ್ತಾನ ತಂಡವು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಪಂದ್ಯದಲ್ಲಿ ಮಂಗಳವಾರ ಶ್ರೀಲಂಕಾ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿತು. ಇದರೊಂದಿಗೆ ಲಂಕಾ ಪಡೆಯ ಫೈನಲ್ ಕನಸು ಬಹುತೇಕ ಕಮರಿದೆ.

ಲಂಕಾ ನೀಡಿದ್ದ 134 ರನ್‌ಗಳ ಗುರಿ ಬೆನ್ನಟ್ಟಿದ ಪಾಕ್ ತಂಡಕ್ಕೆ ಸಾಹೀಬ್‌ಝಾದ ಫರ್ಹಾನ್ (24;15ಎ) ಮತ್ತು ಫಕಾರ್ ಖಾನ್ (17;19) ಅವರು ಮೊದಲ ವಿಕೆಟ್‌ಗೆ 45 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಆದರೆ, 80 ರನ್ ಗಳಿಸುವಷ್ಟರಲ್ಲಿ ಐದು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು.

ನಂತರದಲ್ಲಿ ಹುಸೇನ್ ತಲತ್ (ಔಟಾಗದೇ 32;30ಎ) ಮತ್ತು ಮೊಹಮ್ಮದ್ ನವಾಜ್ (ಔಟಾಗದೇ 38;24ಎ) ಎಚ್ಚರಿಕೆಯ ಆಟವಾಡಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಪಾಕ್ ತಂಡ 18 ಓವರ್‌ಗಳಲ್ಲಿ 5 ವಿಕೆಟ್‌ಗೆ 138 ರನ್ ಗಳಿಸಿ ಸಂಭ್ರಮಿಸಿತು.

ಅಫ್ರಿದಿ ಮಿಂಚು: ಇದಕ್ಕೂ ಮೊದಲು ಟಾಸ್ ಗೆದ್ದ ಪಾಕ್ ಫೀಲ್ಡಿಂಗ್ ಆಯ್ದುಕೊಂಡಿತು. ಶಾಹಿನ್ ಶಾ ಅಫ್ರಿದಿ (28ಕ್ಕೆ3) ಅವರು ಆರಂಭ ಆಟಗಾರರ ವಿಕೆಟ್‌ಗಳನ್ನು ಬೇಗನೇ ಪಡೆದು ಪೆಟ್ಟು ನೀಡಿದರು. ಮಧ್ಯಮ ಹಂತದ ಓವರುಗಳಲ್ಲಿ ಹುಸೇನ್ ತಲತ್ (18ಕ್ಕೆ2) ಕಡಿವಾಣ ಹಾಕಿದರು.

ಆದರೆ, ಹೆಚ್ಚು ಪರಿಣಾಮಕಾರಿ ಎನಿಸಿದವರು 27 ವರ್ಷ ವಯಸ್ಸಿನ ಲೆಗ್‌ಬ್ರೇಕ್ ಬೌಲರ್ ಅಬ್ರಾರ್ ಅಹ್ಮದ್ (4–0–8–1) ಅವರು ವೈವಿಧ್ಯಮಯ ಎಸೆತಗಳ ಮೂಲಕ ಲಂಕಾ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು.




ಶಾಹಿನ್ ಶಾ ಅಫ್ರಿದಿ

ಸೊಗಸಾಗಿ ಆಡಿದ ಕಮಿಂದು ಮೆಂಡಿಸ್ 44 ಎಸೆತಗಳಲ್ಲಿ 50 ರನ್ (4x3, 6x2) ಬಾರಿಸಿ ಒಂಟಿಯಾಗಿ ಪ್ರತಿರೋಧ ತೋರಿದರು. ಹೀಗಾಗಿ ತಂಡವು 8 ವಿಕೆಟ್‌ಗೆ 133 ರನ್ ಗಳಿಸಿತ್ತು.

ಸೂಪರ್ ಫೋರ್ ಹಂತದಲ್ಲಿ ಲಂಕಾ ತಂಡಕ್ಕೆ ಇದು ಸತತ ಎರಡನೇ ಸೋಲಾಗಿದೆ. ಇದಕ್ಕೂ ಮೊದಲು ಬಾಂಗ್ಲಾದೇಶ ವಿರುದ್ಧ ಪರಾಭವಗೊಂಡಿತ್ತು. ಪಾಕ್ ತಂಡವು ಭಾರತ ವಿರುದ್ಧ ಸೋಲು ಕಂಡಿತ್ತು.

ಸ್ಕೋರುಗಳು: ಶ್ರೀಲಂಕಾ: 20 ಓವರುಗಳಲ್ಲಿ 8ಕ್ಕೆ133 (ಚರಿತ್ ಅಸಲಂಕ 20, ಕಮಿಂದು ಮೆಂಡಿಸ್ 50; ಶಾಹಿನ್ ಶಾ ಅಫ್ರಿದಿ 28ಕ್ಕೆ3, ಹ್ಯಾರಿಸ್ ರವುಫ್ 37ಕ್ಕೆ2, ಹುಸೇನ್ ತಲತ್ 18ಕ್ಕೆ2) ಪಾಕಿಸ್ತಾನ: 18 ಓವರ್‌ಗಳಲ್ಲಿ 5 ವಿಕೆಟ್‌ಗೆ 138 (ಸಾಹೀಬ್‌ಝಾದ ಫರ್ಹಾನ್ 24, ಹುಸೇನ್ ತಲತ್ ಔಟಾಗದೇ 32, ಮೊಹಮ್ಮದ್ ನವಾಜ್ ಔಟಾಗದೇ 38; ಮಹೀಶ ತೀಕ್ಷಣ 24ಕ್ಕೆ 2, ವನಿಂದು ಹಸರಂಗ 27ಕ್ಕೆ 2). ಫಲಿತಾಂಶ: ಪಾಕಿಸ್ತಾನಕ್ಕೆ 5 ವಿಕೆಟ್‌ಗಳ ಜಯ

ಅಮನ್‌ಗೆ ಡಬ್ಲ್ಯುಎಫ್‌ಐ ನೋಟಿಸ್




ನವದೆಹಲಿ (ಪಿಟಿಐ): ನಿಗದಿಗಿಂತ ಹೆಚ್ಚು ತೂಕ ಹೊಂದಿದ್ದ ಕಾರಣ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಿಂದ ಅಮಾನತುಗೊಂಡಿದ್ದ ಅಮನ್ ಸೆಹ್ರಾವತ್ ಅವರಿಗೆ ಭಾರತೀಯ ಕುಸ್ತಿ ಸಂಸ್ಥೆ (ಡಬ್ಲ್ಯುಎಫ್‌ಐ) ಸೋಮವಾರ ಶೋಕಾಸ್ ನೋಟಿಸ್ ನೀಡಿದೆ.

ಅಮನ್ ಅವರೊಂದಿಗೆ ಕ್ರೊವೇಷ್ಯಾಕ್ಕೆ ತೆರಳಿದ್ದ ಫ್ರೀಸ್ಟೈಲ್ ಕೋಚ್‌ಗಳಾದ ಜಗಮಂದರ್ ಸಿಂಗ್, ವಿನೋದ್, ವೀರೇಂದ್ರ ಹಾಗೂ ನರೇಂದ್ರ ಅವರಿಗೂ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದೆ.

ಪುರುಷರ 57 ಕೆ.ಜಿ ಫ್ರೀಸ್ಟೈಲ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಅಮನ್ ಅವರು ಮೊದಲ ಸುತ್ತಿನ ಪಂದ್ಯಕ್ಕೆ ಮುನ್ನ ನಿಗದಿಗಿಂತಲೂ 1.7 ಕೆ.ಜಿ. ಹೆಚ್ಚಿನ ದೇಹತೂಕ ಹೊಂದಿದ್ದರು. ಹೀಗಾಗಿ ಅವರನ್ನು ಚಾಂಪಿಯನ್‌ಷಿಪ್‌ನಿಂದ ಅನರ್ಹಗೊಳಿಸಲಾಗಿತ್ತು. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅಮನ್ ಅವರು ಕಂಚಿನ ಪದಕ ಗಳಿಸಿದ್ದರು.

ಓಸ್ಮಾನ್‌ಗೆ ಬ್ಯಾಲನ್ ಡಿ' ಓರ್ ಪ್ರಶಸ್ತಿ

ಪ್ಯಾರಿಸ್ (ಎಎಫ್‌ಪಿ): ಫ್ರಾನ್ಸ್‌ನ ಓಸ್ಮಾನ್ ಡೆಂಬೆಲೆ ಅವರು 2025ನೇ ಸಾಲಿನ ಬ್ಯಾಲನ್ ಡಿ' ಓರ್ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ವರ್ಷದ ಶ್ರೇಷ್ಠ ಫುಟ್ಬಾಲಿಗರಿಗೆ ನೀಡುವ ಈ ಗೌರವ ಮಹಿಳೆಯರ ವಿಭಾಗದಲ್ಲಿ ಐತಾನಾ ಬೊನ್ಮತಿ (ಸ್ಪೇನ್) ಅವರಿಗೆ ಸಂದಿದೆ.


ಓಸ್ಮಾನ್ ಡೆಂಬೆಲೆ

ಪಿಎಸ್‌ಜಿ ತಂಡದ ಫಾರ್ವರ್ಡ್ ಕೂಡ ಆಗಿರುವ ಡೆಂಬೆಲೆ ಅವರು ಸ್ಪೇನ್‌ನ ಯುವ ಪ್ರತಿಭೆ ಲಮಿನ್ ಯಮಾಲ್ ಅವರ ಪೈಪೋಟಿ ಎದುರಿಸಿ ಈ ಪ್ರತಿಷ್ಠಿತ ಪ್ರಶಸ್ತಿಗೆ ಪಾತ್ರರಾದರು. ಪಿಎಸ್‌ಜಿ ತಂಡ ಚಾಂಪಿಯನ್ಸ್ ಲೀಗ್ ಟ್ರೋಫಿ ಗೆಲ್ಲುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

18 ವರ್ಷ ವಯಸ್ಸಿನ ಯಮಾಲ್ ರನ್ನರ್ ಅಪ್ ಆದರು. ಶ್ರೇಷ್ಠ ಯುವ ಆಟಗಾರ ಹೆಗ್ಗಳಿಕೆಗೆ ಅವರು ಪಾತ್ರರಾದರು. ಬೊನ್ಮತಿ ಬಾರ್ಸಿಲೋನಾ ಕ್ಲಬ್ ಪರ ಮಿಂಚಿದ್ದರು. ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಸೋಮವಾರ ನಡೆಯಿತು.

ಕಿಕ್‌ಸ್ಟಾರ್ಟ್ ತಂಡಕ್ಕೆ ಗೆಲುವು

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಕಿಕ್‌ಸ್ಟಾರ್ಟ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಮಂಗಳವಾರ 3–1 ಗೋಲುಗಳಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 2–0ರಿಂದ ಬೆಂಗಳೂರು ಸಿಟಿ ಎಫ್‌ಸಿ ತಂಡವನ್ನು ಸೋಲಿಸಿತು. ಇನ್ನೊಂದು ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡವು 3–0ಯಿಂದ ರಿಯಲ್ ಬೆಂಗಳೂರು ಎಫ್‌ಸಿ ತಂಡವನ್ನು ಪರಾಭವಗೊಳಿಸಿತು.

ಬ್ಯಾಡ್ಮಿಂಟನ್: ಮೇಘನಾ ಮುಖ್ಯಸುತ್ತಿಗೆ

ಸುವೊನ್ (ಕೊರಿಯಾ) (ಪಿಟಿಐ): ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ತಾರೆ ಮೇಘನಾ ರೆಡ್ಡಿ ಅವರು ಮಂಗಳವಾರ ಕೊರಿಯಾ ಓಪನ್ ಸೂಪರ್ 500 ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಗೆಲುವು ಸಾಧಿಸಿ, ಮುಖ್ಯಸುತ್ತು ಪ್ರವೇಶಿಸಿದರು.

ತೆಲಂಗಾಣದ 21 ವರ್ಷದ ಮೇಘನಾ ಮಹಿಳೆಯರ ಸಿಂಗಲ್ಸ್‌ನ ಕ್ವಾಲಿಫೈಯರ್‌ನ ಮೊದಲ ಪಂದ್ಯದಲ್ಲಿ 21-6, 21-18ರಿಂದ ತೈವಾನ್‌ನ ಪೇಯ್ ಚು ಚೆನ್ ವಿರುದ್ಧ ಗೆಲುವು ಸಾಧಿಸಿದರು. ಎರಡನೇ ಪಂದ್ಯದಲ್ಲಿ ಅವರು 21-19, 22-20 ಜಪಾನ್‌ನ ರಿರಿನಾ ಹಿರಮೊಟೊ ಅವರನ್ನು ಹಿಮ್ಮೆಟ್ಟಿಸಿದರು.